ವಿಶ್ವವಾಣಿ
ವಿಶ್ವಾಸವೇ ವಿಶ್ವ

ದೆಹಲಿಯಲ್ಲಿ ಆರಂಭಗೊಂಡಿರುವ ರಾಷ್ಟ್ರೀಯ ಬಾಹ್ಯಾಕಾಶ ದಿನ ಪ್ರದರ್ಶನದಲ್ಲಿ ಭಾರತೀಯ ಅಂತರಿಕ್ಷ ನಿಲ್ದಾಣ ಮಾದರಿಯನ್ನು ಇಸ್ರೊ ಪ್ರದರ್ಶನಕ್ಕಿಟ್ಟಿದೆ.

ಸೊಂಪಾದ ಪುಟಗಳು

ಈಗ ಕರ್ನಾಟಕದ ದೇವಸ್ಥಾನಗಳು ಟಾರ್ಗೆಟ್
ವೀಕೆಂಡ್ ವಿತ್ ಮೋಹನ್ – ಮೋಹನ್ ವಿಶ್ವ 6

ಜೀವನೀಯವಾದ ಹಾಲು, ಹಾಲಾಹಲ ಆಗಿದ್ದು ಹೇಗೆ?
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ – ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ಯಾವತ್ತೂ ನಿಮ್ಮನ್ನು ಅವಮಾನಿಸಿದವರಿಗೆ ಪ್ರತಿಕ್ರಿಯೆ ನೀಡಬಾರದು. ಅವಮಾನ ಮಾಡಿದವರ ಮುಖ್ಯ ಉದ್ದೇಶ ನೀವು ಹಿಂದೆ ಮುಂದೆ ನೋಡದೇ ಪ್ರತಿಕ್ರಿಯೆ ನೀಡಲಿ ಎಂಬುದೇ ಆಗಿರುತ್ತದೆ. ಅಂಥವರನ್ನು ನಿಮ್ಮ ಮೌನದಿಂದ ಹತಾಶರನ್ನಾಗಿ ಮಾಡಬೇಕು.

ವಕ್ರತುಂಡೋಕ್ತಿ



ತಾತಂದಿರ ಆಟಿಕೆ ಸಾಮಾನುಗಳಿಗೆ ಮೊಮ್ಮಕ್ಕಳು ಎನ್ನಬಹುದು.

ಬೀದಿನಾಯಿ ಸಂಬಂಧ ರಾಷ್ಟ್ರೀಯ ನೀತಿಗೆ ಸುಪ್ರೀಂಕೋರ್ಟ್ ನಿರ್ಧಾರ
ಹೈಕೋರ್ಟ್‌ಗಳಲ್ಲಿರುವ ಪ್ರಕರಣ ಸೇರಿ ತ್ರಿಸದಸ್ಯ ಪೀಠ ಸಮಗ್ರ ವಿಚಾರಣೆ

ಶ್ವಾನನೀತಿಗೆ ಸುಪ್ರೀಂ ಬಲ

ದೆಹಲಿ: ಕರ್ನಾಟಕ ಸೇರಿದಂತೆ ದೇಶವ್ಯಾಪಿ ಬೀದಿ ನಾಯಿಗಳ ಹಾವಳಿ ವ್ಯಾಪಕವಾಗಿರುವ ಹಿನ್ನೆಲೆಯಲ್ಲಿ ಈ ಸಂಬಂಧ ರಾಷ್ಟ್ರವ್ಯಾಪಿ ಅನ್ವಯವಾಗುವ ನೀತಿಯೊಂದನ್ನು ರೂಪಿಸಲು ಸುಪ್ರೀಂ ಕೋರ್ಟ್ ಮುಂದಾಗಿದೆ. ಪ್ರಕರಣದಲ್ಲಿ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪ್ರವಾದಿಗಳನ್ನಾಗಿ ಮಾಡುವ ಮೂಲಕ ನ್ಯಾಯಾಲಯವು ವಿಚಾರಣೆಯ ವ್ಯಾಪ್ತಿಯನ್ನು ವಿಸ್ತರಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್, ಸಂದೀಪ್ ಮೆಹ್ತಾ ಮತ್ತು ಅಂಜಾರಿಯಾ ಅವರ ತ್ರಿಸದಸ್ಯ ಪೀಠವು ಬೀದಿ ನಾಯಿಗಳಿಗೆ ಸಂಬಂಧಿಸಿ ವಿವಿಧ ಹೈಕೋರ್ಟ್‌ಗಳಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಕುರಿತು ಮಾಹಿತಿ ಸಂಗ್ರಹಿಸುವಂತೆ ಸುಪ್ರೀಂ ಕೋರ್ಟ್ ಮಹಾ ಕಾರ್ಯದರ್ಶಿ ಅವರಿಗೆ ಸೂಚಿಸಿದೆ. ಬಾಕಿ ಇರುವ ಎಲ್ಲ ಪ್ರಕರಣಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಬೇಕು. ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ನೀತಿಯೊಂದನ್ನು ರೂಪಿಸಲು ಇಲ್ಲವೇ ಅಂತಿಮ ನಿರ್ಧಾರ ಕೈಗೊಳ್ಳುವುದಕ್ಕೆ ಇದರಿಂದ ಸಾಧ್ಯವಾಗಲಿದೆ ಎಂದು ಪೀಠ ಹೇಳಿದೆ.

ಇದೇ ವೇಳೆ ದಿಲ್ಲಿಯಲ್ಲಿ ಬೀದಿ ನಾಯಿಗಳನ್ನು ಹಿಡಿದು ಆಶ್ರಯತಾಣಗಳಲ್ಲಿ ಕೂಡಿ ಹಾಕುವಂತೆ ಈ ಹಿಂದೆ ವಿಭಾಗೀಯ ಪೀಠ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಮಾರ್ಪಾಡು ಮಾಡಿದೆ. ಬೀದಿ ನಾಯಿಗಳನ್ನು ಹಿಡಿದು ಲಸಿಕೆ, ಸಂತಾನ ಹರಣ ಚಿಕಿತ್ಸೆ ನಡೆಸಿದ ಬಳಿಕ ಅವುಗಳನ್ನು ಹೊರಗೆ ಬಿಡಬಹುದು ತ್ರಿಸದಸ್ಯ ಪೀಠ ನಿರ್ದೇಶನ ನೀಡಿದೆ. ದೆಹಲಿ ಹಾಗೂ ರಾಜಧಾನಿಯ ಹೊರ ವಲಯದಲ್ಲಿ ಬೀದಿ ನಾಯಿಗಳ ಕಾಟ ವಿಪರೀತವಾಗಿದೆ ಎಂದು ಸುಪ್ರೀಂಗೆ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ ಸಂದರ್ಭದಲ್ಲಿ ಬೀದಿ ನಾಯಿಗಳನ್ನು ಹಿಡಿದು ಆಶ್ರಯ ತಾಣಗಳಿಗೆ ಸ್ಥಳಾಂತರಿಸುವಂತೆ ದ್ವಿಸದಸ್ಯ ಪೀಠ ಕೆಲ ದಿನಗಳ ಹಿಂದೆ ನಿರ್ದೇಶಿಸಿತ್ತು.

ಕೋರ್ಟ್ ಆದೇಶವನ್ನು ವಿರೋಧಿಸಿ ದಿಲ್ಲಿಯಲ್ಲಿ ಪ್ರಾಣಿ ಹಕ್ಕುಗಳ ಕಾರ್ಯಕರ್ತರು ಹಾಗೂ ಶ್ವಾನ ಪ್ರಿಯರು ಪ್ರತಿಭಟನೆ ನಡೆಸಿದ್ದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಅನೇಕರು ಈ ತೀರ್ಪಿನ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಇದೀಗ ಸೆರೆ ಹಿಡಿದ ನಾಯಿಗಳನ್ನು ಆಶ್ರಯ ತಾಣಗಳಿಗೆ ಬಿಡದೆ, ಅವುಗಳಿಗೆ ಕೇವಲ ಲಸಿಕೆ ಹಾಗೂ ಸಂತಾನ ಹರಣ ಚಿಕಿತ್ಸೆ ಮಾಡಿಸಿ ಮತ್ತೆ ಅಲ್ಲಿಯೇ ತಂದು ಬಿಡಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಬೀದಿ ನಾಯಿಗಳಿಗೆ ಆಹಾರ ನೀಡುವುದಕ್ಕಾಗಿ ರಚಿಸಿರುವ ಪ್ರತ್ಯೇಕ ಸ್ಥಳಗಳ ಸಮೀಪ ಈ ಬಗ್ಗೆ ಮಾಹಿತಿ ಇರುವ ಫಲಕಗಳನ್ನು ಅಳವಡಿಸಬೇಕು. ಬೀದಿ ನಾಯಿಗಳಿಗೆ ಬೀದಿಗಳಲ್ಲಿ ಆಹಾರ ನೀಡುವುದಕ್ಕೆ ಅನುಮತಿ ನೀಡಬಾರದು. ಇದನ್ನು ಉಲ್ಲಂಘಿಸಿದವರ ವಿರುದ್ಧ ಕಾನೂನುಕ್ರಮ ಕೈಗೊಳ್ಳಬೇಕು ಎಂದೂ ನ್ಯಾಯಪೀಠ ಸೂಚಿಸಿದೆ.

ಇನ್ನು ಬೀದಿ ಬದಿ ಆಹಾರ ನೀಡುವಂತಿಲ್ಲ

ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ಬೀದಿ ನಾಯಿಗಳಿಗೆ ಬೀದಿಗಳಲ್ಲಿ ಆಹಾರ ನೀಡುವುದನ್ನು ನಿಷೇಧಿಸಿರುವ ಪೀಠ, ಈ ಉದ್ದೇಶಕ್ಕಾಗಿಯೇ ದೆಹಲಿಯ ಪಾಲಿಕೆಗಳು ಪ್ರತ್ಯೇಕ ಸ್ಥಳಗಳನ್ನು ಗುರುತಿಸಬೇಕು ಎಂದು ಆದೇಶಿ ಸಿದೆ. ಈ ನಿರ್ದೇಶನಗಳು ದೇಶದಾದ್ಯಂತ ಅನ್ವಯವಾಗಲಿವೆ ಎಂದಿರುವ ನ್ಯಾಯಾಲಯ, ಈ ವಿಚಾರಕ್ಕೆ ಸಂಬಂಧಿಸಿ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ಕಕ್ಷಿದಾರರನ್ನಾಗಿ ಮಾಡಿ ಆದೇಶಿಸಿದೆ.

ಗುರಾಯಿಸ್ಬೇಡಿ! ಇರಲಿ ಪ್ರೀತಿ

- ದೇಶವ್ಯಾಪಿ ನೀತಿ ರೂಪಿಸಲು ಮುಂದಾದ ಸುಪ್ರೀಂ
- ಬೀದಿ ನಾಯಿ ಸ್ಥಳಾಂತರ ತೀರ್ಪಿನಲ್ಲಿ ಮಾರ್ಪಾಡು
- ಹೈಕೋರ್ಟ್‌ಗಳಲ್ಲಿರುವ ಎಲ್ಲ ಪ್ರಕರಣ ಸುಪ್ರೀಂ ವರ್ಗ
- ಇನ್ನು ನಿಗದಿತ ಸ್ಥಳದಲ್ಲಷ್ಟೇ ಬೀದಿ ನಾಯಿಗಳಿಗೆ ಆಹಾರ
- ಎಲ್ಲ ರಾಜ್ಯ ಸರಕಾರಗಳು ಪ್ರಕರಣದಲ್ಲಿ ಪ್ರತಿವಾದಿ
- ಸುಪ್ರೀಂ ತೀರ್ಪಿಗೆ ಶ್ವಾನಪ್ರಿಯರ ಸ್ವಾಗತ

ಶ್ವಾನಪ್ರಿಯರಿಂದ ಠೇವಣಿ

ಬೀದಿ ನಾಯಿಗಳ ವಿಚಾರವಾಗಿ ಸುಪ್ರೀಂ ಕೋರ್ಟ್ ಕದ ತಟ್ಟಿರುವ ಪ್ರತಿಯೊಬ್ಬ ಶ್ವಾನ ಪ್ರಿಯ ಮತ್ತು ಪ್ರತಿಯೊಂದು ಎನ್‌ಜಿಒ ಕ್ರಮವಾಗಿ ₹25 ಸಾವಿರ ಹಾಗೂ 12 ಲಕ್ಷ ಮೊತ್ತವನ್ನು ಏಳು ದಿನಗಳ ಒಳಗಾಗಿ ಸುಪ್ರೀಂ ಕೋರ್ಟ್ ರಿಜಿಸ್ಟ್ರಾರ್ ಬಳಿ ಠೇವಣಿ ಇಡಬೇಕು. ಈ ಮೊತ್ತವನ್ನು ಠೇವಣಿ ಇಡಲು ವಿಫಲವಾದಲ್ಲಿ ಸಂಬಂಧಪಟ್ಟ ವ್ಯಕ್ತಿ/ಎನ್‌ಜಿಒಗೆ ಈ ಪ್ರಕರಣ ಕುರಿತ ಮುಂದಿನ ವಿಚಾರಣೆ ವೇಳೆ ಹಾಜರಾಗಲು ಅನುಮತಿ ನೀಡುವುದಿಲ್ಲ ಎಂದು ಪೀಠ ಸ್ಪಷ್ಟಪಡಿಸಿದೆ. ಸಂಬಂಧಪಟ್ಟ ಪಾಲಿಕೆಗಳ ವತಿಯಿಂದ ಬೀದಿ ನಾಯಿಗಳಿಗಾಗಿ ಮೂಲಸೌಕರ್ಯ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲು ಈ ಮೊತ್ತವನ್ನು ವಿನಿಯೋಗಿಸಲಾಗುವುದು ಎಂದೂ ಹೇಳಿದೆ.

ಕೈ ನಾಯಕಿ ಕುಸುಮ, ಸೋದರ ಅನಿಲ್ ನಿವಾಸದ ಮೇಲೂ ದಾಳಿ
ಬೆಟ್ಟಿಂಗ್ ಆ್ಯಪ್‌ಗೆ ಅಕ್ರಮ ಹಣ, ಶಾಸಕ ವೀರೇಂದ್ರ ಪಪ್ಪಿ ಸೆರೆ

ಕೈ ಶಾಸಕನಿಗೆ ಇ.ಡಿ ಶಾಕ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಕ್ರಮ ಹಣ ವರ್ಗಾವಣೆ, ಅಕ್ರಮ ಆಸ್ತಿ ಗಳಿಕೆ ಆರೋಪದಲ್ಲಿ ಕಾಂಗ್ರೆಸ್ ಶಾಸಕ ವೀರೇಂದ್ರ ಪಪ್ಪಿ ಅವರಿಗೆ ಸೇರಿದ 30ಕ್ಕೂ ಹೆಚ್ಚು ಸ್ಥಳದಲ್ಲಿ ದಾಳಿ ನಡೆಸಿರುವ ಇಡಿ, ಇದೇ ಪ್ರಕರಣದಲ್ಲಿ ಪಶ್ಚಿಮ ಬಂಗಾಳದ ಕೊಲ್ಕತ್ತಾದಲ್ಲಿ ಪಪ್ಪಿ ಅವರನ್ನು ವಶಕ್ಕೆ ಪಡೆದಿದ್ದಾರೆ. ಆನ್‌ಲೈನ್ ಗೇಮಿಂಗ್ ಆ್ಯಪ್ ಕಂಪನಿಗಳಿಗೆ ಆಕ್ರಮವಾಗಿ ಹಣ ವರ್ಗಾವಣೆ ಮಾಡಿದ ಆರೋಪ ವೀರೇಂದ್ರ ಪಪ್ಪಿ ಮೇಲಿದ್ದು ಈ ಸಂಬಂಧ ಗೋವಾ ದಲ್ಲಿ ಪಪ್ಪಿ ವಿರುದ್ಧ ಎರಡು ಎಫ್‌ಐಆರ್ ದಾಖಲಾಗಿವೆ. ಈ ಹಿನ್ನಲೆಯಲ್ಲಿ ಇಡಿ ಅಧಿಕಾರಿಗಳು ಇಸಿಐಆರ್ ದಾಖಲಿಸಿ ಕೊಂಡು ದಾಳಿ ನಡೆಸಿ ದಾಖಲೆ ಪತ್ರಗಳ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ. → 4

ಚಳ್ಳಕೆರೆಯಲ್ಲಿ ಶೋಧ

ಚಳ್ಳಕೆರೆ ನಗರದಲ್ಲಿರುವ ಶಾಸಕರ ಮನೆ, ಅವರ ಅಣ್ಣ ಕೆ.ಸಿ.ನಾಗರಾಜ್ ಹಾಗೂ ಕೆ. ಸಿ. ಸ್ವಾಮಿ ಅವರ ಮನೆಗಳ ಮೇಲೂ ದಾಳಿ ನಡೆದಿದೆ. ಜೊತೆಗೆ ಚಿತ್ರದುರ್ಗ ನಗರದ ಹಳೆ ಟೌನ್ ವೀರಭದ್ರಸ್ವಾಮಿ ದೇವಸ್ಥಾನದ ಬಳಿ ಇರುವ ಅವರ ನಿವಾಸದಲ್ಲೂ ಅಧಿಕಾರಿಗಳು ಶೋಧ ಕಾರ್ಯಾಚರಣೆ ಮುಂದುವರೆಸಿದ್ದಾರೆ.

ಎಲ್ಲೆಲ್ಲಿ ದಾಳಿ

ಬೆಂಗಳೂರು, ಚಳ್ಳಕೆರೆ, ಚಿತ್ರದುರ್ಗ, ಗೋವಾದ ಕ್ಯಾಸಿನೋ ಸೇರಿದಂತೆ 30ಕ್ಕೂ ಹೆಚ್ಚು ಕಡೆಗಳಲ್ಲಿ ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಬೆಂಗಳೂರಿನ ವಸಂತ ನಗರದಲ್ಲಿರುವ ಶಾಸಕ ವೀರೇಂದ್ರ ಅವರ ಖಾಸಗಿ ಅಪಾರ್ಟ್‌ಮೆಂಟ್ ಹಾಗೂ ಸಹಕಾರ ನಗರದಲ್ಲಿರುವ ನಿವಾಸಗಳ ಮೇಲೆ ದಾಳಿ ಮಾಡಿದ್ದಾರೆ. ಚಳ್ಳಕೆರೆಯಲ್ಲಿ ರುವ ಶಾಸಕರ ನಿವಾಸ ಸೇರಿದಂತೆ ಅವರ ಸಹೋದರರಾದ ಕೆ.ಸಿ ನಾಗರಾಜ್ ಮತ್ತು ಕೆ.ಸಿ ತಿಪ್ಪೇಸ್ವಾಮಿ ಅವರ ನಿವಾಸಗಳ ಮೇಲೂ 10 ಮಂದಿ ಅಧಿಕಾರಿಗಳ ತಂಡ 3 ಇನೋವಾ ಕಾರುಗಳಲ್ಲಿ ಆಗಮಿಸಿ ಬೆಳ್ಳಂಬೆಳಿಗ್ಗೆ ಲಗ್ಗೆ ಹಾಕಿ ಪರಿಶೀಲನೆ ನಡೆಸಿದೆ.

ಈ ಹಿಂದೆಯೂ ದಾಳಿಯಾಗಿತ್ತು

ಈ ಹಿಂದೆ 2016ರ ಡಿಸೆಂಬರ್ 11ರಂದು ವೀರೇಂದ್ರ ಅವರ ಮನೆಯ ಮೇಲೆ ಐಟಿ ದಾಳಿ ನಡೆದಿತ್ತು. ಆ ಸಮಯದಲ್ಲಿ ಮನೆಯ ಬಾತ್‌ರೂಮ್‌ನಲ್ಲಿ 5 ಕೋಟಿ ರುಪಾಯಿಗೂ ಹೆಚ್ಚು ನಗದು ಮತ್ತು 30 ಕೆಜಿಗೂ ಹೆಚ್ಚು ಚಿನ್ನ ಪತ್ತೆಯಾಗಿತ್ತು.

ಕುಸುಮಗೆ ಸಂಕಷ್ಟ

ವೀರೇಂದ್ರ ಪಪ್ಪಿ ಜೊತೆ ಆರ್ಥಿಕ ವಹಿವಾಟು ಹೊಂದಿದ್ದ ಕಾಂಗ್ರೆಸ್ ನಾಯಕಿ ಕುಸುಮ ಅವರ ನಿವಾಸಗಳ ಮೇಲೂ ಇ.ಡಿ ದಾಳಿ ನಡೆಸಿದೆ. ಬೆ.4:30ಕ್ಕೆ ಅನ್ನಪೂರ್ಣೇಶ್ವರಿ ನಗರದ ಮುದ್ದನಪಾಳ್ಯದ ನಿವಾಸ, ಚಂದ್ರಾಲೇಔಟ್‌ನ ಕಚೇರಿ ಮೇಲೆ ಇ.ಡಿ ದಾಳಿ ನಡೆಸಿ ದಾಖಲೆ ಪರಿಶೀಲನೆ ನಡೆಸಿದೆ.

ಸುಮಂದರ್‌ಗೆ ಆಘಾತ

ಇನ್ನು ಹವಾಲಾ ಕಿಂಗ್‌ಪಿನ್ ಎಂದೇ ಗುರುತಿಸಿಕೊಂಡಿದ್ದ ಸುಮಂದರ್ ಸಿಂಗ್ ಅವರ ಮೇಲೂ ಇ.ಡಿ. ದಾಳಿ ನಡೆಸಿದೆ. ಹುಬ್ಬಳ್ಳಿಯ ದೇಶಪಾಂಡೆ ನಗರದ ಕಾಮಾಕ್ಷಿ ಅಪಾರ್ಟ್‌ಮೆಂಟ್ ಮೇಲೆ ದಾಳಿ ನಡೆಸಿದ ಇ.ಡಿ. ಅಧಿಕಾರಿಗಳು ಅಪಾರ ಪ್ರಮಾಣದ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ.

ಮತದಾರ ಪಟ್ಟಿಯಲ್ಲಿ ಹೆಸರು ಸೇರಿಸಲು ಸುಪ್ರೀಂ ಮಾರ್ಗಸೂಚಿ

ಆಧಾರ್‌ಗೆ ಪೂರಕ ದಾಖಲೆ ಕಡ್ಡಾಯ

ದೆಹಲಿ: ಈ ವರ್ಷದ ಕೊನೆಯಲ್ಲಿ ನಡೆಯುವ ಬಿಹಾರದ ಚುನಾವಣೆಯ ಮತದಾನದ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆಯಲ್ಲಿ ಪಟ್ಟಿಯಿಂದ ಹೆಸರು ಕೈಬಿಟ್ಟವರು ತಮ್ಮ ಹೆಸರು ದಾಖಲಿಸಲು 11 ದಾಖಲೆಗಳ ಪೈಕಿ ಯಾವುದಾದರೂ ದಾಖಲೆ ಜೊತೆ ಆಧಾರ್ ಸಂಖ್ಯೆ ನಮೂದಿಸಿ ಅರ್ಜಿ ಸಲ್ಲಿಸಬಹುದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ತಿಳಿಸಿದೆ. ಚುನಾವಣಾ ಆಯೋಗವು ಚುನಾವಣೆ ನಡೆಯಲಿರುವ ರಾಜ್ಯದಲ್ಲಿ ಮತದಾರರ ಪಟ್ಟಿಯನ್ನು ಪರಿಷ್ಕರಿಸುತ್ತಿರುವ ವಿವಾದಾತ್ಮಕ ರಾಜ್ಯವಾದ ಬಿಹಾರದ ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸತತವಾಗಿ ನಡೆಸುತ್ತಿದ್ದು, ಪಟ್ಟಿಯಿಂದ ಹೊರಗಿಡಲಾದ ವ್ಯಕ್ತಿಗಳಿಂದ ಆಧಾರ್ ಹೊರತುಪಡಿಸಿದ 11 ದಾಖಲೆಗಳ ಪೈಕಿ ಒಂದನ್ನು ಕೇಳಿದೆ. ಸೆಪ್ಟೆಂಬರ್ 1ರೊಳಗೆ ಎಲ್ಲಾ ದಾಖಲೆಗಳ ಸಲ್ಲಿಕೆಯನ್ನು ಪೂರ್ಣಗೊಳಿಸಲು ನ್ಯಾಯಮೂರ್ತಿ ಸೂರ್ಯಕಾಂತ್ ನಿರ್ದೇಶಿಸಿದ್ದಾರೆ.

ಬೈಕ್ ಟ್ಯಾಕ್ಸಿ ಸೇವೆ ಆರಂಭಕ್ಕೆ ತಡೆ ಇಲ್ಲ

ಬೆಂಗಳೂರು: ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಯು ಪುನಾರಂಭವಾಗಿದ್ದು, ಈ ನಡುವೆ ಸಾರಿಗೆ ಅಧಿಕಾರಿಗಳು ಮತ್ತು ಪೊಲೀಸರು ಅಗ್ರಿಗೇಟರ್‌ಗಳ ವಿರುದ್ಧ ಕ್ರಮಕೈಗೊಳ್ಳಬಹುದು. ಆದರೆ ಬೈಕ್ ಟ್ಯಾಕ್ಸ್ ಚಾಲಕರಿಗೆ ಯಾವುದೇ ರೀತಿ ಯಲ್ಲಿ ಕಿರುಕುಳವನ್ನು ನೀಡಬಾರದು ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ. ಬೈಕ್ ಟ್ಯಾಕ್ಸಿ ಸೇವೆಗಳನ್ನು ನೀಡಲು ಪ್ರಾರಂಭಿಸಿರುವ ಅಗ್ರಿಗೇಟರ್‌ಗಳ ವಿರುದ್ಧ ಅಧಿಕಾರಿಗಳು ಕಾನೂನು ಪ್ರಕಾರ ಯಾವುದೇ ರೀತಿಯ ಕ್ರಮ ವನ್ನು ಕೈಗೊಳ್ಳಬಹುದು. ಆ್ಯಪ್ ಆಧಾರಿತ ಸಂಸ್ಥೆಗಳಿಗೆ ನ್ಯಾಯಾಲಯವು ಅಂತಹ ಯಾವುದೇ ಸ್ವಾತಂತ್ರ್ಯವನ್ನು ನೀಡಿಲ್ಲ ಎಂದು ಈ ಬಗ್ಗೆ ಸ್ಪಷ್ಟನೆ ಬಯಸಿದ ಅಡ್ವೊಕೇಟ್ ಜನರಲ್ (ಎಜಿ) ಕೆ ಶಶಿಕಿರಣ್ ಶೆಟ್ಟಿ ಅವರಿಗೆ ಹೈಕೋರ್ಟ್ ವಿಭಾಗೀಯ ಪೀಠ ಸ್ಪಷ್ಟ ಪಡಿಸಿದೆ. ವೈಯಕ್ತಿಕ ಬೈಕ್ ಟ್ಯಾಕ್ಸಿ ಮಾಲೀಕರು ಅಥವಾ ಚಾಲಕರಿಗೆ ಕಿರು ಕುಳ ನೀಡಬಾರದು ಎಂದು ನ್ಯಾಯಾ ಲಯ ತಿಳಿಸಿದೆ.

ಮಟ್ಟಣ್ಣನವರ್ ವಿರುದ್ಧ ಮತ್ತೊಂದು ಪ್ರಕರಣ ದಾಖಲು

ಸುಜಾತಾ ಭಟ್ ವರಸೆ ಬದಲು

ಬೆಳ್ತಂಗಡಿ: ತನ್ನ ಮಗಳು ಧರ್ಮಸ್ಥಳದಲ್ಲಿ ನಾಪತ್ತೆಯಾಗಿದ್ದಾಳೆ ಎಂದು ಪೊಲೀಸರಿಗೆ ದೂರು ನೀಡಿದ್ದ ಸುಜಾತ ಭಟ್ ಪ್ರಕರಣ ಸಂಬಂಧ ಕ್ಷಣಕ್ಕೊಂದು ಹೇಳಿಕೆ ಕೊಡುತ್ತಿದ್ದಾರೆ. ಮಣಿಪಾದಲ್ಲಿ ಎಂಬಿಬಿಎಸ್ ಓದುತ್ತಿದ್ದ ತಮ್ಮ ಮಗಳು ಅನನ್ಯಾ ಭಟ್ ಧರ್ಮಸ್ಥಳದಲ್ಲಿ ನಾಪತ್ತೆಯಾಗಿದ್ದಾಳೆ. ಈ ಸಂಬಂಧ ಕೇಳಲು ಹೋದಾಗ ಧರ್ಮಸ್ಥಳದಲ್ಲಿ ತಮ್ಮನ್ನು ಕೂಡಿ ಹಾಕಿ ಹಲ್ಲೆ ನಡೆಸಲಾಗಿತ್ತು ಎಂದು ಸುಜಾತಾ ದೂರಿದ್ದರು. ಈ ಪ್ರಕರಣವನ್ನೂ ಎಸ್‌ಐಟಿ ತನಿಖೆಗೆ ವಹಿಸಲಾಗಿತ್ತು. ಎಸ್‌ಐಟಿ ನೋಟಿಸ್‌ಗೆ ಉತ್ತರಿಸದ ಸುಜಾತಾ ಭಟ್, ಆಡಿಯೊವೊಂದನ್ನು ಹರಿಬಿಟ್ಟು ಕೇಸ್ ವಾಪಸ್ ಪಡೆಯುವುದಾಗಿ ಹೇಳಿದ್ದಾರೆ. ಅನನ್ಯಾ ಭಟ್ ಫೋಟೋ ಎಂದು ಸುಜಾತಾ ಭಟ್ ತೋರಿಸಿದ್ದ ಭಾವಚಿತ್ರ, ವಾಸಂತಿ ಎಂಬ ಮಹಿಳೆಯದು ಎನ್ನಲಾಗಿತ್ತು.

ಮಟ್ಟಣ್ಣನವರ್ ವಿರುದ್ಧ ಪ್ರಕರಣ: ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಅಡಿ ಗಿರೀಶ್ ಮಟ್ಟಣ್ಣನವರ್ ಸೇರಿದಂತೆ ಹಲವರ ವಿರುದ್ಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಗುರುವಾರ ಮಹೇಶ್ ಶೆಟ್ಟಿ ತಿಮರೋಡಿ ಬಂಧನ ಸಂದರ್ಭದಲ್ಲಿ ಪೊಲೀಸ್ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಲ್ಲಿ ಗಿರೀಶ್ ಮಟ್ಟಣ್ಣನವರ್, ಜಯಂತ್ ಮತ್ತು ಇತರರ ಮೇಲೆ ಪ್ರಕರಣ ದಾಖಲಾಗಿದೆ. ಈ ಸಂಬಂಧ ಶುಕ್ರವಾರ ಬೆಳ್ತಂಗಡಿ ಎಸ್‌ಐಟಿ ಠಾಣೆಗೆ ಖುದ್ದಾಗಿ ಆಗಮಿಸಿದ ಗಿರೀಶ್ ಮಟ್ಟಣ್ಣನವರ್ ವಿಚಾರಣೆ ಎದುರಿಸಿದರು.

ಜಗದೀಶ್ ಬಂಧನ

ಬೆಂಗಳೂರು: ಸಾಮಾಜಿಕ ಮಾಧ್ಯಮದಲ್ಲಿ ಜಾತಿ ನಿಂದನೆ ಮಾಡಿದ್ದ ಹಾಗೂ ವೈಷಮ್ಯ ಮೂಡಿಸಿದ್ದ ಆರೋಪದಡಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲ ಕೆ.ಎನ್. ಜಗದೀಶ್ ಕುಮಾರ್ ಅವರನ್ನು ಕೊಡಿಗೇಹಳ್ಳಿ ಠಾಣೆಯ ಪೊಲೀಸರು ಶುಕ್ರವಾರ ರಾತ್ರಿ ಬಂಧಿಸಿದ್ದಾರೆ. ಜಗದೀಶ್ ಅವರು ಜಾತಿ ನಿಂದನೆ ಮಾಡಿದ್ದಾರೆ ಎಂದು ಆರೋಪಿಸಿ ಕೆಂಚನಹಳ್ಳಿ ಮಂಜುನಾಥ್ ಅವರು ದೂರು ನೀಡಿದ್ದರು. ದೂರು ಆಧರಿಸಿ, ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್‌ಗಳಾದ 196(1) ಹಾಗೂ 299ರ ಅಡಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ಸಂಬಂಧ ಗುರುವಾರ ವಿಚಾರಣೆಗೆ ಬರುವಂತೆ ಪೊಲೀಸರು ನೋಟಿಸ್ ನೀಡಿದ್ದರು. ಶುಕ್ರವಾರ ಸಂಜೆ ಜಗದೀಶ್ ಅವರನ್ನು ಬಂಧಿಸಿ ವಿಚಾರಣೆ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು.

ಬಿಹಾರ ಪಾದಯಾತ್ರೆ ಸಿದ್ದರಾಮಯ್ಯ ಭಾಗಿ

ಬೆಂಗಳೂರು: ಮತಗಳ್ಳತನವನ್ನು ವಿರೋಧಿಸಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಆರಂಭಿಸಿರುವ ಪಾದಯಾತ್ರೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗವಹಿಸುವುದು ಖಚಿತವಾಗಿದೆ. ಆ.29ರಂದು ಬಿಹಾರದಲ್ಲಿ ನಡೆಯಲಿರುವ ಪಾದಯಾತ್ರೆಯಲ್ಲಿ ಭಾಗವಹಿಸುವುದಾಗಿ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ.

ಅಧಿವೇಶನ ಮುಕ್ತಾಯ ಅನುದಾನದ ಭರವಸೆ

ಬೆಂಗಳೂರು: ಅನುದಾನ ತಾರತಮ್ಯ ವಿಷಯಕ್ಕೆ ಸಂಬಂಧಿಸಿದಂತೆ ಆಡಳಿತ-ಪ್ರತಿಪಕ್ಷ ಶಾಸಕರ ನಡುವೆ ತೀವ್ರ ವಾಕ್ಸಮರ ನಡೆದು, ಪ್ರತಿಪಕ್ಷದವರು ಬಾವಿಗಿಳಿದು ಪ್ರತಿಭಟನೆ ನಡೆಸಿದ ಬಳಿಕ ಅನುದಾನ ನೀಡುವ ಭರವಸೆಯನ್ನು ಸಿದ್ದರಾಮಯ್ಯ ಅವರು ನೀಡಿದ್ದಾರೆ. ಅಧಿವೇಶನದ ಅಂತಿಮ ದಿನ ಕೆಳಮನೆಯಲ್ಲಿ ಮಾತನಾಡಿದ ಸಿಎಂ, ಕಾಲ್ತುಳಿತ ಘಟನೆ ಸೇರಿದಂತೆ ಪ್ರತಿಪಕ್ಷ ನಾಯಕರ ಹಲವು ಆಕ್ಷೇಪಗಳಿಗೆ ಉತ್ತರಿಸಿದರು.

ನಾಡಹಬ್ಬದ ಸಂಭ್ರಮದಲ್ಲಿ ಮುಸ್ಲಿಂ ಸಮುದಾಯದ ಮಹಿಳೆಗೆ ಮೊದಲ ಬಾರಿ ಮನ್ನಣೆ

ಬುಕರ್ ವಿಜೇತ ಬಾನುಗೆ ದಸರಾ ಉದ್ಘಾಟನೆ ಗೌರವ

ಕೆ.ಜೆ.ಲೋಕೇಶ್ ಬಾಬು, ಮೈಸೂರು

ಈ ಬಾರಿಯ ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟಕರು ಯಾರು ಎಂಬ ಕುತೂಹಲಕ್ಕೆ ಶುಕ್ರವಾರ ತೆರೆ ಬಿದ್ದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಕರ್ ಪ್ರಶಸ್ತಿ ವಿಜೇತ ಲೇಖಕಿ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟಕರಾಗಿ ಆಯ್ಕೆ ಮಾಡುವ ಮೂಲಕ ಎರಡನೇ ಬಾರಿಗೆ ಅಲ್ಪಸಂಖ್ಯಾತ ಸಮುದಾಯಕ್ಕೆ ದಸರಾ ಉದ್ಘಾಟನೆ ಅವಕಾಶ ಸಿಕ್ಕಿದೆ. ಆದರೆ ಇದೇ ಮೊದಲ ಸಲ ಮುಸ್ಲಿಂ ಮಹಿಳೆಗೆ ದಸರಾ ಉದ್ಘಾಟನೆ ಭಾಗ್ಯ ದೊರೆತಿದೆ.

ಲೇಖಕಿ ಲೇಖಕಿ ಬಾನು ಮುಷ್ತಾಕ್ ಅವರು ಮೊದಲ ಬುಕರ್ ಪ್ರಶಸ್ತಿ ಪಡೆದ ಭಾರತೀಯ ಲೇಖಕಿ ಎಂಬುದು ಒಂದೆಡೆಯಾದರೆ, ವಿಶ್ವವಿಖ್ಯಾತ ದಸರಾ ಮಹೋತ್ಸವ ಉದ್ಘಾಟಿಸುತ್ತಿರುವ ಅಲ್ಪಸಂಖ್ಯಾತ ಸಮುದಾಯದ ಮೊದಲ ಮಹಿಳೆ ಎಂಬ ಅಭಿಮಾನಕ್ಕೂ ಪಾತ್ರರಾಗಿದ್ದಾರೆ. ಕೆಲ ವರ್ಷಗಳ ಹಿಂದೆ ಕವಿ ಕೆ.ಎಸ್. ನಿಸಾರ್ ಅಹಮದ್ ಅವರಿಗೆ ನಾಡ ಹಬ್ಬದ ಉದ್ಘಾಟನೆ ಅವಕಾಶ ಲಭಿಸಿತ್ತು. → 4

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಪ್ರಶಸ್ತಿಯೊಂದಿಗೆ ಗೌರವ ತಂದವರು ಭಾನು ಮುಷ್ತಾಕ್ ಅವರಾಗಿದ್ದಾರೆ. ಅಂತಹವರಿಗೆ ದಸರಾ ಉದ್ಘಾಟನೆಗೆ ಅವಕಾಶ ನೀಡಿರುವುದು ಸರಿ. ಸದ್ಯದ ಮಟ್ಟಿಗೆ ಔಚಿತ್ಯವೂ ಹೌದು. ಹಾಗೆಯೇ ಅವರೊಂದಿಗೆ ಕೃತಿಯ ಅನುವಾದಕರನ್ನೂ ಸರಕಾರ ಕರೆಯಬಹುದಿತ್ತು. ಆದರೆ, ಈಗ ಸಾಧ್ಯವಾಗಿಲ್ಲದಿರಬಹುದು. ಮುಂದೆ ಅವರಿಗೂ ಅವಕಾಶ ಸಿಗಬಹುದು.

– ಪ್ರೊ.ಎಂ.ಕೃಷ್ಣೇಗೌಡ, ಸಾಹಿತಿ

ಸೆಪ್ಟೆಂಬರ್ 22ಕ್ಕೆ ಅಧಿಕೃತ ಚಾಲನೆ

ಮೈಸೂರು ದಸರಾ ಎಷ್ಟೊಂದು ಸುಂದರ

ಸೆಪ್ಟೆಂಬರ್ 22ರಿಂದ ಅಕ್ಟೋಬರ್ 2ರವರೆಗೆ ಮೈಸೂರು ದಸರಾವನ್ನು ಅದ್ದೂರಿಯಾಗಿ ಆಚರಿಸಲು ಸರಕಾರ ತೀರ್ಮಾನಿಸಿದೆ. ಸೆ.22 ರಂದು ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ದಸರೆಗೆ ಚಾಲನೆ ಸಿಗಲಿದೆ. ಪತ್ರಕರ್ತೆಯಾಗಿ, ವಕೀಲೆಯಾಗಿ. ಲೇಖಕಿಯಾಗಿ ಗುರುತಿಸಿಕೊಂಡಿರುವ ಬಾನು ಮುಷ್ತಾಕ್ ಮಹಿಳಾ ಚಳವಳಿ, ರೈತ ಪರ ಮತ್ತು ಕನ್ನಡಪರ ಚಳವಳಿಯಲ್ಲಿ ಕೆಲಸ ಮಾಡಿದ್ದಾರೆ. ಒಬ್ಬ ಕಥೆಗಾರ್ತಿಯಾಗಿ ಬುಕರ್ ಪ್ರಶಸ್ತಿಗೆ ಭಾಜನರಾಗುವ ಮೂಲಕ ಕನ್ನಡ ಸಾಹಿತ್ಯಕ್ಕೆ ಅಂತಾರಾಷ್ಟ್ರೀಯ ಗೌರವ ತಂದು ಕೊಟ್ಟಿದ್ದಾರೆ.

ದೀಪಾ ಬಾಸ್ತಿಗೂ ಆಹ್ವಾನಕ್ಕೆ ಒತ್ತಾಯ

ಬಾನು ಮುಷ್ತಾಕ್ ಅವರ ಹೃದಯದ ಹಣತೆ ಕೃತಿಯ ಆಯ್ದ ಕಥೆ ಗಳನ್ನು ಇಂಗ್ಲಿಷಿಗೆ ಅನುವಾದಿಸಿದ ಕೊಡಗಿನ ದೀಪಾ ಬಾಸ್ತಿ ಬುಕರ್ ಪ್ರಶಸ್ತಿಯಲ್ಲಿ ಜಂಟಿ ವಿಜೇತರು. ಕೊಡಗಿನ ಯುವ ಲೇಖಕಿಯನ್ನೂ ದಸರಾ ಉದ್ಘಾಟನೆಗೆ ಆಹ್ವಾನಿಸಿದ್ದರೆ ಹಳೆ ತಲೆಮಾರು ಮತ್ತು ಹೊಸ ತಲೆಮಾರಿನ ಇಬ್ಬರು ಲೇಖಕಿಯರನ್ನು ಒಟ್ಟಿಗೆ ಗೌರವಿಸಿದಂತಾಗುತ್ತಿತ್ತು. ದಸರೆಗೆ ಇನ್ನಷ್ಟೂ ಮೆರುಗು ಬರುತ್ತಿತ್ತು ಎಂಬ ಅಭಿಪ್ರಾಯ ಕೊಡಗಿನಿಂದ ಕೇಳಿ ಬಂದಿದೆ.

ಸಮಾಚಾರ ಸಣ್ಣದಲ್ಲ

ಗಣೇಶ ವಿಸರ್ಜನೆಗೆ ತಾತ್ಕಾಲಿಕ ವ್ಯವಸ್ಥೆ

ಬೆಂಗಳೂರು: ನಗರದಲ್ಲಿ ಗಣೇಶ ಮೂರ್ತಿ ವಿಸರ್ಜನೆಗಾಗಿ ಕೆರೆ ಅಂಗಳದ, ತಾತ್ಕಾಲಿಕ ಕಲ್ಯಾಣಿ, ಸಂಚಾರಿ ವಾಹನಗಳ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಬಿಬಿಎಂಪಿ ಹೇಳಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಗಣೇಶ ಚತುರ್ಥಿ ಹಿನ್ನೆಲೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, 41 ಕೆರೆ ಅಂಗಳದ/ತಾತ್ಕಾಲಿಕ ಕಲ್ಯಾಣಿ ಹಾಗೂ 489 ಸಂಚಾರಿ ವಾಹನ (ಮೊಬೈಲ್ ಟ್ಯಾಂಕ್) ಗಳ ವ್ಯವಸ್ಥೆ ಹಾಗೂ ಗಣೇಶ ಮೂರ್ತಿ ಪ್ರತಿಷ್ಠಾಪನೆಗಾಗಿ ಅನುಮತಿ ಪಡೆಯಲು 75 ಏಕಗವಾಕ್ಷಿ ಕೇಂದ್ರಗಳ ವ್ಯವಸ್ಥೆಯನ್ನು ಮಾಡಲಾಗಿದ್ದು, ಗಣೇಶ ವಿಸರ್ಜನೆಗೆ ಸಂಬಂಧಿಸಿದಂತೆ ಮೇಲ್ವಿಚಾರಣೆ ಹಾಗೂ ಹೆಚ್ಚಿನ ಮಾಹಿತಿಗಾಗಿ ನೋಡಲ್ ಅಧಿಕಾರಿಗಳನ್ನು ಸಹ ನಿಯೋಜಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಬಿಬಿಎಂಪಿ ವೆಬ್ ಸೈಟ್ ಲಿಂಕ್ https://apps.bbmpgov.in/ganesh2025/ ಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಬಹುದು.

ಹೇರೋಹಳ್ಳಿ ಕೆರೆ ಕಲ್ಯಾಣಿಯಲ್ಲಿ ವಿಸರ್ಜನೆಗೆ ಇಲ್ಲ: ಆರ್‌ಆರ್ ನಗರ ವಲಯ ವ್ಯಾಪ್ತಿಯಲ್ಲಿ ಬರುವ ಹೇರೋಹಳ್ಳಿ ಕೆರೆಯ ಕಲ್ಯಾಣಿಯಲ್ಲಿ ಪ್ರತಿ ವರ್ಷವೂ ಗಣೇಶ ಮೂರ್ತಿಗಳ ವಿಸರ್ಜನೆಗೆ ವ್ಯವಸ್ಥೆ ಕಲ್ಪಿಸಲಾಗುತ್ತಿತ್ತು. ಈ ಬಾರಿ ತಾಂತ್ರಿಕ ಕಾರಣಗಳಿಂದ ಗಣೇಶ ವಿಸರ್ಜಿಸುವುದನ್ನು ಸ್ಥಗಿತಗೊಳಿಸಲಾಗಿದೆ. ಆದ್ದರಿಂದಾಗಿ ಸಾರ್ವಜನಿಕರು ಬದಲಿ ವ್ಯವಸ್ಥೆಯನ್ನು ಮಾಡಿಕೊಳ್ಳಲು ಕೋರಿದೆ.

ಅನಂತನಾಗ್‌ರೊಂದಿಗೆ ಒಂದು ಕಲಾತ್ಮಕ ಸಂಜೆ ಕಾರ್ಯಕ್ರಮದಲ್ಲಿ ಗಣಪತಿ ಭಟ್ ಅಭಿಮತ

ಪ್ರತಿಕ್ಷಣದ ಪರೀಕ್ಷೆಯಲ್ಲಿ ಪಾಸಾದವರು ಅನಂತನಾಗ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸರಕಾರಿ ಕೆಲಸಕ್ಕೆ ಸೇರುವ ಅಧಿಕಾರಿಗಳಿಗೆ ಒಂದು ಬಾರಿ ಪರೀಕ್ಷೆ ಇರುತ್ತದೆ. ಆದರೆ ಕಲಾವಿದರಿಗೆ ಪ್ರತಿಕ್ಷಣವೂ ಪರೀಕ್ಷೆಯಿರುತ್ತದೆ. ಈ ಪ್ರತಿಕ್ಷಣದ ಪರೀಕ್ಷೆಯಲ್ಲಿ ಅನಂತನಾಗ್ ಅವರು ಉತ್ತೀರ್ಣರಾಗುವುದಕ್ಕೆ ಅವರ ಪರಿಶ್ರಮವೇ ಕಾರಣ ಎಂದು ಗಣಪತಿ ಭಟ್ ಅಭಿಪ್ರಾಯ ಪಟ್ಟರು.

ಬೆಂಗಳೂರಿನಲ್ಲಿ ಆಯೋಜಿಸಿದ್ದ 'ಅನಂತನಾಗ್ ಅವರೊಂದಿಗೆ ಒಂದು ಕಲಾತ್ಮಕ ಸಂಜೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅನಂತನಾಗ್‌ನಂತಹ ಒಬ್ಬ ಅದ್ಭುತ ಕಲಾವಿದನಿಗೆ ಪ್ರತಿಕ್ಷಣವೂ ಪರೀಕ್ಷೆಯೇ. ಅದರಲ್ಲಿ ಉತ್ತೀರ್ಣರಾಗುವುದು ಒಂದು ಅದ್ಭುತವಾದಂತಹ ಯೋಗ ಹಾಗೂ ಪರಿಶ್ರಮ. ಅವರು ಜೀವನದಲ್ಲಿ ಯಶಸ್ವಿಯಾದವರು. ಉತ್ತೀರ್ಣರಾದವರು ಮತ್ತು ಎಂತಹದೇ ಪರೀಕ್ಷೆಯನ್ನು ಕ್ಷಣ ಕ್ಷಣದಲ್ಲಿ ಎದುರಿಸಲು ಸನ್ನದ್ಧರಾದವರು. ಅಂತಹವರನ್ನು ನಾವು ಗೌರವಿಸಬೇಕು ಎಂದು ಅಭಿಪ್ರಾಯಪಟ್ಟರು.

ಪೂಜ್ಯರನ್ನು, ಹಿರಿಯರನ್ನು ಗೌರವಿಸಬೇಕು. ಈ ಪ್ರಜ್ಞೆಯಿಲ್ಲದಿದ್ದರೆ ಇಂತಹ ಜಾಗದಲ್ಲಿ ದುರ್ಭಿಕ್ಷ, ಮರಣ ಮತ್ತು ಭೀತಿ ತಾಂಡವವಾಡುತ್ತದೆ. ಅನಂತನಾಗ್ ಅವರು ಪದ್ಮಭೂಷಣ ಪ್ರಶಸ್ತಿಯನ್ನು ಪಡೆದ ಸಮಯದಲ್ಲಿಯೂ ಅವರನ್ನು ಗೌರವಿಸಲಿಲ್ಲವೆಂದರೆ ನಾವು ಅವರನ್ನು ಗೌರವಿಸಿಲ್ಲ ಎಂದರ್ಥ ಎಂದು ಅಭಿಪ್ರಾಯಪಟ್ಟರು. ಹಿರಿಯ ನಟ ಅನಂತನಾಗ್ ಮಾತನಾಡಿ, ನಟನಾಗಬೇಕು ಎನ್ನುವ ಆಸೆಯೂ ಇರಲಿಲ್ಲ, ಯೋಚನೆಯೂ ಇರಲಿಲ್ಲ. ಆದರೆ ಬಾಲ್ಯದಿಂದಲೂ ಯಕ್ಷಗಾನ ನೋಡಿ ಬೆಳೆದವರು. ಅದರಲ್ಲಿರುವ ಶ್ರೀಮಂತ ಭಾಷೆ, ನೃತ್ಯ ನೋಡಿ ಬೆಳೆದ ವರು. ಸಣ್ಣವನಾಗಿದ್ದಾಗ ಮಿಮಿಕ್ರಿ, ನಟನೆ ಮಾಡಿದ್ದೆ. ಕಾಮರ್ಸ್ ಓದುತ್ತಿದ್ದ ಸಮಯದಲ್ಲಿ ಯೂನಿಯನ್ ಬ್ಯಾಂಕ್‌ನಲ್ಲಿ ಪಾರ್ಟ್ ಟೈಮ್ ಜಾಬ್ ಮಾಡಿಕೊಂಡಿದ್ದಾಗ ಕೆಲವರು, ನಾಟಕದಲ್ಲಿ ನಟನೆ ಮಾಡಲು ಅವಕಾಶ ನೀಡಿದರು. ಪ್ರಭಾಕರ್ ಮುದೂರು, ವೆಂಕಟರಾವ್ ಸೇರಿದಂತೆ ಅವರೊಂದಿಗೆ ನಾಟಕದಲ್ಲಿ ಕಾಣಿಸಿಕೊಂಡೆ. ಆಗ ನನಗೆ ಆತ್ಮವಿಶ್ವಾಸ ಮರಳಿ ಬಂತು ಎಂದು ಹಳೆ ದಿನಗಳನ್ನು ಮೆಲುಕು ಹಾಕಿದರು. ನಾವು ನಟನೆಗೆ ಬರುವ ಸಮಯದಲ್ಲಿ ನಾಟಕಗಳಿದ್ದವು. ಆದರೆ ಇಂದಿನ ಯುವ ಪೀಳಿಗೆಗೆ ನಾಟಕಗಳಿಲ್ಲ. ಬದಲಿಗೆ ಯುವಕರು ಕಿರುತೆರೆ, ನಾಟಕ ಸೇರಿದಂತೆ ವಿವಿಧ ಕ್ಷೇತ್ರದಿಂದ ಸಿನಿಮಾ ಕ್ಷೇತ್ರಕ್ಕೆ ಬಂದಿ ದ್ದಾರೆ. ಇತ್ತೀಚಿನ ದಿನಗಳಲ್ಲಿ ಸಿನಿಮಾಗಳಲ್ಲಿ ಹೆಚ್ಚು ಮೌಲ್ಯ ಕಾಣಿಸುತ್ತಿಲ್ಲ. ಆ ವಿಷಯ ದಲ್ಲಿ ನಾನು ಅದೃಷ್ಟವಂತ. ಕಲಾತ್ಮಕ, ಪೌರಾಣಿಕ ನಾಟಕಗಳಿಂದ ಬಂದು, ಉತ್ತಮ ಪಾತ್ರಗಳನ್ನು ನಿಭಾಯಿಸಿದ್ದೆ ಎಂದು ತಮ್ಮ ಸಿನಿಮಾ ಜರ್ನಿಯನ್ನು ನೆನಪಿಸಿಕೊಂಡರು. ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, 75ರ ವಯಸ್ಸಿನಲ್ಲೂ ಅನಂತನಾಗ್‌ರವರು ಚಿತ್ರರಂಗದಲ್ಲಿ ತುಂಬಾ ಉತ್ಸಾಹದಿಂದ, ಕ್ರಿಯಾಶೀಲರಾಗಿ ಚಿತ್ರರಂಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಅನಂತನಾಗ್ ನಟನೆಯ ಚಲನ ಚಿತ್ರಗಳು, ಎಂತಹದ್ದೇ ಪಾತ್ರಗಳನ್ನು ಕೊಟ್ಟರು ನಿಭಾಯಿಸಿ, ಅತ್ಯುತ್ತಮ ನಟನೆಯ ಮೂಲಕ ನಮ್ಮನ್ನು ರಂಜಿಸಿದ್ದಾರೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಡಾ. ಅನಂತನಾಗ್, ಗಾಯತ್ರಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಗಣಪತಿ ಭಟ್ ಸೇರಿದಂತೆ ಚಿತ್ರರಂಗದ ಕಲಾವಿದರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅನಂತನಾಗ್ ಅವರೊಂದಿಗೆ ಒಂದು ಕಲಾತ್ಮಕ ಸಂಜೆ ಕಾರ್ಯಕ್ರಮದಲ್ಲಿ ಹಿರಿಯ ನಟ ಅನಂತನಾಗ್ ದಂಪತಿಯನ್ನು ಸನ್ಮಾನಿಸಲಾಯಿತು.

ಅನಂತನಾಗ್ ಅವರೊಂದಿಗೆ ಒಂದು ಕಲಾತ್ಮಕ ಸಂಜೆ ಕಾರ್ಯಕ್ರಮವನ್ನು ಹಿರಿಯ ನಟ ಅನಂತನಾಗ್ ಉದ್ಘಾಟಿಸಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಗಣಪತಿ ಭಟ್ ಇದ್ದರು.

ಹಾಡು ಹೇಳಿ ರಂಜಿಸಿದ ಅನಂತನಾಗ್

ಕಾರ್ಯಕ್ರಮದಲ್ಲಿ ನಟ ಅನಂತನಾಗ್ ಅವರು ದೇವರ ನಾಮವನ್ನು ಹಾಡುವ ಮೂಲಕ ನೆರೆದಿದ್ದವರನ್ನು ರಂಜಿಸಿದರು. ಹಳೆಗನ್ನಡದಲ್ಲಿರುವ ಭೀಮಸೇನ ಜೋಶಿ ಅವರು ಹಾಡಿದ್ದ ಈ ಹಾಡನ್ನು ಹಾಡುವ ಮೂಲಕ ನೆರೆದಿದ್ದವರನ್ನು ರಂಜಿಸಿದರು. ಈ ವೇಳೆ ಭೀಮಸೇನ ಜೋಶಿ ಅವರ ಅನಂತನಾಗ್ ಅವರ ನಿವಾಸಕ್ಕೆ ಆಗಮಿಸಿದ್ದು, ತಮ್ಮ ಶಾಲಾ ದಿನಗಳನ್ನು ನೆನಪಿಸಿಕೊಂಡರು.

> ಮಠದಲ್ಲಿ ಬೆಳೆದ ನನಗೆ ವೇದ-ಉಪನಿಷತ್ತನ್ನು ಹೇಳಿದ್ದರಿಂದ ಭಾಷಾ ಶುದ್ಧತೆಯಿತ್ತು. ಇದರಿಂದ ನಾಟಕಗಳನ್ನು ಮಾಡುವಾಗ ಶುದ್ಧವಾಗಿ ಡೈಲಾಗ್ ಹೇಳುತ್ತಿದೆ. ನಾಟಕದಲ್ಲಿನ ಪರಿಣಿತಿಯಿಂದ ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟೆ. ಹಲವರ ಎಚ್ಚರಿಕೆಯ ನಡುವೆಯೂ ಧೈರ್ಯ ಮಾಡಿ ಸಿನಿಮಾ ಕ್ಷೇತ್ರದಲ್ಲಿ ಮುಂದುವರಿದೆ. ಹಾದಿ ಸುಲಭವಾಗಿರಲಿಲ್ಲ. ಆದರೆ ಹಿರಿಯರ ಸಲಹೆ, ಸಹಕಾರದಿಂದ ಸಿನಿಮಾ ಕ್ಷೇತ್ರದಲ್ಲಿ ನೆಲೆ ಕಂಡುಕೊಂಡೆ.
>
> **- ಅನಂತನಾಗ್,** ಹಿರಿಯ ನಟ

4 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ಬೆಂಗಳೂರು: ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ ಕಾರ್ಯಾಚರಣೆ ನಡೆಸಿದ ರೈಲ್ವೆ ಭದ್ರತಾ ಪಡೆಯ ಸಿಬ್ಬಂದಿ 4 ಲಕ್ಷ ಮೌಲ್ಯದ ಗಾಂಜಾ ಜಪ್ತಿ ಮಾಡಿದ್ದಾರೆ. ರೈಲು ನಿಲ್ದಾಣದಲ್ಲಿ ಪರಿಶೀಲನೆ ನಡೆಸುವಾಗ ಬ್ಯಾಗ್ವೊಂದು ಪತ್ತೆಯಾಗಿತ್ತು. ಅದನ್ನು ಪರಿಶೀಲಿಸಿದಾಗ, ಪ್ಲಾಸ್ಟಿಕ್ ಸುತ್ತಿ ಅದರ ಒಳಗೆ ಗಾಂಜಾ ಇಡಲಾಗಿತ್ತು. ಬ್ಯಾಗ್‌ನಲ್ಲಿ ಅಂದಾಜು 5.22 ಕೆ.ಜಿ ಗಾಂಜಾ ಪತ್ತೆಯಾಗಿದೆ ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ. ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ(ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದರು.

PUBLIC NOTICE

This is to inform the General Public that **SMT.JAMUNA.U,** is the owner of immovable property mentioned in the schedule hereunder and she is intending to avail loan from my client M/s.Repco Home Finance Limited, M.G.Road Branch, Bangalore and creating security on the schedule property in favour of my client. In case anybody having any claim, right title and intestest, in respect of the schedule property, and the same should be informed to the undersigned within **SEVEN DAYS** from the date of publication of this notice along with necessary documents.

SCHEDULE PROPERTY

All that piece and parcel of the immovable Property bearing Site No.54, Assessment No.125/1, situated at Rajeshwarinagara, Laggere Village, Yeshwanthapura Hobli, Bangalore North Taluk, BBMP ward No.70, measuring east to west 45 and north to south 29.5 feet, totally measuring 1327.5 Square feet or 123.32 Square meter, now comes under the limits of BBMP and bounded on: **East by :** Site No.44, **West by :** Road, **North by :** Site No.53, **South by :** Site No.55.

N.JAGADEESH KUMAR, Advocate
No.30/1, 2nd Floor, 7th Cross,
Near NR Colony Bus Stand,
Opp. Hotel Dwaraka, Bangalore-560019.

ವಿರಾಮ
ಪ್ರತಿ ಭಾನುವಾರ

PUBLIC NOTICE

It is hereby notified that my client is in the process of negotiating the purchase of the property described in the Schedule below **("Schedule Property")** from the owner of the residential property bearing No. 36, Katha No. 2/1, BBMP PID No. 55-490-14, Property ePID No. 6114611266, situated at Ittamadu, Uttarahalli Hobli, Bangalore South Taluk, which is more fully described in the Schedule hereunder.

Any person, other than the said owner, who has any right, title, interest, claim, charge, or lien over the Schedule Property, or who has any lawful objection to the sale of the Schedule Property by the aforesaid owner, is hereby called upon to submit their objections in writing, along with photocopies of supporting documents, to the undersigned within **seven (7) days** from the date of publication of this notice.

SCHEDULE PROPERTY

All that piece and parcel of an immovable Northern side residential property bearing **No. 36,** Katha No. 2/1, BBMP PID No.55-490-14, Property ePID No. 6114611266, Situated at **ITTAMADU, Uttarahalli Hobli, Bangalore South Taluk,** now coming under the limits of Bruhath Bangalore Mahanagara Palike, measuring East to West: **38 feet** and North to South: **20 Feet**, with 1/2 square Mangalore tiles residential house and with all civic amenities bounded on: **East by: Private property, West by: Road, North by: Private property, South by: Remaining southern side property bearing No.36.**

KUMARA K Y, B.A, LLB, Advocate
No. 25, 6th Main Road, BSK 3rd Stage,
Bangalore - 560085 Phone: 9986526978

PUBLIC NOTICE

Public are informed that, my clients Sumithraa Bai R., Prakash R. Kamalapathi G., Smt. Jayanthi Babu, Mrs. G. Sujaya Kumari, Sri. R. Vasanth Kumar, Smt. Sushma Srinivas, Smt. Sapna R. S. Suneetha, Bhavana Lokesh, Smt. Chaitanya Shiju, Smt. Divya Sripal, P. Prabhavathi, Shrenika R., and Karunashree R., have lost the original document i.e. 1). Release Deed dated 28/8/1981executed by Rajeshwari, Sulochana, Sumithra Bai, Sripal, Ramesh and Prakash in favour of Smt. Saraswathamma R vide document No. 1981/1981-82, of Book 1, Dated 28/8/1981, registered in the office of the Sub Registrar, Gandhinagar, Bangalore.

If any person/s firm company, institution or organization has any claim are holding the afore mentioned document, they may contact the undersigned in writing within 7 days from the date of this notice failing which it will be presumed that there are no claims.

SCHEDULE

All that piece and parcel of property bearing No. 1821/1, Old No. 88, Renumbered 16, E-PID No. 4922989232, 16/2, E PID No. 3115689144 and 16/3, E PID No. 2439084252, Old PID No. 6-4-16, situated at 3rd Cross Road, Near RCG Hospital, Malleshwaram, Bengaluru totally measuring East to West : 30-0 feet and North to South : 60-0 feet, totally measuring 1800 Sq. ft. along with 1200 Square of RCC roofed Ground floor, 1200 Squares first floor, 600 square Second Floor house constructed thereon of Red Oxide flooring, Teak and Honee wood, with all civic amenities and bounded on the :-

East by :: Private Property No. 1821;
West by :: K.C. General Hospital;
North by :: Conservancy Lane;
South by :: Property bearing No. 16/1 belonging to Yanimili Jyothi.

KSR Associates
ADVOCATES & LEGAL CONSULTANTS
OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003
Email: raviksadvocate@gmail.com
Mobile: 99450 00789

PUBLIC NOTICE

Public are informed that, my client Mr. Vishal Ganapati S/o Mr. G K Vittal aged about 42 years residing at No 5, Vittal Villa, Kaveri Layout, Hennur Cross, Bangalore - 560043 (Aadhar No 677003166929) is the absolute owner of property bearing Immovable SOUTHERN PORTION of Property bearing Site No.5, V.. Katha No.458, From B-Katha No.1542/458/33/2-5, formed out of converted Survey No.33/2, Situated at HENNUR VILLAGE, Kasaba Hobli, Bangalore North Taluk, Bangalore, Now comes under BBMP New Ward NO.24, Residential Conversion order bearing No.Dis.ALN.SR (N)76/90-91, Dated: 04.04.1991, issued by the Special Deputy Commissioner Bangalore District, issued by the Tahsildar, Bangalore North Taluk, Bangalore, Measuring Eastern Side : 48' Feet, Western Side :50' Feet, Northern side :30' feet South : 28' Feet, in all measuring 1421 Square feet, and bounded on East by – Private Property, West by – Road & Site No 06, North by – Remaining portion same site No 5 South by – Private Property and also stated that below mentioned original documents has been lost/misplaced and my client is not in a position to trace the said original document.

1. Original Extract Dated 06.06.2016
2. Original EC No. 32978 & 10415 & 11772
3. Original Sale Deed Dated 20.01.1992 Doc. No. 6153/1992
4. Original General POA Dated 13.07.2012
5. Original Estimation
6. Original MODT Stamp(Rs.25000) Dated 13.02.2019
7. Original Building Plan
8. Online Tax Receipt Dated 10.04.2018
9. Original NOC From TCHFL
10. Original LOD from TCHFL

Any person/s are in possession of the aforesaid original document may return the same to under mentioned Advocate or to my client or if anyone having any claim over the said property or any other claims by any person/s, Nationalized banks, MNC Banks, private Banks, Co-operative banks any financial institutions Governed by the RBI rules may lodge their objections in writing within 10 days from this day to the under mentioned Advocate.

KSR Associates
ADVOCATES & LEGAL CONSULTANTS
OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003
Email: raviksadvocate@gmail.com
Mobile: 99450 00789

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **02.05.2025** ರಂದು ಕರೆದು ಸಾಲಗಾರ **ಸೌಮೇಂದ್ರ ಬಿಸ್ವಾಲ್ ಅಲಿಯಾಸ್ ಸೌಮೇಂದ್ರ ಚಂದ್ರಶೇಖರ್ ಬಿಸ್ವಾಲ್ ಮತ್ತು ರೀಮಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 24,29,885.44 (ಇಪ್ಪತ್ನಾಲ್ಕು ಲಕ್ಷ ಇಪ್ಪತ್ತೊಂಬತ್ತು ಸಾವಿರದ ಎಂಟುನೂರ ಎಂಬತ್ತೈದು ರೂಪಾಯಿಗಳು ಮತ್ತು ನಲವತ್ತನಾಲ್ಕು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAN00477727** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **30.04.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರರು ಸಾಲ ಮರುಪಾವತಿಸಲು ವಿಫಲವಾದ ಕಾರಣ ಕೆಳಗೆ ತಿಳಿಸಿರುವ **ಆಸ್ತಿಯ ಸ್ವಾಧೀನ**ವನ್ನು ಅಧಿಕಾರ ಪ್ರಯೋಗ ಮಾಡುವ ಸೆಕ್ಷನ್ 13(4)ರ ಆಕ್ಟ್‌ನ ನಿಯಮ 8 ರೂಂದಿಗೆ ಓದಿ ತಿಳಿಸಿರುವ ನಿಯಮದ ಪ್ರಕಾರ ದಿನಾಂಕ **20.08.2025** ರಂದು ಮಾಡಲಾಗಿದೆ ಎಂದು ಸಾಲಗಾರನಿಗೆ ಮತ್ತು ಸಾರ್ವಜನಿಕವಾಗಿ ತಿಳಿಯಪಡಿಸಲಾಗುವುದು.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**)ಬಾಕಿ ಇರುವ ಮೊತ್ತ **ರೂ. 24,29,885.44 (ಇಪ್ಪತ್ನಾಲ್ಕು ಲಕ್ಷ ಇಪ್ಪತ್ತೊಂಬತ್ತು ಸಾವಿರದ ಎಂಟುನೂರ ಎಂಬತ್ತೈದು ರೂಪಾಯಿಗಳು ಮತ್ತು ನಲವತ್ತನಾಲ್ಕು ಪೈಸೆ ಮಾತ್ರ) 30.04.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ಸಂ. ಅ1-00-25, 825 ಚದರ ಅಡಿಗಳಷ್ಟು ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದ್ದು ಇದು 536 ಚದರ ಅಡಿಗಳಷ್ಟು ಕಾರ್ಪೆಟ್ ಪ್ರದೇಶವನ್ನು ಒಳಗೊಂಡಿದೆ, ಗೋಪುರ ಅ1 ರಲ್ಲಿ ನೆಲಮಹಡಿ, ''ಜಿಎಂ ಮಹತ್ವಾಕಾಂಕ್ಷೆಯ ಎನ್‌ಕ್ಲೇವ್'' ಎಂದು ಕರೆಯಲ್ಪಡುವ ಯೋಜನೆಯಲ್ಲಿ, ಭೂ ಬೇರಿಂಗ್ ಎಸ್.ವೈ 53/1 ಎಸ್.ವೈ, 53/2, ಎಸ್.ವೈ ಸಂ 54/1, ಎಸ್.ವೈ ಸಂ 54/2, ಎಸ್.ವೈ ಸಂ 54/3, ಎಸ್.ವೈ ಸಂ 54/4, ಎಸ್.ವೈ ಸಂ 54/5, ಮರಗೊಂಡನಹಳ್ಳಿ ಗ್ರಾಮದಲ್ಲಿ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು-560100, ಕರ್ನಾಟಕ, 165 ಚದರ ಅಡಿ ಅವಿಭಜಿತ ಹಂಚಿಕೆ, ಹಕ್ಕು, ಶೀರ್ಷಿಕೆ, ಆಸಕ್ತಿ ಮತ್ತು ಮಾಲೀಕತ್ವದೊಂದಿಗೆ, ನೆಲ ಮಹಡಿಯಲ್ಲಿ, ಬೇಸ್‌ಮೆಂಟ್/ಸ್ಟಿಲ್ಟ್/ನೆಲ ಮಟ್ಟದಲ್ಲಿ ಒಂದು ಮುಚ್ಚಿದ ಕಾರು ಪಾರ್ಕಿಂಗ್ ಸ್ಥಳದೊಂದಿಗೆ.

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
ದಿನಾಂಕ : 20.08.2025
ಸ್ಥಳ : ಬೆಂಗಳೂರು
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ಸಾಲು-ಸಾಲು ರಜೆ | ಗೌರಿಗಣೇಶ ಹಬ್ಬದ ಪ್ರಯುಕ್ತ ವಿಶೇಷ ಬಸ್

ಹಬ್ಬಕ್ಕೆ 1500 ಹೆಚ್ಚುವರಿ ಸಾರಿಗೆ ಬಸ್ ವ್ಯವಸ್ಥೆ

ಬೆಂಗಳೂರು: ಗೌರಿ ಗಣೇಶ ಹಬ್ಬದ ಪ್ರಯುಕ್ತ ಕೆಎಸ್‌ಆರ್‌ಟಿಸಿ 1500 ಹೆಚ್ಚುವರಿ ಬಸ್‌ಗಳ ವಿಶೇಷ ಸಾರಿಗೆ ವ್ಯವಸ್ಥೆಯನ್ನು ಮಾಡಿದ್ದು, ಮುಂಗಡ ಬುಕ್ಕಿಂಗ್ ಅವಕಾಶವನ್ನು ನೀಡಿದೆ.

ಆ.26 ರಂದು ಸ್ವರ್ಣಗೌರಿ ವ್ರತ, ಆ.27ರಂದು ಗಣೇಶ ಚತುರ್ಥಿ ಹಬ್ಬದಾಚರಣೆಯ ಹಿನ್ನೆಲೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ, ಹೆಚ್ಚಾಗಲಿರುವ ಸಂಭವನೀಯ ಜನದಟ್ಟಣೆ ನಿವಾರಣೆಗೆ ಈ ವಿಶೇಷ ಬಸ್‌ಗಳ ಕಾರ್ಯಾಚರಣೆ ಮಾಡಲಾಗುವುದು. ಆ.25ರಿಂದ 31ರವರೆಗೆ ಈ ವಿಶೇಷ ಬಸ್‌ಗಳು ಸಂಚಾರ ಮಾಡಲಿವೆ. ಆ.25, 26ರಂದು ಬೆಂಗಳೂರಿನಿಂದ 1500 ಹೆಚ್ಚುವರಿ ವಾಹನಗಳ ವಿಶೇಷ ಸಾರಿಗೆ ವ್ಯವಸ್ಥೆ ಲಭ್ಯವಿರಲಿದೆ. ರಾಜ್ಯ ಮತ್ತು ಅಂತಾರಾಜ್ಯಕ್ಕೆ ಬೆಂಗಳೂರಿನಿಂದ ಆ.27 ಹಾಗೂ 31ರಂದು ವಿಶೇಷ ವಾಹನಗಳು ಸಂಚರಿಸಲಿದೆ ಎಂದು ಕೆಎಸ್‌ಆರ್‌ಟಿಸಿ ಮಾಹಿತಿ ನೀಡಿದೆ.

ಎಲ್ಲಿಂದ ಎಲ್ಲಿಗೆ ಬಸ್ ಸೇವೆ: ಬೆಂಗಳೂರು ಕೆಂಪೇಗೌಡ ಬಸ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆಸುಬ್ರಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿ, ವಿಜಯವಾಡ, ಹೈದರಾಬಾದ್ ಮುಂತಾದ ಸ್ಥಳಗಳಿಗೆ ವಿಶೇಷ ಬಸ್ ಸೇವೆ ನೀಡಲಿವೆ.

ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ ಮಾರ್ಗದ ಕಡೆ ಬಸ್ ಸಂಚರಿಸಲಿವೆ. ಇನ್ನೂ ತಮಿಳುನಾಡು ಮತ್ತು ಕೇರಳ ಕಡೆ ಮಧುರೈ, ಕುಂಭಕೋಣಂ, ಚೆನ್ನೈ, ಕೊಯಮತ್ತೂರ್, ತಿರುಚಿ, ಪಾಲಕ್ಕಾಡ್, ತ್ರಿಶೂರ್, ಏರ್ನಾಕುಲಂ, ಕೋಯಿಕೋಡ್, ಕ್ಯಾಲಿಕಟ್ ಮುಂತಾದ ಸ್ಥಳಗಳಿಗೆ ಹೋಗುವ ಪ್ರತಿಷ್ಠಿತ ಸಾರಿಗೆ ಬಸ್‌ಗಳು ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ಸಂಚರಿಸಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಿಗಂದೂರಿಗೆ ಬೆಂಗಳೂರಿನಿಂದ ನೇರ ಬಸ್

ಸಿಗಂದೂರು ಕೇಬಲ್ ಬ್ರಿಡ್ಜ್ ಉದ್ಘಾಟನೆಯನ್ನು ವೀಕ್ಷಿಸಲು ತೆರಳುವವರಿಗಾಗಿ ಕೆಎಸ್‌ಆರ್‌ಟಿಸಿಯು ನೇರ ಬಸ್ ಸಂಚಾರದ ವ್ಯವಸ್ಥೆ ಮಾಡಿದೆ. ಈ ಕುರಿತು ಮಾಹಿತಿ ನೀಡಿದ ಕೆಎಸ್‌ಆರ್‌ಟಿಸಿ, ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಬೆಂಗಳೂರು-ಸಿಗಂದೂರು ವಯಾ ಚಿತ್ರದುರ್ಗ, ಹೊಳಲ್ಕೆರೆ, ಚನ್ನಗಿರಿ, ಶಿವಮೊಗ್ಗ ಮಾರ್ಗದಲ್ಲಿ ನಾನ್ ಎಸಿ ಸ್ಲೀಪರ್ ಸಾರಿಗೆಯನ್ನು ಆ.22ರಿಂದ ಪ್ರಾರಂಭಿಸಿದೆ. ಬೆಂಗಳೂರಿನಿಂದ ಸಿಗಂದೂರಿಗೆ 950 ರು. ದರವನ್ನು ನಾನ್ ಎಸಿ ಸ್ಲೀಪರ್ ಬಸ್ಸಿಗೆ ನಿಗದಿ ಪಡಿಸಲಾಗಿದ್ದು, ಬಸ್ಸು ರಾತ್ರಿ 9.40ಕ್ಕೆ ಹೊರಟು ಮರುದಿನ ಬೆಳಗ್ಗೆ 6 ಗಂಟೆಗೆ ಸಿಗಂದೂರು ತಲುಪಲಿದೆ. ಸಿಗಂದೂರನ್ನು ರಾತ್ರಿ 8 ಗಂಟೆಗೆ ಬಿಟ್ಟು, ಬೆಂಗಳೂರನ್ನು ಮರುದಿನ ಬಳಗ್ಗೆ 4.15ಕ್ಕೆ ತಲುಪಲಿದೆ. ಪ್ರಯಾಣಿಕರು ನಾನ್ ಎಸಿ ಸ್ಲೀಪರ್ ವಾಹನದ ಮುಂಗಡ ಟಿಕೆಟ್ ಬುಕ್ಕಿಂಗ್‌ಗೆ ವೆಬ್ ಸೈಟ್ www.ksrtc.in www.ksrtc.karnataka.gov.in ಹಾಗೂ ಹೆಚ್ಚಿನ ಮಾಹಿತಿಗೆ 080-26252625 /7760990100 /7760990560/7760990287.

ಟಿಕೆಟ್ ಬುಕ್ಕಿಂಗ್ ಮೇಲೆ ರಿಯಾಯಿತಿ

ಕೆಎಸ್‌ಆರ್‌ಟಿಸಿ ಇ-ಟಿಕೇಟ್ ಬುಕ್ ಮಾಡಲು ಅಧಿಕೃತ ವೆಬ್‌ಸೈಟ್ www.ksrtc.karnataka.gov.in ಮೂಲಕ ಮಾಡಬಹುದು. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದರೆ ಶೇ.5 ರಷ್ಟು ರಿಯಾಯಿತಿ ನೀಡಲಾಗುವುದು. ಎರಡು ಬದಿ ಪ್ರಯಾಣದ ಟಿಕೆಟ್‌ನ್ನು ಒಟ್ಟಿಗೆ ಕಾಯ್ದಿರಿಸಿದರೆ ಟಿಕೆಟ್ ದರದಲ್ಲಿ ಶೇ.10 ರಷ್ಟು ರಿಯಾಯಿತಿ ನೀಡಲಾಗುತ್ತದೆ ಸಿಗಲಿದೆ.

ಖಾಸಗಿ ಬಸ್‌ಗಳಿಂದ ದುಪ್ಪಟ್ಟು ವಸೂಲಿ

ಬೆಂಗಳೂರು: ವಾರಾಂತ್ಯ ಮತ್ತು ಗೌರಿ ಗಣೇಶ ಹಬ್ಬದ ನಿಮಿತ್ತ ಊರಿಗೆ ತೆರಳುವ ಪ್ರಯಾಣಿಕರಿಗೆ ಬಿಸಿ ಮುಟ್ಟಿದ್ದು, ಖಾಸಗಿ ಬಸ್ ಮಾಲೀಕರು ದರ ಹೆಚ್ಚಿಸಿ ವಸೂಲಿಗಿಳಿದಿದ್ದಾರೆ. ಶನಿವಾರ ನಾಲ್ಕನೇ ಶನಿವಾರದ ರಜೆ, ಭಾನುವಾರ ರಜೆ ಸೋಮವಾರ ಒಂದು ದಿನ ರಜೆ ತೆಗೆದುಕೊಂಡರೆ ಮತ್ತೆ ಮಂಗಳವಾರ ಬುಧವಾರ ಗೌರಿ ಗಣೇಶ ಹಬ್ಬದ ಹಿನ್ನೆಲೆ ಒಟ್ಟು ಐದು ದಿನಗಳ ಕಾಲ ರಜೆ ದೊರೆಯಲಿದೆ. ಈ ಹಿನ್ನೆಲೆ ಸಾಕಷ್ಟು ಉದ್ಯೋಗಿಗಳು ಈಗಾಗಲೇ ಕಚೇರಿಗೆ ರಜೆ ಹಾಕಿದ್ದು,ಇದನ್ನೇ ಬಂಡವಾಳ ಮಾಡಿಕೊಂಡು ಖಾಸಗಿ ಬಸ್ ಮಾಲೀಕರು ಟಿಕೆಟ್ ದರ ದುಪ್ಪಟು ಮಾಡಿದ್ದಾರೆ.

ಸಾಮಾನ್ಯ ದಿನದ ದರ ಮತ್ತು ಹಬ್ಬದ ದರ

ಮಾರ್ಗ	ಪ್ರಸ್ತುತ ದರ	ರಜಾದಿನದ ದರ
ಬೆಂಗಳೂರು-ಧರ್ಮಸ್ಥಳ	600-1100 ರು.	1499-2600 ರು.
ಬೆಂಗಳೂರು-ಮೈಸೂರು	1990- 2000 ರು.	300-5000 ರು.
ಬೆಂಗಳೂರು-ಕೊಡಗು	494-849 ರು.	980-5000ರು.
ಬೆಂಗಳೂರು-ಚಿಕ್ಕಮಗಳೂರು	575-800 ರು.	950-1600 ರು
ಬೆಂಗಳೂರು-ಮಂಗಳೂರು	349-2750 ರು.	1019-3000 ರು.
ಬೆಂಗಳೂರು-ಧಾರವಾಡ	684-3600 ರು.	1000-5000 ರು.
ಬೆಂಗಳೂರು-ಹುಬ್ಬಳ್ಳಿ	609-1800 ರು.	1200-9999 ರು.
ಬೆಂಗಳೂರು- ಕಾರವಾರ	740-1600 ರು.	1500-3499 ರು.
ಬೆಂಗಳೂರು-ಕಲಬುರಗಿ	570-1300 ರು.	950-2200 ರು.
ಬೆಂಗಳೂರು-ಶಿವಮೊಗ್ಗ	375-1199 ರು.	799-2100 ರು.

ಬೈಕ್ ಟ್ಯಾಕ್ಸಿ ಸವಾರರ ಮೇಲೆ ಕ್ರಮ ಬೇಡ: ಹೈ

ಬೆಂಗಳೂರು: ಗುರುವಾರದಿಂದ ರಾಜ್ಯದಲ್ಲಿ ಮತ್ತೆ ಬೈಕ್ ಟ್ಯಾಕ್ಸಿ ಸೇವೆಯು ಪುನಾರಂಭವಾಗಿದ್ದು, ಅಗ್ರಿಗೇಟರ್‌ಗಳ ವಿರುದ್ಧ ಕ್ರಮ ಕೈಗೊಳ್ಳಬಹುದು ಆದರೆ ಬೈಕ್ ಟ್ಯಾಕ್ಸಿನ ಚಾಲಕರಿಗೆ ಯಾವುದೇ ರೀತಿಯಲ್ಲಿ ಕಿರುಕುಳವನ್ನು ನೀಡಬಾರದು ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಯು ಗುರುವಾರದಿಂದ ಪುನಾರಂಭವಾಗಿದ್ದು, ಉಬರ್, ರ್‍ಯಾಪಿಡೋ ಸಂಸ್ಥೆಗಳು ಬೈಕ್ ಟ್ಯಾಕ್ಸಿ ಸೇವೆಯನ್ನು ಮತ್ತೆ ಆರಂಭಿಸಿದೆ. ಈ ನಡುವೆ ಶುಕ್ರವಾರ ಕರ್ನಾಟಕ ಹೈಕೋರ್ಟ್ ಮಹತ್ವದ ನಿರ್ಣಯ ಕೈಗೊಂಡಿದ್ದು, ಬೈಕ್ ಟ್ಯಾಕ್ಸಿ ಸೇವೆಗಳನ್ನು ನೀಡಲು ಪ್ರಾರಂಭಿಸಿರುವ ಅಗ್ರಿಗೇಟರ್‌ಗಳ ವಿರುದ್ಧ ಅಧಿಕಾರಿಗಳು ಕಾನೂನು ಪ್ರಕಾರ ಯಾವುದೇ ರೀತಿಯ ಕ್ರಮವನ್ನು ಕೈಗೊಳ್ಳಬಹುದು. ಆ್ಯಪ್ ಆಧಾರಿತ ಸಂಸ್ಥೆಗಳಿಗೆ ನ್ಯಾಯಾಲಯವು ಅಂತಹ ಯಾವುದೇ ಸ್ವಾತಂತ್ರ್ಯವನ್ನು ನೀಡಲಿಲ್ಲ ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಹಾಗೂ ನ್ಯಾಯಮೂರ್ತಿ ಸಿ.ಎಂ. ಜೋಶಿ ಅವರಿದ್ದ ವಿಭಾಗೀಯ ನ್ಯಾಯಪೀಠದಲ್ಲಿ ಶುಕ್ರವಾರ ಕಲಾಪ ಆರಂಭವಾದಾಗ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಹಾಜರಾಗಿ, ಅಪ್ಲಿಕೇಶನ್ ಆಧಾರಿತ ಬೈಕ್ ಟ್ಯಾಕ್ಸಿ ಸೇವೆ ನೀಡುವವರು ಸೇವೆ ಆರಂಭಿಸಿದ್ದಾರೆ. ಕ್ರಮ ತೆಗೆದುಕೊಳ್ಳುವುದಕ್ಕೂ ಮುನ್ನ ನ್ಯಾಯಾಲಯದ ಗಮನಕ್ಕೆ ತರುವುದು ನನ್ನ ಕರ್ತವ್ಯ ಎಂದರು. ಬೈಕ್ ಟ್ಯಾಕ್ಸಿ ಚಾಲಕರ ಪರವಾಗಿ ಹಾಜರಾಗಿದ್ದ ವಕೀಲ ಗಿರೀಶ್ ಕುಮಾರ್, ಸರಕಾರ ಅಪ್ಲಿಕೇಶನ್ ವಿರುದ್ಧ ಕ್ರಮ ಕೈಗೊಳ್ಳಬಹುದು. ಅಪ್ಲಿಕೇಶನ್ ಆಧರಿಸಿ ಸೇವೆ ನೀಡುವ ಟ್ಯಾಕ್ಸಿಗಳ ಮೇಲಲ್ಲ. ವ್ಯಕ್ತಿಗತ ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಇದಕ್ಕೆ ಅಡ್ವೊಕೇಟ್ ಜನರಲ್ ಪ್ರತಿಕ್ರಿಯಿಸಿ, ವ್ಯಕ್ತಿಗತ ಬೈಕ್ ಟ್ಯಾಕ್ಸಿ ಸೇವೆ ನೀಡುವವರನ್ನು ಬಂಧಿಸಿಲ್ಲ. ಈ ವಾದ ಸರಿಯಲ್ಲ. ಅವರನ್ನು ನಾವು ಬಂಧಿಸುವುದಿಲ್ಲ ಎಂದು ಸ್ಪಷ್ಟನೆ ನೀಡಿದರು. ಇದೇ ವೇಳೆ ನ್ಯಾಯಾಲಯ ಬೈಕ್ ಟ್ಯಾಕ್ಸಿ ಸೇವೆ ನೀಡುವ ಚಾಲಕರಿಗೆ ಕಿರುಕುಳ ನೀಡಬಾರದು ಎಂದಿದೆ.

ಬಿಎಂಟಿಸಿ ಬಸ್‌ಗಳಿಂದ ಅಪಘಾತ ಹೆಚ್ಚಳ | ಚಾಲಕರ ವಿರುದ್ಧ ಕಠಿಣ ನಿಯಮ ಜಾರಿ

ಕಿಲ್ಲರ್ ಬಿಎಂಟಿಸಿ ಬಸ್‌ಗೆ ಮೂಗುದಾರ

ಬೆಂಗಳೂರು: ದಿನದಿಂದ ದಿನಕ್ಕೆ ಬಿಎಂಟಿಸಿ ಬಸ್‌ಗಳ ಅಪಘಾತ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿರುವ ಬೆನ್ನಲ್ಲೇ, ಅಪಘಾತ ಮಾಡುವ ಚಾಲಕರ ವಿರುದ್ಧ ಕಠಿಣ ನಿಯಮ ಜಾರಿಗೊಳಿಸಿದೆ.

ನಗರದಲ್ಲಿ ಒಂದಿಲ್ಲೊಂದು ಕಡೆಗಳಲ್ಲಿ ಬಿಎಂಟಿಸಿ ಬಸ್‌ಗಳಿಗೆ ಅಮಾಯಕರ ಜೀವ ಬಲಿಯಾಗುತ್ತಿದ್ದು, ಬಿಎಂಟಿಸಿ ಚಾಲಕರ ನಿರ್ಲಕ್ಷ್ಯವೇ ಈ ಅಪಘಾತಗಳಿಗೆ ಕಾರಣವೆಂದು ಹೇಳಲಾಗುತ್ತಿದೆ.

ನಗರದಲ್ಲಿ ಜನರು ಬಿಎಂಟಿಸಿಯಲ್ಲಿ ಸಂಚಾರ ನಡೆಸುವುದಕ್ಕಿಂತ ಹೆಚ್ಚಾಗಿ ಬಲಿಯಾಗುತ್ತಿದ್ದು, ಒಂದಲ್ಲ ಒಂದು ಅಮಾಯಕ ಜೀವ ಬಿಎಂಟಿಸಿ ಚಾಲಕರ ನಿರ್ಲಕ್ಷ್ಯದಿಂದಾಗಿ ಮೃತಪಡುತ್ತಿದೆ. ಕಳೆದ ಒಂದು ವಾರದಲ್ಲಿ ನಾಲ್ಕು ಜನರು ಬಿಎಂಟಿಸ್ ಬಸ್‌ನಿಂದ ಮೃತಪಟ್ಟಿದ್ದು, ಎಲೆಕ್ಟ್ರಿಕ್ ಬಸ್‌ಗಳಿಂದಲೇ ಅತಿ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವುದರಿಂದ 15 ತಿಂಗಳಲ್ಲಿ 18 ಜನರು ಬಲಿಯಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ನೂತನ ಮಾರ್ಗಸೂಚಿ ಹೊರಡಿಸಿರುವ ಬಿಎಂಟಿಸಿ, ಬಸ್ ಚಾಲಕರು ಎರಡು ಸಲ ಅಪಘಾತವೆಸಗಿ, ತಪ್ಪು ಸಾಬೀತಾದರೇ ಕೆಲಸದಿಂದಲೇ ವಜಾ ಮಾಡಲಾಗುತ್ತದೆ. ಚಾಲನೆ ವೇಳೆ ಫೋನ್‌ನಲ್ಲಿ ಮಾತನಾಡಿದರೇ ಕೆಲಸದಿಂದ ಅಮಾನತು ಮಾಡಲಾಗುತ್ತದೆ. ಈ ಹೊಸ ನಿಯಮ ಇಂದಿನಿಂದಲೇ ಜಾರಿಯಾಗಲಿದೆ ಎಂದು ಸಂಸ್ಥೆಯ ಮುಖ್ಯ ಸಂಚಾರ ವ್ಯವಸ್ಥಾಪಕ ಪ್ರಭಾಕರ್ ರೆಡ್ಡಿ ಹೇಳಿದರು.

ಈ ಕುರಿತು ಮಾಹಿತಿ ನೀಡಿರುವ ಅವರು, ಮೊದಲ ಸಲ ಅಪಘಾತವೆಸಗಿದರೆ ಆರು ತಿಂಗಳುಗಳ ಕಾಲ ಅಮಾನತು ಮಾಡುತ್ತೇವೆ. ಅಮಾನತು ಅವಧಿ ಮುಗಿದ ಮೇಲೆ ತರಬೇತಿ ನೀಡಿ ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುತ್ತೇವೆ. ಮೊದಲ ಸಲ ಅಪಘಾತವೆಸಗಿದ ಚಾಲಕರಿಗೆ ಮೂರು ಇನ್ಕ್ರಿಮೆಂಟ್ ಕಡಿತಗೊಳಿಸಲಾಗುತ್ತದೆ. ಎರಡನೇ ಸಲ ಅಪಘಾತವೆಸಗಿದರೆ ಬಿಎಂಟಿಸಿ ಸಂಸ್ಥೆಯಿಂದಲೇ ವಜಾ ಮಾಡಲಾಗುತ್ತದೆ ಎಂದರು. ಎಲೆಕ್ಟ್ರಿಕ್ ಬಸ್ ಚಾಲಕರು ಚಾಲನೆ ವೇಳೆ ವೇಳೆ ಫೋನ್‌ನಲ್ಲಿ ಮಾತಾಡಿದರೇ, ಬಸ್ ಕಂಪನಿಗೆ 5 ಸಾವಿರ ರು.ದಂಡ, 15 ದಿನಗಳ ಕಾಲ ಅಮಾನತು ಮಾಡಲಾಗುತ್ತದೆ. ಸೋಮವಾರದಿಂದ ಬಿಎಂಟಿಸಿ ಚಾಲಕರಿಗೆ ವಿಶೇಷ ತರಬೇತಿ ನೀಡಲಾಗುತ್ತದೆ. ಚಾಲಕರಿಗೆ ಯೋಗ ತರಬೇತಿ ನೀಡಲಾಗುತ್ತದೆ ಎಂದು ಹೇಳಿದ್ದಾರೆ.

ಮಾರ್ಗಸೂಚಿಯಲ್ಲಿ ಏನಿದೆ?: ನಗರದಲ್ಲಿ ಅಧಿಕ ಸಂಚಾರ ದಟ್ಟಣೆಯಿದ್ದು, ಲಕ್ಷಾಂತರ ಜನರು ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸುತ್ತಿದ್ದು, ಪ್ರಯಾಣಿಕರ ಸುರಕ್ಷತೆಯ ಜತೆಗೆ ಸಹ ಸವಾರ ಸಾರ್ವಜನಿಕರ ಸುರಕ್ಷತೆಯು ಸಂಸ್ಥೆಯ ಆದ್ಯ ಕರ್ತವ್ಯವಾಗಿರುತ್ತದೆ. ಬೆಂಗಳೂರಲ್ಲಿ ಈಗಾಗಲೇ ಮಳೆಗಾಲ ಆರಂಭವಾಗಿದ್ದು, ರಸ್ತೆಗಳಲ್ಲಿ ನೀರು ನಿಲ್ಲುವುದು, ರಸ್ತೆ ಗುಂಡಿಗಳು ದುರಸ್ಥಿ ಹಾಗೂ ಇನ್ನಿತರ ಕಾರಣಗಳಿಂದ ಸಂಸ್ಥೆಯ ವಾಹನಗಳಿಂದ, ಸಂಭವಿಸುವ ಅಪಘಾತ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ.

ಅಪಘಾತಗಳಲ್ಲಿ ದ್ವಿಚಕ್ರ ವಾಹನ ಸವಾರ, ಪಾದಚಾರಿ ಹಾಗೂ ಬಸ್ಸಿಗೆ ಹತ್ತುವ-ಇಳಿಯುವ ಪ್ರಯಾಣಿಕರು ಭಾಗಿಯಾಗಿರುವುದು ಕಂಡು ಬಂದಿರುತ್ತದೆ. ಆದುದರಿಂದ, ವಿಭಾಗೀಯ ನಿಯಂತ್ರಣಾಧಿಕಾರಿಗಳು, ವಿಭಾಗೀಯ ಸಂಚಾರ ಅಧಿಕಾರಿಗಳು, ಘಟಕ ವ್ಯವಸ್ಥಾಪಕರು ಘಟಕಗಳಲ್ಲಿ ದ್ವಾರ ಸಭೆಯ ಮೂಲಕ ಪ್ರತಿ ದಿನ ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ ಚಾಲನಾ ಸಿಬ್ಬಂದಿಗೆ ಸುರಕ್ಷಿತ ಚಾಲನೆಗೆ ಸಂಬಂಧಿಸಿದಂತೆ, ಈ ಕೆಳಕಂಡ ಅಂಶಗಳ ಕುರಿತು ಅರಿವು ಮೂಡಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

ಮಾರ್ಗಸೂಚಿ

- ವಾಹನಗಳ ನಡುವೆ ಸುರಕ್ಷಿತ ಅಂತರ ಕಾಯ್ದುಕೊಳ್ಳಿ
- ಕಡ್ಡಾಯವಾಗಿ ಸಂಚಾರ ನಿಯಮಗಳನ್ನು ಪಾಲಿಸಬೇಕು
- ಸಂಚಾರ ನಿಯಮಗಳ ಉಲ್ಲಂಘನೆಯಿಂದ ಉಂಟಾಗುವ ಅನಾನುಕೂಲಗಳ ಬಗ್ಗೆ ಗಮನವಿರಲಿ
- ವಾಹನದ ಬ್ರೇಕ್, ಹೆಡ್ ಲೈಟ್, ವೈಪರ್‌ಗಳು ಸುಸ್ಥಿತಿಯಲ್ಲಿರುವಂತೆ ಕ್ರಮವಹಿಸಬೇಕು
- ರಸ್ತೆಯಲ್ಲಿರುವ ರಸ್ತೆ ಉಬ್ಬುಗಳನ್ನು ಹಾಗೂ ರಸ್ತೆ ಗುಂಡಿಗಳನ್ನು ಗಮನಿಸಿ ಸುರಕ್ಷಿತವಾಗಿ ಚಾಲನೆ ಮಾಡಬೇಕು
- ಇಳಿಜಾರು, ರಸ್ತೆ ತಿರುವುಗಳಲ್ಲಿ ಎಚ್ಚರಿಕೆಯಿಂದ ಬ್ರೇಕ್, ಇಂಡಿಕೇಟರ್ ಹಾಗೂ ಪಾರ್ಕಿಂಗ್ ಲೈಟ್‌ಗಳನ್ನು ಉಪಯೋಗಿಸಬೇಕು.

- ರಾತ್ರಿ ವೇಳೆಯಲ್ಲಿ ಸೂಕ್ತ ಎಚ್ಚರಿಕೆ ಸಂಜ್ಞೆಗಳಿಲ್ಲದೆ ನಿಂತ ವಾಹನಗಳ ಬಗ್ಗೆ ಎಚ್ಚರಿಕೆ ವಹಿಸಬೇಕು
- ಕರ್ತವ್ಯ ನಿರತ ಸಮಯದಲ್ಲಿ ಚಾಲನಾ ಸಿಬ್ಬಂದಿ ಮೊಬೈಲ್ ಬಳಸಬಾರದು.
- ಬಸ್ ನಿಲ್ದಾಣಗಳಲ್ಲಿ ಬಾಗಿಲು ತೆರೆದು ಚಲಿಸುತ್ತಿರುವ ಬಸ್‌ನ್ನು ಪ್ರಯಾಣಿಕರು ಇಳಿಯಲು/ಹತ್ತಲು ಪ್ರಯತ್ನಿಸಿ ನಿಯಂತ್ರಣ ತಪ್ಪಿ ಕೆಳಗೆ ಬಿದ್ದು ಹಿಂದಿನ ಚಕ್ರಕ್ಕೆ ಸಿಲುಕಿ ಅಪಘಾತವಾಗಿರುವ ಪ್ರಕರಣಗಳು ಹೆಚ್ಚಾಗಿ ಕಂಡು ಬಂದಿದೆ.
- ನಿಗದಿತ ಬಸ್ ನಿಲ್ದಾಣಗಳಲ್ಲಿ ಬಸ್‌ನ್ನು ನಿಲ್ಲಿಸಿ, ಪ್ರಯಾಣಿಕರನ್ನು ಇಳಿಸಿ ಬಸ್ ಹತ್ತಿಸಿಕೊಂಡು ಬಾಗಿಲು ಮುಚ್ಚಿದ ನಂತರವೇ ವಾಹನವನ್ನು ಚಾಲನೆ ಮಾಡಬೇಕು.
- ವಾಹನವನ್ನು ರಸ್ತೆಯ ಮಧ್ಯ ದಲ್ಲಿ ಟ್ರಾಫಿಕ್ ಸಿಗ್ನಲ್‌ನಲ್ಲಿ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸಿ ಹತ್ತಿಸಿ ಕೊಳ್ಳುವುದನ್ನು ನಿಷೇಧಿಸಿದ್ದು, ಕಟ್ಟುನಿಟ್ಟಾಗಿ ಪಾಲಿಸಬೇಕು.
- ಶಾಲೆ, ಆಸ್ಪತ್ರೆ, ತಿರುವು, ಏರು ರಸ್ತೆ ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಎಚ್ಚರ ವಹಿಸಿ ಚಾಲನೆ ಮಾಡಬೇಕು.
- ಬಸ್ಸನ್ನು ಎಡಕ್ಕೆ-ಬಲಕ್ಕೆ ತಿರುಗಿಸುವಾಗ ಅಥವಾ ನಿಲ್ಲಿಸುವಾಗ ಎರಡೂ ಕಡೆಯ ಸೈಡ್ ಮಿರರ್‌ನ್ನು ಗಮನಿಸಿ ಎಚ್ಚರಿಕೆಯಿಂದ ವಾಹನವನ್ನು ಚಾಲನೆ ಮಾಡಬೇಕು.

ಸಮಾಚಾರ ಸಣ್ಣದಲ್ಲ

ಮಹಾರಾಷ್ಟ್ರದ ನಾಗಪುರ ದೀಕ್ಷಾಭೂಮಿ ಯಾತ್ರೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯಿಂದ 2025-26ನೇ ಸಾಲಿನಲ್ಲಿ ಡಾ. ಅಂಬೇಡ್ಕರ್‌ರ ಅನುಯಾಯಿಗಳನ್ನು ಮಹಾರಾಷ್ಟ್ರದ ನಾಗಪುರ ದೀಕ್ಷಾಭೂಮಿಯಲ್ಲಿ ಅ.2ರಂದು ನಡೆಯಲಿರುವ ಪ್ರವರ್ತನಾ ದಿನಕ್ಕೆ ಒಟ್ಟು 7700 ಅರ್ಹ ಯಾತ್ರಾರ್ಥಿಗಳನ್ನು ಆಯ್ಕೆ ಮಾಡುವ ಮೂಲಕ ಕೆಎಸ್‌ಆರ್‌ಟಿಸಿ ಇತರೆ ಸಾರಿಗೆ ಬಸ್ಸು ಮತ್ತು ರೈಲಿನ ಮೂಲಕ ಕಳುಹಿಸಿಕೊಡುವ ಸಂಬಂಧ ಅರ್ಜಿ ಆಹ್ವಾನಿಸಲಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಅನುಯಾಯಿಗಳು ಮಹಾರಾಷ್ಟ್ರದ ನಾಗಪುರದಲ್ಲಿನ ದೀಕ್ಷಾಭೂಮಿ ಯಾತ್ರೆಗೆ ಸೆ.30 ರಿಂದ ಅ.4ರವರೆಗೆ ವಿವಿಧ ಜಿಲ್ಲೆಗಳಿಂದ ಪ್ರಯಾಣಿಸಲು ಹಾಗೂ ಹಿಂದಿರುಗಿ ಬರುಲು ಬಸ್ಸು ಮತ್ತು ರೈಲಿನ ಮೂಲಕ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಯಾತ್ರಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಆ.25 ರಿಂದ ಸೆ.9ರವರೆಗೆ ಸಮಾಜ ಕಲ್ಯಾಣ ಇಲಾಖೆಯ https://swd.karnataka.gov.in/ ವೆಬ್‌ಸೈಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಆಸಕ್ತರು ಅರ್ಜಿಗಳನ್ನು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪ್ರವೇಶಾತಿ ನವೀಕರಣ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿವಿಯಲ್ಲಿ 2018-19 ರಿಂದ 2024-25ನೇ ಶೈಕ್ಷಣಿಕ ಸಾಲುಗಳ ಜುಲೈ/ಜನವರಿ ಆವೃತ್ತಿ ಹಾಗೂ 2024-25ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯಲ್ಲಿ ಯು.ಜಿ./ಪಿ.ಜಿ./ ಡಿಪ್ಲೊಮಾ/ ಸರ್ಟಿಫಿಕೇಟ್ ಕೋರ್ಸುಗಳಿಗೆ ಪ್ರವೇಶಾತಿ/ಪ್ರವೇಶಾತಿ ನವೀಕರಣಕ್ಕಾಗಿ ಸಿಬಿಸಿಎಸ್ /ನಾನ್ ಸಿಬಿಸಿಎಸ್‌ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಪಾವತಿಸಲು ದಂಡ ಶುಲ್ಕವಿಲ್ಲದೆ ಆ.28 ಹಾಗೂ 200 ರು. ದಂಡ ಶುಲ್ಕದೊಡನೆ ಸೆ.6 ಕೊನೆಯ ದಿನಾಂಕವಾಗಿದ್ದು, ವಿದ್ಯಾರ್ಥಿಗಳು ವಿವಿಯ ಅಧಿಕೃತ ವೆಬ್‌ಸೈಟ್ www.ksoumysuru.ac.inಮೂಲಕವೇ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 080-26603664 ಹಾಗೂ 9880626439/9019526439 ಅನ್ನು ಸಂಪರ್ಕಿಸಿ.

ನಾಕುತಂತಿ ಷಷ್ಟಿಪೂರ್ತಿ ಸಂಭ್ರಮಾಚರಣೆ

ಬೆಂಗಳೂರು: ನಗರದ ದೊಡ್ಡಕಲ್ಲಸಂದ್ರ ಪ್ರಜ್ಞಾ ಭಾರತಿ ವಿದ್ಯಾಲಯದಲ್ಲಿ ಆ.23ರ ಸಂಜೆ 4.00 ಗಂಟೆಗೆ ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ವತಿಯಿಂದ ನಾಕುತಂತಿ ಷಷ್ಟಿಪೂರ್ತಿ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಕವಿ, ಕಾದಂಬರಿಕಾರ ಡಾ. ಜಿ.ಬಿ. ಹರೀಶರು ನಾಕುತಂತಿ ಕವನದ ವಿಶೇಷ ವ್ಯಾಖ್ಯಾನವನ್ನು ನಡೆಸಿಕೊಡಲಿದ್ದು, ಖ್ಯಾತ ಹಾಸ್ಯ ಬರಹಗಾರ ಹಾಗೂ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಬೆಂಗಳೂರು ಮಹಾನಗರದ ಅಧ್ಯಕ್ಷ ಎಂ.ಎಸ್. ನರಸಿಂಹಮೂರ್ತಿ ಅಧ್ಯಕ್ಷತೆ ವಹಿಸಲಿ ದ್ದಾರೆ. ಸುಗಮ ಸಂಗೀತ ಗಾಯಕಿ ಕು. ಸಂಜನಾ ರಾವ್ ಅವರ ವೃಂದದವರು ಬೇಂದ್ರೆ ಗೀತಗಾಯನವನ್ನು ನಡೆಸಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

29ಕ್ಕೆ ದೊಡ್ಡಮ್ಮ ದೇವಿ ಕುಂಭಾಭಿಷೇಕ ಮಹೋತ್ಸವ

ಬೆಂಗಳೂರು: ತುಮಕೂರಿನ ಕರಿದುಗ್ಗನಹಳ್ಳಿಯ ಮಜಿರೆಯಲ್ಲಿ ಶ್ರೀ ದೊಡ್ಡಮ್ಮ ದೇವಿ ಸ್ಥಿರಬಿಂಬ ಪ್ರತಿಷ್ಠಾಪನಾ ಕುಂಭಾಭಿಷೇಕ ಮಹೋತ್ಸವ ಹಾಗೂ ಶ್ರೀ ಚಂಡಿಕಾ ಹೋಮ ಆ.29ರಿಂದ 31ರವರೆಗೆ ನಡೆಯಲಿದೆ. ಕಾರ್ಯಕ್ರಮದಲ್ಲಿ ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿ, ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ, ಶ್ರೀ ಕ್ಷೇತ್ರ ಸಿದ್ದರಬೆಟ್ಟದ ಶ್ರೀ ವೀರಭದ್ರಶಿವಾಚಾರ್ಯಸ್ವಾಮಿ ಮತ್ತಿತರರು ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವ ವಿ.ಸೋಮಣ್ಣ, ಶಾಸಕರಾದ ಆರ್.ವಿ ದೇಶಪಾಂಡೆ,ಟಿ.ಬಿ.ಜಯಚಂದ್ರ, ಬಿ.ಸುರೇಶ್ ಗೌಡರು ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಯುವ ಜಾತ್ಯಾತೀತ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭಾಗವಹಿಸಲಿದ್ದಾರೆ. ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಸಿಇಒ ಚಿದಾನಂದ ಕಡಲಾಸ್ಕರ, ಕನ್ನಡಪ್ರಭ ಸಂಪಾದಕ ರವಿ ಹೆಗಡೆ, ಹಾಯ್ ಬೆಂಗಳೂರು ಸಂಪಾದಕಿ ಭಾವನ ಬೆಳಗೆರೆ, ಪರ್ವ ಗ್ರೂಪ್‌ನ ಸಂಸ್ಥಾಪಕ ನೀಲೇಶ್ ಎಚ್.ಪಿ ಹಾಗೂ ದುಬೈ ಕನ್ನಡ ಸಂಘ ಅಧ್ಯಕ್ಷ ಶಶಿಧರ್ ನಾಗರಾಜಪ್ಪ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

ಫನ್‌ತರಂಗ
– ರಘುಪತಿ ಶೃಂಗೇರಿ –

ಅಮೆರಿಕಾ ಭೇಟಿ ವೇಳೆ ರಷ್ಯಾ ಅಧ್ಯಕ್ಷರ ಮಲ ಸಂಗ್ರಹಕ್ಕೆ ಸೂಟ್‌ಕೇಸ್

ಸುದ್ದಿ



ಒಪಿಎಸ್, ಎನ್‌ಪಿಎಸ್ ವ್ಯತ್ಯಾಸ ತಿಳಿಸಿ

ಅತಿಥಿ ಶಿಕ್ಷಕರಿಗೆ ಉತ್ತಮ ವೇತನ, ಸೌಲಭ್ಯಗಳನ್ನು ನೀಡಬೇಕು | ಸರಕಾರಿ ಶಾಲೆಗಳಿಗೆ ದೈಹಿಕ ಶಿಕ್ಷಕರನ್ನು ನೇಮಿಸಿ: ಶಾಸಕ ಸುರೇಶ್ ಕುಮಾರ್ | ಮಕ್ಕಳ ಶಿಕ್ಷಣದ ಹಣದಲ್ಲೂ ಲೂಟಿ ಮಾಡುವ ಸ್ಥಿತಿ ತಲುಪಿದ ಕಾಂಗ್ರೆಸ್ ಸರಕಾರ: ಎಚ್ಡಿ ರೇವಣ್ಣ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯ ಶಿಕ್ಷಣ ನೀತಿ ಮಾಡುವುದಾಗಿ ಘೋಷಿಸಿ, ಕೆಲ ದಿನಗಳ ಹಿಂದೆ ಆಯೋಗದಿಂದ ವರದಿ ಸಲ್ಲಿಕೆಯಾಗಿದೆ. ಶಿಕ್ಷಣ ನೀತಿಯ ವಿಷಯದಲ್ಲಿ ಹಲವು ಗೊಂದಲಗಳಿದ್ದು, ರಾಜ್ಯ ಸರಕಾರ ಈ ವ್ಯತ್ಯಾಸವನ್ನು ತಿಳಿಸಬೇಕು ಎಂದು ಶಾಸಕ ಸುರೇಶ್ ಕುಮಾರ್ ಆಗ್ರಹಿಸಿದರು.

ರಾಜ್ಯದಲ್ಲಿರುವ ಸರಕಾರಿ ಶಾಲೆಗಳ ಸ್ಥಿತಿಗತಿ ಹಾಗೂ ಅಭಿವೃದ್ಧಿ ಕುರಿತು ವಿಧಾನಸಭೆಯಲ್ಲಿ ಶುಕ್ರವಾರ ಸುದೀರ್ಘ ಚರ್ಚೆ ನಡೆಸಲಾಯಿತು.

ಶಾಸಕ ಸುರೇಶ್ ಕುಮಾರ್ ಮಾತನಾಡಿ, ಸರಕಾರಿ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಿರುವುದಕ್ಕೆ ಹಿಂಜರಿಯುವ ಸ್ಥಿತಿ ನಿರ್ಮಾಣವಾಗಿದೆ. ಸರಕಾರಿ ಶಾಲೆಗಳಲ್ಲಿ ಉತ್ತಮ ಮೂಲ ಸೌಲಭ್ಯ ಹಾಗೂ ತರಬೇತಿ ಪಡೆದ ಶಿಕ್ಷಕರು ಮತ್ತು ಶೈಕ್ಷಣಿಕ ವಾತಾವರಣ ಇದೆ. ಸರಕಾರಿ ಶಾಲೆಗಳಲ್ಲಿ ತಮ ಮಕ್ಕಳನ್ನು ಓದಿಸಬೇಕು ಎಂದು ಪೋಷಕರಿಗೆ ಅನಿಸುವಂತಹ ವಾತಾವರಣ ವನ್ನು ನಾವು ನೀಡಬೇಕಿದೆ ಎಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದೆ. ಆದ್ದರಿಂದ ರಾಷ್ಟ್ರಿಯ ಶಿಕ್ಷಣ ನೀತಿ ಮತ್ತು ರಾಜ್ಯ ಶಿಕ್ಷಣ ನೀತಿಯ ವ್ಯತ್ಯಾಸಗಳನ್ನು ಸರಕಾರ ತಿಳಿಸಬೇಕಿದೆ. 2016ರಲ್ಲಿ ಸರಕಾರಿ ಶಾಲೆಗಳ ಗುಣಾತ್ಮಕ ಶಿಕ್ಷಣಕ್ಕೆ ಸಂಬಂಧಪಟ್ಟಂತ ವರದಿಯಲ್ಲಿರುವ 26 ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಬೇಕು. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ನಾವು ಕೊನೆಯ ಸ್ಥಾನದಲ್ಲಿದ್ದೇವೆ. ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಸರಕಾರಿ ಶಾಲೆಗಳಿಗಿರುವ ಸಾಮರ್ಥ್ಯ, ದೌರ್ಬಲ್ಯ ಅವಕಾಶ ಮತ್ತು ಆತಂಕಗಳ ಬಗ್ಗೆ ವಿಶ್ಲೇಷಣೆ ನಡೆಯಬೇಕು. ದಾನಿಗಳು ನೀಡಿರುವ ಆಸ್ತಿಗಳನ್ನು ಉಳಿಸಿಕೊಂಡು ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಿಸಬೇಕು. ಶಿಕ್ಷಕರನ್ನು ಬೋಧನೆ ಹೊರತುಪಡಿಸಿ ಬೇರೆ ಚಟುವಟಿಕೆಗಳಿಗೆ ಬಳಕೆ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು ಎಂದರು.

ದೈಹಿಕ ಶಿಕ್ಷಕರನ್ನು ನೇಮಿಸಿ: ಸರಕಾರಿ ಶಾಲೆಗಳಿಗೆ ದೈಹಿಕ ಶಿಕ್ಷಕರನ್ನು ನೇಮಿಸಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಫಿಟ್ ಇಂಡಿಯಾ ಕಲ್ಪನೆಯನ್ನು ಸಾಕಾರಗೊಳಿಸಬೇಕು. ಫಲಿತಾಂಶ ಆಧಾರಿತ ಶಿಕ್ಷಣಕ್ಕಿಂತ ಮೌಲ್ಯಾಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರಕಾರ ತೆಗೆದುಕೊಳ್ಳುವ ಕ್ರಮಗಳಿಗೆ ನಾನು ಬೆಂಬಲವಾಗಿರುತ್ತೇನೆ. ರಾಜ್ಯದಲ್ಲಿರುವ 41 ಸಾವಿರ ಸರಕಾರಿ ಪ್ರಾಥಮಿಕ ಶಾಲೆಗಳು, 4,800 ಸರಕಾರಿ ಪ್ರೌಢಶಾಲೆಗಳು ಸಮಗ್ರ ಅಭಿವೃದ್ಧಿ ಮಾಡಬೇಕು. ಕೆಲವು ಕಡೆ ಒಬ್ಬ ವಿದ್ಯಾರ್ಥಿ ಒಬ್ಬ ಶಿಕ್ಷಕ ಎಂಬ ವಾತಾವರಣ ಇದೆ. ಕೋಲಾರದ ಶ್ರೀನಿವಾಸಪುರದಲ್ಲಿ ವಿದ್ಯಾರ್ಥಿಗಳೇ ಇಲ್ಲದೆ ಬೇರೆ ಶಾಲೆಯಿಂದ ಒಬ್ಬ ವಿದ್ಯಾರ್ಥಿನಿಯನ್ನು ಸಾಲ ತಂದು ಸರಕಾರಿ ಶಾಲೆಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದನ್ನು ನಾವು ನೋಡಿದ್ದೇವೆ. ರಾಜ್ಯದಲ್ಲಿ 1.80 ಲಕ್ಷ ಸರಕಾರಿ ಶಿಕ್ಷಕರಿದ್ದಾರೆ. ಅವರಿಗೆ ಉತ್ತಮ ಪ್ರೇರಣೆ ಅಗತ್ಯವಿದೆ. ಅತಿಥಿ ಶಿಕ್ಷಕರನ್ನು ಶಿಕ್ಷಕರಿಗೆ ಉತ್ತಮ ವೇತನ ಹಾಗೂ ಸೌಲಭ್ಯಗಳನ್ನು ನೀಡಬೇಕು. ಪ್ರತಿಯೊಂದು ಪಂಚಾಯಿತಿ ಮಟ್ಟದಲ್ಲೂ ಪೂರ್ಣ ಪ್ರಮಾಣದ ಶಾಲೆ ಸ್ಥಾಪಿಸಬೇಕು. ಪಠ್ಯೇತರ ಚಟುವಟಿಕೆಗಳಾದ ವಿಷಯ ಆಧಾರಿತವಾಗಿ ಶಿಕ್ಷಕರನ್ನು ನೇಮಿಸಬೇಕು. ಕಲೆ, ಕ್ರೀಡೆಗಳಿಗೂ ಶಿಕ್ಷಕರ ನೇಮಕಾತಿ ಆಗಬೇಕಿದೆ. ಪ್ರತಿಯೊಬ್ಬ ಶಾಸಕರು ವಾರಕ್ಕೊಮೆಯಾದರೂ ಸರಕಾರಿ ಶಾಲೆಗಳಿಗೆ ಭೇಟಿ ನೀಡಿ ಉತ್ತಮ ಕೆಲಸ ಮಾಡುವ ಶಿಕ್ಷಕರನ್ನು ಗುರುತಿಸಿ ಬೆನ್ನು ತಟ್ಟಬೇಕು ಎಂದರು.

ಖಾಸಗಿ ಸಂಸ್ಥೆಗಳ ಸಹಾಯದಲ್ಲಿ ಅಭಿವೃದ್ಧಿ

ಮಹಾಲಕ್ಷ್ಮೀ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಗೋಪಾಲಯ್ಯ ಐದು ಕೋಟಿ ವೆಚ್ಚ ಮಾಡಿ ಉತ್ತಮವಾಗಿ ಸರಕಾರಿ ಶಾಲೆ ನಿರ್ಮಿಸಿದ್ದಾರೆ. ರಾಜಾಜಿನಗರದಲ್ಲಿರುವ ಕಣ್ವ ಡಯಾಗ್ನೊಸ್ಟಿಕ್ ಸೆಂಟರ್ ಮಾಲೀಕರಾದ ಡಾ.ಎಚ್.ಎಂ ವೆಂಕಟಪ್ಪ ಅವರು ನಾನು ಸಚಿವನಾಗಿದ್ದಾಗ ನಮ್ಮ ಮನೆಗೆ ಬಂದು, ತಮ್ಮ ಊರಿಗೆ ಬರುವಂತೆ ಆಹ್ವಾನಿಸಿದರು. ಅವರ ಊರಿಗೆ ಹೋದಾಗ ಬಿದ್ದು ಹೋಗಿರುವ ಸರಕಾರಿ ಶಾಲೆಗಳನ್ನು ತೋರಿಸಿ ನಾನು ಇಲ್ಲಿ ಓದಿದ್ದೆ. ಅವುಗಳನ್ನು ಅಭಿವೃದ್ಧಿ ಪಡಿಸಲು ಅವಕಾಶ ಕೊಡಿ ಎಂದು ಮನವಿ ಮಾಡಿದರು. ಆರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಸಿದ್ಧವಾಗಿರುವುದಾಗಿ ತಿಳಿಸಿದರು. ಅವರಿಗೆ ಅವಕಾಶ ಮಾಡಿಕೊಡಲಾಗಿತ್ತು. ಇತ್ತಿಚೆಗಷ್ಟೆ ಆ ಶಾಲೆಗಳು ಲೋಕಾರ್ಪಣೆಗೊಂಡಿವೆ ಎಂದರು. ಒಟ್ಟು 14 ಕೋಟಿ ವೆಚ್ಚದಲ್ಲಿ ಮಾದರಿ ಶಾಲೆಗಳನ್ನು ನಿರ್ಮಿಸಲಾಗಿದೆ. ಶಾಲೆಯ ನಿರ್ವಹಣೆಗಾಗಿ ವಾರ್ಷಿಕ 10 ಲಕ್ಷ ರು.ಗಳನ್ನು ಕೊಡುತ್ತಿದ್ದಾರೆ. ಇದೇ ರೀತಿ ಬಂಟ್ವಾಳದ ಅಂಜಲ್ ಎಂಬವರು, ದದ್ದಲಾಗ ಗ್ರಾಮದ ದುರ್ಗಾಪರಮೇಶ್ವರಿ ಎಂಬ ಟ್ರಸ್ಟ್ ರಚಿಸಿಕೊಂಡು, ಕೇವಲ 35 ವಿದ್ಯಾರ್ಥಿಗಳಿದ್ದ ಶಾಲೆಯನ್ನು ಸಮಗ್ರ ಅಭಿವೃದ್ಧಿಪಡಿಸಿದ್ದಾರೆ. ಈ ರೀತಿ ಖಾಸಗಿಯವರನ್ನು ಸರಕಾರಿ ಸಂಸ್ಥೆಗಳ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಮಕ್ಕಳ ಹೆಸರಲ್ಲಿ ಲೂಟಿ

ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರಕಾರ ಮಕ್ಕಳ ಶಿಕ್ಷಣದ ಹಣದಲ್ಲೂ ಲೂಟಿ ಹೊಡೆಯುವ ದುಸ್ಥಿತಿಗೆ ತಲುಪಿದೆ ಎಂದು ವಾಗ್ದಾಳಿ ನಡೆಸಿದರು. ಸರಕಾರಗಳು ಬರುತ್ತವೆ ಹೋಗುತ್ತವೆ. ಆದರೆ ಆದ್ಯತಾ ವಲಯಗಳ ಮೇಲೆ ನಿಗಾ ವಹಿಸಬೇಕು. ದೇಶದಲ್ಲಿ ಯಾವ ಕ್ಷೇತ್ರದಲ್ಲೂ ಏಳು ಪ್ರಥಮ ದರ್ಜೆ ಕಾಲೇಜುಗಳಿಲ್ಲ. ತಮ್ಮ ಹೊಳೇನರಸಿಪುರದಲ್ಲಿ ಮಾತ್ರ ಅಂತಹ ವ್ಯವಸ್ಥೆ ಇದೆ. ಎರಡು ಕೋಟಿ ರು. ಖರ್ಚು ಮಾಡಿ ಸರಕಾರಿ ಶಾಲೆಯನ್ನು ಅಭಿವೃದ್ಧಿ ಪಡಿಸಿದ್ದೇನೆ. ನಾವು ಖಾಸಗಿ ಶಿಕ್ಷಣ ಸಂಸ್ಥೆ ನಡೆಸುತ್ತಿಲ್ಲ. ಬಡವರ ಮಕ್ಕಳ ಶಿಕ್ಷಣಕ್ಕಾಗಿ ಸರಕಾರಿ ವ್ಯವಸ್ಥೆಯನ್ನು ಉತ್ತಮ ಪಡಿಸುತ್ತಿದ್ದೇವೆ. ರಾಜ್ಯದಲ್ಲಿ ನಾಲ್ಕು ಸಾವಿರ ಪ್ರಾಥಮಿಕ ಶಾಲೆಗಳು ಮುಚ್ಚುವ ಹಂತದಲ್ಲಿವೆ. ಶಿಕ್ಷಣ ಇಲಾಖೆಯ ಆಯುಕ್ತರಾಗಿದ್ದ ಅಜಯ್ ನಾಗಭೂಷಣ್ ಅವರು ಸರಕಾರಕ್ಕೆ ಬರೆದಿರುವ ಪತ್ರವನ್ನು ಒಮ್ಮೆ ನೋಡಿದರೆ ಶಿಕ್ಷಣ ಇಲಾಖೆಯಲ್ಲೂ ಯಾವ ಮಟ್ಟದ ಲೂಟಿ ನಡೆಯುತ್ತಿದೆ ಎಂದು ಗೊತ್ತಾಗುತ್ತದೆ. ಶಾಲಾ ಕಟ್ಟಡಗಳ ನಿರ್ಮಾಣವನ್ನು ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಇಲಾಖೆಗಳಿಂದ ನಿರ್ವಹಿಸಿದರೆ ಹಣ ಉಳಿತಾಯವಾಗುತ್ತದೆ. ಆದರೆ ಭ್ರಷ್ಟಾಚಾರಕ್ಕಾಗಿ ಬೇರೆ ವ್ಯವಸ್ಥೆಯ ಮೂಲಕ ನಿರ್ಮಾಣ ಕಾಮಗಾರಿಗಳನ್ನು ನಡೆಸಲಾಗುತ್ತಿದೆ ಎಂದು ದೂರಿದರು.

ಸ್ವಾಭಿಮಾನಿ ಜನತಾ ಪಕ್ಷದ ಸಂಸ್ಥಾಪಕ ಹೂಡಿ ವಿಜಯಕುಮಾರ್ ಕರೆ

ಅನ್ಯಾಯದ ವಿರುದ್ಧ ಪ್ರತಿಯೊಬ್ಬರು ಧ್ವನಿ ಎತ್ತಿ

ಧರ್ಮಸ್ಥಳ ರ್‍ಯಾಲಿಯಲ್ಲಿ ಆನಂದ್ ಗುರೂಜಿ ಸೇರಿ 40ಕ್ಕೂ ಹೆಚ್ಚು ಸ್ವಾಮೀಜಿಗಳು ಪಾಲ್ಗೊಂಡಿದ್ದರು.

ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ರ್‍ಯಾಲಿಯಲ್ಲಿ ಹೋಗಿದ್ದ ಐದು ಸಾವಿರಕ್ಕೂ ಹೆಚ್ಚು ಜನರೊಂದಿಗೆ ದೀಪ ಹಿಡಿದು ರ್‍ಯಾಲಿ ನಡೆಸಿ, ಬಳಿಕ ಹರ್ಷೇಂದ್ರ ಹೆಗ್ಗಡೆ ಅವರೊಂದಿಗೆ ಚರ್ಚಿಸಿದರು.

ಬೆಂಗಳೂರು: ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅನ್ಯಾಯದ ವಿರುದ್ಧ ಪ್ರತಿಯೊಬ್ಬರು ಧ್ವನಿ ಎತ್ತಬೇಕು ಎಂದು ಸ್ವಾಭಿಮಾನಿ ಜನತಾ ಪಕ್ಷದ ಸಂಸ್ಥಾಪಕ ಹೂಡಿ ವಿಜಯಕುಮಾರ್ ಕರೆ ನೀಡಿದರು.

ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ರ್‍ಯಾಲಿಯಲ್ಲಿ ಹೋಗಿದ್ದ ಐದು ಸಾವಿರಕ್ಕೂ ಹೆಚ್ಚು ಜನರೊಂದಿಗೆ ದೀಪ ಹಿಡಿದು ರ್‍ಯಾಲಿ ನಡೆಸಿ, ಬಳಿಕ ಹರ್ಷೇಂದ್ರ ಹೆಗ್ಗಡೆ ಅವರೊಂದಿಗೆ ಚರ್ಚಿಸಿದರು. ಬಳಿಕ ಮಾತನಾಡಿದ ಅವರು, ಧರ್ಮದ ವಿಚಾರದಲ್ಲಿ ನಿರಂತರವಾಗಿ ಆಗುತ್ತಿರುವ ಅನ್ಯಾಯವನ್ನು ನೋಡಿಕೊಂಡು ಸುಮ್ಮನಿರಲು ಆಗುವುದಿಲ್ಲ. ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರದ ವಿರುದ್ಧ ಹೋರಾಡಬೇಕು ಎಂದು ಹೇಳಿದರು.

ಸೌಜನ್ಯಗೆ ಆಗಿರುವ ಅನ್ಯಾಯಕ್ಕೆ ನ್ಯಾಯ ಕೊಡಿಸುವ ವಿಷಯದಲ್ಲಿ ಯಾರದ್ದು ತಕರಾರಿಲ್ಲ. ಆದರೆ ಅದರ ಹೆಸರಲ್ಲಿ ಧರ್ಮಸ್ಥಳ ದೇವಾಲಯ ಹಾಗೂ ಧರ್ಮಾಧಿಕಾರಿಗಳ ವಿರುದ್ಧ ಹೇಳಿಕೆ ನೀಡುವುದನ್ನು ಸಹಿಸುವುದಿಲ್ಲ. ಕೇವಲ ಮಂಜುನಾಥ ದೇವಾಲಯ ಮಾತ್ರವಲ್ಲದೇ, ರಾಜ್ಯದ ಯಾವುದೇ ದೇವಾಯಲಕ್ಕೆ ಅನ್ಯಾಯವಾದರೂ ಸುಮ್ಮನೆ ಇರಲು ಆಗುವುದಿಲ್ಲ. ಆದ್ದರಿಂದ ದೇವಾಲಯದ ಪರವಾಗಿ ನಿಲ್ಲುತ್ತೇವೆ ಎಂದು ಸ್ಪಷ್ಟಪಡಿಸಿದರು.

ಈ ವೇಳೆ ಆನಂದ ಗುರೂಜಿ ಸೇರಿದಂತೆ 40ಕ್ಕೂ ಹೆಚ್ಚು ಸ್ವಾಮೀಜಿಗಳು, ಮಾಲೂರು, ಕೋಲಾರ ಸುತ್ತಮುತ್ತಲಿನಿಂದ ಐದು ಸಾವಿರಕ್ಕೂ ಹೆಚ್ಚು ಜನ ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

> ಸೌಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರ ಈಗಾಗಲೇ ರಚಿಸಿರುವ ಎಸ್‌ಐಟಿ ತನಿಖೆ ನಡೆಸುತ್ತಿದೆ. ಈ ತನಿಖೆ ನಡೆದು, ತಪ್ಪಿತಸ್ಥರ ವಿರುದ್ಧ ಕ್ರಮವಾಗಬೇಕು.
> -ಹೂಡಿ ವಿಜಯಕುಮಾರ್, ಸ್ವಾಭಿಮಾನಿ ಜನತಾ ಪಕ್ಷದ ಸಂಸ್ಥಾಪಕ

ಪ್ರತಿಪಕ್ಷದಿಂದ ಉತ್ತಮ ಹೋರಾಟ:ಆರ್.ಅಶೋಕ

ಬೆಂಗಳೂರು: ಅಧಿವೇಶನದಲ್ಲಿ ರಾಜ್ಯದ ಪ್ರಮುಖ ಸಮಸ್ಯೆಗಳ ಬಗ್ಗೆ ಯಶಸ್ವಿಯಾಗಿ ಚರ್ಚೆ ಮಾಡಿದ್ದೇವೆ. ಬಿಜೆಪಿ-ಜೆಡಿಎಸ್‌ನಿಂದ ಉತ್ತಮ ಹೋರಾಟ ನಡೆದಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅಧಿವೇಶನದಲ್ಲಿ ಬಿಜೆಪಿ-ಜೆಡಿಎಸ್‌ನ ಎಲ್ಲ ಶಾಸಕರು ಒಗ್ಗಟ್ಟಾಗಿ ಹಾಲು ಜೇನಿನಂತೆ ಕೆಲಸ ಮಾಡಿದ್ದಾರೆ. ಸರಕಾರ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರಿಗೆ ಎಲ್ಲರೂ ಸರಿಯಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಆರ್‌ಸಿಬಿ ಸಂಭ್ರಮಾಚರಣೆಯ ಕಾಲ್ತುಳಿತ ದುರಂತದ ಬಗ್ಗೆ ಗೃಹ ಸಚಿವರ ಜತೆಗೆ ಮುಖ್ಯಮಂತ್ರಿ ಕೂಡ ಉತ್ತರ ಕೊಡುವಂತೆ ಮಾಡಿದ್ದೇವೆ. ಎರಡು ವರ್ಷಗಳಲ್ಲಿ ಅಭಿವೃದ್ಧಿ ಶೂನ್ಯ ಹಾಗೂ ಸರಕಾರ ಪಾಪರ್ ಆಗಿರುವ ಬಗ್ಗೆ ಕೇಳಿದ್ದಕ್ಕೆ ಸಿಎಂ, ಡಿಸಿಎಂ ಇಬ್ಬರೂ ಉತ್ತರ ನೀಡಿದ್ದಾರೆ ಎಂದರು.

ಸಕರಾರಿ ಶಾಲೆಗಳ ಪರಿಸ್ಥಿತಿ, ರಸಗೊಬ್ಬರ ಹಂಚಿಕೆಯಲ್ಲಿ ಅವ್ಯವಹಾರ, ರಸ್ತೆ ಗುಂಡಿಗಳ ಸಮಸ್ಯೆ ಬಗ್ಗೆ ಗಮನ ಸೆಳೆದಿದ್ದೇವೆ. ರಾಜ್ಯದಲ್ಲಿ ಮಳೆ ಹಾನಿಯಾಗಿದ್ದು, ನಮ್ಮಲ್ಲಿನ ಸಂತ್ರಸ್ತರಿಗೆ 95 ಸಾವಿರ ರು. ಹಾಗೂ ಕೇರಳಕ್ಕೆ 10 ಲಕ್ಷ ರು. ನೀಡಲಾಗಿದೆ. ಈ ತಾರತಮ್ಯದ ಬಗ್ಗೆಯೂ ಚಾಟಿ ಬೀಸಿದ್ದೇವೆ. ಸರಕಾರದ 10 ಕೋಟಿ ರು. ಹಣದಲ್ಲಿ ಕಾಂಗ್ರೆಸ್ ಸಮಾವೇಶ ಮಾಡಲಾಗಿದೆ. ಈ ಬಗ್ಗೆಯೂ ಪ್ರಶ್ನೆ ಮಾಡಿ, ಕಿವಿ ಹಿಂಡುವ ಕೆಲಸ ಮಾಡಿದ್ದೇವೆ. ಇನ್ನು ಮುಂದೆ ರೈತರ ಪರ ಹಾಗೂ ಸಾಮಾನ್ಯ ಜನರ ಪರ ಕೆಲಸ ಮಾಡಿ ಎಂದು ಆಗ್ರಹಿಸಿದ್ದೇವೆ ಎಂದರು. ಒಳಮೀಸಲಾತಿ ವಿಚಾರಕ್ಕೆ ಬಿಜೆಪಿಯಿಂದ ಹೋರಾಟ ನಡೆದಿತ್ತು. ಹಿಂದಿನ ಸಿಎಂ ಬಸವರಾಜ ಬೊಮ್ಮಾಯಿ ಇದಕ್ಕೆ ಚಾಲನೆ ನೀಡಿದ್ದರು. ಈಗಿನ ಸರಕಾರ ಅದಕ್ಕೆ ಸುಣ್ಣ ಬಣ್ಣ ಬಳಿದು ಸದನದಲ್ಲಿ ಮಂಡಿಸಿದೆ. ಆದರೆ ಚರ್ಚೆಗೆ ಅವಕಾಶ ನೀಡದೆ ಸಿಎಂ ಸಿದ್ದರಾಮಯ್ಯ ಪಲಾಯನ ಮಾಡಿದ್ದಾರೆ ಎಂದು

ಇಂದು ಪತ್ರಕರ್ತರ ಸಹಕಾರ ಸಂಘದ ಅಮೃತ ಮಹೋತ್ಸವ

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘ 75ನೇ ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಅಮೃತ ಸಂಭ್ರಮ ಹಾಗೂ ವಾರ್ಷಿಕ ಮಹಾಸಭೆ ಕಾರ್ಯಕ್ರಮ ಶನಿವಾರ ಹಮಿಕೊಳ್ಳಲಾಗಿದೆ.

ಬೆಳಗ್ಗೆ 9 ಗಂಟೆಗೆ ಮಣಿಪಾಲ್ ಆಸ್ಪತ್ರೆ ವೈದ್ಯರ ತಂಡದಿಂದ ಸಂಘದ ಸದಸ್ಯರು ಹಾಗೂ ಸದಸ್ಯರ ಕುಟುಂಬವರ್ಗಕ್ಕೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದ್ದು, ಬೆಳಗ್ಗೆ 10.30ಕ್ಕೆ ಅಮೃತ ಸಂಭ್ರಮ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟನೆ ಮಾಡಲಿದ್ದಾರೆ. ಸಂಘದ ಸುವರ್ಣ ಭವನಕ್ಕೆ ಅಳವಡಿಸಲಾಗಿರುವ ಲಿಫ್ಟ್ ಅನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಲೋಕಾರ್ಪಣೆ ಮಾಡಲಿದ್ದಾರೆ ಎಂದು ಸಂಘದ ಅಧ್ಯಕ್ಷ ರಮೇಶ್ ಎಂ ಪಾಳ್ಯ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಚಿವರಾದ ಡಾ. ಎಚ್.ಸಿ.ಮಹದೇವಪ್ಪ, ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಶಾಸಕ ರಿಜ್ವಾನ್ ಅರ್ಷದ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ವಿಧಾನಪರಿಷತ್ ಸದಸ್ಯ ಕೆ.ಗೋವಿಂದರಾಜು, ಕರ್ನಾಟಕ ಸಹಕಾರ ಮಹಾಮಂಡಲ ಅಧ್ಯಕ್ಷ ಜಿ.ಟಿ.ದೇವೇಗೌಡ, ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ಸಂಘ ಹೊರತಂದಿರುವ ಅಮೃತ ಸಂಭ್ರಮ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಗುವುದು. ಅಲ್ಲದೆ, ಸಂಘಕ್ಕಾಗಿ ಶ್ರಮಿಸಿದ ಹಿರಿಯ ಚೇತನಗಳಾದ ಮಾಜಿ ಅಧ್ಯಕ್ಷರು, ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ಗೌರವಕಾರ್ಯದರ್ಶಿಗಳು ಮತ್ತು ಸ್ಮರಣ ಸಂಚಿಕೆ ಸಂಪಾದಕೀಯ ಮಂಡಳಿ ಸದಸ್ಯರನ್ನು ಸನ್ಮಾನಿಸಲಾಗುವುದು. ಈ ಕಾರ್ಯಕ್ರಮ ಮುಗಿದ ನಂತರ ಮಧ್ಯಾಹ್ನ 12 ಕ್ಕೆ ಸಂಘದ 2024-2025ನೇ ಸಾಲಿನ ಸರ್ವಸದಸ್ಯರ ಸಭೆಯು ಸಂಘದ ಅಧ್ಯಕ್ಷ ರಮೇಶ್ ಎಂ(ಪಾಳ್ಯ) ಅವರ ಅಧ್ಯಕ್ಷತೆಯಲ್ಲಿ ಜರುಗಲಿದ್ದು ,ಈ ವೇಳೆ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ.

ಅಲೆಮಾರಿ ಸಮುದಾಯಕ್ಕೆ ನ್ಯಾಯ ಕೊಡಿ:ಸಿ.ಟಿ.ರವಿ

ಬೆಂಗಳೂರು: ವಿಶಿಷ್ಟ ವರ್ಗವಾದ ಅಲೆಮಾರಿ ಜನಾಂಗದವರನ್ನು ಬಲಾಢ್ಯರ ಜತೆ ಸೇರಿಸಿದ್ದು, ಸಾಮಾಜಿಕ ಅನ್ಯಾಯ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಫ್ರೀಡಂಪಾರ್ಕ್‌ನಲ್ಲಿ ನಡೆಯುತ್ತಿರುವ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮಾಜದ ಪ್ರತಿಭಟನೆಯಲ್ಲಿ ಭಾಗವಹಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ಸೌಲಭ್ಯ, ವಿದ್ಯೆ, ಸಂಪತ್ತು, ನೌಕರಿಯಿಂದ ವಂಚಿತವಾದ ಜನಾಂಗಕ್ಕೆ ಅವಕಾಶ ಕೊಡುವುದೇ ಒಳ ಮೀಸಲಾತಿಯ ಉದ್ದೇಶ. ಸರಕಾರ ಅವೆಲ್ಲವನ್ನೂ ಪರಿಗಣಿಸಿಲ್ಲ. ನ್ಯಾ.ಸದಾಶಿವ, ನ್ಯಾ. ನಾಗಮೋಹನ್ ದಾಸ್, ಮಾಜಿ ಸಚಿವ ಮಾಧುಸ್ವಾಮಿ ವರದಿಗಳನ್ನೂ ಸರಕಾರ ಪರಿಗಣಿಸಿಲ್ಲ ಎಂದು ಟೀಕಿಸಿದರು.

ಲಂಬಾಣಿ, ಬೋವಿ, ಕೊರಚ, ಕೊರಮ ಸಮುದಾಯಕ್ಕೆ ನಾವು ಶೇ.4.5 ಕೊಟ್ಟಿದ್ದೆವು. ಅದನ್ನು ಕಡಿತಗೊಳಿಸಿದ್ದಾರೆ. ಈ ಅಲೆಮಾರಿ ಜನಾಂಗದವರಿಗೆ ಶೇ.1 ಕೊಡಲಾಗಿತ್ತು. ಅವರನ್ನು ಲೆಕ್ಕಕ್ಕೇ ತೆಗೆದುಕೊಂಡಿಲ್ಲ. ನಾವು ಯಾರಿಗೂ ಮೋಸ ಮಾಡದೆ ನ್ಯಾಯಯುತವಾಗಿ ಕೊಟ್ಟಿದ್ದಕ್ಕೆ ಅನ್ಯಾಯ ಮಾಡಿದ್ದಾರೆ. ಇವರು ಮಾರ್ಜಾಲ ನ್ಯಾಯ ಮಾಡಿದ್ದಾರೆ. ಖಾಜಿ ನ್ಯಾಯ ಮಾಡಿದ್ದಾರೆ. ಸಂವಿಧಾನಕ್ಕೆ ವಿರುದ್ಧವಾದ ಕ್ರಮ ತೆಗೆದುಕೊಂಡಿದ್ದಾರೆ ಎಂದರು.

ಫ್ರೀಡಂಪಾರ್ಕ್‌ನಲ್ಲಿ ನಡೆಯುತ್ತಿರುವ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮಾಜದ ಪ್ರತಿಭಟನೆಯಲ್ಲಿ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಭಾಗವಹಿಸಿದ್ದರು.

ಸಭೆ ನಡೆಸಿ ಅನುದಾನ ನೀಡುವ ಭರವಸೆ ನೀಡಿದ ಸಿಎಂ | ಬಾವಿಗಿಳಿದು ಪ್ರತಿಭಟನೆ ನಡೆಸಿದ ಪ್ರತಿಪಕ್ಷ ನಾಯಕರು

ಅನುದಾನ: ಆಡಳಿತ-ಪ್ರತಿಪಕ್ಷ ವಾಕ್ಸಮರ

ವಿಧಾನಸಭೆ: ಅನುದಾನ ತಾರತಮ್ಯ ವಿಷಯಕ್ಕೆ ಸಂಬಂಧಿಸಿದಂತೆ ಆಡಳಿತ-ಪ್ರತಿಪಕ್ಷ ಶಾಸಕರ ನಡುವೆ ತೀವ್ರ ವಾಕ್ಸಮರ ನಡೆದು, ಪ್ರತಿಪಕ್ಷದವರು ಬಾವಿಗಿಳಿದು ಪ್ರತಿಭಟನೆ ನಡೆಸಿದ ಬಳಿಕ ಅನುದಾನ ನೀಡುವ ಭರವಸೆಯನ್ನು ಸಿದ್ದರಾಮಯ್ಯ ಅವರು ನೀಡಿದ್ದಾರೆ.

ವಿಧಾನಸಭೆಯಲ್ಲಿ ಅನುದಾನ ತಾರತಮ್ಯಕ್ಕೆ ಸಂಬಂಧಿಸಿದಂತೆ ಉತ್ತರಿಸಿದ ಸಿದ್ದರಾಮಯ್ಯ ಅವರು, ಶೀಘ್ರದಲ್ಲೇ ಬಿಜೆಪಿ, ಜೆಡಿಎಸ್ ಶಾಸಕರ ಜತೆಗೂ ಸಭೆ ನಡೆಸಿ ಅವರಿಂದಲೇ ಕ್ರಿಯಾ ಯೋಜನೆ ಪಡೆದು ಹಣ ಬಿಡುಗಡೆ ಮಾಡುತ್ತೇನೆ ಎಂದು ಭರವಸೆ ನೀಡಿದರು. ನಾನು ಅನುದಾನ ಕೊಡುತ್ತೇನೆ. ಇಷ್ಟೇ ಕೊಡುತ್ತೇನೆ ಎಂದು ಹೇಳಲು ಆಗುವುದಿಲ್ಲ. ಬಿಜೆಪಿ, ಜೆಡಿಎಸ್ ಸೇರಿ ಎಲ್ಲಾ ಶಾಸಕರಿಗೆ ಅನುದಾನ ಕೊಡುತ್ತೇನೆ. ಅಭಿವೃದ್ಧಿ ಕುಂಠಿತವಾಗಿಲ್ಲ. ಕರ್ನಾಟಕದ ಅಭಿವೃದ್ಧಿ ನಡೆಯುತ್ತಿದೆ. ಗ್ಯಾರಂಟಿ ಯೋಜನೆ ಕೂಡ ನಡೆಸುತ್ತಿದ್ದೇವೆ. ಇವರು ಗ್ಯಾರಂಟಿ ಸಂಬಂಧ ನಮ್ಮನ್ನು ವಿರೋಧ ಮಾಡಿದರು ಆದರೆ ಬೇರೆ ರಾಜ್ಯಗಳಲ್ಲಿ ನಮ್ಮನ್ನೇ ಕಾಪಿ ಮಾಡಿದರು. ಯಾವ ಕಾರಣಕ್ಕೂ ಗ್ಯಾರಂಟಿ ಯೋಜನೆ ನಿಲ್ಲಲ್ಲ. ಗ್ಯಾರಂಟಿ ಯೋಜನೆ ಮುಂದುವರಿಸುತ್ತೇವೆ. 692 ಭರವಸೆ ಕೊಟ್ಟಿದ್ದೆವು, ಅದರಲ್ಲಿ 264 ಭರವಸೆ ಈಡೇರಿಸಿದ್ದೇವೆ. ಉಳಿದವುಗಳನ್ನು ಕೂಡ ಈಡೇರಿಸುತ್ತೇವೆ. ನುಡಿಂದತ ನಡೆದ ಸರಕಾರ ಅಂದರೆ ಅದು ಕಾಂಗ್ರೆಸ್ ಸರಕಾರ ಅಂತ ಎದೆತಟ್ಟಿ ಹೇಳುತ್ತೇನೆ. ನಾವು ಈ ಎಲ್ಲಾ ಭರವಸೆಗಳನ್ನು ಈಡೇರಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಶೀಘ್ರದಲ್ಲೇ ಶ್ವೇತಪತ್ರ ಬಿಡುಗಡೆ: ಕೇಂದ್ರ ಪುರಸ್ಕೃತ ಯೋಜನೆಗಳ ಸಂಬಂಧ ಶ್ವೇತಪತ್ರ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದ್ದರು. ಕೇಂದ್ರ ಸರಕಾರ ಕೆಲ ವರ್ಷಗಳ ಹಿಂದೆ ಕೇಂದ್ರ ಪುರಸ್ಕೃತ ಯೋಜನೆ ಮಾಡಿತ್ತು. ಮೊದಲು ಶೇ.75ರಷ್ಟು ಕೇಂದ್ರ ಸರಕಾರ ನೀಡುತ್ತಿತ್ತು. ರಾಜ್ಯದ ಪಾಲು 25% ಇತ್ತು. ಈಗ ಅದು ಶೇ.40ರಿಂದ 42ಕ್ಕೆ ಇಳಿದಿದೆ. ಸುಮಾರು ಶೇ.60ರಿಂದ 65ರಷ್ಟು ಕಡಿಮೆಯಾಗಿದೆ. ರಾಜ್ಯದ ಜನರಿಗೆ ಇದು ಗೊತ್ತಾಗಬೇಕು. ಹಾಗಾಗಿ ಶೀಘ್ರದಲ್ಲಿ ಶ್ವೇತಪತ್ರ ಹೊರಡಿಸುತ್ತೇವೆ ಎಂದು ತಿಳಿಸಿದರು.

ಈ ಬಾರಿ ಮಾನ್ಸೂನ್ ಮುಂಚಿತವಾಗಿ ಆರಂಭವಾಯಿತು. ಹಲವೆಡೆ ಅತಿವೃಷ್ಟಿಯಾಗಿದೆ. ನಾವು ಕೆಆರ್‌ಎಸ್‌ನಿಂದ 177.25 ಟಿಎಂಸಿ ನೀರು ತಮಿಳುನಾಡಿಗೆ ಕೊಡಬೇಕಾಗಿದೆ. ಈಗಾಗಲೇ ಅದಕ್ಕಿಂತ ಹೆಚ್ಚಿಗೆ ನೀರು ಹರಿದು ಹೋಗಿದೆ. ಮೇಕೆದಾಟು ಯೋಜನೆಗೆ ಏಕೆ ವಿರೋಧ ಮಾಡುತ್ತಾರೆ ಗೊತ್ತಿಲ್ಲ. ಮೇಕೆದಾಟು ಯೋಜನೆಯಿಂದ ಸುಮಾರು 177.25 ಟಿಎಂಸಿ ನೀರು ಕೊಡಲು ಆಗದೇ ಇದ್ದರೆ, ಅದನ್ನೂ ಕೊಡಲು ಆಗುತ್ತದೆ. ಅವರಲ್ಲಿ ಈಗಲೂ ವಿರೋಧ ಮಾಡುವುದು ಬೇಡ ಅಂತ ಮನವಿ ಮಾಡುತ್ತೇನೆ. ಎರಡು ರಾಜ್ಯಗಳಿಗೆ ಅದರಿಂದ ಅನುಕೂಲವಾಗಲಿದೆ ಎಂದರು.

ಕೇಂದ್ರದಿಂದ ಹಣ ಬರುತ್ತಿಲ್ಲ

ಗ್ಯಾರಂಟಿ ಕಾರ್ಯಕ್ರಮ ಅಭಿವೃದ್ಧಿ ಕೆಲಸ ಅಲ್ಲ ಅಂತಿದ್ದಾರೆ. ಹಾಗಿದ್ದರೆ ತಲಾ ಆದಾಯ ಹೇಗೆ ಹೆಚ್ಚಾಯಿತು. ಕೊಂಡು ಕೊಳ್ಳುವ ಸಾಮರ್ಥ್ಯ ಜಾಸ್ತಿ ಆಗಿದೆ. ಪ್ರತಿ ಮನೆಗೆ ಪ್ರತಿ ವರ್ಷ 60,000 ರು. ಹಣ ಹೋಗುತ್ತಿದೆ. ಕೇಂದ್ರದ ಬಜೆಟ್ ನಲ್ಲಿ ಭದ್ರಾ ಮೇಲ್ದಂಡೆಗೆ 5300 ಕೋಟಿ ಕೊಡ್ತೀವಿ ಅಂದರು. ಆದರೆ ಈವರೆಗೆ ಒಂದು ರೂಪಾಯಿನೂ ಬಂದಿಲ್ಲ. ಕೇಂದ್ರದಿಂದ ಅನುದಾನ ಕೊಡದ ಕಾರಣ ಒಟ್ಟು ಸುಮಾರು 80,000 ಕೋಟಿ ರೂ. ನಮಗೆ ನಷ್ಟ ಆಗಿದೆ. ಇದರಿಂದ ಪ್ರಗತಿ ಎಷ್ಟು ಆಗಬೇಕು ಅಷ್ಟು ಮಾಡಲು ಸಾಧ್ಯವಾಗಲ್ಲ. ಅಭಿವೃದ್ಧಿ ಸಾಧ್ಯವಾಗಲ್ಲ. ಕೇಂದ್ರ ತೆರಿಗೆ ಪಾಲು ಕೊಟ್ಟಿದ್ದರೆ ನೀವು ಕೇಳಿದ ಅನುದಾನ ಕೊಡಬಹುದಿತ್ತು ಎಂದರು.

> ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ 25 ತೆರಿಗೆಗಳನ್ನು ಹಾಕಿದ್ದೀರ. ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ತೆರಿಗೆ ಹಣ ಹಾಕಿರುವುದು ಯಾರೂ ಇಲ್ಲ. ಇಷ್ಟೊಂದು ತೆರಿಗೆ ಹಾಕಿರುವುದು ಅಂದರೆ ಅದು ಸಿದ್ದರಾಮಯ್ಯ. ಅನುದಾನ ಬಿಡುಗಡೆ ಸಂಬಂಧ ಇಲ್ಲೇ ಘೋಷಣೆ ಮಾಡಬೇಕು.
> -ಆರ್.ಅಶೋಕ್, ಪ್ರತಿಪಕ್ಷ ನಾಯಕ

ಬುಕರ್ ವಿಜೇತ ಬಾನುಗೆ ದಸರಾ ಉದ್ಘಾಟನೆ ಗೌರವ

← ಮೊದಲಪುಟದಿಂದ

ರಾಷ್ಟ್ರಪತಿಗಳು, ರಾಜ್ಯಪಾಲರು, ಚಲನಚಿತ್ರ ನಟರು, ಉದ್ಯಮಿಗಳು, ರಾಜಕಾರಣಿಗಳು, ಸಾಹಿತಿಗಳು, ರೈತರು, ಸ್ವಾಮೀಜಿಗಳು, ಮಹಿಳೆಯರು, ಎಲ್ಲಾ ವರ್ಗಗಳ ಮೇರು ಸಾಧಕರಿಗೆ ಈವರೆಗೆ ದಸರಾ ಉದ್ಘಾಟನೆಯ ಭಾಗ್ಯ ಲಭಿಸಿತ್ತು. ಆದರೆ, ಅಲ್ಪಸಂಖ್ಯಾತ ಮಹಿಳೆಯರಿಗೆ ಇಂತಹ ಒಂದು ಅವಕಾಶ ಶತಮಾನಗಳಿಂದ ಸಿಗದೆ ವಂಚಿತವಾಗಿತ್ತು. ಇದೀಗ ಸರಕಾರ ತಳೆದ ನಿಲುವು ಹೊಸ ಅಲೆಯನ್ನೇ ಸೃಷ್ಟಿಸಿದೆ. 2025ರ ದಸರಾ ಮಹೋತ್ಸವ ಸಮಿತಿ ಉದ್ಘಾಟಕರ ಆಯ್ಕೆ ಹೊಣೆಯನ್ನು ಸಿಎಂ ಅವರ ಹೆಗಲಿಗೆ ಹೊರಿಸಿತ್ತು. ಅಂದುಕೊಂಡಂತೆ ಸಿಎಂ ಹಾಗೂ ಅವರ ಆಪ್ತ ಪರಿವಾರ ಅಳೆದು-ತೂಗಿ ಲೇಖಕಿ ಬಾನು ಮುಷ್ತಾಕ್ ಅವರನ್ನೇ ಆಯ್ಕೆ ಮಾಡುವ ಮುಖೇನ ಅಲ್ಪಸಂಖ್ಯಾತ ಮಹಿಳೆಗೆ ಅವಕಾಶ ಕಲ್ಪಿಸುವ ಮೂಲಕ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ.

ರಾಷ್ಟ್ರಪತಿಗಳೂ ಭಾಗಿ: ದಸರಾ ಮಹೋತ್ಸವದಲ್ಲಿ ಈವರೆಗೆ ರಾಷ್ಟ್ರಪತಿಗಳಾದ ರಾಮಸ್ವಾಮಿ ವೆಂಕಟರಾಮನ್, ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಾ ಭಾಗವಹಿಸಿದ್ದಾರೆ.

ಹೊಸ ಸಂಪ್ರದಾಯ: 1995ರಲ್ಲಿ ಎಚ್.ಡಿ.ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ ದಸರಾ ಉದ್ಘಾಟನೆಯಲ್ಲಿ ಪಾಲ್ಗೊಳ್ಳುವ ಮೂಲಕ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದರು. ನಂತರ ಬಂದ ಸಿಎಂಗಳು ಅದನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಅಲ್ಲಿಯವರೆಗೆ ಯಾವುದೇ ಸಕ್ರಿಯ ರಾಜಕಾರಣಿಗಳನ್ನು ಹಾಗೂ ಮುಖ್ಯಮಂತ್ರಿಗಳನ್ನು ದಸರಾ ಉದ್ಘಾಟನೆಗೆ ಆಹ್ವಾನಿಸುವ ಸಂಪ್ರದಾಯ ಇರಲಿಲ್ಲ.

> ಯಾವಾಗಲೂ ಆದ್ಯತೆ ಮೂಲ ಲೇಖಕರಿಗೇ ಸಲ್ಲಬೇಕು. ಯಾವುದೇ ವಿಚಾರದಲ್ಲಿ ಅನುವಾದಕರು ಪ್ರಧಾನ ಲೇಖಕರಾಗಲಾರರು. ಮೈಸೂರು ದಸರಾ ಉದ್ಘಾಟನೆಗೆ ಭಾನು ಮುಷ್ತಾಕ್ ಅವರಿಗೆ ಅವಕಾಶ ಕೊಟ್ಟಿರುವುದು ಸರಿ ಇದೆ.
> – ಡಾ.ಪಿ.ಕೆ.ರಾಜಶೇಖರ್, ಸಾಹಿತಿ

ರಾಜ್ಯಪಾಲರಿಂದ ಉದ್ಘಾಟನೆ : ನಾಡಹಬ್ಬ ದಸರಾವನ್ನು ಎರಡು ಬಾರಿ ರಾಜ್ಯಪಾಲರು ಉದ್ಘಾಟಿಸಿದ್ದಾರೆ. 1988ರಲ್ಲಿ ಎಸ್.ಆರ್.ಬೊಮ್ಮಾಯಿ ನೇತೃತ್ವದ ಜನತಾ ಪಕ್ಷದ ಸರಕಾರ ಪತನವಾಗಿ ರಾಷ್ಟ್ರಪತಿ ಆಡಳಿತ ಜಾರಿಗೆ ಬಂದಿತು. ಆಗ ರಾಜ್ಯಪಾಲರಾಗಿದ್ದ ಪಿ.ವೆಂಕಟಸುಬ್ಬಯ್ಯ ಹಾಗೂ 2007ರಲ್ಲಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್, ಬಿಜೆಪಿ ಸರಕಾರ ಪತನ ಆದಾಗ ಅಂದಿನ ರಾಜ್ಯಪಾಲರಾಗಿದ್ದ ರಾಮೇಶ್ವರ ಠಾಕೂರ್ ಜಂಬೂ ಸವಾರಿಗೆ ಚಾಲನೆ ನೀಡಿದ್ದರು.

ಅನ್ನದಾತನಿಗೂ ಭಾಗ್ಯ: ಮೈಸೂರು ಜಿಲ್ಲೆಯವರೇ ಆದ ಪ್ರಗತಿಪರ ರೈತ ಪುಟ್ಟಯ್ಯ ಅವರು 2015ರ ದಸರಾವನ್ನು ಉದ್ಘಾಟಿಸಿದ್ದರು. ಎಚ್.ಡಿ.ಕೋಟೆ ತಾಲೂಕಿನ ಹೈರಿಗೆ ಗ್ರಾಮದ ಮಲಾರ ಕಾಲನಿಯ ಪರಿಶಿಷ್ಟ ಜಾತಿಗೆ ಸೇರಿದ ಪ್ರಗತಿಪರ ರೈತ ಪುಟ್ಟಯ್ಯ ಅವರಿಗೆ ಅವಕಾಶ ಕಲ್ಪಿಸುವ ಮೂಲಕ ಇಡೀ ರೈತಕುಲಕ್ಕೆ ಅಂದಿನ ರಾಜ್ಯ ಸರಕಾರ ಸಂತೋಷ ನೀಡಿತ್ತು.

ಹಲವರಿಗೆ ಆದ್ಯತೆ: ಅದೇ ರೀತಿ ರೆಬಲ್ ಸ್ಟಾರ್ ಅಂಬರೀಶ್, ಬಿ.ಸರೋಜಾದೇವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಯು.ಆರ್.ಅನಂತಮೂರ್ತಿ, ಹಿಂದೂಸ್ತಾನಿ ಗಾಯಕಿ ಡಾ.ಗಂಗೂಬಾಯಿ ಹಾನಗಲ್, ಸಾಹಿತಿಗಳಾದ ಕೆ.ಎಸ್.ನಿಸಾರ್ ಅಹಮದ್, ದೇಜಗೌ, ಸ್ವಾತಂತ್ರ್ಯ ಹೋರಾಟಗಾರ ಎಂ.ಎನ್.ಜೋಯಿಸ್, ಪ್ರಗತಿಪರ ಸಾಹಿತಿ ಬರಗೂರು ರಾಮಚಂದ್ರಪ್ಪ, ಸಾಹಿತಿ ಡಾ.ಎಸ್.ಎಲ್.ಭೈರಪ್ಪ, ಇನ್ಫೋಸಿಸ್ ಫೌಂಡೇಶನ್ ಸಂಸ್ಥಾಪಕಿ ಡಾ.ಸುಧಾಮೂರ್ತಿ, ಇತರರು ಈವರೆಗೆ ದಸರಾ ಉದ್ಘಾಟನೆ ನೆರವೇರಿಸಿದ ಗಣ್ಯರ ಸಾಲಿನಲ್ಲಿದ್ದಾರೆ.

ಸ್ವಾಮೀಜಿಗಳಿಗೂ ಅವಕಾಶ: 2007ರಲ್ಲಿ ಆದಿಚುಂಚನಗಿರಿ ಮಠದ ಶ್ರೀಬಾಲಗಂಗಾಧರನಾಥ ಸ್ವಾಮೀಜಿ, 2008ರಲ್ಲಿ ಸಿದ್ದಗಂಗೆಯ ಡಾ.ಶಿವಕುಮಾರ ಸ್ವಾಮೀಜಿ, 2009ರಲ್ಲಿ ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ಗುರೂಜಿ, 2010ರಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ, 2011ರಲ್ಲಿ ಪೇಜಾವರ ಮಠದ ಶ್ರೀವಿಶ್ವೇಶ್ವರತೀರ್ಥ ಸ್ವಾಮೀಜಿ, 2012ರಲ್ಲಿ ವಿಜಯಪುರ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ದಸರಾ ಉದ್ಘಾಟಿಸಿದ್ದಾರೆ.

ಸೇತುವೆ ಮೇಲೆ ವ್ಹೀಲಿಂಗ್: ದಂಡ

ಶಿವಮೊಗ್ಗ: ಸಾಗರ ತಾಲೂಕಿನ ಸಿಗಂದೂರು ಸೇತುವೆ ಮೇಲೆ ದುಬಾರಿ ಬೈಕ್‌ನಲ್ಲಿ ವ್ಹೀಲಿಂಗ್ ಮಾಡಿದ ಪುಂಡನಿಗೆ ಪೊಲೀಸರು ದಂಡ ವಿಧಿಸಿ, ತಪ್ಪೊಪ್ಪಿಗೆ ಹೇಳಿಕೆ ಪಡೆದಿದ್ದಾರೆ.

ಆ.15ರಂದು ಯುವಕ ಸಿಗಂದೂರು ಸೇತುವೆ ಮೇಲೆ ವ್ಹೀಲಿಂಗ್ ಮಾಡಿದ್ದ. ಆತನ ಬೈಕ್ ಸ್ಟಂಟ್ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಈ ಹಿನ್ನೆಲೆ ಗ್ರಾಮಾಂತರ ಠಾಣೆ ಪೊಲೀಸರು ಬೈಕ್ ಸವಾರನನ್ನು ಪತ್ತೆ ಹಚ್ಚಿ, ಆತನಿಗೆ 5000 ರು. ದಂಡ ವಿಧಿಸಿದ್ದಾರೆ. ಯುವಕ ವಿಡಿಯೊ ಮೂಲಕ ನೀಡಿದ ತಪ್ಪೊಪ್ಪಿಗೆ ಹೇಳಿಕೆಯಲ್ಲಿ, ಇನ್ನುಮುಂದೆ ವ್ಹೀಲಿಂಗ್ ಮಾಡೋ ದಿಲ್ಲ. ಯಾರು ಈ ರೀತಿಯ ತಪ್ಪು ಮಾಡಬಾರದು ಎಂದು ಹೇಳಿದ್ದಾನೆ. ವ್ಹೀಲಿಂಗ್ ಮಾಡಿದ ಯುವಕನ ವಿರುದ್ಧ ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೈ ಶಾಸಕನಿಗೆ ಇಡಿ ಶಾಕ್

← ಮೊದಲಪುಟದಿಂದ

ವೀರೇಂದ್ರ ಪಪ್ಪಿ ಮಾಲೀಕತ್ವದ ಹಲವು ಕಂಪನಿಗಳನ್ನು ಗುರಿಯಾಗಿರಿಸಿಕೊಂಡು ದಾಳಿ ನಡೆಸಿರುವ ಇಡಿ ಅಧಿಕಾರಿ ಗಳು ರತ್ನಾ ಗೇಮಿಂಗ್ ಸಲ್ಯೂಷನ್ಸ್, ರತ್ನಾ ಗೋಲ್ಡ್ ಕಂಪನಿ, ರತ್ನಾ ಮಲ್ಟಿಸ್ಟೋರ್ಸ್ ಕಂಪನಿ, ಪಪ್ಪಿ ಟೆಕ್ನಾಲಜೀಸ್ ಕಂಪನಿ, ಪಪ್ಪಿ ಟೂರ್ಸ್ ಅಂಡ್ ಟ್ರಾವೆಲ್ಸ್ ಹಾಗೂ ಪಪ್ಪಿ ಸ್ವೇರ್ಬಾಕ್ಸ್, ಕಿಂಗ್ 567, ರಾಜ 567, ಪಪ್ಪೀಸ್ 003, ರತ್ನ ಗೇಮಿಂಗ್ ಮುಂತಾದ ಆನ್‌ಲೈನ್ ಬೆಟ್ಟಿಂಗ್ ಸೈಟ್‌ಗಳನ್ನು ನಡೆಸುತ್ತಿ ದ್ದಾರೆ ಎಂದು ಆರೋಪಿಸಲಾಗಿದೆ. ಅವರ ಸಹೋದರ ಕೆಸಿ ತಿಪ್ಪೇಸ್ವಾಮಿ ದುಬೈನಿಂದ ಡೈಮಂಡ್ ಸಾಫ್ಟೆಕ್, ಟಿಆರ್‌ಎಸ್ ಟೆಕ್ನಾಲಜೀಸ್ ಮತ್ತು ಪ್ರೈಮ್ 9 ಟೆಕ್ನಾಲಜೀಸ್ ಎಂಬ 3 ವ್ಯವಹಾರ ಸಂಸ್ಥೆಗಳನ್ನು ನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ. ಈ ಸಂಸ್ಥೆಗಳು ಕಾಲ್ ಸೆಂಟರ್ ಸೇವೆಗಳು ಮತ್ತು ವೀರೇಂದ್ರ ಅವರ ಗೇಮಿಂಗ್ ವ್ಯವಹಾರಕ್ಕೆ ಸಂಬಂಧಪಟ್ಟಿವೆ ಎಂದು ಹೇಳಲಾಗಿದೆ.

ಕುಸುಮಾ ಮನೆ ಮೇಲೆ ದಾಳಿ: ವೀರೇಂದ್ರ ಪಪ್ಪಿ ಜೊತೆ ಆರ್ಥಿಕ ವಹಿವಾಟು ಹೊಂದಿದ್ದ ಆರೋಪದ ಹಿನ್ನೆಲೆಯಲ್ಲಿ ಕುಸುಮ ಹನುಮಂತರಾಯಪ್ಪ ಅವರ ನಿವಾಸಗಳ ಮೇಲೂ ಇ.ಡಿ ದಾಳಿ ನಡೆಸಿದೆ. ಬೆ.4,30ಕ್ಕೆ ಅನ್ನಪೂರ್ಣೇಶ್ವರಿ ನಗರದ ಮುದ್ದನಪಾಳ್ಯದ ನಿವಾಸ ಹಾಗೂ ಚಂದ್ರಾ ಲೇಔಟ್‌ನಲ್ಲಿರುವ ಕಚೇರಿಯ ಮೇಲೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿ ದಾಖಲೆಗಳನ್ನು ಪರಿಶೀಲನೆ ನಡೆಸಿದರು. ಶಾಸಕ ವೀರೇಂದ್ರ ಪಪ್ಪಿ ಜೊತೆ ಹನುಮಂತರಾಯಪ್ಪ ಪುತ್ರ ವ್ಯಾಪಾರ ವಹಿವಾಟು ನಡೆಸಿದ್ದಾರೆಂಬ ಹಿನ್ನೆಲೆಯಲ್ಲಿ ದಾಳಿ ನಡೆಸಲಾಗಿದೆ. 2 ಇನ್ನೋವಾ ಕಾರಿನಲ್ಲಿ ಬಂದ ಅಧಿಕಾರಿಗಳು ಮುಂಜಾಗ್ರತಾ ಕ್ರಮವಾಗಿ ಭದ್ರತಾ ಅಧಿಕಾರಿಗಳನ್ನು ಕರೆತಂದಿದ್ದರು.

ಸುಮಂದರ್ ಸಿಂಗ್ ಮೇಲೂ ದಾಳಿ: ಇನ್ನು ಹವಾಲಾ ಕಿಂಗ್‌ಪಿನ್ ಎಂದೇ ಗುರುತಿಸಿಕೊಂಡಿದ್ದ ಸುಮಂದರ್ ಸಿಂಗ್ ಅವರ ಮೇಲೂ ಇ.ಡಿ. ದಾಳಿ ನಡೆಸಿದೆ. ಹುಬ್ಬಳ್ಳಿಯ ದೇಶಪಾಂಡೆ ನಗರದ ಕಾಮಾಕ್ಷಿ ಅಪಾರ್ಟ್‌ಮೆಂಟ್ ಮೇಲೆ ದಾಳಿ ನಡೆಸಿದ ಇ.ಡಿ. ಅಧಿಕಾರಿಗಳು ಅಪಾರ ಪ್ರಮಾಣದ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. 2 ವಾಹನದಲ್ಲಿ ಭದ್ರತಾ ಪಡೆಗಳೊಂದಿಗೆ ಅಪಾರ್ಟ್‌ಮೆಂಟ್ ಮೇಲೆ ದಾಳಿ ನಡೆಸಿದಾಗ ಮನೆಯೊಳಗಡೆ ಇದ್ದ ಸುಮಂದರ್ ಸಿಂಗ್ ಬಾಗಿಲು ತೆರೆಯಲು ನಿರಾಕರಿಸಿದರು. ಹಲವು ಬಾರಿ ಬಾಗಿಲು ಬಡಿದರೂ ತೆರೆಯದಿದ್ದಾಗ ಅನಿವಾರ್ಯವಾಗಿ ಬಾಗಿಲು ಮುರಿದು ಒಳಪ್ರವೇಶ ಮಾಡಿದರೆಂದು ತಿಳಿದುಬಂದಿದೆ. ಪಣಜಿಯಲ್ಲಿ ಮೆಜೆಸ್ಟಿಕ್ ಪ್ರೈಡ್ ಕೆಸಿನೋ ನಡೆಸುತ್ತಿರುವ ಸುಮಂದರ್ ಸಿಂಗ್ ತೆರಿಗೆ ವಂಚನೆ ಮಾಡಿದ್ದರೆಂಬ ಆರೋಪವಿದೆ. ಈ ಹಿನ್ನೆಲೆಯಲ್ಲಿ ದಾಳಿ ನಡೆಸಲಾಗಿದೆ ಎಂದು ಮೂಲಗಳು ಖಚಿತಪಡಿಸಿವೆ.

ಕಬ್ಬಿಗಾಗಿ ಲಾರಿ ಗ್ಲಾಸ್ ಪುಡಿಗಟ್ಟಿದ ಕಾಡಾನೆ

ಚಾಮರಾಜನಗರ: ಕಬ್ಬಿಗಾಗಿ ಲಾರಿಯ ಗ್ಲಾಸ್‌ನ್ನು ಕಾಡಾನೆಯೊಂದು ಪುಡಿಗಟ್ಟಿದ ಘಟನೆ ಚಾಮರಾಜನಗರ ತಮಿಳುನಾಡಿನ ಗಡಿ ಹಾಸನೂರು ಸಮೀಪ ಸಂಭವಿಸಿದೆ. ಕಬ್ಬಿಗಾಗಿ ಲಾರಿಯ ಮುಂಭಾಗದ ಗ್ಲಾಸ್ ಮೇಲೆಯೇ ಕಾಲಿಟ್ಟ ಆನೆಯ ರಂಪಾಟ ಚಾಲಕನ ಮೊಬೈಲ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ದೃಶ್ಯ ಕಂಡುಬಂದಿದ್ದು ಚಾಮರಾಜನಗರ ಹಾಸನೂರು ರಸ್ತೆ ಮಾರ್ಗ ಮಧ್ಯದಲ್ಲಿ, ದಿಢೀರ್ ರಸ್ತೆಗೆ ಬಂದಂತಹ ಆನೆ ಕಬ್ಬು ತುಂಬಿದ್ದ ಲಾರಿಯನ್ನ ಅಡ್ಡಗಟ್ಟಿ ಲಾರಿಯ ಗ್ಲಾಸ್ ಮೇಲೆ ಕಾಲಿರಿಸಿದ್ದೇ ತಡ ಗ್ಲಾಸ್ ನುಜ್ಜುಗುಜ್ಜಾಗಿದೆ. ಲಾರಿ ಮುಂಭಾಗದಿಂದಲೇ ಕಬ್ಬನ್ನು ಕೆಳಗೆಳೆದಿದೆ. ಆನೆಯ ರಂಪಾಟದ ದೃಶ್ಯ ಮೊಬೈಲ್ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಪ್ರಧಾನಿ ನರೇಂದ್ರ ಮೋದಿಗೆ ಬಿ.ಆರ್. ಪಾಟೀಲ್ ಒತ್ತಾಯ

ಇಡೀ ದೇಶದಲ್ಲಿ ಮದ್ಯ ನಿಷೇಧ ಮಾಡಿ

ಹಾಸನ: ಯುವ ಸಮುದಾಯಲ್ಲಿ ಹೆಚ್ಚುತ್ತಿರುವ ಮದ್ಯ ಸೇವನೆಯ ಪ್ರವೃತ್ತಿ ಮತ್ತು ಸಮಾಜದ ಮೇಲೆ, ವಿಶೇಷವಾಗಿ ಬಡವರ ಜೀವನದ ಮೇಲೆ ಅದರ ದುಷ್ಪರಿಣಾಮದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ರಾಜ್ಯ ಯೋಜನಾ ಆಯೋಗದ ಅಧ್ಯಕ್ಷ ಬಿ.ಆರ್. ಪಾಟೀಲ್, ದೇಶಾದ್ಯಂತ ಮದ್ಯ ನಿಷೇಧವನ್ನು ಜಾರಿಗೆ ತರುವಂತೆ ಪ್ರಧಾನಿ ನರೇಂದ್ರ ಮೋದಿಯವರನ್ನು ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನ ಮಂತ್ರಿಗಳು ದೇಶಾದ್ಯಂತ ಮದ್ಯ ಮಾರಾಟವನ್ನು ನಿಷೇಧಿಸಿದರೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು. ಇಂತಹ ಕ್ರಮದಿಂದ ಸಾಮಾನ್ಯ ಜನರು ಹಾಗೂ ಸಮಾಜದ ಹಿತದೃಷ್ಟಿಯಿಂದ ಉತ್ತಮವಾಗಿರುತ್ತದೆ ಎಂದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮದ್ಯ ಸೇವನೆಯ ಹಾನಿಕಾರಕ ಪರಿಣಾಮಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ರಾಷ್ಟ್ರವ್ಯಾಪಿ ಮದ್ಯ ನಿಷೇಧ ನೀತಿಯು ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ನಮಸ್ತೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.
ನೋಂದಣಿ ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ಸೌಹಾರ್ದ/ನೋಂದಣಿ/109/4393/2019-20
ನಂ.16, 3ನೇ ಮಹಡಿ, ಶ್ರೀ ನಂಜುಂಡೇಶ್ವರ ಕಾಂಪ್ಲೆಕ್ಸ್, 10ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು 560 003.

ಆರನೇ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರ 2024-25

ಸಹಕಾರಿಯ 2024-25ನೇ ಸಾಲಿನ ಸರ್ವಸದಸ್ಯರ ಸಭೆಯನ್ನು **ದಿನಾಂಕ: 07.09.2025ರ ಭಾನುವಾರ ಬೆಳಿಗ್ಗೆ 10:30 ಗಂಟೆಗೆ,** ಸಹಕಾರಿಯ ಆವರಣದಲ್ಲಿ ಅಧ್ಯಕ್ಷರಾದ ಶ್ರೀಮತಿ ರಾಜಿತಾ ಕಾಡೆ ಅರವಿಂದ್ ರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ತಾವು ಸದರಿ ಸಭೆಗೆ ಹಾಜರಾಗಬೇಕೆಂದು ವಿನಂತಿ. ಸದಸ್ಯರುಗಳಿಗೆ ಅಂಚೆ ಮೂಲಕ ನೋಟೀಸನ್ನು ಕಳುಹಿಸಲಾಗಿದ್ದು ನೋಟೀಸ್ ತಲುಪದ ಸದಸ್ಯರು ಈ ಪ್ರಕಟಣೆಯನ್ನು ಸಭೆಯ ಆಹ್ವಾನವೆಂದು ಭಾವಿಸಿ ಸಭೆಯಲ್ಲಿ ಭಾಗವಹಿಸುವುದು. ಹೆಚ್ಚಿನ ವಿವರಗಳಿಗೆ ಸಹಕಾರಿಯನ್ನು ಸಂಪರ್ಕಿಸುವುದು.

ಸ್ಥಳ: ಬೆಂಗಳೂರು
ದಿನಾಂಕ: 16.08.2025
– ಆಡಳಿತ ಮಂಡಳಿ

ನಗರಸಭಾ ಕಾರ್ಯಾಲಯ, ಮಡಿಕೇರಿ, ಕೊಡಗು ಜಿಲ್ಲೆ.
ಸಂ:ಮನಸ/ತಾಂತ್ರಿಕ/ಜೆಇ.4/ ಮ.ದಸರಾ/ಟೆಂಡರ್-17/ 2025-26
ದೂರವಾಣಿ: 08272-228323,08272-223998
e-mail: itstaff ulb madikeril@yahoo.com
ಕಾವೇರಿ ಕಲಾಕ್ಷೇತ್ರದ ಹತ್ತಿರ, ಮಡಿಕೇರಿ 571201 ದಿನಾಂಕ: 22.08.2025

ಟೆಂಡರ್ ಪ್ರಕಟಣೆ

2025-26ನೇ ಸಾಲಿನಲ್ಲಿ ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಪ್ರತಿ ವರ್ಷದಂತೆ ಸದರಿ ಸಾಲಿನಲ್ಲಿ ಮಡಿಕೇರಿ ದಸರಾ ಉತ್ಸವಕ್ಕೆ ಸಂಬಂಧಿಸಿದಂತೆ ಅಗತ್ಯ ಸೇವೆಗಳನ್ನು ಪಡೆಯಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆದ್ಯಾದೇಶ 1999 ಹಾಗೂ ಹಾಗೂ ನಿಯಮ ನಿಯಮ 2000 ಕ್ಕೆ ಒಳಪಟ್ಟು ಉತ್ಸವ ಸರಬರಾಜುದಾರರು ಆಸಕ್ತಿಯುಳ್ಳ ಅರ್ಹ ಸರಬರಾಜುದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (Services) ನಿಯಮಾವಳಿಯಂತೆ ಏಕಕ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಸರಬರಾಜುದಾರರು ಟೆಂಡರ್ ವಿವರಗಳನ್ನು ಏಕಕ ಪೋರ್ಟಲ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಏಕಕ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಹೆಚ್ಚಿನ ಮಾಹಿತಿ, ಸೇವೆಗಳ ವಿವರಣೆ, ನಿಭಂದನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು. ಟೆಂಡರ್ ಡೌನ್‌ಲೋಡ್, ಅಪ್‌ಲೋಡ್, ಟೆಂಡರ್ ಪ್ರೋಸೆಸಿಂಗ್ ಮತ್ತು ಇ.ಎಂ.ಡಿ ಪಾವತಿ ಬಗ್ಗೆ ಸಂಬಂಧಪಟ್ಟಂತೆ ವಿವರಗಳನ್ನು ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/- (ಹೆಚ್.ಆರ್ ರಮೇಶ್) ಪೌರಾಯುಕ್ತರು, ನಗರಸಭೆ, ಮಡಿಕೇರಿ.
ಸಹಿ/- (ಮಹೇಶ್ ಜೈನಿ) ಉಪಾಧ್ಯಕ್ಷರು, ನಗರಸಭೆ,ಮಡಿಕೇರಿ.
ಸಹಿ/- (ಪಿ ಕಲಾವತಿ) ಅಧ್ಯಕ್ಷರು, ನಗರಸಭೆ,ಮಡಿಕೇರಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗಲಕೋಟೆ.
ಮುಚಖಂಡಿ ರಸ್ತೆ, ನವನಗರ ಬಾಗಲಕೋಟೆ-587103 (ಜಿಲ್ಲೆ: ಬಾಗಲಕೋಟೆ)
e_mail : apmcbagalkot@rediffmail.com&apmcbagalkote@gmail.com
PH[O] 08354 - / 235370 [Fax] 235370
ಕ್ರ.ಸಂಖ್ಯೆ/ಕೃಉಮಾಸ(ಬಾ)/ಲೀ&ಲೈ/417/2025-26 ದಿ:22/08/2025

: ಮರು ಇ-ಟೆಂಡರ ಪ್ರಕಟಣೆ :

ಬಾಗಲಕೋಟ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 2015-16 ನೇ ಸಾಲಿನ RKVY ಯೋಜನೆಯಡಿ ಸ್ಥಾಪಿಸಿರುವ ವಿವಿಧದವಸ ಧಾನ್ಯಗಳ ಕ್ಲೀನಿಂಗ್, ಗ್ರೇಡಿಂಗ್ ಮತ್ತು ಪ್ಯಾಕಿಂಗ್ ಘಟಕವನ್ನು (Multi-Commodity Cleaning, Grading and Packing Unit) 55 ತಿಂಗಳ ಅವಧಿಗೆಕಾರ್ಯ ಮತ್ತು ನಿರ್ವಹಣೆ ಮಾಡುವ ಸಂಬಂಧ ಇ-ಪ್ರೋಕ್ಯೂರಮೆಂಟ್ ಪೋರ್ಟಲ್ https:/kppp.karnataka.gov.in ನಲ್ಲಿ ಸ್ಪರ್ಧಾತ್ಮಕ ಟೆಂಡರ್‌ಗಳನ್ನು ಎರಡು ಲಕೋಟಿ ಪದ್ಧತಿಯಲ್ಲಿಅವ್ಹಾನಿಸಲಾಗಿದೆ. ಬಿಡ್ ಪೂರ್ವಭಾವಿ ಸಭೆ/ಸ್ಪಷ್ಟೀಕರಣ/ತಕರಾರು/ಸಮಜಾಯಿಷಿ ದಿನಾಂಕ:28-08-2025 ಬೆಳಿಗ್ಗೆ 11-00 ಗಂಟೆಗೆ. ಭರ್ತಿ ಮಾಡಿಟೆಂಡರ ಸಲ್ಲಿಸುವ ಅಂತಿಮ ದಿನಾಂಕ:15-09-2025 ಸಾಯಂಕಾಲ 04-00 ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:16-09-2025 ಸಾಯಂಕಾಲ 4-30 ಗಂಟೆಗೆ. ಆರ್ಥಿಕ ಬಿಡ್‌ತೆರೆಯುವ ದಿನಾಂಕ(ಸಾಧ್ಯವಾದಲ್ಲಿ)19-09-2025 ಬೆಳಿಗ್ಗೆ 11-00 ಗಂಟೆಗೆ (ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದವರು) ಇ.ಎಂ.ಡಿ ರೂ.78,000/- ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಅಥವಾ https:/kppp.karnataka.gov.in ವೆಬ್‌ಸೈಟನಲ್ಲಿ ಪಡೆಯಬಹುದಾಗಿದೆ. ಕಛೇರಿ ದೂರವಾಣಿ:9482220322 ಟೆಂಡರನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/-(ವೀರೇಂದ್ರಗೌಡ.ಡಿ.ಪಾಟೀಲ) ಕಾರ್ಯದರ್ಶಿ ಕೃ.ಉ.ಮಾ.ಸ., ಬಾಗಲಕೋಟೆ
ಸಹಿ/-(ವಾಸುದೇವ ವಿ. ಸ್ವಾಮಿ) ಆಡಳಿತಾಧಿಕಾರಿ ಕೃ.ಉ.ಮಾ.ಸ., ಬಾಗಲಕೋಟೆ
DIPR/BGK/RO-NO-239/KSMCA/2025-26

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.
ನಂ.ಲೋ.ಇ./ಚಿ.ವಿ./ಸ.ಇಂ-1/ಟೆಂಡರ/2025-26/2797 ದಿನಾಂಕ: 21/08/2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024-25 ನೇ ಸಾಲಿನ ಲೆಕ್ಕ ಶೀರ್ಷಿಕೆ 4059-ಇಲಾಖಾ ಕಟ್ಟಡಗಳು ಅಡಿ 1 ಕಾಮಗಾರಿ ಮತ್ತು 2025-26 ನೇ ಸಾಲಿನ ಆಓಈ ಯೋಜನೆ ಅಡಿ 1 ಕಾಮಗಾರಿಗಳು, ಹೀಗೆ ಒಟ್ಟು 2 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ಕ್ರಮವಾಗಿ ರೂ. 80.00 ಲಕ್ಷ ಹಾಗೂ ಮೊತ್ತ ರೂ. 40.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆವ್ಹಾನಿಸಲಾಗಿದೆ.

ಗುತ್ತಿಗೆ ಪುಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: 08-09-2025 (ಸಾಯಂಕಾಲ 5.30 ಗಂಟೆಯವರೆಗೆ)
2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 10-09-2025 (ಸಾಯಂಕಾಲ 5.00 ಗಂಟೆಯವರೆಗೆ)
3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 12-09-2025 (ಸಾಯಂಕಾಲ 4.30 ಗಂಟೆಗೆ)
4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
5) ಯಾವುದೇ ಗುತ್ತಿಗೆ ಅಂತಿಮ ದಿನಾಂಕದೆದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/ BGM/ RO-NO-876-2025-26

ಕರ್ನಾಟಕ ಸರ್ಕಾರ
ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಕಾರ್ಯಯೋಜನೆ, ಅರಣ್ಯ ಭವನ, ಅಶೋಕಪುರಂ, ಮೈಸೂರು-570008. ಕಛೇರಿ ದೂರವಾಣಿ: 0821-2483917
ಇ-ಮೇಲ್: cfwpmys@gmail.com
ಸಂಖ್ಯೆ: ಎ2/ಬಿಯುಡಿ/ಇ-ಟೆಂಡರ್/ಸಿಆರ್-9/2025-26 ದಿನಾಂಕ: 21.08.2025

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ-02/2025-26

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಕಾರ್ಯಯೋಜನೆ, ಮೈಸೂರುರವರು 2025-26ನೇ ಸಾಲಿನಲ್ಲಿ ಅರಣ್ಯ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಮೋಜಣಿ ಮತ್ತು ಹದ್ದುಬಸ್ತು ಕಾಮಗಾರಿಗಾಗಿ ಇ-ಟೆಂಡರ್‌ನ್ನು ಆಹ್ವಾನಿಸಲಾಗಿತ್ತು. ಇ-ಟೆಂಡರ್‌ನಲ್ಲಿ ಗುತ್ತಿಗೆದಾರರು ಭಾಗವಹಿಸಿ ತಾಂತ್ರಿಕ ಬಿಡ್ಡಿನಲ್ಲಿ ಅನರ್ಹಗೊಂಡು ತಿರಸ್ಕೃತಗೊಂಡಿರುವುದರಿಂದ ಹಾಗೂ ಪರಿಶಿಷ್ಟ ಜಾತಿ ಮತ್ತು ಪ್ರವರ್ಗ-2ಎಗೆ ಮೀಸಲಿರಿಸಿದ್ದ ಇ-ಟೆಂಡರ್‌ಗಳಿಗೆ ಆ ವರ್ಗದ ಯಾರೊಬ್ಬ ಗುತ್ತಿಗೆದಾರರು ಭಾಗವಹಿಸದೇ ಇರುವುದರಿಂದ ಅರ್ಹ ಎಲ್ಲಾ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಟೆಂಡರ್‌ದಾರರು ಟೆಂಡರ್ ಫಾರಂಗಳನ್ನು ವೆಬ್‌ಸೈಟ್ **www.kppp.karnataka.gov.in** ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ **ದಿನಾಂಕ: 01.09.2025ರ ಅಪರಾಹ್ನ 4.00 ಗಂಟೆಯವರೆಗೆ** ಟೆಂಡರ್ ಅನ್ನು ಸಲ್ಲಿಸಬಹುದು. ತಾಂತ್ರಿಕ ಬಿಡ್ ಅನ್ನು **ದಿನಾಂಕ: 02.09.2025 ರಂದು ಅಪರಾಹ್ನ 4.10 ಗಂಟೆಗೆ** ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್ ಅನ್ನು **ದಿನಾಂಕ: 04.09.2025 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಇ.ಎಂ.ಡಿ ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ ಆನ್‌ಲೈನ್‌ನಲ್ಲಿಯೇ ಸಂಬಂಧಿಸಿದ ಬ್ಯಾಂಕ್‌ನಲ್ಲಿ ಪಾವತಿಸಬೇಕಾಗುತ್ತದೆ. ಇನ್ನುಳಿದ ವಿವರಗಳನ್ನು ವೆಬ್‌ಸೈಟ್ **www.kppp.karnataka.gov.in** ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ, ಕಛೇರಿ ವೇಳೆಯಲ್ಲಿ ಪಡೆಯಬಹುದು. ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು.

ಸಹಿ/- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕಾರ್ಯಯೋಜನೆ, ಮೈಸೂರು.
ವಾಸಾಸಂಇ/ಮೈಸೂರು/847/ಶಿರಡಿ ಸಾಯಿ/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ: ನಿಡಗುಂದಿ, ಜಿ: ವಿಜಯಪುರ.
ದೂರವಾಣಿ: 08426-281027.
ಇ-ಮೇಲ್:dam_division@rediffmail.com
ಸಂ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2025-26/1444
ದಿನಾಂಕ:20.08.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Item Rate basis from the eligible contractors for the work indents of - **Two Cover** - I .No. 2400 (CAT-IIA)/CALL-2- 63.41 Lakhs, & **Single Cover - P**ercentage tender basis from the eligible contractors for the work indents of (1) I .No. 2282/ Call-3 (Others)- 5.06 Lakhs, (2) I .No. 2151/Call-3 (Others)- 4.40 Lakhs.(3) I .No. 2466 (CAT-II(A)- 3.94 Lakhs .(4) I .No. 2276/Call-2 (Others)- 6.75 Lakhs (5) I .No. 1716 (Others)- 15.33 Lakhs ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ KW ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.
1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವೀಕರಿಸುವ ಕೊನೆಯ **ದಿನಾಂಕ:22.08.2025 ರಿಂದ 02.09.2025 ಸಾಯಂಕಾಲ 5.00 ಘಂಟೆಯವರೆಗೆ.**
2) ತಾಂತ್ರಿಕ ಬಿಡ್ ತೆರೆಯುವ (ಇಂಡಂಟ್ ನಂ. 2400) & ಆರ್ಥಿಕ ಬಿಡ್ ತೆರೆಯುವ ದಿನಾಂಕ: (ಇಂಡಂಟ್ ನಂ2282, 2151, 1548, 2276) **ದಿನಾಂಕ:04.09.2025 ಮುಂಜಾನೆ 11.00 ಘಂಟೆಗೆ.**
3) ಆರ್ಥಿಕ ಬಿಡ್ ತೆರೆಯುವ (ಇಂಡೆಂಟ್ ನಂ. 2400) **ದಿನಾಂಕ: 06.09.2025 ಮುಂಜಾನೆ 11.00 ಘಂಟೆಗೆ.**
ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/283/ ಕೆಎಸ್‌ಎಂಸಿಎ/2025-26

ಕರ್ನಾಟಕ ಸರಕಾರ
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ-ಮೇಲ್: directorgimsgulbarga@gmail.com ದೂ.08472-260252
ಸಂಖ್ಯೆ: GIMS/KLB/Tender/OS-3/CR/91/2025-26/1381 ದಿನಾಂಕ:-21/08/2025

:: ಟೆಂಡರ ಪ್ರಕಟಣೆ ::

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಗೆ 2025-26 ನೇ ಸಾಲಿಗೆ ಅವಶ್ಯಕವಿರುವ ಸ್ವಚ್ಚತಾ ಸಿಬ್ಬಂದಿಗಳು, ಸೆಕ್ಯೂರಿಟಿ ಗಾರ್ಡ್ ಹಾಗೂ ಇತರೆ ಗ್ರೂಪ್-ಡಿ ಹುದ್ದೆಗಳ ಒಟ್ಟು 234 ಹುದ್ದೆಗಳನ್ನು ಹೊರಮಾನವ ಸಂಪನ್ಮೂಲ ಸಂಸ್ಥೆಯಿಂದ ಸೇವೆಯನ್ನು ಪಡೆಯಲು ಒಂದು ವರ್ಷದ ಅವಧಿಗೆ ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ದತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.
1) ಟೆಂಡರ್ ಪ್ರಕಟಣೆ ದಿನಾಂಕ: No. GIMS/KLB/Tender/OS-3/CR/91/2025-26, Date:21/08/2025, DME/2025-26/SE0536. 2) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು ಇ-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **20-09-2025 ಸಾಯಂಕಾಲ 4:30ಕ್ಕೆ,** 3) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **06-09-2025 ಸಾಯಂಕಾಲ 5.00 ಗಂಟೆಯವರೆಗೆ,** 4) ಟೆಂಡರ ಪೂರ್ವಭಾವಿ ಸಭೆ: **ದಿನಾಂಕ:09-09-2025 ಮಧ್ಯಾಹ್ನ 12:30ಕ್ಕೆ** 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **22-09-2025 ಸಾಯಂಕಾಲ 5:00ಕ್ಕೆ,** 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: **23-09-2025 11:30ಕ್ಕೆ,** 7) ಟೆಂಡರನ ಮೊತ್ತ: **ರೂ. 8,10,47,290/-,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: **ರೂ. 16,21,000/-,** 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.ದೂರವಾಣಿ ಸಂಖ್ಯೆ: 08472-260252, Office Email: directorgimsgulbarga@gmail.com Cell:+91 9482093568, Tender Section Email: gimstenderklb22@gmail.com Cell:+91 9972688602

ಸಹಿ/- ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/420/ಕೆ.ಎಸ್.ಎಂ.ಸಿ.&ಎ/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020
ಸಂ.: ಬೆಂಅಪ್ರಾ/ನಯೋಸ/CLU-193/1993/2025-26 ದಿನಾಂಕ: 22.08.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಜಿ. ಮಂಜುನಾಥ	ಯಲಹಂಕ	ಜಾಲ	ಚಾಗಲಟ್ಟೆ	74/4	0-28	ವ್ಯವಸಾಯ ವಲಯ	ವಾಣಿಜ್ಯ
					74/5	0-35		
					77/4	0-24.96		
					78/5	0-16		
					78/8	0-20		
					79/1	0-35		
					79/6	0-17		
					79/9	0-15		
					ಒಟ್ಟು	4-31		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ವಾಣಿಜ್ಯ ಅಭಿವೃದ್ಧಿ ಕಾರ್ಯಕಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ಮೂಲಭೂತ ಸೌಕರ್ಯಗಳು, ರಸ್ತೆಗಳು ಲಭ್ಯವಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನುಗಳಲ್ಲಿ ಅಭಿವೃದ್ಧಿ ಪಡಿಸಿದ ಕಟ್ಟಡಗಳಿಂದ ಹಲವಾರು ಜನರಿಗೆ ಉದ್ಯಮಗಳು ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುವುದಾಗಿ ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಕರ್ನಾಟಕ ಸರ್ಕಾರ
ಜಿಲ್ಲಾ ನಗರಾಭಿವೃದ್ಧಿ ಕೋಶ ಬೀದರ
Bomgondeshwar Samudaya Bhavan (Gonda Bhavan), Near Gurudwara, Chickpet Road, Bidar- 585 401 Ph. No: 08482-229332, Fax: 08482-225262 , E-mail: ka.bidar.dudc@gmail.com
ಸಂ: ಜಿನಕೋ/ನಗ-4(ಉಮೋ)/ಸಿಆರ್-20/2025-26 ದಿನಾಂಕ: 21-08-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

1) ಕಾಮಗಾರಿ / ಸರಕು / ಸೇವೆಯ ವಿವರ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) (ಉಳಿತಾಯ ಮೊತ್ತ) ಯೋಜನೆಯಡಿ ನಗರಸಭೆ ಬೀದರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು DMA/2025-26/OW/ WORK_INDENT47991, 2) ಕಾಮಗಾರಿ / ಸರಕು / ಸೇವೆಯ ಅಂದಾಜು ಮೊತ್ತ KPPP-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ KPPP-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ KPPP-portal ನಲ್ಲಿ ನಮೂದಿಸಿದಂತೆ, 5) ಪ್ರಿ ಬಿಡ್ ಮೀಟಿಂಗ್ **04-09-2025 at 11.00 AM,** 6) ಟೆಂಡರ ಭರ್ತಿ ಮಾಡಿ ಸಲ್ಲಿಸಲು ಅಂತಿಮ **ದಿನಾಂಕ 09-09-2025 upto 04.00 PM,** 7) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 10-09-2025 at 04.30 PM,** 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ, ಬೀದರ ಇ-ಮೇಲ್: ka.bidar.dudc@gmail.com, 08482-229332, 9) ಅಂತರಜಾಲ ತಾಣದ ವಿಳಾಸ https://kppp.karnataka.gov.in

ಸಹಿ/-ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿಕೋಶ, ಬೀದರ
ವಾ.ಸಾ.ಸಂ.ಇ/ಬೀದರ/151/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ-585105 ಫೋ.ನಂ 08472-278634/256944, Email:eerwssglb14@gmail.com
ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2024-25/1026 ದಿನಾಂಕ : 22-8-2025

ಅಲ್ಪಾವಧಿ ಟೆಂಡರ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪದ್ದತಿಯಲ್ಲಿ https://kppp.karnataka.gov.in/ನಡಿಯಲ್ಲಿ ಮಾತ್ರ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ: Jevargi-01(Indent No RWSSD/2025-26/WS/WORK_INDENT 9528), 2) ಟೆಂಡರಿಗಿಟ್ಟ ಮೊತ್ತ: ಕನಿಷ್ಠ : **63,12,934.00/-**, ಗರಿಷ್ಠ : **63,12,934.00/-**, 3) ಲೆಕ್ಕ ಶಿರ್ಷಿಕೆ : KKRDB, 4) ಗುತ್ತಿಗೆದಾರರ ಅರ್ಹತೆ: 3ನೇ & 2ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **22-08-2025 ರಿಂದ 01-09-2025,** 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: kppp ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **01-09-2025 ಸಾಯಂಕಾಲ 4:00 ಗಂಟೆವರೆಗೆ** 8) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ: **02-09-2025 ಸಾಯಂಕಾಲ 4:01 ಗಂಟೆವರೆಗೆ,** 9) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ: **03-09-2025 ಬೆ. 11.00 ಗಂಟೆವರೆಗೆ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ ಕುಸನೂರ ರೋಡ, ಕಲಬುರಗಿ, 11) ಅಂತರಜಾಲ ತಾಣದ ವಿಳಾಸ: https://kppp.karnataka.gov.in/

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/425/ಕೆ.ಎಸ್.ಎಂ.ಸಿ.&ಎ/2025-26

ಒಳಮೀಸಲಾತಿ ವಿಚಾರಕ್ಕೆ ಬಿಜೆಪಿಯಿಂದ ಹೋರಾಟ ನಡೆದಿತ್ತು. ಹಿಂದಿನ ಸಿಎಂ ಬಸವರಾಜ ಬೊಮ್ಮಾಯಿ ಇದಕ್ಕೆ ಚಾಲನೆ ನೀಡಿದ್ದರು. ಈಗಿನ ಸರಕಾರ ಅದಕ್ಕೆ ಸುಣ್ಣ ಬಣ್ಣ ಬಳಿದು ಸದನದಲ್ಲಿ ಮಂಡಿಸಿದೆ. ಆದರೆ ಚರ್ಚೆಗೆ ಅವಕಾಶ ನೀಡದೆ ಸಿಎಂ ಸಿದ್ದರಾಮಯ್ಯ ಪಲಾಯನ ಮಾಡಿದ್ದಾರೆ.

-ಆರ್.ಅಶೋಕ್ ಪ್ರತಿಪಕ್ಷ ನಾಯಕ

ಗದಗದಲ್ಲಿರುವ ಕಪ್ಪತಗುಡ್ಡಕ್ಕೆ ಮೂಲ ಸೌಕರ್ಯ ಒದಗಿಸಿದ ಪರಿಣಾಮ ಕೇವಲ ಭಾನುವಾರ ಒಂದು ದಿನ 4 ಲಕ್ಷ ಪಾರ್ಕಿಂಗ್ ಶುಲ್ಕ ಬರುತ್ತದೆ. ಪ್ರವಾಸೋದ್ಯಮ ಅಭಿವೃದ್ಧಿ ಎಂದರೆ ಸಮುದ್ರಗಳು, ರೆಸ್ಟೋರೆಂಟ್‌ಗಳು ಅಭಿವೃದ್ಧಿಪಡಿಸುವುದಲ್ಲ. ವಿದೇಶದಲ್ಲಿರುವ ಪ್ರವಾಸೋದ್ಯಮ ನೀತಿಯೇ ಬೇರೆ. ನಮ್ಮಲ್ಲಿರುವ ಪ್ರವಾಸೋದ್ಯಮ ನೀತಿಯೇ ಬೇರೆ. ಪ್ರವಾಸೋದ್ಯಮದಿಂದ ಬೊಕ್ಕಸಕ್ಕೆ ಭಾರೀ ಪ್ರಮಾಣದ ಲಾಭವೇನೂ ಬಂದಿಲ್ಲ. ಹೆಚ್ಚೆಂದರೆ ಶೇ.5 ರಿಂದ 8 ರಷ್ಟು ಲಾಭವಾಗಿರಬಹುದು.

ಎಚ್.ಕೆ.ಪಾಟೀಲ್ ಸಚಿವ



ವಿಧಾನ ಮಂಡಲ ಮಧ್ಯದೊಳಗೆ

ಸಮಾಚಾರ ಸಣ್ಣದಲ್ಲ

ಪರಿಷತ್‌ನಲ್ಲಿ 54.25 ಗಂಟೆ ಕಲಾಪ

ವಿಧಾನ ಪರಿಷತ್: ವಿಧಾನ ಪರಿಷತ್ತಿನ 156ನೇ ಅಧಿವೇಶನವು ಆ.11 ರಿಂದ 22ರವರೆಗೆ ಒಟ್ಟು ಒಂಬತ್ತು ದಿನಗಳಲ್ಲಿ 54.25 ಗಂಟೆ ನಡೆದಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು. ಸದನದಲ್ಲಿ ಮೊದಲ ದಿನ ಇತ್ತೀಚೆಗೆ ನಿಧನರಾದ 11 ಗಣ್ಯರಿಗೆ ಸಂತಾಪ ವ್ಯಕ್ತಪಡಿಸಲಾಯಿತು. ಅಧಿವೇಶನದಲ್ಲಿ 1,431 ಪ್ರಶ್ನೆ ಸ್ವೀಕರಿಸಲಾಗಿದ್ದು, ಈ ಪೈಕಿ 135 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದೆ. ಅವುಗಳಲ್ಲಿ 95 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1,296 ಪ್ರಶ್ನೆಗಳ ಪೈಕಿ 789ಕ್ಕೂ ಹೆಚ್ಚು ಪ್ರಶ್ನೆಗಳಿಗೆ ಸದನದಲ್ಲಿ ಉತ್ತರ ಮಂಡಿಸಲಾಯಿತು ಎಂದು ಮಾಹಿತಿ ನೀಡಿದರು. ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 4 ವಿಧೇಯಕಗಳು ಹಾಗೂ ಅಂಗೀಕೃತ ರೂಪದಲ್ಲಿರುವ 33 ವಿಧೇಯಕಗಳು ಸೇರಿ ಒಟ್ಟು 37 ವಿಧೇಯಕಗಳಿಗೆ ಪರಿಷತ್ ಸಹಮತಿ ನೀಡಿದೆ. ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 71 ಸೂಚನೆಗಳ ಪೈಕಿ 26 ಸೂಚನೆಗಳಿಗೆ ಉತ್ತರಿಸಲಾಯಿತು. ಹಾಗೂ 19 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು. ಜತೆಗೆ ಮೂರು ವಿಧೇಯಕಗಳನ್ನು ಹಿಂಪಡೆಯಲಾಗಿದೆ ಎಂದು ಹೇಳಿದರು.

ಕರಾವಳಿಗೆ ಪ್ರತ್ಯೇಕ ನೀತಿ

ವಿಧಾನಸಭೆ: ಕರಾವಳಿ ಭಾಗದಲ್ಲಿ ಉದ್ಯೋಗ ಸೃಷ್ಟಿಗೆ ಹಾಗೂ ಪ್ರವಾಸೋದ್ಯಮ ಬೆಳವಣಿಗೆಗೆ ಪ್ರತ್ಯೇಕ ನೀತಿ ಮಾಡಬೇಕು ಎಂದು ಆಲೋಚನೆ ಮಾಡಲಾಗುತ್ತಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು. ಈ ಬಗ್ಗೆ ಮಾತನಾಡಿದ ಅವರು, ಎರಡನೇ ಸಭೆಯನ್ನು ಮಂಗಳೂರಿನಲ್ಲಿ ನಡೆಸಲಾಗುವುದು. ಮುಂದಿನ ಸಭೆಗೆ ಯಾರನ್ನು ಆಹ್ವಾನ ಮಾಡಬೇಕು ಎಂದು ಸಲಹೆ ನೀಡಿದ್ದಾರೆ. ಈ ಸಭೆಯಲ್ಲಿ ಬಂಡವಾಳ ಹೂಡಿಕೆದಾರರು, ಕೇಂದ್ರ, ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳನ್ನು ಕರೆಯಲಾಗುತ್ತದೆ. ಕರಾವಳಿ ಭಾಗಕ್ಕೆ ಹೊಸ ರೂಪ ನೀಡಲಾಗುತ್ತದೆ ಎಂದು ತಿಳಿಸಿದರು. ಕರಾವಳಿ ಭಾಗದ ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಸಚಿವರುಗಳ ಜೊತೆ ಮೊಟ್ಟ ಮೊದಲ ಸಭೆ ನಡೆಸಲಾಯಿತು. ಅಧಿಕಾರಿಗಳೂ ಸಹ ಸಭೆಯಲ್ಲಿ ಹಾಜರಿದ್ದರು. ಪರಿಹಾರೋಪಾಯಗಳ ಬಗ್ಗೆ ಎಲ್ಲರೂ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ ಎಂದರು.

ಕ್ರಿಕೆಟ್ ಫ್ಯಾನ್ ಅಲ್ಲ, ಫಾಲೋವರ್ ಅಷ್ಟೆ

ವಿಧಾನಸಭೆ: ಆರ್‌ಸಿಬಿ ಕಾಲ್ತುಳಿತದ ಘಟನೆಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರು ಉತ್ತರಿಸುವ ವೇಳೆ, ನಾನು ಕಬಡ್ಡಿ ಆಟಗಾರ. ಯಾವತ್ತೂ ಕ್ರಿಕೆಟ್ ಆಡಿಲ್ಲ, ಶಾಸಕ ದಿನಾಚರಣೆ ಸಂದರ್ಭದಲ್ಲಿ ಆಡುವಾಗ ಸಕಲೇಶಪುರದ ಮಾಜಿ ಶಾಸಕ ವಿಶ್ವನಾಥ್ ಅವರು ನನ್ನ ಮೇಲೆ ಬಿದ್ದಿದ್ದರಿಂದ ನನ್ನ ಮಂಡಿಗೆ ಪೆಟ್ಟಾಗಿತ್ತು. 2005ರಲ್ಲಿ ಜೆಡಿಎಸ್‌ನಿಂದ ನನ್ನನ್ನು ಉಚ್ಚಾಟಿಸಿದಾಗ ಹುಬ್ಬಳ್ಳಿಯಲ್ಲಿ ನಡೆದ ಅ.ಹಿಂ.ದ ಸಮಾವೇಶಕ್ಕೆ ಕುಂಟುಕೊಂಡೇ ಹೋಗಿದ್ದೆ ಎಂದು ಕೆಲವು ಘಟನಾವಳಿಗಳನ್ನು ನೆನಪು ಮಾಡಿಕೊಂಡರು. ಈ ಮಧ್ಯೆ ಪಕ್ಷದ ಉಪನಾಯಕ ಅರವಿಂದ್ ಬೆಲ್ಲದ್ ಮಾತನಾಡಿ, ಸಚಿವ ಜಮೀರ್ ಅಹ್ಮದ್ ಅವರಿಗೆ ಕನ್ನಡ ಕಲಿಸ್ತೀರಾ ಎಂದಾಗ ಮುಖ್ಯಮಂತ್ರಿಗಳು, ಕನ್ನಡ ಮಾತೃಭಾಷೆ. ನಿಮಗೂ ಕನ್ನಡ ಸರಿಯಾಗಿ ಬರುವುದಿಲ್ಲ, ನಿಮ್ಮ ತಂದೆ ಗೋಕಾಕ್ ಚಳವಳಿಯಲ್ಲಿ ಭಾಗವಹಿಸಿದ್ದರು ಎಂದರಲ್ಲದೆ, ಕಷ್ಟಕಾಲದಲ್ಲಿ ನನ್ನ ನೆರವಿಗೆ ನೀವು ಬರುವುದಿಲ್ಲವೇ ಎಂದು ಮತ್ತೊಬ್ಬ ಬಿಜೆಪಿ ಶಾಸಕ ಸಿ.ಸಿ.ಪಾಟೀಲ್ ಅವರನ್ನು ಪ್ರಶ್ನಿಸಿದರು. ಪರಮೇಶ್ವರ್ ನಗುತ್ತಿದ್ದಾರೆ. ಅದಕ್ಕೆ ನನಗೂ ನಗು ಬಂತು ಎಂದು ಅಶೋಕ್ ಹೇಳಿದಾಗ, ಯಾವಾಗಲೂ ನಗುತ್ತಿರಬೇಕು. ಪರಮೇಶ್ವರ್ ಅವರಿಗೆ ಖುಷಿಯಾಗಿದೆ ಎನ್ನುವುದಕ್ಕಿಂತ ನಿಮಗೆ ಖುಷಿಯಾಗಿದೆ. ಅಶೋಕ್ ನನಗೆ ಒಳ್ಳೆಯ ಸ್ನೇಹಿತರು. ವಿಧಾನಸಭೆಯಲ್ಲಿ ಒಂದು ಥರ, ಹೊರಗೆ ಇನ್ನೊಂದು ಥರ ಇರುತ್ತಾರೆ ಎಂದಾಗ, ಅಶೋಕ್ ಅವರ ಸ್ಥಾನದ ಮಹಿಮೆ ಇರಬೇಕು ಎಂದರು. ಆಗ ಮುಖ್ಯಮಂತ್ರಿಗಳು ಮಹಿಮೆಗಿಂತ ಜವಾಬ್ದಾರಿ ಎಂದು ಹೇಳಿದರು.

ಕಾಲ್ತುಳಿತ ಪ್ರಕರಣ; ಸರಕಾರದ ವಿರುದ್ಧ ವಿಪಕ್ಷ ಕಿಡಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಪಕ್ಷ ಆಕ್ರೋಶ | ಸರಕಾರದ ವಿರುದ್ಧ ಪ್ರತಿಭಟಿಸಿ ಸಭಾತ್ಯಾಗ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಆರ್‌ಸಿಬಿ ವಿಜಯೋತ್ಸವದ ವೇಳೆಯ ಕಾಲ್ತುಳಿತ ದುರಂತಕ್ಕೆ ಸರಕಾರವನ್ನು ಹೊಣೆಯಾಗಿಸುವುದು ಸರಿಯಲ್ಲ ಎನ್ನುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ, ಆಡಳಿತ-ಪ್ರತಿಪಕ್ಷ ನಡುವೆ ತೀವ್ರ ಗದ್ದಲ, ಗಲಾಟೆಯ ನಡುವೆ ಸರಕಾರದ ವಿರುದ್ಧ ಪ್ರತಿಭಟಿಸಿ ಪ್ರತಿಪಕ್ಷ ಸಭಾತ್ಯಾಗ ಮಾಡಿದ ಘಟನೆ ನಡೆಯಿತು.

ಆರ್‌ಸಿಬಿ ವಿಜಯೋತ್ಸವದ ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ ಸುದೀರ್ಘ ಉತ್ತರದಲ್ಲಿ, ಈ ಘಟನೆ ನಡೆಯಬಾರದಿತ್ತು. ಈ ಘಟನೆಯಿಂದ ನಮಗೂ ನೋವಾಗಿದೆ. ಈ ಘಟನೆಯ ಬಗ್ಗೆ ನಾನು ಹಿಂದೆಯೂ ವಿಷಾದ ವ್ಯಕ್ತಪಡಿಸಿದ್ದೆ. ಈಗಲೂ ವಿಷಾದ ವ್ಯಕ್ತಪಡಿಸುತ್ತಿದ್ದೇನೆ. ಈ ಘಟನೆಗೆ ಸರಕಾರ ಜವಾಬ್ದಾರಿ, ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಗೃಹ ಸಚಿವರು ರಾಜೀನಾಮೆ ನೀಡಬೇಕು ಎಂಬ ಪ್ರತಿಪಕ್ಷಗಳ ಒತ್ತಾಯ ಸರಿಯಲ್ಲ ಎನ್ನುವ ಜತೆಜತೆಗೆ ಸರಕಾರ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ಮಾಹಿತಿ ನೀಡಿದರು.

ಆದರೆ ಸರಕಾರ ಹೊಣೆಯಲ್ಲ ಎನ್ನುವ ಸಿದ್ದರಾಮಯ್ಯ ಹೇಳಿಕೆಯನ್ನು ಖಂಡಿಸಿ ಪ್ರತಿಪಕ್ಷ ನಾಯಕ ಆರ್. ಅಶೋಕ್, ಪರೀಕ್ಷೆಯಲ್ಲಿ ಅವರು ಫೇಲಾಗಿದ್ದನ್ನು ಬಿಟ್ಟು, ಉಳಿದವರು ಫೇಲಾಗಿದ್ದನ್ನು ತಂದೆಗೆ ಹೇಳುವ ರೀತಿಯಂತಿದೆ. ಆಟೋದಲ್ಲಿ ಕುಳಿತು ಜಗತ್ತನ್ನೇ ಸುತ್ತಾಡಿಸಿದ ರೀತಿಯಿದೆ. ಮುಖ್ಯಮಂತ್ರಿಗಳು ಸರಿಯಾದ ಉತ್ತರ ಕೊಟ್ಟಿಲ್ಲ. ಕ್ರೀಡಾಂಗಣದಲ್ಲಿ ಸಮಾರಂಭಕ್ಕೆ ಅನುಮತಿ ಕೊಡುವಲ್ಲಿ ಆಗಿರುವ ವೈಫಲ್ಯದ ಬಗ್ಗೆಯೂ ಮಾತನಾಡಿಲ್ಲ ಎಂದು ವಾಗ್ದಾಳಿ ನಡೆಸಿದರು.

ಆರ್‌ಸಿಬಿ ಗೆಲುವು ಸಮೂಹಸನ್ನಿಯಂತಿತ್ತು: ಇದಕ್ಕೂ ಮೊದಲು ಮಾತನಾಡಿದ ಸಿದ್ದರಾಮಯ್ಯ ಅವರು, ಈ ಕಾಲ್ತುಳಿತ ದುರಂತದ ಬಗ್ಗೆ ನಿವೃತ್ತ ನ್ಯಾ.ಕುನ್ಹಾ ಅವರು ಕಳೆದ ಜುಲೈ 10 ರಂದು ವರದಿ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ಜುಲೈ 11 ರಂದು ವರದಿ ಕೊಟ್ಟಿದ್ದಾರೆ. ಈ ಘಟನೆಯ ಬಗ್ಗೆ ರಾಜ್ಯ ಹೈಕೋರ್ಟ್ ಸಹ ಸ್ವಯಂ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ. ಇಡೀ ಘಟನೆಯನ್ನು ನಾವು ಸಿಐಡಿ ತನಿಖೆಗೆ ವಹಿಸಿದ್ದೇವೆ. ದೋಷಾರೋಪ ಪಟ್ಟಿಯೂ ಸಿದ್ದವಾಗಿದೆ. ನ್ಯಾಯಾಲಯದ ಅನುಮತಿ ಸಿಕ್ಕ ನಂತರ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನು ಸಲ್ಲಿಸುತ್ತೇವೆ ಎಂದರು.

ಆರ್‌ಸಿಬಿ ಜಗತ್ತಿನಲ್ಲಿಯೇ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿದೆ. ನಾಡಿನ ಜನತೆ ಬೆಂಗಳೂರಿನ ಅಸ್ಮಿತೆಯನ್ನು ಆರ್‌ಸಿಬಿಯಲ್ಲಿ ಕಂಡಿದ್ದಾರೆ. ಹಾಗಾಗಿ ಆರ್‌ಸಿಬಿ ಗೆದ್ದಾಗ ರಾತ್ರಿಯೆಲ್ಲಾ ಸಂಭ್ರಮಾಚರಣೆ ಆಚರಿಸಿದರು. ಇದೊಂದು ರೀತಿ ಸಮೂಹ ಸನ್ನಿಯಂತಿತ್ತು. ಜನರ ಆಶೋತ್ತರಗಳಿಗೆ ಸ್ಪಂದಿಸಬೇಕು ಎಂಬ ಕಾರಣಕ್ಕೆ ನಾವು ವಿಜಯೋತ್ಸವ ಸಮಾರಂಭವನ್ನು ವಿಧಾನಸೌಧದ ಮುಂದೆ ಆಚರಿಸಿದೆವು. ಅದು ಮಳೆಯಿಂದ 10 ನಿಮಿಷದಲ್ಲಿ ಕಾರ್ಯಕ್ರಮ ಮುಗಿಯಿತು ಎಂದರು.

ರಾಜಕೀಯ ಮಾಡುವುದು ಬೇಡ: ಗುಜರಾತ್‌ನಲ್ಲಿ ಇತ್ತೀಚೆಗೆ ಏರ್ ಇಂಡಿಯಾ ವಿಮಾನ ದುರಂತ ಸಂಭವಿಸಿತು. ಈ ಹಿಂದೆ ಹಾವೇರಿಯಲ್ಲಿ ಗೊಬ್ಬರ ಕೇಳಿದ ರೈತರ ಮೇಲೆ ಗೋಲಿಬಾರ್ ಮಾಡಿಸಿದಿರಿ. ವರನಟ ಡಾ.ರಾಜ್‌ಕುಮಾರ್ ಅವರು 2006 ರಲ್ಲಿ ಮೃತಪಟ್ಟಾಗ ಗೋಲಿಬಾರ್ ಆಗಿ ನಾಲ್ವರು ಸತ್ತರು. ಆಗ ಕುಮಾರಸ್ವಾಮಿ ಮುಖ್ಯಮಂತ್ರಿ, ಮಿಸ್ಟರ್ ಯಡಿಯೂರಪ್ಪ ಉಪಮುಖ್ಯಮಂತ್ರಿ. ಇವರು ರಾಜೀನಾಮೆ ಕೊಟ್ಟರಾ, ತಪ್ಪಾಯಿತು ಎಂದು ಹೇಳಿದರಾ? ಯಾವುದೇ ವಿಚಾರವನ್ನು ರಾಜಕೀಯ ಮಾಡುವುದು ಬೇಡ. ಕ್ಷಮಾಪಣೆ ಕೇಳಿ ಎಂದು ನಮಗೆ ಪಾಠ ಮಾಡಲು ಬರಬೇಡಿ. ಕಾಲ್ತುಳಿತ ದುರಂತಕ್ಕೆ ಸಂಭವಿಸಿದಂತೆ ಮೂವರು ಐಪಿಎಸ್ ಅಧಿಕಾರಿಗಳು ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದೇವೆ. ಗುಪ್ತಚರ ಮುಖ್ಯಸ್ಥರನ್ನು ವರ್ಗಾವಣೆ ಮಾಡಿದ್ದೇವೆ. ಮೃತಪಟ್ಟವರಿಗೆ 25 ಲಕ್ಷ ರು. ಪರಿಹಾರವನ್ನು ಕೊಟ್ಟಿದ್ದೇವೆ ಎಂದು ಸಮರ್ಥಿಸಿಕೊಂಡರು.

ಇಡೀ ದಿನ ಅತ್ತಿದ್ದೇನೆ

ಕೋವಿಡ್ ಸಂದರ್ಭದಲ್ಲಿ ಚಾಮರಾಜನಗರದಲ್ಲಿ 36 ಜನ ಆಮ್ಲಜನಕ ಸಿಗದೆ ಮೃತಪಟ್ಟರು. ಆಗ ಚಾಮರಾಜನಗರ ಉಸ್ತುವಾರಿ ಸುರೇಶ್‌ಕುಮಾರ್, ಆರೋಗ್ಯ ಸಚಿವ ಸುಧಾಕರ್ ರಾಜೀನಾಮೆ ಕೊಟ್ಟರಾ ಎಂದು ಮುಖ್ಯಮಂತ್ರಿಗಳು ಟೀಕಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸುರೇಶ್‌ಕುಮಾರ್, ಈ ಘಟನೆ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ಬಿಕ್ಕಿ ಬಿಕ್ಕಿ ಅತ್ತಿದ್ದೇನೆ. ರಾಜೀನಾಮೆ ಕೊಡಲು ಸಹ ಮುಂದಾಗಿದ್ದೆ ಎಂದಾಗ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಚಿವ ಸಂಪುಟದಲ್ಲಿ ನಾನಿರಲಿಲ್ಲ. ನನಗೆ ಗೊತ್ತಿಲ್ಲ. ಆದರೆ ನೀವು ಬೊಮ್ಮಾಯಿಯವರನ್ನು, ಸುಧಾಕರ್ ಅವರನ್ನು ಅಬೆಟರ್ ಎಂದು ಏಕೆ ಕರೆಯಲಿಲ್ಲ ಎಂದು ವ್ಯಂಗ್ಯವಾಡಿದರು.

ವಿಧಾನಸೌಧದ ಎದುರು ನಡೆದ ಸರಕಾರಿ ಕಾರ್ಯಕ್ರಮಕ್ಕೆ ಬಂದಿದ್ದ ಕೆಎಸ್‌ಸಿಎ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಕ್ರೀಡಾಂಗಣಕ್ಕೆ ಹೋಗಲು ಸಾಧ್ಯವಾಗದೇ ಹತಾಶರಾಗಿದ್ದರು. ಇನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಕೇವಲ 10 ನಿಮಿಷಗಳಲ್ಲಿ ಮುಗಿಸುವಂತೆ ನೀವೇ ಬಂದು ವ್ಯವಸ್ಥೆ ಮಾಡಬೇಕು ಎಂದು ಪೊಲೀಸ್ ಆಯುಕ್ತರು ನನ್ನ ಬಳಿ ಮನವಿ ಮಾಡಿದರು. ಆದ್ದರಿಂದ ಹೋಗಿದ್ದೆ.

– ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಈ ಹಿಂದೆ ಯಾರೆಲ್ಲ ರಾಜೀನಾಮೆ ನೀಡಿದ್ದಾರೆ?

ಈ ಹಿಂದೆ ಕಳೆದ 10 ವರ್ಷಗಳಲ್ಲಿ ದೇಶದ ಯಾವ ಯಾವ ರಾಜ್ಯಗಳಲ್ಲಿ ಯಾವೆಲ್ಲಾ ಕಾಲ್ತುಳಿತ ದುರಂತಗಳಾಗಿವೆ ಎನ್ನುವ ಪ್ರಸ್ತಾಪ ಮಾಡಿದ ಸಿದ್ದರಾಮಯ್ಯ ಅವರು, ಇತ್ತೀಚಿನ ಕುಂಭಮೇಳದಲ್ಲಿ ಕಾಲ್ತುಳಿತ ಘಟನೆ ಸೇರಿದಂತೆ ಗುಜರಾತ್, ಬಿಹಾರ್, ಮಧ್ಯ ಪ್ರದೇಶ, ಉತ್ತರ ಪ್ರದೇಶ, ರಾಜಸ್ಥಾನ, ಉತ್ತರಾಖಂಡಗಳಲ್ಲಿ ಸಂಭವಿಸಿರುವ ಕಾಲ್ತುಳಿತ ಘಟನೆಗಳನ್ನು ಪ್ರಸ್ತಾಪಿಸಿ, ಈ ಘಟನೆಗಳಾದಾಗ ಬಿಜೆಪಿಯವರೇ ಮುಖ್ಯಮಂತ್ರಿಗಳಾಗಿದ್ದರು. ಅವರೆಲ್ಲಾ ರಾಜೀನಾಮೆ ಕೊಟ್ಟಿದ್ದಾರೆಯೇ? ಅವರೆಲ್ಲಾ ಕ್ಷಮೆ ಕೇಳಿದ್ದಾರೆಯೇ ಎಂದು ಏರಿದ ಧ್ವನಿಯಲ್ಲಿ ಪ್ರಶ್ನಿಸಿದರು. ಈ ಹಿಂದೆ ಕೋವಿಡ್ ಸಂದರ್ಭದಲ್ಲಿ ಗುಜರಾತ್ ಟೈಟನ್ಸ್ ಐಪಿಎಲ್‌ನಲ್ಲಿ ಗೆದ್ದಾಗ ಗುಜರಾತ್‌ನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಅವರ ಧರ್ಮಪತ್ನಿ, ಅಂದಿನ ಗುಜರಾಜ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಸೇರಿದಂತೆ ಎಲ್ಲರೂ ಸಂಭ್ರಮಾಚರಣೆಯಲ್ಲಿ ಭಾಗಿಯಾಗಿದ್ದರು. ಅಹಮದಾಬಾದ್‌ನಲ್ಲಿ ವಿಜಯೋತ್ಸವ ಮೆರವಣಿಗೆಯೂ ನಡೆಯಿತು. ಆಗ ನೂರಾರು ಜನ ಕೋವಿಡ್‌ಗೆ ಬಲಿಯಾಗಲಿಲ್ಲವೇ, ಮೋದಿಯವರು 2020ರಲ್ಲಿ ಅಮೆರಿಕದ ಟ್ರಂಪ್ ಅವರನ್ನು ಕರೆಸಿ ಕಾರ್ಯಕ್ರಮ ಮಾಡಿದರು. ಆಗ ಸಾವಿರಾರು ಜನ ಕೋವಿಡ್‌ಗೆ ಬಲಿಯಾಲಿಲ್ಲವೇ, ಆಗ ಇವರೆಲ್ಲಾ ರಾಜೀನಾಮೆ ಕೊಟ್ಟರಾ, ನೀವ್ಯಾಕೆ ಇವರನ್ನೆಲ್ಲಾ ಅಬೆಟರ್ ಎಂದು ಕರೆದಿಲ್ಲ ಎಂದು ಪ್ರಶ್ನಿಸಿದರು.

ಘಟನೆ ನಡೆದಾಗ ನಾನು ಡಿಸ್ಟರ್ಬ್ ಆಗಿದ್ದೆ

ಕಾಲ್ತುಳಿತ ಘಟನೆಯ ಬಗ್ಗೆ ಮುಖ್ಯಮಂತ್ರಿಗಳಿಗೆ ಮನುಷ್ಯತ್ವ ಇದ್ದರೆ, ಹೃದಯ ಇದ್ದಿದ್ದರೆ ತಪ್ಪಾಯಿತು ಎಂದು ಕ್ಷಮೆ ಕೇಳಬೇಕು ಎಂದೆಲ್ಲಾ ಪ್ರತಿಪಕ್ಷ ನಾಯಕರು ಹೇಳಿದ್ದಾರೆ. ಆ ಘಟನೆ ನಡೆದ ದಿನವೇ ನಾನು ವಿಷಾದ ವ್ಯಕ್ತಪಡಿಸಿದ್ದೇನೆ. ನಡೆಯಬಾರದ ಘಟನೆ ನಡೆದಿದೆ. 42 ವರ್ಷಗಳಿಗೂ ಹೆಚ್ಚು ಕಾಲದ ನನ್ನ ರಾಜಕೀಯ ಬದುಕಿನಲ್ಲಿ ಈ ರೀತಿಯ ಕಹಿ ಘಟನೆ ನಡೆದಿದೆ ಎಂದು ನಾನು ಹೇಳಿದ್ದೇನೆ. ನನಗೂ ಈ ಘಟನೆಯ ಬಗ್ಗೆ ದುಃಖ ಇದೆ ಎಂದು ವಿಷಾದ ವ್ಯಕ್ತಪಡಿಸಿದ್ದೇನೆ ಎಂದು ಸಿಎಂ ಹೇಳಿದರು.

ಸದನದಲ್ಲಿ ಮಾತನಾಡುವಾಗ ಪ್ರತಿಪಕ್ಷ ಸದಸ್ಯರು ನನ್ನನ್ನು ಟೀಕಿಸಿದ್ದಾರೆ. ಬಿಜೆಪಿಯ ಸುರೇಶ್‌ಕುಮಾರ್ ಅಬೆಟರ್ (ಕೆಟ್ಟ ಕೃತ್ಯದ ಪ್ರಚೋದಕ) ಎಂದು ಕರೆದಿದ್ದಾರೆ. ಅವರು ಷೇಕ್ ಸ್ಪಿಯರ್ ನಾಟಕದಲ್ಲಿ ಬರುವ ಮಾರ್ಕ್ ಆಂಟೋನಿ ರೀತಿ ಮಾತನಾಡಿದ್ದಾರೆ. ಮಾರ್ಕ್ ಆಂಟೋನಿ ತನ್ನ ಭಾಷಣದಲ್ಲೇ ದಂಗೆ ಏಳುವ ರೀತಿ ಮಾಡುತ್ತಿದ್ದ. ಆ ರೀತಿ ಅವರು ಮಾತನಾಡಿದ್ದಾರೆ ಎಂದರು.

ಈ ಘಟನೆಯ ಬಗ್ಗೆ ನನಗೆ ಮಾಹಿತಿ ಗೊತ್ತಾದ ನಂತರ ಇಡೀ ದಿನ ಡಿಸ್ಟರ್ಬ್ ಆಗಿದ್ದೆ. ಈ ಘಟನೆ ಗೊತ್ತಿದ್ದರೂ ಹೋಟೆಲ್‌ಗೆ ದೋಸೆ ತಿನ್ನಲು ಹೋಗಿದ್ದೆ ಎನ್ನುವುದು ತಪ್ಪು. ನಾನು ಹೋಟೆಲ್‌ಗೆ ಹೋಗಿದ್ದು ನಿಜ. ಆದರೆ ಹೋಟೆಲ್‌ನಲ್ಲಿ ನಾನು ತಿಂಡಿ ತಿಂದ ಮೇಲೆ ಈ ಘಟನೆಯ ಬಗ್ಗೆ ಕಾನೂನು ಸಲಹೆಗಾರರು ಮಾಹಿತಿ ನೀಡಿದರು. ಆಗ ನಾನು ಪೊಲೀಸ್ ಆಯುಕ್ತರಿಗೆ ದೂರವಾಣಿ ಮಾಡಿ ವಿಚಾರಿಸಿದೆ. ಆಗ ಅವರು ಒಬ್ಬರು ಸತ್ತಿದ್ದಾರೆ ಎಂದು ಹೇಳಿದರು. ಇದು ನಿಜ ಸಂಗತಿ. ನನಗೂ ಬಹಳ ದುಃಖವಾಗಿದೆ. ಚಿಕ್ಕವಯಸ್ಸಿನ ಹುಡುಗರು ಸತ್ತಿರುವುದು ನನಗೂ ನೋವು ತಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸರಕಾರಿ ಲ್ಯಾಬ್ ಬಿಟ್ಟು ಖಾಸಗಿಗೆ ಶಿಫಾರಸು

ವಿಧಾನಸಭೆ: ರಾಜ್ಯದ ಸರಕಾರಿ ಆಸ್ಪತ್ರೆಗಳು ತಮ್ಮಲ್ಲಿರುವ ಸಿಟಿ ಸ್ಕ್ಯಾನ್, ಅಲ್ಟ್ರಾ ಸೌಂಡ್, ಎಂಆರ್‌ಐ ಇತ್ಯಾದಿ ಉಪಕರಣಗಳನ್ನು ಸೂಕ್ತವಾಗಿ ಬಳಕೆ ಮಾಡದೇ ಖಾಸಗಿ ಲ್ಯಾಬ್‌ಗಳಿಗೆ ಬರೆದು ಕೊಡುತ್ತಿರುವುದನ್ನು ವಿಧಾನ ಮಂಡಲ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಗಂಭೀರವಾಗಿ ಪರಿಗಣಿಸಿದೆ.

ಈ ಸಂಬಂಧ ಸರಕಾರಕ್ಕೆ ಸಲ್ಲಿಕೆ ಮಾಡಿರುವ ಮಹತ್ವದ ವರದಿಯನ್ನು ಶುಕ್ರವಾರ ಮಂಡಿಸಲಾಯಿತು. ಬಡರೋಗಿಗಳ ದೃಷ್ಟಿಯಿಂದ ಕೋಟ್ಯಂತರ ರು. ಮೌಲ್ಯದ ಈ ಉಪಕರಣಗಳನ್ನು ಸರಕಾರ ನೀಡಿದೆ. ಹಲವಾರು ಪ್ರಮುಖ ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳಲ್ಲಿ ಇವುಗಳ ಲಭ್ಯತೆ ಇದೆ. ಆದರೂ ಬಳಕೆ ಮಾಡದೇ ಜನಕ್ಕೆ ತೊಂದರೆ ಮಾಡುತ್ತಿರುವುದು ಸರಿಯಲ್ಲ ಎಂದು ವರದಿ ಅಸಮಾಧಾನ ವ್ಯಕ್ತಪಡಿಸಿದೆ.

ಬಳ್ಳಾರಿಯಲ್ಲಿ ಬಾಣಂತಿಯರ ಸಾವಿಗೆ ಕಾರಣರಾದ ಔಷಧ ಪೂರೈಕೆದಾರರ ವಿರುದ್ಧ ಕ್ರಮ ವಿಳಂಬವಾಗುತ್ತಿರುವುದಕ್ಕೆ ಸಮಿತಿ ಆಕ್ಷೇಪ ವ್ಯಕ್ತಪಡಿಸಿದೆ. ಇನ್ನೂ 13 ಪ್ರಕರಣ ಔಷಧದ ಮಾದರಿಯ ತನಿಖಾ ವರದಿ ಬಂದ ನಂತರ ಇವುಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂಬ ಅಧಿಕಾರಿಗಳ ವಿವರಣೆಗೂ ತರಾಟೆಗೆ ತೆಗೆದುಕೊಂಡಿದೆ. ಔಷಧ ಗುಣಮಟ್ಟ ವರದಿ ಬರೋದು ಯಾವಾಗ? ಕ್ರಮ ವಿಳಂಬವಾದಷ್ಟು ಸಮಸ್ಯೆಯಲ್ಲವೇ? ಈ ಮಧ್ಯೆ ಕಪ್ಪು ಪಟ್ಟಿಗೆ ಸೇರಿಸಿದ ಔಷಧ ಪೂರೈಕೆದಾರರಿಗೆ ಮತ್ತೆ ಟೆಂಡರ್ ಕೊಡಬಾರದಿತ್ತು ಎಂದು ಸಮಿತಿ ಹೇಳಿದೆ. ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ವಸತಿ ನಿಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ ಹದಿನೈದು ದಿನಗಳಿಗೊಮ್ಮೆ ಕಡ್ಡಾಯ ಆರೋಗ್ಯ ತಪಾಸಣೆಯನ್ನು ಮಾಡಿಸುವಂತೆ ಸರಕಾರಕ್ಕೆ ಸಲಹೆ ಮಾಡಿದೆ.

ಮಕ್ಕಳಿಗೆ ಕಣ್ಣಿನ ಚಿಕಿತ್ಸೆಗೆ ವ್ಯವಸ್ಥೆ ಮಾಡಿ

ವಸತಿ ಶಾಲೆಗಳಲ್ಲಿನ ಮಕ್ಕಳಿಗೆ 'ಮೊಬೈಲ್ ನೋಡುವ ಕಾಯಿಲೆ' ಅಂಟಿಕೊಂಡಿದೆ. ಆದ್ದರಿಂದ ಈ ಮಕ್ಕಳ ಕಣ್ಣಿನ ಚಿಕಿತ್ಸೆಗೆ ಸರಕಾರ ವ್ಯವಸ್ಥೆ ಕಲ್ಪಿಸಬೇಕು ಎಂಬ ಸಲಹೆಯನ್ನು ಸಮಿತಿ ಮಾಡಿದೆ. ಇದಲ್ಲದೇ ಈ ಮಕ್ಕಳಿಗೆ ವರ್ಷಕ್ಕೊಮ್ಮೆ ಚರ್ಮರೋಗ ತಜ್ಞರಿಂದ ತಪಾಸಣೆ ಮಾಡಿಸಿ, ಔಷಧಗಳನ್ನು ಕೊಡುವ ವ್ಯವಸ್ಥೆ ಸರಕಾರದಿಂದಲೇ ಆಗಬೇಕು ಎಂದು ಸೂಚಿಸಿದೆ. ವಸತಿ ಶಾಲೆಗಳಲ್ಲಿ ಓದುತ್ತಿರುವ ಹಲವಾರು ಮಕ್ಕಳಿಗೆ ಕಿಡ್ನಿ ಸಮಸ್ಯೆ ಇರುವುದು ಕಂಡು ಬಂದಿದೆ. ಆದ್ದರಿಂದ ವರ್ಷಕ್ಕೊಮ್ಮೆ ಈ ಮಕ್ಕಳಿಗೆ ಅಲ್ಟ್ರಾ ಸ್ಕ್ಯಾನಿಂಗ್ ಮಾಡಿಸಿ ಚಿಕಿತ್ಸೆ ಕೊಡಿಸಬೇಕು ಎಂದು ಸರಕಾರಕ್ಕೆ ಶಿಫಾರಸು ಮಾಡಿದೆ.

ಸವದತ್ತಿ ದೇಗುಲ ಅಭಿವೃದ್ಧಿಗೆ ₹230 ಕೋಟಿ

ಮುಂದಿನ ಡಿಸೆಂಬರ್ 2026ರೊಳಗೆ ಈ ಯೋಜನೆ ಪೂರ್ಣ: ಸಚಿವ ಎಚ್.ಕೆ.ಪಾಟೀಲ್

ವಿಧಾನಪರಿಷತ್: ಪ್ರಸಿದ್ಧ ಬೆಳಗಾವಿ ಜಿಲ್ಲೆಯ ಸವದತ್ತಿ ಯಲ್ಲಮ ಕ್ಷೇತ್ರದ ಅಭಿವೃದ್ಧಿಗೆ 230 ಕೋಟಿ ರು. ವೆಚ್ಚದಲ್ಲಿ ಯೋಜನೆ ರೂಪಿಸಲಾಗಿದ್ದು, 2026 ರ ಡಿಸೆಂಬರ್‌ನಲ್ಲಿ ಪೂರ್ಣಗೊಳ್ಳಲಿದೆ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.

ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ ವಿಧೇಯಕದ ಮೇಲೆ ಮಾತನಾಡಿದ ಅವರು, ಸವದತ್ತಿ ಯಲ್ಲಮ ರಾಜ್ಯದಲ್ಲಿ ಅತ್ಯಂತ ಪ್ರಮುಖ ಪ್ರವಾಸೋದ್ಯಮ ತಾಣವಾಗಿದೆ. ದೇಶ-ವಿದೇಶಗಳಿಂದಲೂ ಇಲ್ಲಿಗೆ ಭಕ್ತರು ಆಗಮಿಸುತ್ತಾರೆ. ಬರುವ ಭಕ್ತಾದಿಗಳಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸಲು 230 ಕೋಟಿ ರು. ಯೋಜನೆ ರೂಪಿಸಿದ್ದೇವೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ.

ಶೀಘ್ರದಲ್ಲೇ ಟೆಂಡರ್ ಕರೆಯುವುದಾಗಿ ತಿಳಿಸಿದರು. ಸವದತ್ತಿ ಯಲ್ಲಮ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಒದಗಿಸುವಂತೆ ಕೇಂದ್ರ, ಸರಕಾರಕ್ಕೂ ಪ್ರಸ್ತಾವನೆ ಸಲ್ಲಿಸಿದ್ದೇವೆ. ಮುಂದಿನ ಡಿಸೆಂಬರ್ 2026ರೊಳಗೆ ಈ ಯೋಜನೆ ಪೂರ್ಣಗೊಳ್ಳಲಿದ್ದು, ಭಕ್ತರಿಗೆ ಅನುಕೂಲವಾಗಲಿದೆ. ಇದೇ ರೀತಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಅಂಜನಾದ್ರಿ, ಪ್ರವಾಸೋದ್ಯಮ ತಾಣವನ್ನು ಅಭಿವೃದ್ಧಿಪಡಿಸಲಾಗುವುದು. ಒಟ್ಟು 11 ಕಡೆ ರೋಪ್ ವೇ (ಕೇಬಲ್ ಕಾರ್) ಅಳವಡಿಕೆ ಮಾಡಲಾಗಿದೆ. ಇದಕ್ಕಾಗಿ ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದರು.

ಪ್ರವಾಸೋದ್ಯಮಕ್ಕೆ ಶಕ್ತಿ ಬಲ: ಶಕ್ತಿ ಯೋಜನೆ ಬಂದ ಮೇಲೆ ಪ್ರವಾಸೋದ್ಯಮ ತಾಣಗಳಿಗೆ ಭೇಟಿ ಕೊಡುವವರ ಸಂಖ್ಯೆ ದ್ವಿಗುಣವಾಗಿದೆ. ಅದರಲ್ಲೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ನಾವು ಕೇವಲ ಲಾಭ ನಷ್ಟ ಗಮನದಲ್ಲಿಟ್ಟುಕೊಂಡು ಪ್ರವಾಸೋದ್ಯಮ ತಾಣ ಅಭಿವೃದ್ಧಿಪಡಿಸುತ್ತಿಲ್ಲ. ಬದಲಿಗೆ ಮೊದಲು ನಮ್ಮ ಕನ್ನಡಿಗರು ಮತ್ತು ಮಕ್ಕಳು ಇಲ್ಲಿನ ಸ್ಥಳಗಳನ್ನು ನೋಡಬೇಕು. ಅನೇಕ ಜನರು ನಮಲ್ಲಿರುವ ಸ್ಥಳಗಳನ್ನು ನೋಡಿಲ್ಲ. ಮೊದಲು ಇಲ್ಲಿನ ಜನರು ನೋಡಿದರೆ ಅಭಿವೃದ್ಧಿ ತನ್ನಿಂದ ತಾನೇ ಆಗುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಪ್ರವಾಸೋದ್ಯಮ ವಿಧೇಯಕದಲ್ಲೇನಿದೆ?

ನಂತರ ಜಂಟಿ ಸಹಭಾಗಿತ್ವ ಯೋಜನೆಯಡಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಹಾಗೂ ಸಂಪನೂಲ ಹೊಂದಿಸುವ ಉದ್ದೇಶದ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ವಿಧೇಯಕ-2015ಕ್ಕೆ ವಿಧಾನ ಪರಿಷತ್‌ನಲ್ಲಿ ಅಂಗೀಕಾರ ದೊರೆಯಿತು. ಪ್ರವಾಸೋದ್ಯಮ ಪ್ರೋತ್ಸಾಹಿಸುವುದರ ಜತೆಗೆ ಪ್ರವಾಸಿ ತಾಣಗಳ ಸ್ವಚ್ಛತೆ, ಸುರಕ್ಷತೆಗೆ ಆದ್ಯತೆ ಕೊಡುವುದೂ ಈ ವಿಧೇಯಕದಲ್ಲಿದೆ. ಪ್ರವಾಸಿ ಸ್ಥಳಗಳಲ್ಲಿ ಬಹುಭಾಷಾ ಪರಿಣತಿ ಹೊಂದಿರುವ ಮಾರ್ಗದರ್ಶಿಗಳನ್ನು ನಿಯುಕ್ತಿಗೊಳಿಸಲಾಗು ವುದು. ಅಂಥವರಿಗೆ ಸೂಕ್ತ ತರಬೇತಿ ನೀಡಲಾಗು ವುದು. ಪ್ರವಾಸಿ ಸ್ಥಳಗಳ ತುರ್ತು ಅಭಿವೃದ್ಧಿ ಕಾಮಗಾರಿಗಳಿಗೆ ಆಯಾ ಜಿಲ್ಲಾಧಿಕಾರಿಗಳ ಮೂಲ ಕವೂ ಹಣ ಬಿಡುಗಡೆ ಮಾಡಿಸಲಾಗುತ್ತಿದೆ. ಈ ಹಿಂದೆ ವಿಧಾನಸಭೆಯಲ್ಲಿ ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ವಿಧೇಯಕ-2015 ಅನ್ನು ಅಂಗೀಕರಿಸಲಾಗಿತ್ತು. ಈ ಶಾಸನವು ಪ್ರವಾಸೋದ್ಯಮ ಉತ್ತೇಜಿಸುವ, ಸಾರ್ವಜನಿಕ-ಖಾಸಗಿ ಸಹಭಾಗಿತ್ವವನ್ನು ಬೆಂಬಲಿ ಸುವ ಮತ್ತು ಪ್ರವಾಸೋದ್ಯಮ ವ್ಯಾಪಾರ ನಿಯಂತ್ರಿಸುವ ಉದ್ದೇಶ ಹೊಂದಿದೆ.

ಕುರಿಗಾಹಿಗಳ ರಕ್ಷಣೆಗೆ ಪರಿಷತ್‌ನಲ್ಲಿ ಅಂಗೀಕಾರ

ಕುರಿಗಾಹಿ ದಾರಿಗೆ ಅಡ್ಡಿ ಉಂಟು ಮಾಡಿದರೆ ಎರಡು ವರ್ಷಗಳ ಸೆರೆವಾಸ, ಒಂದು ಲಕ್ಷ ರುಪಾಯಿ ದಂಡ

ವಿಧಾನಪರಿಷತ್: ರಾಜ್ಯದಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ರಕ್ಷಣೆ, ಭದ್ರತೆ ಹಾಗೂ ನಿಂದನೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ 2025ನೇ ಸಾಲಿನ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧದ ರಕ್ಷಣೆ) ವಿಧೇಯಕಕ್ಕೆ ವಿಧಾನಪರಿಷತ್‌ನಲ್ಲಿ ಅಂಗೀಕಾರ ದೊರೆಯಿತು.

ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ವಿಧೇಯಕ ಮಂಡಿಸಿ ವಿಧೇಯಕವನ್ನು ಅಂಗೀಕಾರ ಮಾಡಬೇಕೆಂದು ಸದಸ್ಯರಲ್ಲಿ ಕೋರಿದರು. ನಂತರ ವಿಧೇಯಕದ ಮೇಲೆ ಸದಸ್ಯರಾದ ಡಿ.ಟಿ.ಶ್ರೀನಿವಾಸ್, ಟಿ. ಸಾಬಣ್ಣ, ಉಮಾಶ್ರೀ, ಎಚ್.ವಿಶ್ವನಾಥ್, ನಾಗರಾಜ್ ಯಾದವ್, ಮಂಜೇಗೌಡ, ಪಿ.ಎಚ್.ಪೂಜಾರ್, ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮತ್ತಿತರರು ಮಾತನಾಡಿದರು.

ಬಳಿಕ ವಿಧೇಯಕಕ್ಕೆ ಸುದೀರ್ಘವಾಗಿ ಮಾತನಾಡಿದ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರು, ಪ್ರತಿಯೊಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿ ಫಲಾನುಭವಿಯಾಗಿ ನೋಂದಾಯಿಸಿ ಕೊಳ್ಳಬೇಕು. ಕೈಗೆಟಕುವ ಬೆಲೆಯಲ್ಲಿ ವಸತಿಗಾಗಿ ಭೂಮಿ ಮಂಜೂರಾತಿ, ಜೀವವಿಮೆ, ಆರೋಗ್ಯ ವಿಮೆ, ಪಶುವಿಮೆ, ಆರೋಗ್ಯ ಮತ್ತು ಶೈಕ್ಷಣಿಕ ಸೌಲಭ್ಯಗಳು, ಕೌಶಲ್ಯ ಉನ್ನತೀಕರಣ, ಆಹಾರ ಭದ್ರತೆ, ಕಲ್ಯಾಣ ಕಾರ್ಯಕ್ರಮಗಳಾಗಿವೆ. ಅಲ್ಲದೆ ಜಾನುವಾರುಗಳಿಗೆ ಲಸಿಕೆ, ಚಿಕಿತ್ಸೆ, ಕುರಿಗಾಹಿಗಳ ಉತ್ಪನ್ನಗಳಿಗೆ ಮಾರಾಟ ಬೆಂಬಲ, ನಷ್ಟದ ಸಂದರ್ಭದಲ್ಲಿ ನಷ್ಟ ಪರಿಹಾರ ಮೊದಲಾದ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಒದಗಿಸಲಾಗುತ್ತದೆ ಎಂದು ಹೇಳಿದರು.

ಒಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿ ಯಾವುದೇ ಕಾನೂನಾತ್ಮಕ ಆಧಾರವಿಲ್ಲದೆ, ಸಾರ್ವಜನಿಕ ಸ್ವತ್ತು, ಸರಕಾರಿ ಭೂಮಿ ಅಥವಾ ಅರಣ್ಯಭೂಮಿಗೆ ಪ್ರವೇಶಿಸುವುದನ್ನು ನಿರಾಕರಿಸಿದರೆ ಅಂಥ ವ್ಯಕ್ತಿಯು ಒಂದು ವರ್ಷದ ಸೆರೆವಾಸ, 50 ಸಾವಿರ ದಂಡಕ್ಕೆ ಅವಕಾಶ ಇದೆ ಎಂದರು. ಮೀಸಲು ಅರಣ್ಯ ಇದರಿಂದ ಹೊರತಪಡಿಸಲಾಗಿದೆ. ಕುರಿಗಾಹಿ ದಾರಿಗೆ ಅಡ್ಡಿ ಉಂಟು ಮಾಡುವ ವ್ಯಕ್ತಿಗೆ 2 ವರ್ಷಗಳ ಸೆರೆವಾಸ, 1 ಲಕ್ಷ ರು. ದಂಡವಿದೆ. ಉದ್ದೇಶಪೂರ್ವಕವಾಗಿ ಕುರಿಗಾಹಿಯನ್ನು ಅವಮಾನಿಸಿದರೆ, ನಿಂದಿಸಿದರೆ ಆರು ತಿಂಗಳ ಅವಧಿಯ, 5 ವರ್ಷದವರೆಗೆ ವಿಸ್ತರಿಸಬಹುದಾದ ಸೆರೆವಾಸ ಮತ್ತು 1 ಲಕ್ಷ ರು. ದಂಡ ವಿಧಿಸಲಾಗುತ್ತದೆ ಎಂದು ಎಚ್ಚರಿಕೆ ಕೊಟ್ಟರು.

ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕಕ್ಕೆ ಅನುಮೋದನೆ

ವಿಧಾನಸಭೆಯಲ್ಲಿ ಅಂಗೀಕಾರಗೊಂಡ ರೂಪದಲ್ಲಿ ಸಚಿವ ಕೃಷ್ಣ ಬೈರೇಗೌಡ ಅವರು ಮಂಡಿಸಿದ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ-2025 ಕ್ಕೆ ಪರಿಷತ್ ನಲ್ಲಿ ಅನುಮೋದನೆ ಸಿಕ್ಕಿದೆ. ಕಳೆದ ವಿಧಾನ ಮಂಡಲ ಅಧಿವೇಶನದ ಸಂದರ್ಭದಲ್ಲೇ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸ್ಥಳೀಯ ವಿಧಾನ ಪರಿಷತ್ ಸದಸ್ಯರಿಗೂ ಸ್ಥಾನ ನೀಡಬೇಕು ಎಂದು ಸ್ವತಃ ಪರಿಷತ್ ಸಭಾಪತಿಗಳಾದ ಬಸವರಾಜ್ ಹೊರಟ್ಟಿ ಅವರು ಒತ್ತಾಯಿಸಿದ್ದರು. ಆ ಸಂದರ್ಭದಲ್ಲಿ ಸಚಿವ ಕೃಷ್ಣ ಬೈರೇಗೌಡ ಅವರೂ ಸಭಾಪತಿಗಳ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಸಭಾಪತಿಗಳಿಗೆ ಕೊಟ್ಟ ಮಾತಿನಂತೆ ಸಚಿವ ಕೃಷ್ಣ ಬೈರೇಗೌಡ ಅವರು ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸದಸ್ಯ ತಂಡದಲ್ಲಿ ಪರಿಷತ್ ಸದಸ್ಯರಿಗೂ ಸಹ ಸ್ಥಾನ ಕಲ್ಪಿಸುವ ತಿದ್ದುಪಡಿ ತಂದಿದ್ದಾರೆ. ಶುಕ್ರವಾರ ಆ ತಿದ್ದುಪಡಿ ಮಂಡಿಸಲ್ಪಟ್ಟು ಅಂಗೀಕಾರಗೊಂಡಿದೆ.

ವಿಶ್ವವಾಣಿ

ಸಂಪಾದಕೀಯ

ಚಕ್ರವ್ಯೂಹದಲ್ಲಿ ಅಭಿಮನ್ಯು!

ತಮಿಳುನಾಡಿನ ರಾಜಕಾರಣವೇ ಒಂಥರಾ ಚಿತ್ರವಿದ್ದು. 'ಪರ್ಯಾಯ ಸ್ವೀಕಾರ'ದ ರೀತಿಯಲ್ಲಿ ಅಲ್ಲಿ ಒಂದು ಅವಧಿಗೆ 'ಡಿಎಂಕೆ' ಪಕ್ಷವು ಅಧಿಕಾರದ ಗದ್ದುಗೆ ಏರಿದರೆ, ಮತ್ತೊಂದು ಅವಧಿಗೆ 'ಎಐಎಡಿಎಂಕೆ' ಪಕ್ಷವು ದರ್ಬಾರು ಮಾಡುವುದು ಬಹುತೇಕ ಸಾಮಾನ್ಯವಾಗಿಬಿಟ್ಟಿದೆ. 'ದ್ರಾವಿಡ ಅಸ್ಮಿತೆ'ಯನ್ನು ಎತ್ತಿಹಿಡಿದೇ ಅಲ್ಲಿನ ಜನರನ್ನು ಪ್ರೇರೇಪಿಸಿ-ಪ್ರಚೋದಿಸಿ ಅಧಿಕಾರಕ್ಕೆ ಬರುವ ಈ ಎರಡೂ ಪಕ್ಷಗಳು, ಮತ್ತೊಂದು ಪಕ್ಷವು ರಾಜ್ಯದಲ್ಲಿ ಸಿಂಹಾಸನ ಏರುವುದಕ್ಕೆ ಬಿಟ್ಟಿರುವ ನಿದರ್ಶನಗಳು ಕಮ್ಮಿಯೇ. ಹೀಗಾಗಿ ಕಾಂಗ್ರೆಸ್ ಮತ್ತು ಬಿಜೆಪಿಯಂಥ ರಾಷ್ಟ್ರೀಯ ಪಕ್ಷಗಳು ಅಲ್ಲಿ 'ಸೈಡ್‌ವಿಂಗ್'ನಲ್ಲಿ ನಿಂತುಕೊಂಡೇ 'ರಾಜಕೀಯ ನಾಟಕ'ವನ್ನು ನೋಡಬೇಕಾದ ಪರಿಸ್ಥಿತಿಯ ಫಲಾನುಭವಿಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಬಿಜೆಪಿಯು ಒಂದಿಷ್ಟು ಛಾಪನ್ನು ಮೂಡಿಸಿದ್ದರೂ, ಗದ್ದುಗೆಯನ್ನು ಏರುವ ವಿಷಯದಲ್ಲಿ ಅದಿನ್ನೂ ಸಾಕಷ್ಟು ದೂರ ಚಲಿಸಬೇಕಿರುವುದು ವಾಸ್ತವ. ಈ ಮಧ್ಯೆ ಕಮಲಹಾಸನ್ ಸೇರಿದಂತೆ ಸಾಕಷ್ಟು ಚಿತ್ರನಟರು ತಮ್ಮದೇ ಆದ ರಾಜಕೀಯ ಪಕ್ಷವನ್ನು ಕಟ್ಟಿ ದರ್ಬಾರು ನಡೆಸಲು ಹವಣಿಸಿದ್ದಿದೆ; ಆದರೆ ಅದಿನ್ನೂ ಕೈಗೂಡಿಲ್ಲ. ಈ ಸಾಲಿಗೆ ಹೊಸ ಸೇರ್ಪಡೆ 'ದಳಪತಿ' ಎಂದೇ ಅಭಿಮಾನಿಗಳಿಂದ ಕರೆಸಿಕೊಳ್ಳುವ ನಟ-ಕಂ-ರಾಜಕಾರಣಿ ವಿಜಯ್. ಅವರು ಹುಟ್ಟುಹಾಕಿರುವ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷವು ರಾಜಕಾರಣದ ಪಡಸಾಲೆಯಲ್ಲಿನ್ನೂ ಅಂಬೆಗಾಲು ಇಡುತ್ತಿದೆ. ಆದರೆ, ತಮ್ಮ ಮಹತ್ವಾಕಾಂಕ್ಷೆಗೆ ಈ ಅಂಶದಿಂದ ತೊಂದರೆಯೇನೂ ಆಗದು ಎಂಬುದು ವಿಜಯ್ ಅವರಲ್ಲಿ ಕೆನೆಗಟ್ಟಿರುವ ಆತ್ಮವಿಶ್ವಾಸ. ಈ ಕಾರಣದಿಂದಾಗಿಯೇ ಅವರು, "2026ರ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ಮತ್ತು ಟಿವಿಕೆ ಪಕ್ಷಗಳ ನಡುವೆ ನೇರ ಹಣಾಹಣಿ ನಡೆಯಲಿದೆ" ಎಂದು ಹೇಳಿ ನಿಂತಿದ್ದಾರೆ. ಇದು ಕೊಂಚ 'ಅವಧಿಪೂರ್ವ ಮತ್ತು ಅತಿರೇಕದ ಆತ್ಮವಿಶ್ವಾಸ ವಾಯಿತು' ಎಂದು ಕೆಲವರಿಗೆ ಅನಿಸಿದರೂ, ರಾಜಕಾರಣದಲ್ಲಿ ಯಾವುದನ್ನೂ 'ಇದಮಿತ್ಥಂ' ಎನ್ನಲಾಗದು ಎಂಬ ಗ್ರಹಿಕೆಯ ಹಿನ್ನೆಲೆಯಲ್ಲಿ ವಿಜಯ್ ಅವರ ಆತ್ಮವಿಶ್ವಾಸವನ್ನು ಪರಿಗಣಿಸಬೇಕಿದೆ. 'ಆಮ್ ಆದ್ಮಿ' ಅರವಿಂದ ಕೇಜ್ರಿವಾಲರು ದೆಹಲಿಯಲ್ಲಿ ಗದ್ದುಗೆಯೇರಿದ್ದು ಬಹುತೇಕ ಹೀಗೆಯೇ ಅಲ್ಲವೇ? ಒಟ್ಟಿನಲ್ಲಿ, ಕಾದುನೋಡೋಣ...

ಸೊಂಪಾದಕೀಯ

ಗೇಮ್ ಪ್ಲ್ಯಾನ್, ಗೇಮ್ ಬ್ಯಾನ್

ರಾಜ್ಯದಲ್ಲಿ ಲಾಟರಿ ನಿಷೇಧ ಆಗಿ ಬಹಳ ವರ್ಷಗಳೇ ಆಗಿವೆ. ಆದರೆ ಇತ್ತೀಚೆಗೆ ಎದ್ದಿದ್ದ ಕೂಗು ಅಂದ್ರೆ ಅದು ಆನ್‌ಲೈನ್ ಗೇಮ್‌ಗಳನ್ನು ನಿಷೇಧ ಮಾಡಬೇಕು ಅನ್ನೋದು. ಇವು ಒಂಥರಾ ಲಾಟರಿ ಎಂಬಂಥ ಆಟಗಳೇ. ಒಂದೋ ಲಾಟರಿ ನಮಗೆ ಹೊಡೆಯಬೇಕು, ಇಲ್ಲಾ ನಾವು ಲಾಟರಿ ಹೊಡೆಯಬೇಕು ಅನ್ನೋವರೆಗೂ ಈ ಆಟಗಳು ಜನರನ್ನು ವ್ಯಸನಕ್ಕೆ ದೂಡುತ್ತವೆ. ಅದರಲ್ಲೂ ಸೆಲೆಬ್ರಿಟಿಗಳು ಈ ಆಟಗಳನ್ನು ಪ್ರಮೋಟ್ ಮಾಡೋಕೆ ಶುರುಮಾಡಿದಾಗಿನಿಂದ ಇವುಗಳ ಹಾವಳಿ ಹೆಚ್ಚಾಗಿದೆ. ಅನೇಕ ಸಿನಿಮಾ ತಾರೆಯರು, ಕ್ರಿಕೆಟ್ ಆಟಗಾರರು ಈ ವಿಷಯದಲ್ಲಿ ಪ್ರಚಾರ ಮಾಡ್ತಾ ಇದ್ದಿದ್ದು ಕೋರ್ಟಿನ ನೋಟೀಸಿಗೆ ಬಂದಿದ್ದು ಅಂಥ ಸೆಲೆಬ್ರಿಟಿಗಳಿಗೆ ನೋಟಿಸ್ ನೀಡಿದ್ದೂ ಆಗಿತ್ತು. ಆದರೆ ಈಗ ಅಧಿಕೃತವಾಗಿ ಈ ಆನ್‌ಲೈನ್ ಗೇಮ್‌ಗಳನ್ನು ನಿಷೇಧಿಸುವ ಮಾತು ಬಂದಿದೆ. ಗೇಮ್ ಪ್ಲ್ಯಾನ್‌ಗೆ ಹೆಸರುವಾಸಿಯಾಗಿದ್ದ ಈ ಆಟಗಳ 'ಗೇಮ್‌ಬ್ಯಾನ್' ಆಟ ಈಗ ಶುರು ಆಗಿದೆ. 'ಖೇಲ್ ಖತಂ, ನಾಟಕ್ ಬಂದ್' ಎನ್ನುವಂತೆ ಸರಕಾರ ಈಗ ಈ ಗೇಮ್‌ಗೆ ಫುಲ್‌ಸ್ಟಾಪ್ ಇಡಲು ತಯಾರಾಗಿದೆ. ಇವುಗಳಲ್ಲಿ ಕಾರ್ಡ್ ಆಟಗಳೇನೋ ಪಾರದರ್ಶಕ, ಜಾಸ್ತಿ ಆದರೂ ಕ್ರಿಕೆಟ್‌ನಂಥ ಫ್ಯಾಂಟಸಿ ಗೇಮ್‌ಗಳ ಆಟಗಾರರು ಈ ಬೆಟ್ಟಿಂಗ್ ಜಾಲಕ್ಕೆ ಸಿಲುಕಿದ್ದಾರೆ. ಇತ್ತೀಚೆಗೆ ಕಂಡಕಂಡವರೆಲ್ಲಾ ಕ್ರಿಕೆಟ್ ನೋಡ್ತಾ ಇದ್ದಿದ್ದು ನೋಡಿ ಪರವಾಗಿಲ್ಲ, ಕ್ರಿಕೆಟ್‌ನ ಕ್ರೇಜ್ ಜಾಸ್ತಿ ಆಗಿದೆ ಅಂತ ಅಂದುಕೊಂಡವರೇ ಹೆಚ್ಚು. ಆದರೆ ಅವರು ಕ್ರಿಕೆಟ್ ನೋಡ್ತಾ ಇದ್ದಿದ್ದು, ಕ್ರಿಕೆಟ್ ಆಟದ ಮೇಲಿನ ಪ್ರೀತಿಯಿಂದಾಗಿ ಅಲ್ಲ, ಬದಲಾಗಿ ಡ್ರೀಮ್ 'ಇಲೆವನ್', ಮೈ ಇಲೆವನ್‌ನಂಥ ಬೆಟ್ಟಿಂಗ್ ಆಪ್‌ಗಳಲ್ಲಿ ದುಡ್ಡು ಹಾಕಿ ದುಡ್ಡು ಮಾಡುವ ದುರಾಸೆಯಿಂದ ಅನ್ನೋದು ನಂತರ ಗೊತ್ತಾದ ಬೆಳವಣಿಗೆ. ಅದೇನೇ ಇರಲಿ ಈ ಆಟಗಳಿಗೆ ಬಲಿಯಾಗಿ ಅನೇಕರು ಮನೆ-ಮಠ ಮಾರಿಕೊಂಡಿದ್ದನ್ನು ನಾವು ನೋಡಿದ್ದೇವೆ. ಕೊನೆಗೂ 'ಬೆಟ್' ಕಟ್ಟಿದ ಈ ಬೆಟ್ಟಿಂಗ್ ಆಪ್‌ಗಳು ಬ್ಯಾನ್ ಆಗ್ತವೆ' ಅಂತ ಕೆಲವರು ಆತ್ಮವಿಶ್ವಾಸದಿಂದ ಹೇಳುತ್ತಿದ್ದ ಮಾತು ಇಂದು ನಿಜವಾಗುವ ಹಂತದಲ್ಲಿರೋದು ಸಂತಸದ ವಿಷಯ.

ಸಂಪಾದಕರ ಸದ್ಯಶೋಧನೆ

ಸುರಕ್ಷತೆಯೇ ಬೀಜಮಂತ್ರ

ಆಗಸ್ಟ್ 18, 2025. ಏರ್ ಫ್ರಾನ್ಸ್‌ನ ಬೋಯಿಂಗ್ 777-300 ER ವಿಮಾನ, ರಾತ್ರಿ 11:30ಕ್ಕೆ ನ್ಯೂಯಾರ್ಕ್‌ನ ಜಾನ್ ಎಫ್. ಕೆನಡಿ (ಜೆಎಫ್‌ಕೆ) ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟು ಪ್ಯಾರಿಸ್ ಮಾರ್ಗದಲ್ಲಿ ಕ್ರಮಿಸುತ್ತಿತ್ತು. ಇದು ಸಾಮಾನ್ಯವಾಗಿ ದೀರ್ಘ ಪ್ರಯಾಣದ ವಿಮಾನಗಳಿಗೆ ಬಳಸಲಾಗುವ ಎರಡು ಎಂಜಿನ್‌ಗಳನ್ನು ಹೊಂದಿರುವ ಅತ್ಯಾಧುನಿಕ ವಿಮಾನವಾಗಿತ್ತು. ಆದರೆ, ಟೇಕಾಫ್ ಆದ ಕೇವಲ 30 ನಿಮಿಷಗಳಲ್ಲಿ, ವಿಮಾನದ ಒಂದು ಎಂಜಿನ್ ವಿಫಲವಾಯಿತು. ಇದರಿಂದ ಸಿಬ್ಬಂದಿಗೆ ತುರ್ತು ಕ್ರಮ ಕೈಗೊಳ್ಳುವ ಅನಿವಾರ್ಯತೆ ಎದುರಾಯಿತು. ಎಂಜಿನ್ ವಿಫಲವಾದ ತಕ್ಷಣ, ವಿಮಾನದ ಪೈಲಟ್‌ಗಳು ಸ್ಥಿತಿಯನ್ನು ಮೌಲ್ಯಮಾಪನ ಮಾಡಿದರು. ಬೋಯಿಂಗ್ 777-300 ER ವಿಮಾನವು ಎರಡು ಎಂಜಿನ್‌ಗಳನ್ನು ಹೊಂದಿದ್ದು, ಒಂದು ಎಂಜಿನ್ ವಿಫಲವಾದರೂ ಸುರಕ್ಷಿತವಾಗಿ ಹಾರಾಟ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಆದರೂ ಅಂತಾರಾಷ್ಟ್ರೀಯ ವಿಮಾನಯಾನ ನಿಯಮಗಳಾದ ETOPS (Extended-range Twin-engine Operational Performance Standards) ಪ್ರಕಾರ, ಒಂದೇ ಎಂಜಿನ್‌ನೊಂದಿಗೆ ಅಟ್ಲಾಂಟಿಕ್ ಸಾಗರದಂಥ ದೀರ್ಘ ಮಾರ್ಗವನ್ನು ದಾಟುವುದು ಸುರಕ್ಷಿತವಲ್ಲ. ಈ ಕಾರಣದಿಂದ, ಪೈಲಟ್‌ಗಳು ತಕ್ಷಣವೇ ಜೆಎಫ್‌ಕೆಗೆ ಮರಳುವ ನಿರ್ಧಾರ ಕೈಗೊಂಡರು. ವಿಮಾನವು ಕೆಲಕಾಲ ವೃತ್ತಾಕಾರವಾಗಿ ಹಾರಾಡಿತು. ಇದರಿಂದ ಇಂಧನದ ಮಟ್ಟವನ್ನು ಸಮತೋಲನಗೊಳಿಸಲು ಮತ್ತು ಲ್ಯಾಂಡಿಂಗ್‌ಗೆ ಸಿದ್ಧತೆ ಮಾಡಿಕೊಳ್ಳಲು ಸಮಯ ಸಿಕ್ಕಿತು. ಈ ಸಂದರ್ಭದಲ್ಲಿ, ಕ್ಯಾಬಿನ್ ಸಿಬ್ಬಂದಿಯು ಪ್ರಯಾಣಿಕರಿಗೆ ಶಾಂತವಾಗಿರಲು ಸೂಚಿಸಿತು. ಕ್ಯಾಬಿನ್‌ನಲ್ಲಿ ದೀಪಗಳನ್ನು ಆನ್ ಮಾಡಲಾಯಿತು. ಕಿಟಕಿಗಳ ಶೇಡ್‌ಗಳನ್ನು ತೆರೆಯಲು ಹೇಳಲಾಯಿತು ಮತ್ತು ಇಂಟರ್‌ಕಾಂ ಮೂಲಕ ಪರಿಸ್ಥಿತಿಯ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡಲಾಯಿತು. ಪ್ರಯಾಣಿಕರು ವರದಿ ಮಾಡಿದಂತೆ, ಈ ಸಂದರ್ಭದಲ್ಲಿ ಕ್ಯಾಬಿನ್‌ನ ವಾತಾವರಣವು ಶಾಂತ ವಾಗಿತ್ತು ಮತ್ತು ಸಿಬ್ಬಂದಿಯ ವೃತ್ತಿಪರ ನಡವಳಿಕೆಯಿಂದಾಗಿ ಯಾವುದೇ ಗೊಂದಲ ಅಥವಾ ಭಯ ಉಂಟಾಗಲಿಲ್ಲ. ವಿಮಾನವು ಜೆಎಫ್‌ಕೆ ವಿಮಾನ ನಿಲ್ದಾಣಕ್ಕೆ ಮರಳಿ ಸುರಕ್ಷಿತವಾಗಿ ಲ್ಯಾಂಡ್ ಆಯಿತು. ಲ್ಯಾಂಡಿಂಗ್ ಸಮಯದಲ್ಲಿ, ಯಾವುದೇ ತಾಂತ್ರಿಕ ತೊಂದರೆಯನ್ನು ತಡೆಗಟ್ಟಲು ಅಗ್ನಿಶಾಮಕ ದಳ ಮತ್ತು ತುರ್ತು ಸೇವಾ ತಂಡಗಳು ಸಿದ್ಧವಾಗಿದ್ದವು. ಲ್ಯಾಂಡಿಂಗ್ ಸಂಪೂರ್ಣ ಸುಗಮವಾಗಿತ್ತು ಮತ್ತು ಪ್ರಯಾಣಿಕರು ಅಥವಾ ಸಿಬ್ಬಂದಿಗೆ ಗಾಯವಾಗಲಿಲ್ಲ. ಬೋಯಿಂಗ್ 777-300 ER ಒಂದು ಅತ್ಯಂತ ವಿಶ್ವಾಸಾರ್ಹ ವಿಮಾನವಾಗಿದ್ದು, ಒಂದು ಎಂಜಿನ್ ವಿಫಲವಾದರೂ ಸುರಕ್ಷಿತವಾಗಿ ಕಾರ್ಯನಿರ್ವಹಿಸುವಂತೆ ಅದನ್ನು ವಿನ್ಯಾಸಗೊಳಿಸಲಾಗಿದೆ. ಈ ವಿಮಾನಗಳು ETOPS ಸರ್ಟಿಫಿಕೇಶನ್ ಹೊಂದಿದ್ದು, ಒಂದು ಎಂಜಿನ್‌ನೊಂದಿಗೆ ಗರಿಷ್ಠ 180–240 ನಿಮಿಷಗಳ ಕಾಲ ಹಾರಾಟ ಮಾಡಬಹುದು. ಆದರೆ ಇದಕ್ಕೆ ತಕ್ಕಂತೆ ಸಮೀಪದ ವಿಮಾನ ನಿಲ್ದಾಣಕ್ಕೆ ತಲುಪುವುದು ಕಡ್ಡಾಯವಾಗಿದೆ. ಈ ಘಟನೆಯಲ್ಲಿ, ಪೈಲಟ್‌ಗಳು ಎಂಜಿನ್ ವಿಫಲತೆಯನ್ನು ಗಂಭೀರವಾಗಿ ಪರಿಗಣಿಸಿ, ಜೆಎಫ್‌ಕೆಗೆ ಮರಳುವ ಸುರಕ್ಷಿತ ನಿರ್ಧಾರವನ್ನು ಕೈಗೊಂಡರು. ಎಂಜಿನ್ ವೈಫಲ್ಯದ ನಿಖರ ಕಾರಣವನ್ನು ಇನ್ನೂ ಬಹಿರಂಗಪಡಿಸಲಾಗಿಲ್ಲ, ಆದರೆ ಸಾಮಾನ್ಯವಾಗಿ ಇಂಥ ಘಟನೆಗಳು ಯಾಂತ್ರಿಕ ದೋಷ, ಇಂಧನ ಸರಬರಾಜು ಸಮಸ್ಯೆ ಅಥವಾ ಎಂಜಿನ್‌ನ ಆಂತರಿಕ ಘಟಕಗಳ ಹಾನಿಯಿಂದ ಉಂಟಾಗುತ್ತವೆ. ಈ ಘಟನೆಯು ವಿಮಾನಯಾನ ಉದ್ಯಮದಲ್ಲಿ ಸುರಕ್ಷತೆಗೆ ನೀಡಲಾಗುವ ಆದ್ಯತೆಯನ್ನು ಎತ್ತಿ ತೋರಿಸುತ್ತದೆ. ಒಂದು ಎಂಜಿನ್ ವಿಫಲವಾದರೂ, ವಿಮಾನವು ಸುರಕ್ಷಿ ತವಾಗಿ ಲ್ಯಾಂಡ್ ಆಗಿತ್ತು. ಇದು ಬೋಯಿಂಗ್ 777-300 ER ನ ವಿಶ್ವಾಸಾರ್ಹತೆ ಮತ್ತು ಸಿಬ್ಬಂದಿಯ ತರಬೇತಿಯ ಉತ್ತಮ ಗುಣಮಟ್ಟವನ್ನು ತೋರಿಸುತ್ತದೆ. ಈ ಮಧ್ಯೆ ಏರ್ ಫ್ರಾನ್ಸ್‌ನ ಪೋಸ್ಟ್-ಲ್ಯಾಂಡಿಂಗ್ ಸೇವೆಯ ಕೆಲವು ದೌರ್ಬಲ್ಯಗಳು ಗಮನಕ್ಕೆ ಬಂದಿವೆ. ಇದು ಭವಿಷ್ಯದಲ್ಲಿ ಸುಧಾರಣೆಗೆ ಕಾರಣವಾಗಬಹುದು. ಒಟ್ಟಿನಲ್ಲಿ, ಈ ಘಟನೆಯು ತುರ್ತು ಪರಿಸ್ಥಿತಿಯನ್ನು ನಿರ್ವಹಿಸುವಲ್ಲಿನ ವಿಮಾನಯಾನ ಉದ್ಯಮದ ವೃತ್ತಿಪರತೆಯನ್ನು ಪ್ರದರ್ಶಿಸಿದೆ. ಆದರೆ ಪ್ರಯಾಣಿಕರ ಅನುಭವವನ್ನು ಇನ್ನಷ್ಟು ಸುಧಾರಿಸಲು ಕೆಲವು ಕ್ಷೇತ್ರಗಳಲ್ಲಿ ಸುಧಾರಣೆಯ ಅಗತ್ಯವಿದೆ ಎಂಬ ಪಾಠವನ್ನು ಇದು ಎತ್ತಿ ತೋರಿಸಿದೆ.

ಈಗ ಕರ್ನಾಟಕದ ದೇವಸ್ಥಾನಗಳು ಟಾರ್ಗೆಟ್

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಧರ್ಮಸ್ಥಳವನ್ನು ಟಾರ್ಗೆಟ್ ಮಾಡಿ ದೇವಸ್ಥಾನದ ಬಗ್ಗೆ ನಗರ ನಕ್ಸಲರು ನಡೆಸಿದ ಅಪಪ್ರಚಾರದ ಕಥೆಗಳ ಸುಳ್ಳಿನ ಕೋಟೆಯ ಕಲ್ಲುಗಳು ಒಂದೊಂದಾಗಿ ಉರುಳಿ ಬೀಳಲು ಪ್ರಾರಂಭಿಸಿವೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸಿಕೊಂಡು ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡಿದ ನಗರ ನಕ್ಸಲರ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದಾಕ್ಷಣ, ಹಿಂದೂ ಸಮಾಜವನ್ನು ನಂಬಿಸಿಬಿಡಬಹುದೆಂಬ ಷಡ್ಯಂತ್ರ ವಿಫಲವಾಗಿದೆ. ಆತ ಮಾಡಿದ್ದ ವಿಡಿಯೋವನ್ನು ಜನರ ಮೊಬೈಲ್‌ಗಳಿಗೆ ತಲುಪಿಸುವಲ್ಲಿ ನಗರ ನಕ್ಸಲರ ತಂಡ ಯಶಸ್ವಿಯಾಗಿತ್ತು. ಆದರೆ ಒಂದಲ್ಲಾ ಒಂದು ದಿನ ಸತ್ಯ ಹೊರಬೀಳುತ್ತದೆಯೆಂಬ ಸಾಮಾನ್ಯ ಜ್ಞಾನ ಅವರಿಗಿರಲಿಲ್ಲ. ಹಿಂದೂ ದೇವಸ್ಥಾನಗಳ ಮೇಲಿನ ಎಡಚರರ ಟಾರ್ಗೆಟ್ ಇದೇ ಮೊದಲಲ್ಲ. ಈ ಹಿಂದೆ ತಿರುಪತಿಯಲ್ಲಿ ಕಡ್ಡಿ ಅಲ್ಲಾಡಿಸಿದ್ದರು, ಕೇರಳದ ಶಬರಿಮಲೆಯಲ್ಲಿ ವಿವಾದ ಸೃಷ್ಟಿಸಿದ್ದರು. ಈಗ ಧರ್ಮಸ್ಥಳದ ಸರದಿ. ಕೋವಿಡ್ ನಂತರ ಮನೆಯಲ್ಲಿ ಕುಳಿತು ಒಟಿಟಿ ವೇದಿಕೆಗಳಲ್ಲಿ ಅನೇಕ ಥ್ರಿಲ್ಲರ್ ಚಿತ್ರಗಳನ್ನು ನೋಡಿ ರೂಢಿಯಾಗಿದ್ದ ಹಿಂದೂ ಸಮಾಜಕ್ಕೆ ಯುಟ್ಯೂಬ್ ಮೂಲಕ ಧರ್ಮಸ್ಥಳದ ವಿರುದ್ಧ ತಯಾರಾದ ಅಪಪ್ರಚಾರದ ವಿಡಿಯೋ ಸಲೀಸಾಗಿ ತಲೆಗೆ ಹೊಕ್ಕಿತ್ತು. ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರದಲ್ಲಿ ಮಿಷನರಿಗಳು ಮತ್ತು ವಿದೇಶಿ ಸಂಸ್ಥೆಗಳ ಕೈವಾಡವಿದೆಯೆಂದು ಹೇಳಲಾಗುತ್ತಿದೆ. ತಮಿಳುನಾಡಿನಲ್ಲಿ ಕಳೆದ ಏಳು ದಶಕಗಳಿಂದ ಹಿಂದೂ ದೇವಾಲಯಗಳನ್ನು ಸತತವಾಗಿ, ವ್ಯವಸ್ಥಿತವಾಗಿ ಟಾರ್ಗೆಟ್ ಮಾಡಲಾಗುತ್ತಿದೆ. ಹಿಂದೂ ಧರ್ಮದ ಆಚರಣೆಗಳ ಬಗ್ಗೆ ಬಹಿರಂಗವಾಗಿ ಕೆಟ್ಟದಾದ ಹೇಳಿಕೆಗಳನ್ನು ನೀಡುವುದು ಅಲ್ಲಿ ಕೆಲವರ ನಿತ್ಯಕಾಯಕವಾಗಿದೆ.

ಸಾವಿರಾರು ವರ್ಷಗಳ ಹಿಂದೆ ತಮಿಳುನಾಡಿನಲ್ಲಿ ಹಿಂದೂ ಧರ್ಮವು ಎಷ್ಟು ಆಳವಾಗಿ ಬೇರೂರಿತ್ತೆಂಬುದಕ್ಕೆ ಅಲ್ಲಿನ ದೇವಾಲಯಗಳೇ ಸಾಕ್ಷಿ. ತಮಿಳುನಾಡಿನ ಪ್ರತಿಯೊಂದು ದೇವಸ್ಥಾನದಲ್ಲಿ, ನೂರಾರು ವರ್ಷಗಳ ಹಿಂದೆ ಅಲ್ಲಿನ ರಾಜರು ಆಚರಿಸಿಕೊಂಡು ಬಂದಂಥ ಸನಾತನ ಧರ್ಮದ ಕುರುಹುಗಳು ಇಂದಿಗೂ ಇವೆ. ತಮಿಳುನಾಡಿನಲ್ಲಿ ಸುಮಾರು 33,000 ಪುರಾತನ ದೇಗುಲಗಳಿವೆ. ಇವುಗಳಲ್ಲಿ ಬಹುತೇಕ ದೇವಾಲಯಗಳನ್ನು 800ರಿಂದ 5000 ವರ್ಷಗಳ ಹಿಂದೆ ಕಟ್ಟಲಾಗಿದೆ. 1950ರ ದಶಕದಲ್ಲಿ ತಮಿಳುನಾಡಿನಲ್ಲಿ ದ್ರಾವಿಡ ಹೋರಾಟದಲ್ಲಿ ಬ್ರಾಹ್ಮಣತ್ವವನ್ನು ಧಿಕ್ಕರಿಸಲಾಯಿತು, ಹಿಂದೂ ಧರ್ಮದ ಆಚರಣೆಗಳನ್ನು ಕೇವಲ ಮೂಢನಂಬಿಕೆ ಎಂದು ಬಿಂಬಿಸಲಾಯಿತು. 'ಇಡೀ ದಕ್ಷಿಣ ಭಾರತ ದ್ರಾವಿಡರ ನಾಡು, ಉತ್ತರ ಭಾರತದಿಂದ ಬಂದಂಥ ಜನರು ದ್ರಾವಿಡರ ಮೇಲೆ ಆಕ್ರಮಣ ಮಾಡಿ ಹಿಂದೂ ಧರ್ಮವನ್ನು ಹೇರಿದರು' ಎಂಬ ಚಳವಳಿ ಶುರುವಾಯಿತು. ಬ್ರಾಹ್ಮಣರು ಹಾಗೂ ಉತ್ತರ ಭಾರತದ ಆರ್ಯರು, ದಕ್ಷಿಣ ಭಾರತದ ದ್ರಾವಿಡ ನಾಡಿನ ಮೇಲೆ ತಮ್ಮ ಧರ್ಮವನ್ನು ಬಲವಂತವಾಗಿ ಹೇರಿದರೆಂಬ ಸುಳ್ಳು ಇತಿಹಾಸವನ್ನು ಸೃಷ್ಟಿಸಲಾಯಿತು. ತಮಿಳುನಾಡಿನಲ್ಲಿ ದ್ರಾವಿಡ ಚಳವಳಿ ಪ್ರಾರಂಭವಾಗುವುದರ ಹಿಂದೆ ಕ್ರಿಶ್ಚಿಯನ್ ಮಿಷನರಿಗಳ ಷಡ್ಯಂತ್ರವಿತ್ತು. ಪಾಶ್ಚಿಮಾತ್ಯ ದೇಶಗಳಿಂದ ಬಂದ ಕ್ರಿಶ್ಚಿಯನ್ ಧರ್ಮಗುರುಗಳಿಗೆ, ಬ್ರಿಟನ್ನಿನ ರಾಣಿ ಭಾರತದಲ್ಲಿ ಮತಾಂತರ ಮಾಡಲು ನೂರಾರು ಕೋಟಿ ಹಣ ನೀಡುತ್ತಿದ್ದರು. ಸೇವೆಯ ಹೆಸರಿನಲ್ಲಿ ಹಿಂದೂಗಳ ಮತಾಂತರಕ್ಕೆ ತಮಿಳುನಾಡಿನ ಕ್ರಿಶ್ಚಿಯನ್ ಮಿಷನರಿಗಳು ಹೆಚ್ಚಿನ ಸಮಯ ವಿನಿಯೋಗಿಸಿದವು. ಹಿಂದೂ ಧರ್ಮಕ್ಕೆ ಹೋಲುವ ಕ್ರಿಶ್ಚಿಯನ್ ಆಚರಣೆಗಳ ಮೂಲ ಬೈಬಲ್ ಎಂದು ಹೇಳುವ ಮೂಲಕ ಅವರು ಜನರ ಕಣ್ಣಿಗೆ ಮಂಕುಬೂದಿ ಎರಚಿದ್ದರು. ಹಿಂದೂ ಧರ್ಮದ ಹಲವು ಆಚರಣೆಗಳು 'ಬೈಬಲ್' ಮೂಲದಿಂದ ಬಂದಿವೆಯೆಂದು ಹೇಳಿ ಜನರ ತಲೆಕೆಡಿಸಿದರು. ಶ್ರೀಕೃಷ್ಣನ ಮತ್ತೊಂದು ಅವತಾರವೇ 'ಯೇಸು'ವೆಂದು ಹೇಳಿದರು. ಶ್ರೀಕೃಷ್ಣನ 'ಗೀತೋಪದೇಶ'ದ ರೀತಿಯಲ್ಲಿ ಯೇಸುವೂ ಜೀವನದ ನೀತಿಪಾಠಗಳನ್ನು ಹೇಳಿದ್ದನೆಂದರು. ವೇದಗಳ ಮೂಲ 'ಬೈಬಲ್' ಎಂಬ ಸುಳ್ಳು ಹೇಳಿ ತಮಿಳುನಾಡಿನ ಹಿಂದೂಗಳ ತಲೆಯಲ್ಲಿ ಹಿಂದೂ ಧರ್ಮದ ಮೇಲಿನ ನಂಬಿಕೆಯನ್ನು ಕಡಿಮೆ ಮಾಡಿಸಿದರು. ತಮಿಳುನಾಡಿನ ಜನರು ಹಿಂದೂ ಧರ್ಮದ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳತೊಡಗಿದಾಗ, ದ್ರಾವಿಡರ ಹೋರಾಟ ಮುನ್ನೆಲೆಗೆ ಬಂದಿತು. ಬ್ರಾಹ್ಮಣರನ್ನು ದ್ರಾವಿಡರ ಶತ್ರುಗಳಂತೆ ಬಿಂಬಿಸಿ ದ್ರಾವಿಡ ಹಾಗೂ ಬ್ರಾಹ್ಮಣರ ನಡುವೆ ದೊಡ್ಡದೊಂದು ಕಂದಕವನ್ನೇ ಸೃಷ್ಟಿಸಲಾಯಿತು.

ಆದರೆ ವಾಸ್ತವದಲ್ಲಿ ಬ್ರಾಹ್ಮಣರು ಪೂಜಿಸುವ ಯಾವ ದೇವರೂ ಬ್ರಾಹ್ಮಣನಲ್ಲ. ಶ್ರೀಕೃಷ್ಣ ಯಾದವ ಕುಲದಲ್ಲಿ ಬೆಳೆದವನು. ಶ್ರೀರಾಮ ಕ್ಷತ್ರಿಯ ಕುಲದಲ್ಲಿ ಹುಟ್ಟಿದವನು, ರಾವಣ ಬ್ರಾಹ್ಮಣನಾದರೂ ಅವನನ್ನು ಪೂಜಿಸುವುದಿಲ್ಲ. ಸ್ಮಶಾನದಲ್ಲಿ ಶಿವ ನೆಲೆಸಿರುತ್ತಾನೆಂದು ಹೇಳಿದರೂ ಬ್ರಾಹ್ಮಣರು ಅವನನ್ನು ಪೂಜಿಸುತ್ತಾರೆ. ಅಷ್ಟೇ ಯಾಕೆ ವೇದಗಳನ್ನು ಬರೆದ ವ್ಯಾಸರು ಬ್ರಾಹ್ಮಣರಲ್ಲ, ರಾಮಾಯಣ ಬರೆದ ವಾಲ್ಮೀಕಿ ಒಬ್ಬ ಬೇಡ. ಭಾರತದ ಸಂವಿಧಾನದ ಪಿತಾಮಹ, ಸಾಮಾಜಿಕ ಕ್ರಾಂತಿಸೂರ್ಯ ಬಾಬಾಸಾಹೇಬ್ ಅಂಬೇಡ್ಕರ್ ದಲಿತರು. ಇಷ್ಟೆಲ್ಲಾ ಉದಾಹರಣೆಗಳು ಕಣ್ಣ ಮುಂದಿದ್ದರೂ ಕ್ರಿಶ್ಚಿಯನ್ ಮಿಷ'ನರಿ'ಗಳ ಸತತ ಪ್ರಯತ್ನದಿಂದಾಗಿ ತಮಿಳುನಾಡಿನಲ್ಲಿ ಬ್ರಾಹ್ಮಣರು ಹಾಗೂ ದ್ರಾವಿಡರೆಂದು ಎರಡು ಭಾಗ ಮಾಡಲಾಯಿತು.

ಕ್ರಿಶ್ಚಿಯನ್ ಮಿಷನರಿಗಳ ಹುನ್ನಾರದಿಂದ ಪ್ರಾರಂಭವಾದ ದ್ರಾವಿಡ ಚಳವಳಿಯನ್ನು ಹೈಜಾಕ್ ಮಾಡಿದ ರಾಜಕೀಯ ಪಕ್ಷಗಳು ತಮಿಳುನಾಡಿನಲ್ಲಿ ದ್ರಾವಿಡ ಸಿದ್ಧಾಂತವನ್ನೇ ಬಂಡವಾಳವನ್ನಾಗಿಸಿಕೊಂಡು ಅಧಿಕಾರದ ಗದ್ದುಗೆ ಹಿಡಿದವು. ಹಿಂದೂ ಧರ್ಮದ ಸಾವಿರಾರು ದೇವಸ್ಥಾನಗಳ ನಾಡಿನಲ್ಲಿ ಹಿಂದೂ ಸಂಸ್ಕೃತಿಗೆ ಇವು ಮಾಡಿದ ಅಪಮಾನಗಳು ಒಂದೆರಡಲ್ಲ. ಜನಿವಾರ ಧರಿಸಿದವರನ್ನು ನೋಡಿ ನಗುವಂತೆ ಮಾಡಲಾಯಿತು, ದೇವಸ್ಥಾನಗಳನ್ನು ಸರಕಾರದ ಸುಪರ್ದಿಗೆ ತೆಗೆದುಕೊಳ್ಳಲಾಯಿತು. ಆದರೆ ಹಿಂದೂ ಧರ್ಮದ ಆಚರಣೆಗಳ ವಿರುದ್ಧ ಶುರುವಾದಂಥ ದ್ರಾವಿಡ ರಾಜಕಾರಣದಲ್ಲಿ ಬಳಕೆಯಾದದ್ದು ಹಿಂದೂ ದೇವಸ್ಥಾನಗಳ ಹಣ. ತಮಿಳುನಾಡಿನ ಹಲವು ದೇವಸ್ಥಾನಗಳ ಆಡಳಿತ ಮಂಡಳಿಗಳು ರಾಜಕೀಯ ನಾಯಕರ ಮಧ್ಯಸ್ಥಿಕೆಯಿಂದ ಚುನಾಯಿಸಲ್ಪಡುತ್ತವೆ. ದೇವಸ್ಥಾನದ ಆಡಳಿತ ಮಂಡಳಿಯನ್ನು ಸರಕಾರಗಳು ನಿಯಂತ್ರಿಸುತ್ತವೆ. ದೇವಸ್ಥಾನದ ಜಾಗ, ಒಡವೆ, ಹಣವನ್ನು ಸರಕಾರದ ಸುಪರ್ದಿಗೆ ತೆಗೆದುಕೊಳ್ಳುವ ಕೆಲಸ ಸುಮಾರು 300 ವರ್ಷಗಳ ಕೆಳಗೆ ಬ್ರಿಟಿಷರ 'ಈಸ್ಟ್ ಇಂಡಿಯಾ ಕಂಪನಿ'ಯಿಂದ ಪ್ರಾರಂಭವಾಯಿತು. ವಿಪರ್ಯಾಸವೆಂದರೆ ಸ್ವಾತಂತ್ರ್ಯ ಬಂದು 77 ವರ್ಷ ಕಳೆದ ನಂತರವೂ ತಮಿಳುನಾಡಿನಲ್ಲಿ ಇಂದಿಗೂ ಅದೇ ಮಾದರಿಯ ಆಡಳಿತವನ್ನು ಸರಕಾರಗಳು ನಡೆಸಿಕೊಂಡು ಬರುತ್ತಿವೆ. ದೇವಸ್ಥಾನಗಳನ್ನು ಭಕ್ತರಿಗೆ ನಡೆಸಿಕೊಂಡು ಹೋಗಲು ಬಿಟ್ಟರೆ, ಇತಿಹಾಸದಲ್ಲಿ ಹಾಳಾಗಿರುವ ತಮಿಳುನಾಡಿನ ಹಲವು ದೇವಸ್ಥಾನಗಳು ಪುನರುಜ್ಜೀವನಗೊಳ್ಳುತ್ತವೆ.

ದೇವಸ್ಥಾನದಲ್ಲಿನ ಹುಂಡಿಯ ಹಣ, ಚಿನ್ನ, ದೇವಸ್ಥಾನಕ್ಕೆ ಪೂರ್ವಜರು ದಾನ ಮಾಡಿದ್ದಂಥ ಸಾವಿರಾರು ಎಕರೆ ಜಮೀನುಗಳನ್ನು ತಮ್ಮ ವಶಕ್ಕೆ ಪಡೆದ ಸರಕಾರಗಳು ತಾವು ಹೇಳಿದಂತೆ ದೇವಸ್ಥಾನದ ಆಡಳಿತ ಮಂಡಳಿ ಕೇಳುವಂತೆ ನೋಡಿಕೊಂಡವು. ಭಾರತೀಯ ಸಮಾಜದಲ್ಲಿ ಅಲ್ಲಲ್ಲಿ ಕಾಣುತ್ತಿದ್ದ ಅಸ್ಪೃಶ್ಯತೆಯನ್ನೇ ಅಸ್ತ್ರವನ್ನಾಗಿಸಿಕೊಂಡು ಲಂಡನ್ನಿನ ಚರ್ಚಿನ ಬಿಷಪ್‌ಗಳ ಮೂಲಕ ಭಾರತದಲ್ಲಿ ದಲಿತರನ್ನು ಹೆಚ್ಚಾಗಿ ಮತಾಂತರ ಮಾಡಲಾಯಿತು. ಸ್ವಾತಂತ್ರ್ಯ ಬಂದ ಮೇಲೂ ತಮಿಳುನಾಡಿನ ಸರಕಾರಗಳು ಅದೇ ಕೆಲಸವನ್ನೇ ಮಾಡಿಕೊಂಡು ಬಂದಿವೆ. ದ್ರಾವಿಡರ ಹೆಸರಿನಲ್ಲಿ ಹಿಂದೂ ದೇವಸ್ಥಾನಗಳ ಆಡಳಿತವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ತಮಗಿಷ್ಟ ಬಂದಂತೆ ಆಡಳಿತ ನಡೆಸುತ್ತಿವೆ. ತಮಿಳುನಾಡಿನಲ್ಲಿ ಕಣ್ಣಿಗೆ ಕಾಣುವ ದೇವಸ್ಥಾನಗಳ ಪರಿಸ್ಥಿತಿ ಇದಾದರೆ, ಪೂಜೆಯೇ ನಡೆಯದ ಸುಮಾರು 11,999 ದೇವಸ್ಥಾನಗಳು ಪಾಳುಬಿದ್ದಿವೆ. ಸರಕಾರಗಳು ಇದರ ಬಗ್ಗೆ ಇದುವರೆಗೂ ಗಮನ ಹರಿಸಿಲ್ಲ. ಕಳೆದ 25 ವರ್ಷಗಳಲ್ಲಿ ಸುಮಾರು 1200 ಪುರಾತನ ವಿಗ್ರಹಗಳ ಕಳ್ಳಸಾಗಣೆಯಾಗಿದೆ. 37,000 ದೇವಸ್ಥಾನಗಳಲ್ಲಿ ಕೇವಲ ಒಬ್ಬ ಪೂಜಾರಿಯಿದ್ದಾನೆ– ಅಂದರೆ ಭಕ್ತರೇ ಇಲ್ಲದ ದೇಗುಲಗಳಿವು. 34,000 ದೇವಸ್ಥಾನಗಳು ವರ್ಷಕ್ಕೆ 10,000ಕ್ಕಿಂತಲೂ ಕಡಿಮೆ ಆದಾಯದಿಂದ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಒದ್ದಾಡುತ್ತಿವೆ.

ವರ್ಷಕ್ಕೆ ನೂರಾರು ಕೋಟಿ ಆದಾಯ ನೀಡುವ ದೊಡ್ಡ ದೊಡ್ಡ ದೇವಸ್ಥಾನಗಳು ತಮಿಳುನಾಡಿನಲ್ಲಿರುವಾಗ ಇಷ್ಟೊಂದು ದೊಡ್ಡ ಸಂಖ್ಯೆಯ ಪುರಾತನ ದೇವಸ್ಥಾನಗಳು ಹೀನಾಯ ಪರಿಸ್ಥಿತಿ ತಲುಪಿದ್ದು ವಿಪರ್ಯಾಸ. ದ್ರಾವಿಡರಿಗೆ ಕಮ್ಯುನಿಸ್ಟರು ಕೈಜೋಡಿಸಿರುವಂಥ ರಾಜ್ಯ ತಮಿಳುನಾಡು. ಕಮ್ಯುನಿಸ್ಟರಿಗೆ ತಮಿಳುನಾಡಿನಲ್ಲಿ ರಾಜಕೀಯ ನೆಲೆಯಿಲ್ಲದಿದ್ದರೂ, ಹಿಂದೂ ಧರ್ಮದ ಆಚರಣೆಗಳ ಬಗ್ಗೆ ವಿರೋಧ ವ್ಯಕ್ತಪಡಿಸುವವರ ಪರವಾಗಿ ಅವರು ಸದಾ ನಿಂತಿರುತ್ತಾರೆ. ಸನಾತನ ಧರ್ಮವನ್ನೇ ನಿರ್ಮೂಲನೆ ಮಾಡುತ್ತೇವೆಂದು ಉದಯನಿಧಿ ಸ್ಟಾಲಿನ್ ಹೇಳುತ್ತಾರೆ. ಎ.ರಾಜ ಅವರಂತೂ ಸನಾತನ ಧರ್ಮವನ್ನು ಏಡ್ಸ್ ರೋಗಕ್ಕೆ ಹೋಲಿಸುತ್ತಾರೆ.

ಕ್ರಿಶ್ಚಿಯನ್ ಮಿಷ'ನರಿ'ಗಳು ಮೊದಲಿಗೆ ತಮಿಳುನಾಡಿನಲ್ಲಿ, ಆರ್ಯರು ಹಾಗೂ ಬ್ರಾಹ್ಮಣರ ನಡುವೆ ತಂದಿಟ್ಟು ಬ್ರಾಹ್ಮಣರ ಪರವಾಗಿ ನಿಂತರು. ನಂತರ ಬ್ರಾಹ್ಮಣರು ಹಾಗೂ ಇತರ ವರ್ಗದವರ ಮಧ್ಯೆ ತಂದಿಟ್ಟು, ದ್ರಾವಿಡರೆಂಬ ಹೊಸ ಧರ್ಮವನ್ನು ಹುಟ್ಟುಹಾಕಿದರು. ಆದರೆ ಆರ್ಯರೆಂಬ ಕಲ್ಪನೆಯೇ ಶುದ್ಧ ಸುಳ್ಳೆಂದು ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ನಡೆಯುತ್ತಿರುವ ಹಲವು ಸಂಶೋಧನೆಗಳು ಹೇಳುತ್ತಿವೆ. ಇದೇ ಆರ್ಯರ ಸುಳ್ಳನ್ನು ಬಳಸಿಕೊಂಡು ಕ್ರಿಶ್ಚಿಯನ್ ಮಿಷನರಿಗಳು ಉತ್ತರ ಭಾರತ ಮತ್ತು ದಕ್ಷಿಣ ಭಾರತ ಎಂಬ ಎರಡು ಭಾಗಗಳಾಗಿ ಭಾರತವನ್ನು ವಿಭಜಿಸಲು ಪ್ರಯತ್ನಿಸಿ, ತಮಿಳುನಾಡಿನಲ್ಲಿ ದ್ರಾವಿಡರ ಸಿದ್ಧಾಂತವನ್ನು ಪೋಷಿಸತೊಡಗಿದರು. ಹಿಂದೂ ಧರ್ಮದ ದೇವರ ವಿಷಯದಲ್ಲೂ ತಲೆಹಾಕಿ, 'ಉತ್ತರ ಭಾರತದ ದೇವರುಗಳನ್ನು ದಕ್ಷಿಣ ಭಾರತದಲ್ಲಿ ಪೂಜಿಸುತ್ತಾರೆ' ಎಂದು ಹೇಳಿದರು. ಶಿವ, ರಾಮ, ಕೃಷ್ಣ ಎಲ್ಲರೂ ಉತ್ತರ ಭಾರತದವರು, ಅಲ್ಲಿ ಹುಟ್ಟಿದ ದೇವರುಗಳನ್ನು ದಕ್ಷಿಣ ಭಾರತದ ದೇವಸ್ಥಾನದಲ್ಲಿ ಪೂಜಿಸಲಾಗುತ್ತಿದೆಯೆಂದು ಹೇಳಿದರು. ಶ್ರೀರಾಮನ ಕುರುಹುಗಳು ಅಯೋಧ್ಯೆಯಿಂದ ಹಿಡಿದು, ಶ್ರೀಲಂಕಾದವರೆಗೂ ಇವೆ. ಹಾಗಾದರೆ ಶ್ರೀರಾಮನು ದಕ್ಷಿಣಕ್ಕೆ ಬಂದಿರಲಿಲ್ಲವೇ? ಹನುಮಂತ ಹುಟ್ಟಿದ ಕ್ಷೇತ್ರವಾದ ಅಂಜನಾದ್ರಿ ಬೆಟ್ಟವಿರುವುದು ಕರ್ನಾಟಕದ ಕೊಪ್ಪಳದಲ್ಲಿ. ಹಾಗಾದರೆ ಹಿಂದೂಗಳು ಪೂಜಿಸುವ ಹನುಮಂತನು ದಕ್ಷಿಣದವನಲ್ಲವೇ? ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ಜನ ಇಂದಿಗೂ ಹಿಂದೂ ಧರ್ಮದ ಆಚರಣೆಗಳನ್ನು ವಿರೋಧಿಸುವ ರಾಜಕೀಯ ಪಕ್ಷಕ್ಕೆ ಮತಹಾಕಿ ಗೆಲ್ಲಿಸಿಕೊಂಡು ಬಂದಿದ್ದಾರೆ. ಅವರಿಗ್ಯಾರಿಗೂ ತಮ್ಮ ಧರ್ಮದ ಮೇಲೆ ಆಗಿರುವ ದಾಳಿಯ ಅರಿವಿಲ್ಲ. ತಮಿಳುನಾಡಿನ ರಾಜರು ಸಾವಿರಾರು ವರ್ಷಗಳ ಹಿಂದೆ ಕಟ್ಟಿರುವ ದೇವಸ್ಥಾನಗಳು ಹಿಂದೂ ಧರ್ಮದ ಆಚರಣೆಗಳನ್ನು ಸಾರಿ ಸಾರಿ ಹೇಳುವಾಗ, ಹಿಂದೂ ಧರ್ಮದ ಆಚರಣೆಗಳನ್ನೇ ನಂಬದ ದ್ರಾವಿಡರ ಸಿದ್ಧಾಂತ ಅಲ್ಲಿ ಉದ್ಭವವಾಯಿತು. ತಮಿಳುನಾಡು ಮಾದರಿಯಲ್ಲಿ ಕರ್ನಾಟಕದ ದೇವಾಲಯಗಳನ್ನು ಸತತವಾಗಿ ಟಾರ್ಗೆಟ್ ಮಾಡಿ, ದೇವಸ್ಥಾನದ ನಿರ್ವಹಣೆಯನ್ನು ಹಿಂದುಗಳಿಂದ ಕಸಿದುಕೊಂಡು, ನಂತರ ಹಿಂದೂಗಳ ನಂಬಿಕೆಗಳನ್ನು ಟಾರ್ಗೆಟ್ ಮಾಡುವ ದೀರ್ಘಾವಧಿಯ ಯೋಜನೆ ಇರುವುದು ಇಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಶೀಘ್ರ ಕ್ರಮ ಕೈಗೊಳ್ಳಿ

ಜೀವವಿಮಾ, ಆರೋಗ್ಯವಿಮಾ ಮತ್ತು ವೈಯಕ್ತಿಕ ವಿಮಾ ಪಾಲಿಸಿಗಳ ಪ್ರೀಮಿಯಂ ಮೇಲೆ ಈಗ ಇರುವ ಸರಕು ಮತ್ತು ಸೇವಾ ತೆರಿಗೆಗೆ (ಜಿಎಸ್‌ಟಿ) ಸಂಪೂರ್ಣ ವಿನಾಯಿತಿ ನೀಡಲು ಕೇಂದ್ರ ಸರಕಾರ ಬಯಸಿದೆಯೆಂದು ಕೇಂದ್ರ ವಿಮೆ ಸಂಬಂಧಿತ ಸಮಿತಿಯ ಸಂಚಾಲಕ ಸಾಮ್ರಾಟ್ ಚೌಧರಿ ಅವರು ಪತ್ರಿಕಾ ಹೇಳಿಕೆ ನೀಡಿದ್ದಾರೆ. ಇದೊಂದು ಸ್ವಾಗತಾರ್ಹ ಬೆಳವಣಿಗೆ. ಈ ಬಗೆಗಿನ ಅಂತಿಮ ತೀರ್ಮಾನವನ್ನು ಮುಂಬರುವ ಸೆಪ್ಟೆಂಬರ್ 9ರಂದು ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಕೈಗೊಳ್ಳಲಾಗುವುದು ಎಂದೂ ಚೌಧರಿ ಅವರು ತಿಳಿಸಿದ್ದಾರೆ. ಕೆಲವು ಗ್ರಾಹಕರು ಸೆಪ್ಟೆಂಬರ್ 9ರವರೆಗೆ ಕಾಯಬಹುದು. ಆದರೆ ಈಗ ಪಾಲಿಸಿಯನ್ನು ತೆಗೆದುಕೊಳ್ಳಬಯಸುವವರು ಹಾಲಿ ಇರುವ ಜಿಎಸ್‌ಟಿಯನ್ನು ಪಾವತಿಸಲೇಬೇಕು. ಆದ್ದರಿಂದ, 2025ರ ಆಗಸ್ಟ್ 20ರಿಂದ ತೆಗೆದುಕೊಳ್ಳುವ ಪಾಲಿಸಿಗಳಿಗೆ ಜಿಎಸ್‌ಟಿ ಇರುವುದಿಲ್ಲ ಎಂಬ ಘೋಷಣೆ ಸಂಬಂಧಪಟ್ಟವರಿಂದ ಹೊಮ್ಮಬೇಕಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರವು ಶೀಘ್ರಕ್ರಮಕ್ಕೆ ಮುಂದಾಗಲಿ.

- ಬೂಕನಕೆರೆ ವಿಜೇಂದ್ರ, ಮೈಸೂರು

ಕಡಿವಾಣ ಅಗತ್ಯ

ಸರಕಾರಿ ಆಡಳಿತ ವ್ಯವಸ್ಥೆಯಲ್ಲಿನ ಪಾರದರ್ಶಕತೆಯು ನಾಗರಿಕರ ಗಮನಕ್ಕೆ ಬರುವಂತಾಗಲು ಕೇಂದ್ರ ಸರಕಾರವು ಮಾಹಿತಿ ಹಕ್ಕು ಕಾಯಿದೆಯನ್ನು ಜಾರಿಗೆ ತಂದಿದೆ. ಇದರನ್ವಯ, ನಾಗರಿಕರು ಬಯಸಿದ ಮಾಹಿತಿಯನ್ನು ನಿರ್ದಿಷ್ಟ ಅವಧಿಯೊಳಗೆ ನೀಡಬೇಕಾಗುತ್ತದೆ. ಇದರಿಂದಾಗಿ ಜನರಿಗೆ ಅನೇಕ ವಿಚಾರಗಳಲ್ಲಿ ಸೂಕ್ತ ಮಾಹಿತಿಯು ಸಕಾಲದಲ್ಲಿ ದೊರೆತು, ತಮ್ಮ ಕಡತಗಳ ಸ್ಥಿತಿಗತಿಯ ಜತೆಗೆ ಸಾರ್ವಜನಿಕ ವಿಚಾರಗಳು ಯಾವ ಹಂತದಲ್ಲಿವೆ ಎಂಬುದನ್ನು ತಿಳಿದುಕೊಳ್ಳುವುದು ಕೂಡ ಸಾಧ್ಯವಾಗುತ್ತದೆ.

ಆದರೆ ಇತ್ತೀಚಿನ ವರದಿಯಂತೆ, ಮಾಹಿತಿ ಹಕ್ಕಿನ ಅಡಿಯಲ್ಲಿ ನಮ್ಮ ರಾಜ್ಯದಲ್ಲಿಯೇ ಬಾಕಿ ಇರುವ ಅರ್ಜಿಗಳ ಸಂಖ್ಯೆ 46 ಸಾವಿರವನ್ನು ಮೀರಿದೆಯಂತೆ! ಇದು ನಿಜಕ್ಕೂ ಆತಂಕಕಾರಿ. ಇದು, ನಮ್ಮ ಆಡಳಿತ ವ್ಯವಸ್ಥೆಯು ಎಷ್ಟು ಹಿಂದುಳಿದೆ ಎನ್ನುವುದರ ಜತೆಗೆ, ಈ ಕಾಯಿದೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿರುವವರ ಸಂಖ್ಯೆಯೂ ಬೆಳೆಯುತ್ತಿ ರುವುದನ್ನು ಸೂಚಿಸುತ್ತದೆ. ಗ್ರಾಹಕರ ಹಿತರಕ್ಷಣಾ ಕಾಯಿದೆಯು 1986ರಲ್ಲಿ ಜಾರಿಗೆ ಬಂದಿದ್ದರೂ, ಕೆಲವರು ದ್ವೇಷಸಾಧನೆಗೆಂದು ಇದನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಮನಗಂಡು, ಗ್ರಾಹಕ ನ್ಯಾಯಾಲಯದಲ್ಲಿ ದುರುದ್ದೇಶದಿಂದ ದೂರು ಸಲ್ಲಿಸಿರುವುದು ರುಜುವಾತಾದಲ್ಲಿ ಅಂಥ ಗ್ರಾಹಕನಿಗೇ ದಂಡ ವಿಧಿಸುವುದಕ್ಕೆ ಅನುವು ಮಾಡಿಕೊಡುವ ತಿದ್ದುಪಡಿಯನ್ನು ತರಲಾಯಿತು. ಪ್ರಕೃತ, ಕೆಲವರು ಪದೇಪದೆ ಅರ್ಜಿ ಸಲ್ಲಿಸಿ ಮಾಹಿತಿ ಕೇಳುವುದು, ಸಂಬಂಧವೇ ಇಲ್ಲದಂಥ ಮಾಹಿತಿಯನ್ನು ಬೇರೆ ಬೇರೆ ಹೆಸರಲ್ಲಿ ಕೇಳಿ ಸರಕಾರಿ ಸಿಬ್ಬಂದಿಗಳಿಗೆ ಕಿರಿಕಿರಿ ಮಾಡಿ, ಕಚೇರಿಗಳಲ್ಲಿನ ಅವರ ಕೆಲಸದ ವೇಗಕ್ಕೆ ತೊಂದರೆ ಉಂಟು ಮಾಡುತ್ತಿರುವುದನ್ನೂ ಕಾಣಬಹುದು. ಇಂಥ ದುರ್ಬಳಕೆಯ ತಡೆಗೆ ಅರ್ಜಿಶುಲ್ಕ ಹೆಚ್ಚಳ, ದಾಖಲೆಗಳ ಪುಟದ ಶುಲ್ಕ ಏರಿಕೆ ಇತ್ಯಾದಿ ಅಂಶಗಳು ಪರಿಶೀಲನೆಯಲ್ಲಿವೆ ಎಂದು ಕೇಳಿದ್ದೇನೆ. ಅದರ ಬದಲಾಗಿ, ಮಾಹಿತಿ ಹಕ್ಕು ಕಾಯಿದೆಯನ್ನು ದುರುಪಯೋಗಪಡಿಸಿಕೊಳ್ಳುವ ಪ್ರಕರಣಗಳು ರುಜುವಾತಾದಲ್ಲಿ ಅರ್ಜಿದಾರರಿಗೇ ದಂಡ ವಿಧಿಸುವಂಥ ತಿದ್ದುಪಡಿ ತರಬೇಕು. ಆರ್‌ಟಿಐ ದುರ್ಬಳಕೆ ತಡೆಗೆ ತಿದ್ದುಪಡಿಯ ಕುರಿತಾಗಿ ಪತ್ರಿಕೆಗಳಲ್ಲಿ ಪ್ರಸ್ತಾಪಿಸಲಾಗಿದ್ದು, ನಮ್ಮ ಸಂಸದರು ಈ ಬಗ್ಗೆ ಲೋಕಸಭೆಯಲ್ಲಿ ಪ್ರಸ್ತಾಪಿಸಿ, ಕಾಯಿದೆಯ ದುರ್ಬಳಕೆ ಮಾಡಿಕೊಳ್ಳುವವರಿಗೆ ಸೂಕ್ತ ದಂಡವನ್ನು ವಿಧಿಸುವಂತಾಗುವ ನಿಟ್ಟಿನಲ್ಲಿ ತಿದ್ದುಪಡಿ ತರಲು ಯತ್ನಿಸಲಿ ಎಂದು ಆಶಿಸುವೆ.

-ಎನ್.ರಾಮ ಭಟ್, ಉಡುಪಿ

ಉಡುಪಿನ ರೂಪಾಂತರವೋ, ಓಲೈಕೆಯ ರಾಜಕಾರಣವೋ?!

ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಜೆಲೆನ್ಸ್ಕಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರನ್ನು ಇತ್ತೀಚೆಗೆ ಭೇಟಿ ಮಾಡಿ ಒಂದಷ್ಟು ಮಾತುಕತೆ ನಡೆಸಿದರು. ಈ ವೇಳೆ ಜೆಲೆನ್ಸ್ಕಿ ಧರಿಸಿದ್ದ ಉಡುಪು ಹಲವರ ಗಮನ ಸೆಳೆದಿದೆ. 'ಇದು ಟ್ರಂಪ್ ಯುಗ' ಎಂಬ ಗ್ರಹಿಕೆಯಲ್ಲಿ ಅವರು ಧರಿಸಿದ್ದ ಉಡುಗೆಯು ಓಲೈಕೆ/ತುಷ್ಟೀಕರಣದೆಡೆಗಿನ ಒಂದು ಹೆಜ್ಜೆಯಾಗಿತ್ತೇ? ಎಂದು ಕೆಲವರು ಚರ್ಚಿಸುತ್ತಿದ್ದಾರೆ.

ರಾಜರಹಸ್ಯ

ಪೂಜಾ ಪಿಳ್ಳೈ
vveditoped@gmail.com

ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಜೆಲೆನ್ಸ್ಕಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜತೆಗಿನ ಇತ್ತೀಚಿನ ಮಾತುಕತೆಯ ವೇಳೆ ಧರಿಸಿದ್ದ ಉಡುಪು ನಿಜಕ್ಕೂ ಒಂದು 'ಸೂಟ್' ಆಗಿತ್ತೇ ಅಥವಾ ಇಲ್ಲವೇ ಎಂಬುದರ ಕುರಿತು ತೀರ್ಪುಗಾರರು ಇನ್ನೂ ತೀರ್ಮಾನಿಸಿಲ್ಲ! ಆದರೆ, ಇಲ್ಲಿ ಮುಖ್ಯವಾದ ವಿಷಯವೆಂದರೆ ಟ್ರಂಪ್ ಮಹಾಶಯರು ಅದನ್ನು ಮೆಚ್ಚಿಕೊಂಡುಬಿಟ್ಟಿದ್ದಾರೆ; ಉಕ್ರೇನ್‌ನಂಥ ಸಂಕಷ್ಟದಲ್ಲಿರುವ ದೇಶದ ಪಾಲಿಗೆ ಇದು ಸಣ್ಣ ಮಟ್ಟಿಗಿನ ಸಮಾಧಾನವನ್ನು ತಂದುಕೊಡುವ ಒಂದು ಬೆಳವಣಿಗೆ ಎಂದು ಭಾವಿಸಬೇಕೇ?!

ಟ್ರಂಪ್ ಅವರನ್ನು ನಿಭಾಯಿಸುವುದು, ನಿರ್ವಹಿಸುವುದು ಒಂದೊಮ್ಮೆ 'ರಕ್ಷಣಾತ್ಮಕ ಆಟ'ದಂಥ ಒಂದು ಕಸರತ್ತು ಎಂದಾದಲ್ಲಿ, ಉಕ್ರೇನ್ ಮತ್ತು ರಷ್ಯಾ ನಡುವಿನ ಸಂಘರ್ಷವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಚರ್ಚಿಸಲೆಂದು ವಾಷಿಂಗ್ಟನ್ ಡಿ.ಸಿ.ಯಲ್ಲಿ ಇತ್ತೀಚೆಗಷ್ಟೇ ಸಭೆ ಸೇರಿದ್ದ ಐರೋಪ್ಯ ಒಕ್ಕೂಟದ ನಾಯಕರು ಈ ನಿಟ್ಟಿನಲ್ಲಿ ಕೊಂಚ ಯಶಸ್ಸನ್ನು ಸಾಧಿಸಿದರು ಎನ್ನಲಡ್ಡಿಯಿಲ್ಲ!

ಟ್ರಂಪ್ ಪ್ರಸ್ತಾಪಿಸಿದ 'ಶಾಂತಿಪಾಲನೆ'ಯ ನಿಯಮಗಳು/ಷರತ್ತುಗಳ ಬಗ್ಗೆ ಒಂದಿಷ್ಟು ಅನುಮಾನಗಳಿದ್ದರು ಕೂಡ, ಈ ಕುರಿತಾದ ಗುಸುಗುಸು ಮಾತುಗಳು ಸದರಿ ಶೃಂಗಸಭೆಯಲ್ಲಿ ಗುನುಗುತ್ತಿದ್ದವು, ವಿಚಾರ ವಿನಿಮಯದಲ್ಲಿ ಒಂದು ಮಟ್ಟದ ಸೌಹಾರ್ದತೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಬರೋಬ್ಬರಿ 3 ವರ್ಷಗಳಿಂದ ನಡೆಯುತ್ತಿರುವ ಈ ಸಂಘರ್ಷಕ್ಕೆ ಇತಿಶ್ರೀ ಹಾಡಲು ಆತಿಥೇಯರು ಮಾಡಿದ ಪ್ರಯತ್ನಗಳಿಗೆ ಎಲ್ಲಾ ಅತಿಥಿಗಳೂ ಸಾಕಷ್ಟು ಕೃತಜ್ಞತೆಯನ್ನು ವ್ಯಕ್ತಪಡಿಸಿದರು ಎನ್ನಿ. ಎಲ್ಲಕ್ಕಿಂತ ಮುಖ್ಯವಾಗಿ ಇಂಥ ಪ್ರತಿಯೊಂದು ಬೆಳವಣಿಗೆಯನ್ನೂ ಹದ್ದಿನಕಣ್ಣಲ್ಲಿ ನೋಡುವ ರಾಜಕೀಯ ವೀಕ್ಷಕರ ಗಮನ ಸೆಳೆದಿದ್ದು– ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಜೆಲೆನ್ಸ್ಕಿ ಅವರು ಧರಿಸಿದ್ದ 'ಸೂಟ್' (ಅಥವಾ ಸೂಟ್‌ನಂಥ ಒಂದು ಉಡುಪು; ಈ ಕುರಿತು ನಂತರ ಗಮನ ಹರಿಸೋಣ!).

ಬಹುತೇಕರಿಗೆ ಗೊತ್ತಿರುವಂತೆ, ಕಳೆದ ಫೆಬ್ರವರಿಯಲ್ಲಿ ಟ್ರಂಪ್‌ರ ಭೇಟಿಗೆ ಶ್ವೇತಭವನಕ್ಕೆ ಆಗಮಿಸಿದ್ದ ಜೆಲೆನ್ಸ್ಕಿ, ಆ ಸಂದರ್ಭಕ್ಕೆ ತಕ್ಕಂಥ 'ಸೂಕ್ತ' ಉಡುಪನ್ನು ಧರಿಸಿರಲಿಲ್ಲ (ಅಥವಾ ಧರಿಸಲು ನಿರಾಕರಿಸಿದರು) ಎಂಬ ಕಾರಣಕ್ಕೆ ಸಾಕಷ್ಟು ಗೇಲಿಗೂ, ನಿಂದನೆಗೂ ಒಳಗಾಗಿದ್ದರು. ಹೀಗಾಗಿ ಜೆಲೆನ್ಸ್ಕಿ ಅವರ ಶ್ವೇತಭವನ ಭೇಟಿಗೆ ಒಂಥರಾ ಕರಾಳಛಾಯೆ ಆವರಿಸಿತ್ತು. ಅದಕ್ಕೆ ಹೋಲಿಸಿದಾಗ, ಇತ್ತೀಚಿನ ಅವರ ಟ್ರಂಪ್ ಭೇಟಿಯ ಸಂದರ್ಭವು ಸಾಕಷ್ಟು ಪ್ರಗತಿಯನ್ನು ಎತ್ತಿ ತೋರಿಸಿದೆ ಎನ್ನಲಡ್ಡಿಯಿಲ್ಲ!

ಫೆಬ್ರವರಿಯಲ್ಲಿ ಬಂದಿದ್ದಾಗ ಜೆಲೆನ್ಸ್ಕಿ 'ಆರ್ಮಿಗ್ರೀನ್ ಸ್ವೆಟ್‌ಶರ್ಟ್' ಮತ್ತು 'ಕಾರ್ಗೋ ಪ್ಯಾಂಟ್' ಧರಿಸಿ ಬಂದಿದ್ದನ್ನು ಕಂಡು ಟ್ರಂಪ್ ಕೆಂಡಗಣ್ಣೇಶ್ವರನೇ ಆಗಿಬಿಟ್ಟಿದ್ದರು. ''ಓಹ್, ಏನ್ ಸಖತ್ತಾಗಿ ಡ್ರೆಸ್ ಮಾಡ್ಕೊಂಡು ಬಂದಿದ್ದೀರ್ರೀ...!!'' ಎಂಬ ವ್ಯಂಗ್ಯದ ಧಾಟಿಯಲ್ಲೇ ಜೆಲೆನ್ಸ್ಕಿಯವರನ್ನು ಅವರು ಸ್ವಾಗತಿಸಿದ್ದರು. ಸದರಿ 'ಮಿಲಿಟರಿ-ಪ್ರೇರಿತ' ಉಡುಪಿಗೂ ಉಕ್ರೇನ್ ಅಧ್ಯಕ್ಷರಿಗೂ ನಿಕಟ ಸಂಬಂಧವಿದೆ. 2022ರಲ್ಲಿ ರಷ್ಯಾ ಆಕ್ರಮಣಕ್ಕೆ ಶುರುವಿಟ್ಟುಕೊಂಡಾಗಿನಿಂದಲೂ ಜೆಲೆನ್ಸ್ಕಿ ಅವರು ಅಮೆರಿಕದ ಅಂದಿನ ಅಧ್ಯಕ್ಷ ಜೋ ಬೈಡನ್‌ರನ್ನು ಐದು ಬಾರಿ ಭೇಟಿಯಾಗಿದ್ದಿದೆ. ಇಂಥ ಪ್ರತಿಬಾರಿಯೂ ಅವರು ಧರಿಸುತ್ತಿದ್ದ ದಿರಿಸಿನ ರೂಪಾಂತರ ಇದಾಗಿತ್ತು. ಆದರೆ, ಟ್ರಂಪ್ ದರ್ಬಾರು ಶುರುವಾದ ನಂತರ, ಈ ಉಡುಪು ಒಂದಿಷ್ಟು ಕಿರಿಕಿರಿಯನ್ನು ಉಂಟುಮಾಡಿತೆನ್ನಬೇಕು; ಟ್ರಂಪ್ ಅವರ 'ಮೇಕ್ ಅಮೆರಿಕ ಗ್ರೇಟ್ ಅಗೇನ್' (MAGA) ಅಭಿಯಾನದ ಮುಖವಾಣಿಯಾಗಿರುವ "Real America's Voice' ವಾಹಿನಿಗಾಗಿ ಕಾರ್ಯನಿರ್ವಹಿಸುವ ಶ್ವೇತಭವನದ ಪತ್ರಿಕಾ ತಂಡದ ಸದಸ್ಯ ಬ್ರಿಯಾನ್ ಗ್ಲೆನ್ ಅವರಂತೂ ಜೆಲೆನ್ಸ್ಕಿ ಅವರ ಈ ವೇಷಭೂಷಣವನ್ನು ''ದೇಶದ ಅತ್ಯುನ್ನತ ಹುದ್ದೆಗೆ ತೋರಿದ ಅಗೌರವವಿದು'' ಎಂದೇ ಅಪಸ್ವರ ಹಾಡಿದ್ದುಂಟು.

ಹೀಗಾಗಿ, ಕಳೆದ ಫೆಬ್ರವರಿಯಲ್ಲಿ ನಡೆದ ಈ ಪ್ರಸಂಗವು ಒಂದು ರೀತಿಯಲ್ಲಿ , 'ಪ್ರದರ್ಶನದ ಪರಿ'ಯ ಕುರಿತು ತಮ್ಮದೇ ಆದ ಅಂತರ್ಬೋಧೆಯ ಗ್ರಹಿಕೆಯನ್ನು ಹೊಂದಿದ್ದ, ತಂತಮ್ಮ ಕಾರ್ಯಕ್ಷೇತ್ರಗಳನ್ನು ಉದ್ದೇಶಿಸಿ ಮಾತಾಡುವಾಗ ಎಂಥ ಉಡುಪನ್ನು ಧರಿಸಬೇಕು ಎಂಬುದನ್ನು ಚೆನ್ನಾಗಿ ತಿಳಿದಿದ್ದ ಈ ಇಬ್ಬರು ಮಹಾಶಯರ ನಡುವಿನ ಒಂದು ಹಿತಾಸಕ್ತಿಯ ಘರ್ಷಣೆಯಾಗಿಬಿಟ್ಟಿತ್ತು ಎನ್ನಲಡ್ಡಿಯಿಲ್ಲ. ಹಾಗೆ ನೋಡಿದರೆ, ಜೆಲೆನ್ಸ್ಕಿ ಮತ್ತು ಟ್ರಂಪ್ ಇಬ್ಬರಿಗೂ ಪ್ರದರ್ಶನ ಕಲೆಯ ವಿಷಯದಲ್ಲಿ ಅವರದ್ದೇ ಆದ ಇತಿಹಾಸವಿದೆ; ಜೆಲೆನ್ಸ್ಕಿ ಅವರು 2019ರಲ್ಲಿ ಉಕ್ರೇನ್ ಅಧ್ಯಕ್ಷರಾಗುವುದಕ್ಕೂ ಮುನ್ನ ಓರ್ವ ಯಶಸ್ವಿ ಹಾಸ್ಯಗಾರ ಮತ್ತು ನಟರಾಗಿದ್ದವರು, 'ಸರ್ವೆಂಟ್ ಆಫ್ ದಿ ಪೀಪಲ್' ಎಂಬ ಸರಣಿಯಲ್ಲಿ ವಹಿಸಿದ ಪ್ರಮುಖ ಪಾತ್ರದಿಂದಾಗಿ ಹೆಸರುವಾಸಿಯಾಗಿದ್ದವರು (ರಾಜಕೀಯ ವೃತ್ತಿಜೀವನಕ್ಕೆ ಪದಾರ್ಪಣ ಮಾಡಲು ಇದೇ ಅವರಿಗೆ ಸ್ಫೂರ್ತಿ ನೀಡಿತು ಎನ್ನಲಾಗುತ್ತದೆ). 2022ರ ಫೆಬ್ರವರಿಯಲ್ಲಿ ರಷ್ಯಾದ ಆಕ್ರಮಣ ಶುರುವಾದ ನಂತರ, ಅವರ 'ವಾರ್ಡ್‌ರೋಬ್'ನಲ್ಲಿ ಬದಲಾವಣೆಯಾಯಿತು, ಯುದ್ಧಕಾಲದ ನಾಯಕನಾಗಿ ಅವರು ತಳೆದ ಹೊಸ ನಿಲುವನ್ನು ಅಥವಾ ರೂಪಾಂತರವನ್ನು ಅದು ಪ್ರತಿಬಿಂಬಿಸಿತು. ತಮ್ಮ ದೇಶದ ಸಶಸ್ತ್ರ ಪಡೆಗಳೊಂದಿಗೆ ತಮಗಿರುವ ಸಹಮತ ಮತ್ತು ಐಕಮತ್ಯವನ್ನು ತೋರಿಸಿಕೊಳ್ಳಲು ವಿನ್ಯಾಸಗೊಳಿಸಲಾದ ಉಡುಪು ಅದಾಗಿತ್ತು. ಅಷ್ಟೇಕೆ, 2022ರ ಡಿಸೆಂಬರ್‌ನಲ್ಲಿ 'ದಿ ಫೈನಾನ್ಷಿಯಲ್ ಟೈಮ್ಸ್' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಕ್ರಿಸ್ಟೋಫರ್ ಮಿಲ್ಲರ್ ಜತೆ ಜೆಲೆನ್ಸ್ಕಿ ಮಾತನಾಡುತ್ತಾ, ''ರಷ್ಯಾ ಜತೆಗಿನ ಸಂಘರ್ಷದಲ್ಲಿ ಉಕ್ರೇನ್ ವಿಜಯ ಸಾಧಿಸಿದ ನಂತರವಷ್ಟೇ ನಾನು ಸೂಟ್ ಮತ್ತು ಟೈ ಧರಿಸುವೆ, ಹಾಗೂ ಗಡ್ಡವನ್ನು ಶೇವ್ ಮಾಡುವೆ'' ಎಂದು ಹೇಳಿಕೊಂಡಿದ್ದುಂಟು.

ಇನ್ನು ಟ್ರಂಪ್ ವಿಷಯಕ್ಕೆ ಬರೋಣ. ಅಮೆರಿಕದ ಅಧ್ಯಕ್ಷರಾದ ಮೊದಲ ರಿಯಾಲಿಟಿ ಟಿವಿ ಸ್ಟಾರ್ ಎನಿಸಿಕೊಂಡಿರುವ ಟ್ರಂಪ್ ಕೂಡ ನಿರ್ದಿಷ್ಟ ಸಂದೇಶಗಳನ್ನು ರವಾನಿಸಲು ಹೀಗೆ ವಿಭಿನ್ನ ಉಡುಪುಗಳನ್ನು ಧರಿಸುವುದಿದೆ. ದೇಶಭಕ್ತಿಯನ್ನು ತಮ್ಮದೇ ಆದ ರೀತಿಯಲ್ಲಿ ಬಿಂಬಿಸಲೆಂದು ಅವರು ಅಮೆರಿಕದ ರಾಷ್ಟ್ರಧ್ವಜದಲ್ಲಿನ ಬಣ್ಣಗಳನ್ನು ಒಳಗೊಂಡಿರುವ ರೀತಿಯಲ್ಲಿ ನೀಲಿ ಸೂಟ್, ಕೆಂಪು ಟೈ ಮತ್ತು ಬಿಳಿ ಅಂಗಿಯನ್ನು ಧರಿಸಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದಿದೆ. ಅವರ ಈ 'ವಸ್ತ್ರಸಂಯೋಜನೆ'ಯು ಅವರ ಆಡಳಿತವರ್ಗದ ಇತರ ಗಮನಾರ್ಹ ಸದಸ್ಯರಿಗೂ ಒಂದು ಮೇಲ್ಪಂಕ್ತಿ ಸಮವಸ್ತ್ರವಾಗಿದ್ದಿದೆ. ಅದರಲ್ಲೂ ನಿರ್ದಿಷ್ಟವಾಗಿ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಹಾಗೂ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಈ ವಸ್ತ್ರಸಂಹಿತೆಯನ್ನು ಅನುಸರಿಸುತ್ತಾರೆ. (ಟ್ರಂಪ್ ಮಹಾಶಯರ ಕಕ್ಷೆಯಲ್ಲಿರುವ ಮಹಿಳೆಯರಿಗೆ ಅವರದ್ದೇ ಆದ ಸಮವಸ್ತ್ರವಿದೆ– ಪರಿಪೂರ್ಣವಾಗಿ ಬಾಚಿಕೊಂಡು ಕ್ಲಿಪ್‌ನಿಂದ ಬಿಗಿದುಕೊಂಡಿರುವ ತಲೆಗೂದಲು, ದೇಹವನ್ನು ಅಪ್ಪಿ

ಹಿಡಿದಂತಿರುವ ಕವಚದಂಥ ಉಡುಪು ಹಾಗೂ ಕುತ್ತಿಗೆಯಲ್ಲಿ ನೇತಾಡುವ ಚಿನ್ನದ ಶಿಲುಬೆಯ ಸರ ಅದರಲ್ಲಿ ಸೇರಿವೆ ಎಂಬುದು ನಿಮ್ಮ ಗಮನಕ್ಕೆ). ಎಲ್ಲಕ್ಕಿಂತ ಮಿಗಿಲಾಗಿ 'ರಾಜನಿಷ್ಠೆ'ಯನ್ನು ಗೌರವಿಸುವ, ಅದಕ್ಕೆ ಇನ್ನಿಲ್ಲದ ಮಹತ್ವ ನೀಡುವ ಅಧ್ಯಕ್ಷರೊಬ್ಬರ ಅಧೀನದಲ್ಲಿ ಕಾರ್ಯನಿರ್ವಹಿಸುವಾಗ ಇಂಥದೊಂದು 'ವೇಷಭೂಷಣ-ನಿಷ್ಠೆ'ಯು, ಸ್ವತಃ ಆ ವ್ಯಕ್ತಿಗೆ ತೋರುವ ನಿಷ್ಠೆಯ ಮೌನಸೂಚಕವೇ ಆಗಿರುತ್ತದೆ.

ಈ ಕಾರಣದಿಂದಾಗಿಯೇ, ಟ್ರಂಪ್ ಜತೆಗಿನ ತಮ್ಮ ಎರಡನೇ ಭೇಟಿಗಾಗಿ ಶ್ವೇತಭವನಕ್ಕೆ ತೆರಳುವಾಗ ಯಥೋಚಿತ ವೇಷಭೂಷಣ ಧರಿಸುವ ಜೆಲೆನ್ಸ್ಕಿ ಅವರ ನಿರ್ಧಾರವನ್ನು ಒಂದು 'ಶಮನಕಾರಕ' ಅಥವಾ 'ಓಲೈಕೆ'ಯ ವರ್ತನೆಯಾಗಿ ಕಾಣಲಾಗಿದೆ; ಇದು ಮತ್ತೊಬ್ಬರ ತುಷ್ಟೀಕರಣದ ಅಥವಾ ಅವರನ್ನು ಖುಷಿಪಡಿಸುವ ಮಹತ್ತರ ಇಚ್ಛೆಯ ಸೂಚಕವಾಗಿದೆ ಎನ್ನಬಹುದು. ಟೈ ರಹಿತವಾಗಿರುವ, ಮಿಲಿಟರಿಯ ಗುರುತುಗಳೊಂದಿಗಿನ ಸಂಪೂರ್ಣ ಕಪ್ಪುಬಣ್ಣದ ಈ ದಿರಿಸು ಒಂದು 'ಸೂಟ್' ಎನಿಸಿಕೊಳ್ಳಲು ಅರ್ಹವಾಗಿದೆಯೇ ಅಥವಾ ಇಲ್ಲವೇ ಎಂಬುದು ಕೆಲವರ ಪ್ರಶ್ನೆಯಾಗಿತ್ತು; ಹೀಗಾಗಿ, ನ್ಯಾಟೋ ಶೃಂಗಸಭೆಗೂ ಮುನ್ನ ಹಮ್ಮಿಕೊಳ್ಳಲಾಗಿದ್ದ ಭೋಜನಕೂಟದಲ್ಲಿ ಉಕ್ರೇನ್ ಅಧ್ಯಕ್ಷರು ಇಂಥದೇ ಉಡುಪನ್ನು ಧರಿಸಿ ಭಾಗವಹಿಸಿದಾಗಿನಿಂದ ಈ ವಿಷಯದ ಕುರಿತು ಸಾಕಷ್ಟು ಚರ್ಚೆ ನಡೆಯುತ್ತಿದ್ದುದುಂಟು. ಮಾತ್ರವಲ್ಲ, ಬೆಟ್ಟಿಂಗ್ ಕಾರ್ಯಕ್ಕಾಗಿ ಬಳಸಲಾಗುವ 'ಪಾಲಿಮಾರ್ಕೆಟ್' ಎಂಬ ಒಂದು ಕ್ರಿಪ್ಟೋಕರೆನ್ಸಿ ವೇದಿಕೆಯಲ್ಲೂ ಇದು ಭಾರಿ ವಿವಾದವನ್ನು ಹುಟ್ಟುಹಾಕಿತು. ಎಷ್ಟರ ಮಟ್ಟಿಗೆ ಎಂದರೆ, ''ಉಕ್ರೇನ್ ಅಧ್ಯಕ್ಷ ಜೆಲೆನ್ಸ್ಕಿ ಜುಲೈಗೂ ಮೊದಲು ಸೂಟ್ ಧರಿಸುತ್ತಾರೋ ಇಲ್ಲವೋ?'' ಎಂಬ ವಿಷಯದ ಮೇಲೆ ಹಣವನ್ನು ಪಣವಾಗಿ ಇಡುವಂತೆ ಪಂಟರ್‌ಗಳನ್ನು ಕೇಳಲಾಯಿತು!

200 ಮಿಲಿಯನ್ ಡಾಲರ್‌ಗಿಂತಲೂ ಹೆಚ್ಚು ಹಣವನ್ನು ಪಣವಾಗಿ ಇರಿಸಿಕೊಂಡಿದ್ದ ಈ ವಿವಾದ ಅಥವಾ ಚರ್ಚಾ ವಿಷಯವು ಒಂದು ಹಂತದಲ್ಲಿ ಭುಗಿಲೆದ್ದಿತು. ಅಂದರೆ, ನ್ಯಾಟೋ ಭೋಜನಕೂಟದ ಫೋಟೋಗಳು ಹೊರಬಂದ ನಂತರ, 'ಜೆಲೆನ್ಸ್ಕಿ ಅವರು ಸೂಟ್ ಅನ್ನು ಧರಿಸುತ್ತಾರೆ' ಎಂಬ ಗ್ರಹಿಕೆಗೆ ವಿರುದ್ಧವಾಗಿ ಪಣವನ್ನು ಹೂಡಿದ್ದವರ ಕಡೆಗೆ ಈ ಜೂಜು ವಾಲಿಕೊಂಡಾಗ ಸದರಿ ಚರ್ಚಾವಿಷಯಕ್ಕೆ ತೀವ್ರತೆ ಒದಗಿತು. ಹೀಗೆ ವಿರುದ್ಧ ನಿಲುವನ್ನು ತೆಗೆದುಕೊಂಡವರು, ಬೆಟ್ಟಿಂಗ್ ಮಾರುಕಟ್ಟೆಯಲ್ಲಿ ಈ ಚರ್ಚಾವಿಷಯವನ್ನು ಕುಶಲ ರೀತಿಯಲ್ಲಿ ತಿರುಚಲಾಗಿದೆ ಎಂದು ಆರೋಪಿಸಿ, ಈ ಕುರಿತಾಗಿ ಮೊಕದ್ದಮೆ ಹೂಡುವುದಾಗಿ ಬೆದರಿಸಿದರು. ಈ ವಿಷಯದ ಬಗೆಗಿನ 'ಭರತವಾಕ್ಯ' ಅಥವಾ ಅಂತಿಮ ಮಾತು ಹೊಮ್ಮಿದ್ದು ಪುರುಷರ ಉಡುಪುಗಳಿಗೆ ಸಂಬಂಧಿಸಿದ Put This On ಎಂಬ ಬ್ಲಾಗ್‌ನ ಸಂಪಾದಕ ಡೆರೆಕ್ ಗೈ ಅವರಿಂದ. ಅವರೆಂದಿದ್ದು ಹೀಗೆ: ''ಜೆಲೆನ್ಸ್ಕಿ ಧರಿಸಿದ್ದ ಸೂಟು, ಒಂದು 'ಸೂಟ್'ನ ತಾಂತ್ರಿಕ ವ್ಯಾಖ್ಯಾನಕ್ಕೆ ತಕ್ಕಂತೆ ಇತ್ತಾದರೂ, ಅಂದರೆ ಒಂದೇ ಬಟ್ಟೆಯಿಂದ ಕತ್ತರಿಸಿ ಜಾಕೆಟ್ ಮತ್ತು ಪ್ಯಾಂಟ್ ಅನ್ನು ಹೊಲಿದು ರೂಪಿಸಿದ ದಿರಿಸನ್ನು ಅದು ಒಳಗೊಂಡಿತ್ತಾದರೂ, ಮಿಲಿಟರಿ-ಪ್ರೇರಿತ ಗುರುತುಗಳನ್ನೂ ಅದು ಒಳಗೊಂಡಿತ್ತು. ಅಂದರೆ, ಅದರ ಕಾಲರ್‌ನ ಆಕಾರ, ಹಿಮ್ಮಡಚಿದ ಕೋಟಿನ ಎದೆಯ ಭಾಗದ ಸ್ವರೂಪ ಹಾಗೂ ನಾಲ್ಕು 'ಪ್ಯಾಚ್ ಪಾಕೆಟ್‌ಗಳನ್ನು' ಒಳಗೊಂಡಿದ್ದ ಆ ಉಡುಪು, ಒಂದು ಸೂಟು ಹೊಂದಿರಬೇಕಾದ ಸಾಮಾಜಿಕ ನಿರೀಕ್ಷೆಗಳಿಗೆ ತಕ್ಕಂತಿರಲಿಲ್ಲ...''.

ಇದೆಲ್ಲ ವ್ಯಾಖ್ಯಾನಗಳು, ವಿವರಣೆಗಳು ಏನೇ ಇರಲಿ, ಅಂತಿಮವಾಗಿ ಟ್ರಂಪ್ ಮಹಾಶಯರು ಆ 'ಸೂಟ್' ಅನ್ನು ಇಷ್ಟಪಟ್ಟರು ಎಂಬುದು ಮಾತ್ರ ಮುಖ್ಯವಾಗಿತ್ತು! 'ಓವಲ್ ಕಚೇರಿ'ಯಲ್ಲಿ ಮಾಧ್ಯಮದವರ ಸಮ್ಮುಖ ಇರುವಾಗ ಮತ್ತದೇ ಇಯಾನ್ ಗ್ಲೆನ್ ಅವರು ಈ ಸಲ ''ನೀವು ಅದ್ಭುತವಾಗಿ ಕಾಣಿಸುತ್ತಿದ್ದೀರಿ'' ಎಂದು ಜೆಲೆನ್ಸ್ಕಿಯವರನ್ನು ಮನದುಂಬಿ ಪ್ರಶಂಸಿಸಿದರು. ಇದನ್ನು ಕೇಳಿಸಿಕೊಂಡ ಟ್ರಂಪ್ ಮಹಾಶಯರು ಜೆಲೆನ್ಸ್ಕಿಯವರ ಭುಜವನ್ನೊಮ್ಮೆ ಲಘುವಾಗಿ ಅದುಮಿ, ''ನಾನೂ ಅದನ್ನೇ ಹೇಳಬಯಸುವೆ'' ಎಂದರು!

ಸಂಕಷ್ಟದಲ್ಲಿರುವ ಉಕ್ರೇನ್ ದೇಶದ ಅಧ್ಯಕ್ಷ ಜೆಲೆನ್ಸ್ಕಿ ಕದನವಿರಾಮವನ್ನು ಆಶಿಸಿದ್ದರು, ಆದರೆ ಅವರಿಗೆ ಪ್ರಾಯಶಃ ಸಿಗುವುದು ಇಂಥ ಮೆಚ್ಚುಗೆ ಮಾತ್ರವೇ ಅನಿಸುತ್ತದೆ!

(ಲೇಖಕಿ ಹಿರಿಯ ಪತ್ರಕರ್ತೆ)

(ಕೃಪೆ: ದಿ ಇಂಡಿಯನ್ ಎಕ್ಸ್‌ಪ್ರೆಸ್)

ಭಟ್ಟರ್ ಸ್ಕಾಚ್

- **ಅಶ್ವತ್ಥ್ ವೈ., (ಇಮೇಲ್ ಮೂಲಕ)**
ಭಟ್ರೇ, ಜೀವನದ ಅರ್ಥವೇನು?
– **ಜೀವನವು ನೀವೇ ಬರೆಯುವ ಕಥೆ, ಅರ್ಥವನ್ನು ನೀವೇ ಕಂಡುಕೊಳ್ಳಬೇಕು!**

- **ಜೀವನ್ ನಾಯಕ, ಹುಬ್ಬಳ್ಳಿ**
ಭಟ್ರೇ, ಸಂತೋಷವನ್ನು ಹೇಗೆ ಪಡೆಯುವುದು?
– **ಸಂತೋಷವು ಹೊರಗಿನಿಂದ ಬರುವುದಿಲ್ಲ, ಅದು ನಿಮ್ಮೊಳಗಿದೆ.**

- **ರಾಜೀವ ಅನಂತ, ಬೆಂಗಳೂರು**
ಭಟ್ರೇ, ಭಯವನ್ನು ಹೇಗೆ ಜಯಿಸುವುದು ಅಂತ ಖಾವಂದರನ್ನು ಕೇಳಿದರೆ ಏನು ಹೇಳಬಹುದು?
– **ಭಯವನ್ನು ಗುಂಡಿ ತೋಡಿ ಮುಚ್ಚುವುದರಿಂದ ಮಾತ್ರ ಅದನ್ನು ಜಯಿಸಬಹುದು ಎನ್ನಬಹುದೇನೋ?!**

- **ರವಿ, ಹೆಗ್ಗಡದೇವನಕೋಟೆ**
ಭಟ್ರೇ, ಪ್ರೀತಿ ಎಂದರೇನು ಅಂತ ಗೊತ್ತಾಗ್ತಾ ಇಲ್ಲವಲ್ಲ?
– **ಪ್ರೀತಿ ಅಂದ್ರೆ ಇನ್ನೊಬ್ಬರ ಸಂತೋಷವನ್ನು ನಿಮ್ಮದಾಗಿಸಿಕೊಳ್ಳುವುದು!**

- **ಗೋವಿಂದ ಹೊರಟ್ಟಿ, ಧಾರವಾಡ**
ಭಟ್ರೇ, ಬದಲಾವಣೆಯನ್ನು ಹೇಗೆ ಸ್ವೀಕರಿಸಬೇಕು ?
– **ಅದು ಬಂದು ನಿನ್ನ ಮುಂದೆ ಕುಳಿತಾಗ ನೀನು ಸ್ವೀಕರಿಸದೇ ಇರುವುದಾದರೂ ಹೇಗೆ?!**

- **ನಾರಾಯಣ ಜಿ. ಭಟ್, ಸಿದ್ದಾಪುರ**
ಭಟ್ರೇ, ಆಧುನಿಕ ಜಗತ್ತಿನಲ್ಲಿ ಬುದ್ಧಿವಂತಿಕೆ ಎಂದರೆ ಏನು?
– **ಗೂಗಲ್‌ನಲ್ಲಿ ವೇಗವಾಗಿ ಹುಡುಕಿ, ಅದನ್ನು ನಿಮ್ಮದೇ ಜ್ಞಾನವೆಂದು ನಂಬಿಸುವುದು!**

- **ರಾಮಗೋಪಾಲ ಜೋಶಿ, ಚಿಕ್ಕಮಗಳೂರು**
ಭಟ್ರೇ, ಸಂತೋಷದ ರಹಸ್ಯವೇನು ಅಂತ ಕೇಳಿದ್ರೆ ಏನು ಹೇಳ್ತೀರಾ ?
– **ನಿಮ್ಮ ನೆರೆಹೊರೆಯವರಿಗಿಂತ ಉತ್ತಮವಾದ ಫೋಟೋಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡುವುದು!**

- **ರಾಧಾ ಶರ್ಮ, ಗುಂಡ್ಲಿ**
ಭಟ್ರೇ, ನಿಮ್ಮ ಪ್ರಕಾರ ಯಶಸ್ಸು ಎಂದರೆ ಏನು?
– **ನೀವು ಇಷ್ಟಪಡದ ಕೆಲಸವನ್ನು ಇಷ್ಟಪಡದ ಜನರೊಂದಿಗೆ ಮಾಡಿ, ನಂತರ ಅದನ್ನು ಇಷ್ಟಪಡುವಂತೆ ನಟಿಸುವುದು!**

- **ಶಂಕರ ಪಾಟೀಲ, ದಾವಣಗೆರೆ**
ಭಟ್ರೇ, ಭವಿಷ್ಯವನ್ನು ಹೇಗೆ ರೂಪಿಸುವುದು?
– **ಭವಿಷ್ಯವನ್ನು ರೂಪಿಸುವುದು ಸುಲಭ, ನಿನ್ನ ಜಾತಕವನ್ನು ನಂಬು, ನಂತರ ಅದಕ್ಕೆ ವಿರುದ್ಧವಾಗಿ ನಡೆದುಕೋ!**

ಜೀವನೀಯವಾದ ಹಾಲು, ಹಾಲಾಹಲವಾಗಿದ್ದು ಹೇಗೆ?

ಹಸುವಿನ ಸ್ಥಿತಿಗತಿಗಳು ಹಾಲಿನ ಗುಣವರ್ಧನೆಗೆ ಎಷ್ಟು ಮುಖ್ಯವೋ, ಅಂತೆಯೇ ಅದನ್ನು ಬಳಸುವ ರೀತಿಯೂ ಅಷ್ಟೇ ಮುಖ್ಯ. ಹಾಲು ಇಡೀ ಜಗತ್ತಿನಲ್ಲಿ ಸಿಗುವ ಅತ್ಯಂತ ಆರೋಗ್ಯಕರವಾದಂಥ ವಸ್ತುವಾದರೂ ಅದನ್ನು ನಾವು ಸರಿಯಾಗಿ ಬಳಸದಿದ್ದರೆ ಅದರಿಂದಲೂ ತೊಂದರೆ ತಪ್ಪಿದ್ದಲ್ಲ.

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ನಿಮಗಿದು ಗೊತ್ತೇ? ಯಾವುದೇ ಘನಾಹಾರವಿಲ್ಲದೆ ಬರೀ ನೀರನ್ನೇ ಕುಡಿದು ಯಾರೂ ಹೆಚ್ಚು ದಿನ ಬದುಕಲು ಸಾಧ್ಯವಿಲ್ಲ. ಆದರೆ, ಕೇವಲ ಕ್ಷೀರವನ್ನು ಸೇವಿಸಿ ವರ್ಷಾನುಗಟ್ಟಲೆ ಎಲ್ಲಾ ಧಾತುಗಳನ್ನೂ ಪೋಷಿಸಿಕೊಂಡು ಬದುಕಲು ಸಾಧ್ಯವಿದೆ. ಯೋಗಿಗಳು, ಸನ್ಯಾಸಿಗಳು, ಹಲವಾರು ಸಾಧಕರು ಕೇವಲ ಹಾಲನ್ನು ತಮ್ಮ ಆಹಾರವಾಗಿಸಿಕೊಂಡು ಉತ್ತಮ ಸಾಧನೆಯನ್ನು ಮಾಡುತ್ತಿರುವ ಉದಾಹರಣೆಗಳನ್ನು ನಾವು ಕಾಣಬಹುದು. ಹಾಗಾದರೆ ಹಾಲಿನ ವೈಶಿಷ್ಟಗಳೇನು? ಬನ್ನಿ, ಆಯುರ್ವೇದ ಶಾಸ್ತ್ರದಲ್ಲಿರುವ ಹಾಲಿನ ವರ್ಣನೆಯನ್ನು ಗಮನಿಸೋಣ. ಆಯುರ್ವೇದವು ‘ಕ್ಷೀರಂ ಜೀವನೀಯಾನಾಂ ಶ್ರೇಷ್ಠಮ್’ ಎಂದು ಶ್ಲಾಘಿಸಿದೆ. ಅಂದರೆ, ನಾವು ಬದುಕಲು ಬೇಕಾದ ಪದಾರ್ಥಗಳಲ್ಲಿ ಹಾಲು ಅತ್ಯಂತ ಶ್ರೇಷ್ಠವಾದದ್ದು ಎಂದರ್ಥ. ಇದಕ್ಕೆ ಹಲವಾರು ಕಾರಣಗಳಿವೆ. ಹಾಲು ಎಲ್ಲಾ ಪ್ರಾಣಿಗಳಿಗೂ ಹುಟ್ಟುತ್ತಲೇ ಸಾತ್ಮ್ಯವಾಗಿರುತ್ತದೆ. ಆಯುರ್ವೇದವು ಹೇಳುವಂತೆ ಬದುಕೆಂಬುದು ಶರೀರ-ಇಂದ್ರಿಯ-ಮನಸ್ಸು-ಆತ್ಮ ಈ ನಾಲ್ಕರ ಒಕ್ಕೂಟ. ಹಾಲು ಆತ್ಮವನ್ನು ಬಿಟ್ಟು ಉಳಿದ ಮೂರೂ ಘಟಕಗಳನ್ನು ಹುಟ್ಟಿದ ದಿನದಿಂದಲೂ ಪೋಷಿಸುತ್ತಾ ಬರುವ ಉತ್ತಮ ಆಹಾರವಾಗಿದೆ. ಹಾಗಾಗಿ ಇದು ಆಗ ತಾನೇ ಹುಟ್ಟಿದ ಹಸುಳೆಯಿಂದ ಹಿಡಿದು ಮರಣಶಯ್ಯೆಯಲ್ಲಿರುವ ಮುದುಕರವರೆಗೆ ಎಲ್ಲರಿಗೂ ಒಗ್ಗುವ ಉತ್ತಮ ಆಹಾರ.

ತಾಯಿಯು (ಪ್ರಾಣಿ) ತಾನು ಸೇವಿಸಿದ ಆಹಾರದ ಸಾರಭಾಗವೇ ಈ ಹಾಲು. ಜೀರ್ಣಿಸಲು ಸುಲಭವಾಗುವಂತೆ ತಾಯಿಯ ದೇಹದಲ್ಲಿಯೇ ಪರಿಪಾಕ ಹೊಂದಿದ ಸಂಪೂರ್ಣ ಆಹಾರವು ಇದಾಗಿದೆ. ಆದ್ದರಿಂದ ಇದು ಎಲ್ಲಾ ಪ್ರಾಣಿಗಳಿಗೂ ಆಜನ್ಮ ಸಾತ್ಮ್ಯ. ರುಚಿಯಲ್ಲಿ ನೋಡಿದರೆ ಹಾಲು ಮಧುರ ಪ್ರಧಾನವಾದಂಥ ದ್ರವ್ಯ. ನಾಲಿಗೆಗೆ ಮಾತ್ರ ಸಿಹಿ ಎನಿಸದೆ ದೇಹದಲ್ಲಿ ಜೀರ್ಣಿಸಿದ ನಂತರವೂ ಹಾಲು ಮಧುರವಾಗಿಯೇ ಪರಿಣಮಿಸುವ ಕಾರಣ ಇದು ಶರೀರದ ಎಲ್ಲಾ ಅವಯವಗಳ ಬೆಳವಣಿಗೆಗೂ ಮತ್ತು ಪೋಷಣೆಗೂ ಕಾರಣವಾಗುತ್ತದೆ. ಅಂತೆಯೇ, ಶರೀರದ ಪುಷ್ಟಿ ಮತ್ತು ಬಲವನ್ನು ಹೆಚ್ಚಿಸಲು ಇದು ಉಪಯುಕ್ತ.

ನಮ್ಮ ಶರೀರದಲ್ಲಿ ಸಪ್ತ ಧಾತುಗಳಿವೆ. ಶರೀರದ ಎಲ್ಲಾ ಕ್ರಿಯಾತ್ಮಕ ಕೆಲಸಗಳಿಗೂ ಈ ಧಾತುಗಳೇ ಆಶ್ರಯ. ಈ ಸಪ್ತ ಧಾತುಗಳ ಸಾರವೇ ಓಜಸ್ಸು. ಓಜಸ್ಸು ಎಂದರೆ ಜೀವಸತ್ವ. ಈ ಓಜಸ್ಸನ್ನು ನೇರವಾಗಿ ಪೋಷಿಸುವ ಗುಣ ಹಾಲಿಗಿದೆ. ಹಾಲು ಓಜಸ್ಯಮ್!

ಹಾಲು ಆಹಾರ ರೂಪದಲ್ಲಿ ಎಷ್ಟು ಪ್ರಯೋಜನಕಾರಿಯೋ ಅಂತೆಯೇ ಔಷಧ ರೂಪದಲ್ಲೂ ಬಹಳ ಉಪಯೋಗಕರವಾದದ್ದು. ಇದು ಶಾರೀರಿಕ ಮತ್ತು ಮಾನಸಿಕ ಚಿಕಿತ್ಸೆಗಳಲ್ಲಿ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಹಾಲು ಸಾಮಾನ್ಯವಾಗಿ ಪಚನಕ್ಕೆ ಜಡ. ಅಂದರೆ, ಇದನ್ನು ಜೀರ್ಣಿಸಿಕೊಳ್ಳಲು ಹೆಚ್ಚು ಸಮಯ ಬೇಕಾಗುತ್ತದೆ. ಅಂತೆಯೇ ಇದು ತಂಪು ಗುಣವನ್ನು ಹೊಂದಿದ್ದು ದೇಹದಲ್ಲಿಯೂ ತಂಪನ್ನು ಹೆಚ್ಚಿಸುತ್ತದೆ.

ಹಾಲೆಂಬುದು ಪ್ರಾಣಿಜನ್ಯವಾದ ಅಮೃತ. ಈ ಹಾಲು ಅನೇಕ ಮೂಲಗಳಿಂದ ನಮಗೆ ದೊರೆಯುತ್ತದೆ. ಆದರೆ ಆಯುರ್ವೇದದಲ್ಲಿ ಚಿಕಿತ್ಸೋಪಯೋಗಿಯಾಗಿ ವಿವರಿಸಿದ ಹಾಲುಗಳು 8 ಮಾತ್ರ. ಪ್ರತಿಯೊಂದು ಬಗೆಯ ಹಾಲು ಸಹ ವಿಶಿಷ್ಟವಾದ ಗುಣಧರ್ಮವನ್ನು ಹೊಂದಿದೆ. ಹಸು, ಎಮ್ಮೆ, ಆಡು, ಕುರಿ, ಒಂಟೆ, ಕತ್ತೆ, ಆನೆ ಮತ್ತು ಮನುಷ್ಯ- ಈ ರೀತಿ ಎಂಟು ವಿಧವಾದ ಹಾಲುಗಳನ್ನು ನಮ್ಮ ಶಾಸ್ತ್ರದಲ್ಲಿ ವಿವರಿಸಿರುವುದನ್ನು ಕಾಣಬಹುದು. ಆದರೆ ಈ ಎಲ್ಲಾ ರೀತಿಯ ಹಾಲುಗಳಲ್ಲಿ ಹಸುವಿನ ಹಾಲು ಅತ್ಯಂತ ಪ್ರಶಸ್ತವಾದದ್ದು ಎಂಬುದು ಶಾಸ್ತ್ರದ ವಾಕ್ಯ.

ಹಸುವಿನ ಹಾಲನ್ನು ನಮ್ಮ ಭಾರತೀಯ ಪರಂಪರೆಯಲ್ಲಿ ಅಮೃತಕ್ಕೆ ಹೋಲಿಸಿರುವುದು ಸತ್ಯ. ಇದು ಕೇವಲ ತನ್ನ ಇರುವಿಕೆಯಿಂದಲೇ ವಾತಾವರಣವನ್ನೆಲ್ಲ ಪವಿತ್ರಗೊಳಿಸುವ ಕಾರಣ ಇದನ್ನು ಪೂಜೆಯಂಥ ಶುಭ ಸಂದರ್ಭಗಳಲ್ಲಿ ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಬೇರೆ ಎಲ್ಲ ಹಾಲುಗಳ ರೀತಿ ಹಸುವಿನ ಹಾಲು ಸಹ ಬಹಳ ಮಧುರ ಮತ್ತು ಜಿಡ್ಡಿನಿಂದ ಕೂಡಿದ್ದಾಗಿದೆ. ಶರೀರದ ಎಲ್ಲ ಧಾತುಗಳನ್ನು ಪುಷ್ಟಿಗೊಳಿಸಿ, ಬಲವನ್ನು ವೃದ್ಧಿಸಿ, ಬುದ್ಧಿ, ಮೇಧಾಶಕ್ತಿಗಳ ಹೆಚ್ಚಳಕ್ಕೂ ಇದು ಕಾರಣವಾಗಿದೆ. ಮನಸ್ಸಿಗೆ ಸತ್ವ ಗುಣವನ್ನೆರೆದು ಶಾಂತಿಯನ್ನು ನೀಡುತ್ತದೆ. ಇದು ವಿಶೇಷವಾಗಿ ರೋಗ ನಿರೋಧಕ ಮತ್ತು ನಿವಾರಕ ಶಕ್ತಿಯನ್ನು ನಮಗೆ ಧಾರೆಯೆರೆಯುತ್ತದೆ. ಹಸುವಿನ ಹಾಲನ್ನು ಚಿಕಿತ್ಸೆಯಲ್ಲೂ ಬಳಸಲಾಗುತ್ತದೆ. ಕೆಮ್ಮು, ಹಳೆ ಜ್ವರ, ರಕ್ತಪಿತ್ತ, ತಲೆನೋವು, ನಿದ್ರಾಹೀನತೆ, ಶುಕ್ರ ಕ್ಷಯ ಮುಂತಾದ ರೋಗಗಳಲ್ಲಿ ಹಾಲು ಅತ್ಯುತ್ತಮ ದ್ರವ್ಯವಾಗಿದೆ. ಆದರೆ ಹಸು ಸೇವಿಸುವ ಆಹಾರ, ಅದರ ಮೈ ಕಟ್ಟು, ಅದರ ಓಡಾಟ, ಅದಕ್ಕೆ ನೀಡುವ ವಿವಿಧ ರೀತಿಯ ಔಷಧಿಗಳಿಗೆ ಅನುಗುಣವಾಗಿ ಹಾಲಿನಲ್ಲಿರುವ ಗುಣಗಳ ಏರುಪೇರು ಕಂಡುಬರುತ್ತದೆ. ಬಹಳಷ್ಟು ಸಮಯ ಹಾಲಿನಿಂದ ತೊಂದರೆಯಾಗುವುದು ಈ ಕಾರಣದಿಂದಲೇ. ಹಸುವಿಗೆ ಉತ್ತಮವಾದ ವಾತಾವರಣವನ್ನು ನೀಡದೆ ಕೇವಲ ರಾಸಾಯನಿಕಗಳನ್ನು ಮತ್ತು ಹಾರ್ಮೋನ್‌ಗಳನ್ನು ನೀಡಿಯೇ ಬೆಳೆಸುವುದರಿಂದ ಅದು ಕೊಡುವ ಹಾಲು ಇಂದು ಹಾಲಾಹಲವಾಗುತ್ತಿದೆ. ಹಸುವಿನ ಸ್ಥಿತಿಗತಿಗಳು ಹಾಲಿನ ಗುಣವರ್ಧನೆಗೆ ಎಷ್ಟು ಮುಖ್ಯವೋ, ಅಂತೆಯೇ ಅದನ್ನು ಬಳಸುವ ರೀತಿಯೂ ಅಷ್ಟೇ ಮುಖ್ಯ. ಹಾಲು ಇಡೀ ಜಗತ್ತಿನಲ್ಲಿ ಸಿಗುವ ಅತ್ಯಂತ ಆರೋಗ್ಯಕರವಾದಂಥ ವಸ್ತುವಾದರೂ ಅದನ್ನು ನಾವು ಸರಿಯಾಗಿ ಬಳಸದಿದ್ದರೆ ಅದರಿಂದಲೂ ತೊಂದರೆ ತಪ್ಪಿದ್ದಲ್ಲ. ಹಾಗಾಗಿ, ಆಯುರ್ವೇದದಲ್ಲಿ ಹೇಳಿರುವ ಕೆಲವು ವಿಚಾರಗಳನ್ನು ತಿಳಿದುಕೊಂಡು ನಂತರ ಹಾಲನ್ನು ಉಪಯೋಗಿಸಿದರೆ ಅದರ ಎಲ್ಲ ಲಾಭಗಳನ್ನು ನಾವು ಸಂಪೂರ್ಣವಾಗಿ ಪಡೆಯಬಹುದು.

ಸಾಮಾನ್ಯವಾಗಿ ಹಸುವಿನ ಹಾಲು ಮೂರು ವಿಧವಾದ ರೀತಿಯಲ್ಲಿ ಬಳಕೆಯಾಗುತ್ತದೆ. ಅವೆಂದರೆ:

1. ಧಾರೋಷ್ಣ ಕ್ಷೀರ: ಅಂದರೆ ಆಗ ತಾನೆ ಕರೆದ ಹಾಲು. ಇದು ಅಮೃತ ಸಮಾನವಾದದ್ದು ಮತ್ತು ಅತ್ಯುತ್ತಮವಾದದ್ದು. ಕರೆಯುವಾಗ ಇದ್ದ ಬಿಸಿ ಆರುವ ಮೊದಲೇ ಸೇವಿಸಿದರೆ ಇದು ಬಹಳ ಪ್ರಯೋಜನಕಾರಿ. ಪ್ರಮಾಣವನ್ನು ಅರಿತು ಸೇವಿಸಿದಾಗ ಹಾಲಿನ ಎಲ್ಲಾ ಗುಣಗಳನ್ನು ಪಡೆಯಬಹುದು. ಈ ಹಾಲು ತಣ್ಣಗಾಗುತ್ತಾ ಹೋದಂತೆ ಇದರ ಗುಣ ಧರ್ಮಗಳು ಬದಲಾಗುತ್ತವೆ.

2. ಹಸಿ ಹಾಲು: ಕರೆದ ಹಾಲಿನ ಬಿಸಿ ತಣ್ಣಗಾಗಿ ಮತ್ತೆ ಕಾಯಿಸದೆ ಇದ್ದ ಹಾಲನ್ನು ಹಸಿ ಹಾಲು ಎಂದು ಹೇಳಬಹುದು. ಇದು ತಣ್ಣಗಾಗುತ್ತ ಹೋದಂತೆ ಜೀರ್ಣಿಸಿಕೊಳ್ಳಲು ಕಷ್ಟ ಮತ್ತು ದೇಹದಲ್ಲಿನ ದ್ರವದ ಅಂಶವನ್ನು ಹೆಚ್ಚು ಮಾಡುತ್ತದೆ. ವಿಶೇಷವಾಗಿ ಹಲವಾರು ದಿನ ಫ್ರಿಜ್‌ನಲ್ಲಿ ಇಟ್ಟು ನಂತರ ಬಳಸುವ ಹಾಲು ಇದೇ ರೀತಿ ದೇಹದಲ್ಲಿ ಜಿನುಗುವಿಕೆಯನ್ನು(ಅಭಿಷ್ಯಂದ) ಹೆಚ್ಚಿಸುತ್ತದೆ. ಪ್ರಮೇಹ ಮುಂತಾದ ರೋಗಗಳಿಗೆ ಇದು ಮುಖ್ಯ ಕಾರಣವಾಗಬಹುದು. ಆದ್ದರಿಂದ, ಕರೆದು ತಣ್ಣಗಾದ ಹಾಲನ್ನು ಕಾಯಿಸದೆ ಉಪಯೋಗಿಸುವುದು ಆಯುರ್ವೇದದ ಪ್ರಕಾರ ಅಹಿತಕರ.

3. ಬಿಸಿ/ಕಾಯಿಸಿದ ಹಾಲು: ಈ ರೀತಿಯ ಹಾಲು ಎಲ್ಲ ರೀತಿಯಿಂದಲೂ ಆರೋಗ್ಯಕರ. ಇದು ಜೀರ್ಣಿಸಿಕೊಳ್ಳಲು ಸುಲಭ ಮತ್ತು ಅಭಿಷ್ಯಂದವನ್ನು ಉಂಟುಮಾಡುವುದಿಲ್ಲ. ಆದರೆ ಕಾಯಿಸುವ ವಿಧಾನವನ್ನು ನಾವು ಚೆನ್ನಾಗಿ ಅರಿಯಬೇಕು. ಕಾರಣ, ಹಾಲು ಪ್ರಾಣಿಜನ್ಯವಾದ್ದರಿಂದ ಇದರ ಪಾಕದಲ್ಲಿ ಆಗುವ ಬದಲಾವಣೆಯು ಅತ್ಯಂತ ಸೂಕ್ಷ್ಮವಾದದ್ದು. ಆದ್ದರಿಂದ ಕೆಳಗೆ ವಿವರಿಸಿರುವಂತೆ ಸರಿಯಾದ ವಿಧಾನದಲ್ಲಿ ಇದನ್ನು ಕಾಯಿಸಬೇಕು:

- ಹಾಲನ್ನು ಸಮಾನಾಂತರ ಎತ್ತರದಲ್ಲಿರುವ, ಮುಂಭಾಗದಲ್ಲಿ ಸ್ವಲ್ಪ ಚಿಕ್ಕದಾಗಿರುವ ಸೂಕ್ತವಾದ ಪಾತ್ರೆಯಲ್ಲಿ ಕಾಯಿಸಬೇಕು.
- ಹಾಲು ಕಾಯುವಾಗ ಮುಚ್ಚಳವನ್ನು ಮುಚ್ಚುವುದು ಹಾಲಿನಲ್ಲಿ ಗುರುತ್ವವನ್ನು ಉಂಟುಮಾಡುತ್ತದೆ. ಆದ್ದರಿಂದ ಹಾಲನ್ನು ತೆರೆದ ಪಾತ್ರೆಯಲ್ಲಿಯೇ ಕಾಯಿಸತಕ್ಕದ್ದು.
- ಕಾಯಿಸುವಾಗ ಆರಂಭದಲ್ಲಿ ಉರಿ ಚಿಕ್ಕದಾಗಿದ್ದು, ಬರುಬರುತ್ತಾ ಜಾಸ್ತಿಯಾಗಿ, ಮತ್ತೆ ಕ್ರಮೇಣ ಕಡಿಮೆಯಾಗುತ್ತಾ ಬರಬೇಕು. ಈ ರೀತಿ ಉರಿಯನ್ನು ನಿಯಂತ್ರಿಸಿ ಕಾಯಿಸುವಾಗ ಹಾಲನ್ನು ಒಂದೆರಡು ಬಾರಿ ಸೌಟಿನಿಂದ ಕೈ ಆಡಿಸುವುದು ಉತ್ತಮ ವಿಧಾನ. ಒಂದೇ ಸಲ ದೊಡ್ಡ ಉರಿಯಲ್ಲಿ ಹಾಲನ್ನು ಕಾಯಿಸಿದಾಗ ಹಾಲಿನ ಎಲ್ಲಾ ಅಣುಗಳು/ಕಣಗಳು ಪಾಕವಾಗದೆ ಅಜೀರ್ಣ, ಹೊಟ್ಟೆ ಉಬ್ಬರ, ಬೇಧಿಯಂಥ ತೊಂದರೆಗಳು ಉಂಟಾಗುತ್ತವೆ.

ಇನ್ನು ಹಾಲನ್ನು ಕಾಯಿಸುವಾಗ ಅದಕ್ಕೆ ನೀರು ಸೇರಿಸಬೇಕೇ? ಎಂಬ ಪ್ರಶ್ನೆ ಬರಬಹುದು. ಹಾಲನ್ನು ಕಾಯಿಸುವಾಗ ಹಾಲಿಗೆ ಅರ್ಧದಷ್ಟು ಪ್ರಮಾಣ ನೀರನ್ನು ಸೇರಿಸಿ, ನೀರು ಸಂಪೂರ್ಣ ಆವಿಯಾಗಿ ಹೋಗುವವರೆಗೆ ಅದನ್ನು ಕಾಯಿಸುವುದು ಒಂದು ವಿಧಾನ. ಈ ವಿಧಾನದಿಂದ ಹಾಲು ಲಘುವಾಗಿ, ಜೀರ್ಣಿಸಿಕೊಳ್ಳಲು ಸುಲಭವಾಗುತ್ತದೆ. ನೀರನ್ನು ಹಾಕದೆ ಕಾಯಿಸಿದ ಹಾಲು ಜೀರ್ಣಕ್ಕೆ ಜಡ. ಅಂತೆಯೇ, ಅತಿಯಾಗಿ ಕಾಯಿಸಿದ ಹಾಲು ಅಥವಾ ಬಹಳಷ್ಟು ಸಮಯ ಚಿಕ್ಕ ಉರಿಯಲ್ಲಿ ಕಾಯಿಸಿದ ಹಾಲು ಪಚನಕ್ಕೆ ಜಡ ಮತ್ತು ದೇಹವೃದ್ಧಿಕರ.

ಹಾಲನ್ನು ಕುಡಿದರೆ ಹಲವರಲ್ಲಿ ಹೊಟ್ಟೆ ನೋವು, ಹೊಟ್ಟೆ ಉಬ್ಬರದಂಥ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಹಾಲನ್ನು ಕುಡಿದ ತಕ್ಷಣವೇ ಮಲಪ್ರವೃತ್ತಿಯಾಗುವುದು. ತೆಳ್ಳಗಿನ ಬೇಧಿಯಾಗುವ ಸಂಭವ ‘ವೂ ಹೆಚ್ಚುತ್ತದೆ. ಹಾಲನ್ನು ಸೇವಿಸಿದರೆ ಕೆಲವರಿಗೆ ಅತಿಯಾದ ತೇಗು, ಚರ್ಮದ ಮೇಲೆ ಗಂಧೆಗಳು, ಮೈ ಊದಿಕೊಂಡಂತೆ ಆಗುವುದು, ಮೈ ಭಾರ, ನೆಗಡಿ- ಈ ರೀತಿಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಇಂಥ ಸ್ಥಿತಿಗಳಲ್ಲಿ ಹಾಲನ್ನೇ ತ್ಯಜಿಸುವ ಬದಲು ಹಾಲನ್ನು ಬಳಸುವ ವಿಧಾನವನ್ನು ಸರಿಪಡಿಸಿಕೊಳ್ಳುವುದರಿಂದ ಈ ಸಮಸ್ಯೆಗಳು ಬಹಳಷ್ಟು ಕಡಿಮೆಯಾಗುತ್ತವೆ. ಇಂಥವರು, ಹಾಲಿಗೆ ಅರ್ಧ ಅಥವಾ ಮುಕ್ಕಾಲು ಭಾಗ ನೀರು ಸೇರಿಸಿ ಕುದಿಸಿ, ಬಿಸಿ ಇರುವಾಗಲೇ, ಆಹಾರದ ಜತೆಗೆ ಸೇವಿಸುವುದು ಒಳ್ಳೆಯದು. ಹಸಿಯಾದ ಹಾಲನ್ನು ಅಥವಾ ಹಲವಾರು ದಿನ ಫ್ರಿಜ್‌ನಲ್ಲಿ ಶೇಖರಿಸಿಟ್ಟದ್ದ ಹಾಲನ್ನು ಸೇವಿಸಿದರೆ ತೊಂದರೆ ಖಚಿತ. ಅಂತೆಯೇ ಹಾಲಿಗೆ ಸ್ವಲ್ಪ ಶುಂಠಿ ಪುಡಿ/ಜೀರಿಗೆ/ಧನಿಯಾ/ಏಲಕ್ಕಿ ಹಾಕಿ ಕಾಯಿಸಿ ಕುಡಿಯುವುದರಿಂದ ಜೀರ್ಣ ಮಾಡಿಕೊಳ್ಳಲು ಸುಲಭವಾಗುತ್ತದೆ. ಈ ರೀತಿಯ ಸಂಸ್ಕಾರ ನೀಡಿದ ಹಾಲು ಹೆಚ್ಚು ತೊಂದರೆ ತರದು.

ಹಾಲಿನ ಜತೆ ಕೆಲವು ಪದಾರ್ಥಗಳನ್ನು ಬಳಸಬಾರದು ಎಂಬ ನಿಷೇಧವನ್ನು ಆಯುರ್ವೇದ ಶಾಸ್ತ್ರ ಹೇಳುತ್ತದೆ. ಅವೆಂದರೆ:

- ಸಾಮಾನ್ಯವಾಗಿ ಎಲ್ಲಾ ಬಗೆಯ ಸಿರಿಧಾನ್ಯ, ಮೊಳಕೆ ಒಡೆದ ಕಾಳುಗಳು, ಬಳ್ಳಿ ತರಕಾರಿಗಳು (ಕುಂಬಳಕಾಯಿ, ಸೌತೆಕಾಯಿ, ಬಣ್ಣದ ಸೌತೆಕಾಯಿ), ಅಣಬೆಗಳು, ಒಣ ಸೊಪ್ಪು, ಬಿದಿರಿನ ಚಿಗುರು ಇವುಗಳ ಜತೆ ಹಾಲನ್ನು ಸೇವಿಸಬಾರದು.
- ಎಲ್ಲಾ ಬಗೆಯ ಹುಳಿ ಹಣ್ಣುಗಳ ಜತೆಯೂ ಹಾಲು ಹೊಂದದ ಆಹಾರ. ಉದಾಹರಣೆಗೆ ಪಚ್ಚ ಬಾಳೆಹಣ್ಣು, ಸ್ಟ್ರಾಬೆರಿ, ಮಾವಿನ ಹಣ್ಣು, ಮೋಸಂಬಿ, ಕಿತ್ತಳೆ, ಕಿವಿ, ಲಿಚಿ ಹೀಗೆ ಹುಳಿಯಿರುವ ಹಣ್ಣುಗಳನ್ನು ಹಾಲಿನೊಂದಿಗೆ ಮಿಲ್ಕ್ ಶೇಕ್/ಐಸ್ ಕ್ರೀಮ್/ಫ್ರೂಟ್ ಸಲಾಡ್‌ಗಳನ್ನು ತಯಾರಿಸಿ ಸೇವಿಸುವುದು ಸೂಕ್ತವಲ್ಲ.
- ಅಂತೆಯೇ, ಎಲ್ಲ ಬಗೆಯ ಮೀನು, ಎಮ್ಮೆ ಮಾಂಸ, ಹಂದಿಮಾಂಸ, ಕುರಿಯ ಮಾಂಸದೊಂದಿಗೆ ಹಾಲು ಹೊಂದುವುದಿಲ್ಲ.
- ಸಾಮಾನ್ಯವಾಗಿ ಹುಳಿಯಾದ ಮಜ್ಜಿಗೆ/ಮೊಸರಿನೊಂದಿಗೆ ಹಾಲು ಸೇರಿಸಿ ತಿನ್ನುವ ಅಭ್ಯಾಸವನ್ನು ಕಾಣಬಹುದು. ಆದರೆ ಈ ಸಂಯೋಗವು ಅತ್ಯಂತ ಅನಾರೋಗ್ಯಕರ.
- ಹಾಲಿನೊಂದಿಗೆ ಹುಳಿ, ಉಪ್ಪು, ಕ್ಷಾರೀಯ ಪಾನೀಯಗಳನ್ನು (ಕಾರ್ಬೋನೇಟೆಡ್ ಡ್ರಿಂಕ್ಸ್) ಸೇರಿಸಿ ಸೇವಿಸುವುದು ಅನಾರೋಗ್ಯಕ್ಕೆ ಮೂಲ. ಜತೆಗೆ, ಎಲ್ಲಾ ಬಗೆಯ ಮದ್ಯಗಳೂ ಹಾಲಿನ ಜತೆಗೆ ನಿಷಿದ್ಧ.

ಸ್ನೇಹಿತರೇ, ಕತೆಯ ಸಾರಾಂಶ ಇಷ್ಟೇ- ಹಾಲನ್ನು ಬಳಸುವ ಮುನ್ನ, ಬಳಸುವ ವ್ಯಕ್ತಿ ತನ್ನ ಜೀರ್ಣಶಕ್ತಿಯನ್ನು ಸರಿಪಡಿಸಿಕೊಂಡು, ಬಳಸುವ ಹಾಲನ್ನು ಉತ್ತಮ ನೈಸರ್ಗಿಕವಾದ ಮೂಲದಿಂದ ಸಂಗ್ರಹಿಸಿ, ಶಾಸ್ತ್ರೋಕ್ತವಾಗಿ ಕಾಯಿಸಿ, ಉತ್ತಮ ದ್ರವ್ಯಗಳಿಂದ ಸಂಸ್ಕರಿಸಿ, ಉತ್ತಮ ಪದಾರ್ಥಗಳೊಂದಿಗೆ ಸಂಯೋಜಿಸಿ, ಹಸಿವೆಯನ್ನು ಅರಿತು ಸೇವಿಸಿದರೆ ಹಾಲು ಅಮೃತವಾಗಿ, ದೇಹ ಮನಸ್ಸುಗಳನ್ನು ಪೋಷಿಸಿ, ನಮಗೆ ದೀರ್ಘಾಯುಷ್ಯವನ್ನು ಧಾರೆಯೆರೆಯುವುದು ನಿಸ್ಸಂಶಯ- ಇದು ಆರ್ಷವಾಣಿ!

ಅಭಿಮತ

ಸಂದೀಪ್ ಶರ್ಮಾ ಮೂಟೇರಿ

ಅನಾಮಧೇಯನ ಬುರುಡೆ!

ಧಾರ್ಮಿಕ ಶ್ರದ್ಧೆ, ದಾನ-ಧರ್ಮ ಮತ್ತು ಮಾನವೀಯ ಸೇವೆಗೆ ಹೆಸರುವಾಸಿಯಾದ ಶ್ರೀ ಕ್ಷೇತ್ರ ಧರ್ಮಸ್ಥಳವು ಅನಾಮಿಕನೊಬ್ಬನ ಹೇಳಿಕೆಯಿಂದಾಗಿ ಸಂಶಯದ ಸುಳಿಗೆ ಸಿಲುಕುವಂತಾಯಿತು. ಸಾಕಷ್ಟು ವರ್ಷಗಳ ಇತಿಹಾಸ ಹೊಂದಿರುವ ಮತ್ತು ಲಕ್ಷಾಂತರ ಭಕ್ತರ ನಂಬಿಕೆಯನ್ನು ದಕ್ಕಿಸಿಕೊಂಡಿರುವ ಈ ಪುಣ್ಯಕ್ಷೇತ್ರದ ಘನತೆಗೆ ಕಳಂಕ ಮೆತ್ತುವಂಥ ಯತ್ನವಾಗಿದ್ದು ವಿಷಾದನೀಯ.

ಈ ಎಲ್ಲದಕ್ಕೂ ಮೂಲವಾದವನು ಒಬ್ಬ ಅನಾಮಧೇಯ ವ್ಯಕ್ತಿ. ಸಾಮಾಜಿಕ ಜಾಲತಾಣಗಳಲ್ಲಿ ಲಗ್ಗೆಹಾಕಿದ ಈತ, ತಾನು ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತುಹಾಕಿರುವುದಾಗಿ ಹೇಳಿಕೆ ನೀಡಿದ್ದು ಸಂಚಲನೆಯನ್ನು ಸೃಷ್ಟಿಸಿತು. ಈತನ ಗುರುತು, ಹಿನ್ನೆಲೆ ಮತ್ತು ಹೇಳಿಕೆಗಳ ಸತ್ಯಾಸತ್ಯತೆಗಳ ಬಗ್ಗೆ ಗಂಭೀರ ಪರಿಶೀಲನೆ ನಡೆಯುವ ಮುನ್ನವೇ, ಆತನ ಮಾತನ್ನು ಆಧರಿಸಿ ತನಿಖೆ ನಡೆಸಲು ವಿಶೇಷ ತನಿಖಾದಳದ (ಎಸ್‌ಐಟಿ) ರಚನೆಯಾಯಿತು. ತನಿಖಾ ಪ್ರಕ್ರಿಯೆಯ ಭಾಗವಾಗಿ ಧರ್ಮಸ್ಥಳದ ನಿರ್ದಿಷ್ಟ ಪ್ರದೇಶಗಳಲ್ಲಿ ಮಣ್ಣುಗುಂಡಿಗಳನ್ನು ಅಗೆಸುವಂತಾಯಿತು. ಈ ಒಂದಿಡೀ ಕಸರತ್ತಿನಿಂದಾಗಿ ಸಾರ್ವಜನಿಕರಲ್ಲಿ ಗೊಂದಲ ಮೂಡುವಂತಾಯಿತು, ಸುಳ್ಳು ಪ್ರಚಾರಕ್ಕೆ ಉತ್ತೇಜನ ಸಿಗುವಂತಾಯಿತು. ಆದರೆ, ಕಡೆಗೆ ಸಿಕ್ಕಿದ್ದು ಮಣ್ಣು, ಅಷ್ಟೇ!

ವೈಜ್ಞಾನಿಕವಾಗಿ ಸಾಬೀತುಪಡಿಸಲಾಗದ ಹೇಳಿಕೆಗಳನ್ನು ನಂಬಿ, ಪುಣ್ಯಭೂಮಿ ಎಂದು ಕರೆಸಿಕೊಳ್ಳುವ ಧರ್ಮಸ್ಥಳದಲ್ಲಿ ಸಿಕ್ಕ ಸಿಕ್ಕ ಹಾಗೆ ಮಣ್ಣು ಅಗೆಯುವಂತಾಗಿದ್ದು ಕ್ಷೇತ್ರದ ಘನತೆಗೆ ಮಾಡಿದ ಅಪಮಾನ. ಕ್ಷೇತ್ರದ ವಿರುದ್ಧ ಸುಳ್ಳು ಪ್ರಚಾರಕ್ಕೆ ಒತ್ತಾಸೆ ಸಿಗುವಂತಾಗಿದ್ದು ನಿಜಕ್ಕೂ ಶೋಚನೀಯ. ಧರ್ಮಸ್ಥಳದ ಮೇಲೆ ಮತ್ತು ಅಲ್ಲಿನ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರ ಮೇಲೆ ಈ ರೀತಿಯ ಅಪವಾದಗಳನ್ನು ಹೊರಿಸುವುದರ ಹಿಂದೆ ಒಂದು ದೊಡ್ಡ ಷಡ್ಯಂತ್ರವೇ ಇದೆ ಎನಿಸುತ್ತದೆ. ಕೂಲಂಕಷ ತನಿಖೆ ಮಾತ್ರವೇ ಈ ಪಿತೂರಿಯನ್ನು ಬಯಲುಮಾಡಬಲ್ಲದು.

ಶ್ರೀಕ್ಷೇತ್ರ ಧರ್ಮಸ್ಥಳವು ಕೇವಲ ಒಂದು ದೇಗುಲನೆಲೆಯಲ್ಲ. ಅದು ಸಾಮಾಜಿಕ ಸೇವೆ ಮತ್ತು ಶೈಕ್ಷಣಿಕ ಚಟುವಟಿಕೆಗಳ ಮೂಲಸ್ಥಾನವೂ ಹೌದು. ಆದರೆ, ಧರ್ಮಸ್ಥಳವನ್ನು ಗುರಿಯಾಗಿಸಿಕೊಂಡು ನಡೆಯುವ ಇಂಥ ಕೃತ್ಯಗಳು ಅಲ್ಲಿನ ಸ್ಥಾಪಿತ ಪ್ರತಿಷ್ಠೆಯನ್ನು ಹಾಳುಮಾಡುವುದರ ಜತೆಗೆ, ಭಾರತದಂಥ ಧಾರ್ಮಿಕ ಪರಂಪರೆಯನ್ನು ಹೊಂದಿರುವ ದೇಶದಲ್ಲಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಮತ್ತು ಶಾಂತಿಗೆ ಧಕ್ಕೆಯನ್ನೂ ತರುತ್ತವೆ. ಈ ರೀತಿಯ ದುರುದ್ದೇಶಪೂರಿತ ಆರೋಪಗಳು ದೇಶದ ಯಾವುದೇ ಧಾರ್ಮಿಕ ಸ್ಥಳಗಳ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿಯು ಸರಕಾರ ಮತ್ತು ಸಮಾಜದ ಮೇಲಿದೆ.

(ಲೇಖಕರು ಸಿವಿಲ್ ಎಂಜಿನಿಯರ್)

ತಾಲಿಬಾನ್‌ಗೆ ಆರೆಸ್ಸೆಸ್ ಹೋಲಿಕೆ: ಹಿಂದೂ ದ್ವೇಷಕ್ಕೆ ಹಿಡಿದ ಕನ್ನಡಿ

ಸೆಮೆಟಿಕ್ ರಿಲಿಜನ್‌ಗಳ ಪ್ರಭಾವಕ್ಕೆ ಒಳಗಾದವರು ಅವರು ಬಿತ್ತುವ ರಿಲಿಜನ್ನಿನ ಅಫೀಮನ್ನೇ ‘ಧರ್ಮ’ ಎಂದುಕೊಂಡಿದ್ದಾರೆ. ಆದರೆ ಧರ್ಮ ಎಂಬುದು ವಿಶಾಲ ವ್ಯಾಪ್ತಿಯನ್ನು ಹೊಂದಿರುವಂಥದ್ದು. ಧರ್ಮ ಎಂದರೆ ಸತ್ಯ, ನ್ಯಾಯ, ಕರ್ತವ್ಯ ಮತ್ತು ನೈತಿಕ ಜೀವನದ ಮಾರ್ಗ. ವ್ಯಕ್ತಿ, ಸಮಾಜ ಹಾಗೂ ವಿಶ್ವವನ್ನು ಒಟ್ಟಿಗೆ ಹಿಡಿದಿಟ್ಟುಕೊಳ್ಳುವ ತತ್ವವೇ ‘ಧರ್ಮ’. ಹೀಗಾಗಿ ಆರೆಸ್ಸೆಸ್ ಹೇಳಿಕೊಡುವ ಧರ್ಮವು, ವ್ಯಕ್ತಿತ್ವ ನಿರ್ಮಾಣದ ಸೂತ್ರ ಎಂಬುದು ನಿತ್ಯವೂ ಆರೆಸ್ಸೆಸ್ ಶಾಖೆಗೆ ಹೋದವರಿಗಷ್ಟೇ ಅನುಭವಕ್ಕೆ ಬರುವ ಸಂಗತಿ.

ಸಂಘದಕ್ಷ
ಕಿರಣಕುಮಾರ ವಿವೇಕವಂಶಿ
vveditoped@gmail.com

ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು (ಆರೆಸ್ಸೆಸ್) ತಾಲಿಬಾನ್‌ಗೆ ಹೋಲಿಸುವುದು ಕೆಲವರ ಚಾಳಿ. ಇದು ಅವರಲ್ಲಿ ಮಡುಗಟ್ಟಿರುವ ‘ಹಿಂದೂ ದ್ವೇಷ’ಕ್ಕೆ ಹಿಡಿದ ಕನ್ನಡಿ. ರಾಷ್ಟ್ರದ ಏಕತೆಗಾಗಿ ಮತ್ತು ಪ್ರಜಾಪ್ರಭುತ್ವದ ಬಲವರ್ಧನೆಗಾಗಿ ನಿರಂತರ ಶ್ರಮಿಸುತ್ತಿರುವ, ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವ ಈ ಸಂಘಟನೆಯ ಬಗೆಗಿನ ಅಂಧ ದ್ವೇಷವನ್ನು ಅದು ತೋರುತ್ತದೆ. ಆರೆಸ್ಸೆಸ್‌ನ ಸೈದ್ಧಾಂತಿಕ ವಿರೋಧಿಗಳು ತಮಗೆ ‘ರಾಜಕೀಯ ಮೈಲೇಜ್’ ಬೇಕು ಎನಿಸಿದಾಗೆಲ್ಲಾ ಆರೆಸ್ಸೆಸ್‌ಗೆ ಬೈಯುವುದು ಸರ್ವೇ ಸಾಮಾನ್ಯವಾಗಿಬಿಟ್ಟಿದೆ. ಇಂಥವರಿಗೆ ಸಜ್ಜನ ಸಮಾಜವು ಉತ್ತರ ಕೊಡದಿದ್ದರೆ ತಪ್ಪಾದೀತು. ಹೀಗಾಗಿ ಇಂಥವರ ತಿಳಿವಳಿಕೆಗಾಗಿ ಮತ್ತು ಅವರೇ ಎತ್ತಿರುವ ಪ್ರಶ್ನೆಗಳಿಗೆ ಉತ್ತರ ಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಆರೆಸ್ಸೆಸ್ ಎಂದರೇನು?

ಇದು ವಿಶ್ವದ ಅತಿದೊಡ್ಡ ಸ್ವಯಂಸೇವಕ ಮತ್ತು ಸಾಂಸ್ಕೃತಿಕ ಸಂಘಟನೆ. ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ವನವಾಸಿ ಕಲ್ಯಾಣ, ವಿಪತ್ತು ನಿರ್ವಹಣೆ, ಮಹಿಳಾ ಸಬಲೀಕರಣ ಮತ್ತು ಯುವ ನಾಯಕತ್ವದಂಥ ಬಾಬತ್ತುಗಳಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಸೇವಾ ಚಟುವಟಿಕೆಗಳನ್ನು ನಡೆಸುತ್ತಿರುವ ಸಂಘಟನೆಯಿದು. ಕಾಂಗ್ರೆಸ್ ಪಕ್ಷವು ತನ್ನ ಕುಟುಂಬದ ಸಾಮ್ರಾಜ್ಯವನ್ನು ಕಟ್ಟಿಕೊಳ್ಳುವಲ್ಲಿ ವ್ಯಸ್ತವಾಗಿರುವಾಗ, ಆರೆಸ್ಸೆಸ್ ವನವಾಸಿ ಮಕ್ಕಳಿಗೆ ಶಾಲೆಗಳನ್ನೂ, ದೂರದ ಹಳ್ಳಿಗಳಲ್ಲಿ ಆಸ್ಪತ್ರೆಗಳನ್ನೂ ಮತ್ತು ಬಡವರಿಗೆ ನೆರವಿನ ಶಿಬಿರಗಳನ್ನೂ ನಿರ್ಮಿಸುತ್ತಿದೆ ಎಂಬುದು ಗಮನಾರ್ಹ.

ಧರ್ಮವನ್ನು ‘ಅಫೀಮು’ ಎಂದವರಿಗೆ ಧರ್ಮದ ಮೂಲ ಅರ್ಥ ಗೊತ್ತಾ? ಎನ್ನುವುದು ಪ್ರಶ್ನೆ. ಸೆಮೆಟಿಕ್ ರಿಲಿಜನ್‌ಗಳ ಪ್ರಭಾವಕ್ಕೆ ಒಳಗಾದವರು ಅವರು ಬಿತ್ತುವ ರಿಲಿಜನ್ನಿನ ಅಫೀಮನ್ನೇ ‘ಧರ್ಮ’ ಎಂದುಕೊಂಡಿದ್ದಾರೆ. ಆದರೆ ಧರ್ಮ ಎಂಬುದು ವಿಶಾಲ ವ್ಯಾಪ್ತಿಯನ್ನು ಹೊಂದಿರುವಂಥದ್ದು. ಧರ್ಮ ಎಂದರೆ ಸತ್ಯ, ನ್ಯಾಯ, ಕರ್ತವ್ಯ ಮತ್ತು ನೈತಿಕ ಜೀವನದ ಮಾರ್ಗ. ಧರ್ಮ ಎಂಬ ಪದವು ಸಂಸ್ಕೃತದ ‘ಧೃ’ ಎಂಬ ಧಾತುವಿನಿಂದ ಬಂದಿರುವಂಥದ್ದು. ಇದರರ್ಥ ಹಿಡಿದಿಟ್ಟುಕೊಳ್ಳುವುದು ಅಥವಾ ಪೋಷಿಸುವುದು. ಏನನ್ನು? ವ್ಯಕ್ತಿ, ಸಮಾಜ ಹಾಗೂ ವಿಶ್ವವನ್ನು ಒಟ್ಟಿಗೆ ಹಿಡಿದಿಟ್ಟುಕೊಳ್ಳುವ ತತ್ವವೇ ‘ಧರ್ಮ’. ಹೀಗಾಗಿ ಆರೆಸ್ಸೆಸ್ ಹೇಳಿಕೊಡುವ ಧರ್ಮವು, ವ್ಯಕ್ತಿತ್ವ ನಿರ್ಮಾಣದ ಸೂತ್ರ ಎಂಬುದು ನಿತ್ಯವೂ ಆರೆಸ್ಸೆಸ್ ಶಾಖೆಗೆ ಹೋದವರಿಗಷ್ಟೇ ಅನುಭವಕ್ಕೆ ಬರುವ ಸಂಗತಿ. ಅಧಿಕಾರದ ಲಾಲಸೆಗಾಗಿ ಸುಳ್ಳು ಹೇಳುವವರಿಗೆ ಅಥವಾ ಸತ್ಯಸಂಗತಿಯನ್ನು ತಿರುಚುವವರಿಗೆ ಈ ವಿಷಯ ಹೇಗೆ ತಾನೇ ಅರ್ಥವಾದೀತು?!

ಕೆಲ ಮಹಾನ್ ನಾಯಕರು ಆರೆಸ್ಸೆಸ್ ಬಗ್ಗೆ ಹೇಳಿರುವುದನ್ನು ಇಲ್ಲಿ ಉಲ್ಲೇಖಿಸುವುದು ಒಳಿತು. 1934ರಲ್ಲಿ ಆರೆಸ್ಸೆಸ್ ಶಿಬಿರಕ್ಕೆ ಭೇಟಿ ನೀಡಿದ್ದ ಮಹಾತ್ಮ ಗಾಂಧೀಜಿ, “ಇಲ್ಲಿ ನನಗೆ ಅಸ್ಪೃಶ್ಯತೆ ಕಾಣುವುದಿಲ್ಲ. ಇಲ್ಲಿನ ಸಮಾನತೆ ಮತ್ತು ಸಹೋದರತ್ವದ ಭಾವನೆ ಕಂಡು ನನಗೆ ಅಚ್ಚರಿಯಾಗಿದೆ” ಎಂದಿದ್ದರು. 1939ರಲ್ಲಿ ಪುಣೆಯಲ್ಲಿ ನಡೆದ ಆರೆಸ್ಸೆಸ್ ಶಿಬಿರದಲ್ಲಿ ಭಾಗವಹಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರು, “ನಿಜವಾದ ಸಾಮಾಜಿಕ ಸಮಾನತೆಯನ್ನು ನಾನು ಪ್ರಾಯೋಗಿಕವಾಗಿ ನೋಡಿದ್ದು ಇದೇ

ಮೊದಲ ಬಾರಿಗೆ” ಎಂದಿದ್ದರು. ಇನ್ನು 1975ರ ತುರ್ತು ಪರಿಸ್ಥಿತಿಯ ನಂತರ ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರು, “ಆರೆಸ್ಸೆಸ್ ಫ್ಯಾಸಿಸ್ಟ್ ಆಗಿದ್ದರೆ, ನಾನೂ ಫ್ಯಾಸಿಸ್ಟ್” ಎಂದು ಘೋಷಿಸಿದ್ದರು.

ಕಾಂಗ್ರೆಸ್‌ನ ಪರಮೋಚ್ಚ ನಾಯಕರಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲರು 1948ರಲ್ಲಿ, “ಆರೆಸ್ಸೆಸ್ ಹಿಂದೂಗಳ ಸೇವೆಗಾಗಿ ಮತ್ತು ದೇಶದ ಏಕತೆಗಾಗಿ ದುಡಿಯುತ್ತಿದೆ. ದೇಶ ವಿಭಜನೆಯ ನಂತರ ಅದು ಶರಣಾರ್ಥಿಗಳಿಗೆ ನೀಡಿದ ಸಹಾಯ ಶ್ಲಾಘನೀಯ” ಎಂದರೆ, ಭಾರತದ ಮಾಜಿ ರಾಷ್ಟ್ರಪತಿ ಡಾ. ಝಾಕಿರ್ ಹುಸೇನ್ ಅವರು, “ಆರೆಸ್ಸೆಸ್ ವಿರುದ್ಧದ ಸಾಮುದಾಯಿಕತೆಯ ಆರೋಪಗಳು ನಿರಾಧಾರ. ಆರೆಸ್ಸೆಸ್ ಕಾರ್ಯಕರ್ತರು ರಾಷ್ಟ್ರಸೇವೆಗೆ ಬದ್ಧರಾದ ದೇಶಭಕ್ತರು” ಎಂದಿದ್ದಾರೆ. ಇನ್ನು ಬಾಂಬೆ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಸಿ.ಛಾಗ್ಲಾ ಅವರು, “ಆರೆಸ್ಸೆಸ್‌ನ ಸೇವಾ ಚಟುವಟಿಕೆಗಳಿಗೆ ಸಮನಾಗಿ ಕಾರ್ಯನಿರ್ವಹಿಸುತ್ತಿರುವಂಥ ಮತ್ತೊಂದು ಸಂಘಟನೆ ಭಾರತದಲ್ಲಿ ಇಲ್ಲ” ಎಂದಿದ್ದಾರೆ. ಹೀಗೆ ಆರೆಸ್ಸೆಸ್ ಕುರಿತಾದ ಅತಿರಥ-ಮಹಾರಥರ ಅಭಿಪ್ರಾಯಗಳನ್ನು ಹೇಳುತ್ತಾ ಹೋದರೆ ಅದೊಂದು ಪುಸ್ತಕವೇ ಆದೀತು!

ರಾಷ್ಟ್ರನಿರ್ಮಾಣ ಮತ್ತು ಪ್ರಜಾಪ್ರಭುತ್ವ

1947ರ ದೇಶವಿಭಜನೆಯ ಸಮಯದಲ್ಲಿ, ಲಕ್ಷಾಂತರ ಶರಣಾರ್ಥಿಗಳ ಪುನರ್ವಸತಿಗಾಗಿ ಹಗಲು-ರಾತ್ರಿ ಶ್ರಮಿಸಿದವರು ಆರೆಸ್ಸೆಸ್‌ನ ಸ್ವಯಂಸೇವಕರು. 1962, 1965, 1971ರ ಯುದ್ಧಗಳು ಮತ್ತು ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ, ಆಸ್ಪತ್ರೆಗಳು, ಸರಬರಾಜು ವ್ಯವಸ್ಥೆ ಮತ್ತು ನೆರವು ಶಿಬಿರಗಳಲ್ಲಿ ಸೇವೆ ಸಲ್ಲಿಸಿದ್ದೂ ಇವರೇ. ಇಂದಿಗೂ ಕ್ಷಾಮ, ಪ್ರವಾಹದಂಥ ಪ್ರಾಕೃತಿಕ ವಿಕೋಪಗಳಿಂದ ಜನರು ತತ್ತರಿಸಿದಾಗ ಸೇವೆಗೆ ಟೊಂಕ ಕಟ್ಟುವವರೂ ಇವರೇ. ಇವೆಲ್ಲದರ ಅರಿವಿದ್ದರೂ ಕೆಲವರು ಯಾರನ್ನೋ ಮೆಚ್ಚಿಸಲು ಆರೆಸ್ಸೆಸ್ ವಿರುದ್ಧ ನಾಲಿಗೆಯನ್ನು ಹರಿಬಿಡುತ್ತಾರೆ. ಇಂಥವರಿಗೆ ಆ ಹರಿಯೇ ಬುದ್ಧಿ ನೀಡಬೇಕು!

ಜಾತಿ ಮತ್ತು ಸಾಮಾಜಿಕ ಏಕತೆ

ಭಾರತದಲ್ಲಿ ಜಾತಿಭೇದ ಅಸ್ತಿತ್ವದಲ್ಲೇ ಇಲ್ಲದ ಸ್ಥಳವೆಂದರೆ ಆರೆಸ್ಸೆಸ್ ಶಾಖೆ. ಇಲ್ಲಿ ಎಲ್ಲ ಸ್ವಯಂಸೇವಕರೂ ಒಂದೇ ಸಾಲಿನಲ್ಲಿ ನಿಂತು ವ್ಯಾಯಾಮ ಮಾಡುತ್ತಾರೆ, ಆಡುತ್ತಾರೆ, ಜತೆಗೂಡಿ ಊಟ ಮಾಡುತ್ತಾರೆ, ಒಂದೇ ಧ್ವಜಕ್ಕೆ ಪ್ರಣಾಮ ಸಲ್ಲಿಸುತ್ತಾರೆ. ಸಮಾನತೆಯ ಬಗ್ಗೆ ಘೋಷಣೆ ಕೂಗುವ ಕೆಲ ರಾಜಕೀಯ ಪಕ್ಷಗಳು ತಮ್ಮದೇ ಸಂಘಟನೆಯಲ್ಲಿ ಅದನ್ನು ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿವೆ; ಆದರೆ ಆರೆಸ್ಸೆಸ್ ಎಂದೂ ಯಾರನ್ನೂ ಜಾತಿ ಕೇಳಿಲ್ಲ. ಅಷ್ಟಕ್ಕೂ, ಬಾಯಲ್ಲಿ ಪತಿತೋದ್ಧಾರ, ಕೃತಿಯಲ್ಲಿ ಸ್ವಜನ ಪಕ್ಷಪಾತ ಮಾಡಿದವರಾರು ಎಂಬುದು ಇಡೀ ದೇಶಕ್ಕೇ ತಿಳಿದಿದೆ.

ದುಡ್ಡುಕಾಸಿನ ಕಳಂಕವಿಲ್ಲ

ಸರಕಾರದಿಂದ ಆರೆಸ್ಸೆಸ್ ಒಂದು ಪೈಸೆಯನ್ನೂ ಪಡೆಯುವುದಿಲ್ಲ, ಸಮಾಜವೇ ಅದನ್ನು ನಿರ್ವಹಿಸುತ್ತದೆ. ಆರೆಸ್ಸೆಸ್‌ಗೆ ನೇರಖಾತೆಗಳಾಗಲೀ ಗುಪ್ತಖಾತೆಗಳಾಗಲೀ ಇಲ್ಲ. ಕೆಲವು ಮೂಲಭೂತವಾದಿಗಳ ಗುಪ್ತಖಾತೆಗಳಿಗೆ ಹಣ ಬಂದಂತೆ ಇಲ್ಲಿ ಯಾವುದೂ ಬರುವುದಿಲ್ಲ! ಲೆಕ್ಕಪತ್ರವನ್ನು ಕೇಳುವವರಿಗೆ ತಿಳಿದಿರಲಿ- ಆರೆಸ್ಸೆಸ್‌ಗೆ ಖಾತೆಯೇ ಇಲ್ಲವೆಂದ ಮೇಲೆ ಹಣ ಪಡೆಯುವುದಾದರೂ ಎಲ್ಲಿಂದ? ಕೆಲ ಸಂಘಟನೆಗಳಂತೆ ಇಲ್ಲಿ ‘ವಿದೇಶಿ ಯಜಮಾನಿಕೆ’ಯೂ ಇಲ್ಲ. ಸೇವೆಯಲ್ಲಿ ಸಮಾಜದವರೇ ಭಾಗಿಯಾಗಿ ವಿನಿಯೋಗ ನೀಡುವುದರಿಂದ ಲೆಕ್ಕವನ್ನೂ ಅವರೇ ಮಾಡಿಕೊಳ್ಳುತ್ತಾರೆ. ಆರೆಸ್ಸೆಸ್‌ನ ಸ್ವಯಂಸೇವಕರು ಕೆಲ ರಾಜಕೀಯ ಪಕ್ಷಗಳ ಕಾರ್ಯಕರ್ತರಂತಲ್ಲ; ದುಡ್ಡಿಲ್ಲದೇ ಸೇವೆ ಮಾಡುವ ಮಾರ್ಗದ ಅರಿವು ಅವರಿಗಿದೆ. ಸಮಾಜಕ್ಕೆ ತಲುಪಿಸಬೇಕಾದ್ದನ್ನು ನೇರವಾಗಿ ಮುಟ್ಟಿಸುವ ಸರಳದಾರಿ ಅವರಿಗೆ ಸಿದ್ಧಿಸಿದೆ. ಹೀಗಾಗಿ ಕಳೆದ 100 ವರ್ಷಗಳಲ್ಲಿ ಸಂಘದ ಪಡಸಾಲೆಯಲ್ಲಿ ದುಡ್ಡಿನ ವಿಷಯದಲ್ಲಿ ಒಮ್ಮೆಯೂ ಗಲಾಟೆಯಾಗಿಲ್ಲ. ಸಮಾಜದ ಅನೇಕ ಸಂಘಟನೆಗಳು ‘ಆರ್ಥಿಕ ಅಶುಚಿತ್ವ’ದಿಂದಾಗಿ ಛಿದ್ರವಾಗಿದ್ದು ನಮ್ಮ ಕಣ್ಣ ಮುಂದಿದೆ; ಆದರೆ ಭ್ರಷ್ಟಾಚಾರದ ವಾಸನೆಯೂ ಬಡಿಯದಂತೆ ಆರೆಸ್ಸೆಸ್ ನಿರ್ಲಿಪ್ತವಾಗಿ ತನ್ನ ಕೆಲಸ ಮಾಡುತ್ತಿರುವುದರಿಂದ ಇನ್ನೂ ಸಾವಿರ ವರ್ಷ ಕಳೆದರೂ ಹೀಗೇ ಇರಲಿದೆ. ಈವರೆಗೆ ಅನೇಕರು ಆರೆಸ್ಸೆಸ್ ಅನ್ನು ಸೈದ್ಧಾಂತಿಕವಾಗಿ ವಿರೋಧಿಸಿದ್ದಿರಬಹುದು, ಆದರೆ ಆರ್ಥಿಕ ವಿಷಯದ ಬಗ್ಗೆ ಒಬ್ಬೇ ಒಬ್ಬರು ಅನುಮಾನಿಸಿಲ್ಲ. ಕಾರಣ ಆರೆಸ್ಸೆಸ್‌ನ ಆರ್ಥಿಕ ಶುಚಿತ್ವ ವಿರೋಧಿಗಳಿಗೂ ತಿಳಿದಿದೆ.

ಯಾವುದು ಸತ್ಯ?

ಆರೆಸ್ಸೆಸ್ ಅನ್ನು ‘ಅಪಾಯಕಾರಿ’ ಎಂದು ಕರೆಯುವವರು ಅದರ ಶಿಸ್ತು, ಚರಿತ್ರೆ ಮತ್ತು ನಿಸ್ವಾರ್ಥ ಸೇವೆಗೆ ಭಯಗೊಂಡವರೇ ಹೊರತು, ಆರೆಸ್ಸೆಸ್‌ನ ಆಳ-ಅಗಲ-ವಿಸ್ತೀರ್ಣವನ್ನು ಬಲ್ಲವರಲ್ಲ. ಆರೆಸ್ಸೆಸ್‌ನ ಶಕ್ತಿಗೆ ಸರಿಸಾಟಿಯಾಗಲು ಸಾಧ್ಯವಿಲ್ಲದ ಕಾರಣ ಅವರು ಬೈಯುತ್ತಾರೆ, ಆರೆಸ್ಸೆಸ್‌ನ ಸೇವೆಗೆ ಸಮನಾದ ಸೇವೆ ನೀಡಲಾಗದ ಕಾರಣಕ್ಕೆ ಸುಳ್ಳುಸುದ್ದಿಯನ್ನು ಹರಡುತ್ತಾರೆ. ನಮ್ಮ ದೇಶ, ಧರ್ಮ, ಸಂಸ್ಕೃತಿ, ಪರಂಪರೆ, ಇತಿಹಾಸಗಳ ಕುರಿತು ಹೇಳುವ ಸಂಘಟನೆಯೊಂದು ‘ಅಪಾಯಕಾರಿ’ ಹೇಗಾದೀತು? ಹಾಗೊಂದು ವೇಳೆ ಈ ಎಲ್ಲ ಅಂಶಗಳು ಅಪಾಯಕಾರಿ ಎಂದಾದರೆ, ದೇಶವನ್ನು ಯಾವ ಕಥನಗಳ ಆಧಾರದಲ್ಲಿ ಕಟ್ಟಬೇಕೆಂದು ಈ ವಿರೋಧಿಗಳು ನಿರ್ಧರಿಸಿದ್ದಾರೆ? ಇದನ್ನು ಅವರೇ ಹೇಳಬೇಕು!

ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ.ಆಡ್ವಾಣಿ, ದೀನದಯಾಳ್ ಉಪಾಧ್ಯಾಯ, ನರೇಂದ್ರ ಮೋದಿಯವರು ಸೇರಿದಂತೆ ಅಸಂಖ್ಯಾತ ಮುತ್ಸದ್ದಿಗಳು ಹಾಗೂ ಸಮಾಜ ಸುಧಾರಕರನ್ನು ದೇಶಕ್ಕೆ ನೀಡಿದ ಶಕ್ತಿ ಆರೆಸ್ಸೆಸ್. ತುರ್ತುಪರಿಸ್ಥಿತಿಯ ಕರಾಳದಿನಗಳಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಿದ, ಇಂದು ಭಾರತದ ಏಕತೆ ಮತ್ತು ಸಾಂಸ್ಕೃತಿಕ ಪುನರುತ್ಥಾನದ ಬೆನ್ನೆಲುಬಾಗಿ ನಿಂತಿರುವ ಏಕೈಕ ಸಂಘಟನೆ ಆರೆಸ್ಸೆಸ್. ಈ ನಿಟ್ಟಿನಲ್ಲಿನ ಸಂಘದ ಬದ್ಧತೆಯನ್ನು ಪ್ರಶ್ನಿಸುವ ಕೆಲ ರಾಜಕಾರಣಿಗಳಿಗೆ ಒಂದು ಕಿವಿಮಾತು: ನಿಮ್ಮ ರಾಜಕೀಯ ಮಾಯವಾಗಬಹುದು, ಭಾಷಣಗಳು ಮರೆತುಹೋಗಬಹುದು, ಆದರೆ ಆರೆಸ್ಸೆಸ್‌ನ ಚಿಂತನೆ ಉಳಿಯುತ್ತದೆ. 100 ವರ್ಷಗಳಿಂದ ಅದು ಮಾಡುತ್ತಿರುವ ರಾಷ್ಟ್ರಸೇವೆಯು ಹಾಗೆಯೇ ಮುಂದುವರಿಯುತ್ತದೆ- ಶಾಂತವಾಗಿ, ನಿರ್ಭಯವಾಗಿ ಮತ್ತು ಶ್ರದ್ಧೆಯಿಂದ...

(ಲೇಖಕರು ಯುವ ಚಿಂತಕರು)

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಇವ್ರೇ ಬೇರೆ, ಇವ್ರ ಸ್ಟೈಲೇ ಬೇರೆ!

ಎಲ್ಲರದೂ ಒಂದು ದಾರಿಯಾದರೆ, ಎಡವಟ್ಟನದೇ ಮತ್ತೊಂದು ದಾರಿ’ ಎಂಬುದೊಂದು ಮಾತು ನಮ್ಮ ಜನರ ನಡುವೆ ಚಾಲ್ತಿಯಲ್ಲಿದೆ. ಇದಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿರುವವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್. ಎರಡನೇ ಅವಧಿಗೆ ಅಧ್ಯಕ್ಷರಾಗಿದ್ದೇ ಆಗಿದ್ದು ನಮ್ ಟ್ರಂಪಣ್ಣ ತಮ್ಮ ಅಂತರಾಳದಲ್ಲಿ ಹುದುಗಿದ್ದ ತರಹೇವಾರಿ ವಿಲಕ್ಷಣ ಕಲ್ಪನೆಗಳಿಗೆ ಜೀವ ಕೊಡುತ್ತಿದ್ದಾರೇನೋ ಎನಿಸುತ್ತಿದೆ. ‘ಮೇಕ್ ಅಮೆರಿಕ ಗ್ರೇಟ್ ಅಗೇನ್’ ಎಂಬ ಘೋಷವಾಕ್ಯದೊಡನೆ ಅಧ್ಯಕ್ಷೀಯ ಚುನಾವಣೆಯಲ್ಲಿ ಅಮೆರಿಕನ್ನರ ಮನವನ್ನು ಗೆದ್ದವರು ಈ ಟ್ರಂಪ್ ಮಹಾಶಯರು. ಯಾವುದೇ ದೇಶವನ್ನು ಪ್ರಗತಿಪಥದತ್ತ ಸಾಗಿಸಲು ಅದರ ಪರಮೋಚ್ಚ ನಾಯಕರು ಹೀಗೆ ಸಂಕಲ್ಪಿಸುವುದರಲ್ಲಿ ತಪ್ಪೇನಿಲ್ಲ ಬಿಡಿ. ಹಾಗಂತ ಅದರ ಸಾಕಾರಕ್ಕೆ ಆಯ್ದುಕೊಳ್ಳಬೇಕಾದ ಮಾರ್ಗವೂ ವಿವೇಚನಾಯುತವಾದುದೇ ಆಗಿರಬೇಕಲ್ಲವೇ? ಆದರೆ ಟ್ರಂಪ್ ಮಹಾಶಯರು ಅಂಥ ಹಾದಿಯಲ್ಲಿ ಹೆಜ್ಜೆ ಹಾಕದೆ ‘ವಿಲಕ್ಷಣ ಮಾರ್ಗ’ವನ್ನೇ ಆಯ್ದುಕೊಂಡಿರುವುದು ಜಾಗತಿಕ ಮಟ್ಟದಲ್ಲಿ ಒಂದಷ್ಟು ಗೇಲಿಗೆ ಕಾರಣವಾಗಿರೋದಂತೂ ಖರೆ!

ಶುರುವಿನಲ್ಲಿ, ಜಗತ್ತಿನ ವಿವಿಧ ದೇಶಗಳ ಮೇಲೆ ಅವರು ಕೆಂಗಣ್ಣು ಬೀರಿದರು. ಅಮೆರಿಕಕ್ಕೆ ಬಂದು ಬೀಳುವ ವಿದೇಶಿ ಸರಕು-ಸಾಮಗ್ರಿಗಳ ಮೇಲಿನ ಸುಂಕವನ್ನು ಅತಿರೇಕದ ಮಟ್ಟಕ್ಕೆ ಏರಿಸುವುದು ಇದರ ಫಲಶ್ರುತಿಯಾಗಿತ್ತು. ಅದರಲ್ಲೂ ಚೀನಾದ ಮೇಲೆ ಟ್ರಂಪಣ್ಣ ತೋರಿದ ಅವಕೃಪೆಯಂತೂ ರವಷ್ಟು ಜಾಸ್ತಿಯೇ ಇತ್ತು ಎನ್ನಿ. ಆದರೆ ಈ ಗೊಡ್ಡು ಬೆದರಿಕೆಗೆ ಚೀನಾ ಸೊಪ್ಪು ಹಾಕಲಿಲ್ಲ ಎಂಬುದು ಬೇರೆ ಮಾತು ಬಿಡಿ. ನಂತರ ಭಾರತದ ಕಡೆಗೆ ತಮ್ಮ ವಕ್ರದೃಷ್ಟಿ ಹೊರಳಿಸಿದ ಟ್ರಂಪ್, “ಅಮೆರಿಕ ಹೇರಿದ ನಿರ್ಬಂಧದ ಹೊರತಾಗಿಯೂ ರಷ್ಯಾದಿಂದ ಭಾರತವು ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತಿದೆ ಮತ್ತು ಇದರಿಂದ ರಷ್ಯಾಕ್ಕೆ ದಕ್ಕುವ ಹಣವು ಉಕ್ರೇನ್ ಜತೆಗಿನ ಅದರ ಯುದ್ಧಕ್ಕೆ ವಿನಿಯೋಗವಾಗುತ್ತಿದೆ” ಎಂಬ ಕುಂಟುನೆಪ ಮುಂದುಮಾಡಿಕೊಂಡು ಭಾರತದ ಸರಕು-ಸಾಮಗ್ರಿಗಳ ಮೇಲೂ ಶೇ.50ರಷ್ಟು ಸುಂಕ ವಿಧಿಸಿ ಕೈತೊಳೆದುಕೊಂಡರು! ಇದಕ್ಕೆ ಭಾರತ ಸೇರಿದಂತೆ ಸಾಕಷ್ಟು ದೇಶಗಳಿಂದ ಟೀಕೆ ಹೊಮ್ಮಿತು ಎನ್ನಿ... ಈಗ ಅದರ ಮುಂದುವರಿದ ಭಾಗವೆಂಬಂತೆ ಅಮೆರಿಕದ ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೊಲಿನಾ ಲೀವಿಟ್ ಅವರು, “ಉಕ್ರೇನ್ ಮೇಲಿನ ಯುದ್ಧವನ್ನು ಕೊನೆಗೊಳಿಸುವಂತೆ ರಷ್ಯಾದ ಮೇಲೆ ಒತ್ತಡ ಹೇರಲಿ ಎಂಬ ಉದ್ದೇಶಕ್ಕಾಗಿಯೇ ಡೊನಾಲ್ಡ್ ಟ್ರಂಪ್ ಭಾರತದ ಮೇಲೆ ಹೆಚ್ಚುವರಿ ಪ್ರತಿಸುಂಕ ವಿಧಿಸಿದ್ದಾರೆ” ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿಕೊಂಡಿದ್ದಾರೆ. ಇದು ಒಂಥರದಲ್ಲಿ “ಅದ್ಯಾವುದಕ್ಕೋ ಜ್ವರ ಬಂದರೆ, ಇನ್ಯಾವುದಕ್ಕೋ ಬರೆ ಎಳೆದರಂತೆ” ಎಂಬ ಮಾತನ್ನು ನೆನಪಿಸುವಂತಿದೆಯಲ್ಲವೇ? ಅಮೆರಿಕದ ಈ ‘ಸುಂಕದೊತ್ತಡ’ ಸಮರ್ಥನೀಯವಲ್ಲ ಎಂದು ರಷ್ಯಾದ ಹಿರಿಯ ರಾಜತಾಂತ್ರಿಕರೊಬ್ಬರು ಖಂಡಾತುಂಡವಾಗಿ ಖಂಡಿಸಿದ್ದಾರಂತೆ. ಆದರೆ ಟ್ರಂಪ್ ಮಹಾಶಯರಿಗೆ ಅಂಥ ಬಾಣ ನಾಟಬೇಕಲ್ಲ?!!

ನಾರಾಯಣ ನಾರಾಯಣ!

ಬೆಂಗಳೂರಿನಲ್ಲಿ ರಸ್ತೆಗಳು ಗುಂಡಿಗಳಾಗಿವೆ, ವಾಹನ ಸವಾರರು ಪರದಾಡುವ ಸ್ಥಿತಿ ಇದೆ. ಇದೇನಾ ಬ್ರ್ಯಾಂಡ್ ಬೆಂಗಳೂರು?” ಎಂದು ಬಿಜೆಪಿಯ ಶಾಸಕರೊಬ್ಬರು ಟೀಕಿಸಿದ್ದಾರೆ. ಇದನ್ನು ಓದಿದ ‘ನಿತ್ಯ ದ್ವಿಚಕ್ರ ವಾಹನ ಸವಾರ’ರೊಬ್ಬರು, “ರಸ್ತೆಯಲ್ಲಿನ ಗುಂಡಿಯೊಳಗೆ ಗಾಡಿಯನ್ನು ಇಳಿಸಿ ನಂತರ ರಸ್ತೆಗೆ ಹತ್ತಿಸುವಾಗ ನಮ್ಮ ಬುಡಕ್ಕೆ ಆಗುವ ನೋವನ್ನು ನೀವಾದರೂ ಅರ್ಥಮಾಡಿಕೊಂಡ್ರಲ್ಲಾ ಅಂತ ತುಂಬಾ ಸಂತೋಷವಾಗ್ತಿದೆ ಸರ್. ಆದರೆ ಇದು ರಾತ್ರೋರಾತ್ರಿ ಹುಟ್ಟಿಕೊಂಡ ಸಮಸ್ಯೆಯಲ್ಲ, ಬಿಜೆಪಿಯವರು ಅಧಿಕಾರದಲ್ಲಿದ್ದಾಗಲೂ ಈ ಸಮಸ್ಯೆಯಿತ್ತು, ಅಲ್ವೇ ಸರ್?” ಎಂದು ಪ್ರಶ್ನಿಸಿ, ಆನಂದಬಾಷ್ಪ ಸುರಿಸುವುದೋ ಇಲ್ಲವೇ ಗೋಳಾಡುವುದೋ ಎಂದು ಗೊತ್ತಾಗದೆ ಅತೀವ ಗೊಂದಲಕ್ಕೆ ಸಿಲುಕಿದರಂತೆ!!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:221

ಸಮಾಚಾರ ಸಣ್ಣದಲ್ಲ

ಬಿಹಾರಕ್ಕೆ ರು.13000 ಕೋಟಿ ಯೋಜನೆ

ಪಟನಾ: ಬಿಹಾರಕ್ಕೆ ಶುಕ್ರವಾರ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ರೈಲ್ವೆ, ರಸ್ತೆ ಮತ್ತು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ್ದು ಸೇರಿದಂತೆ ಒಟ್ಟು 13 ಸಾವಿರ ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು. ಕೆಲವು ಪೂರ್ಣಗೊಂಡ ಯೋಜನೆಗಳನ್ನು ಉದ್ಘಾಟಿಸಿದರು. ಬೋಧ್‌ಗಯಾ ಮಗಧ ವಿಶ್ವವಿದ್ಯಾಲಯದಲ್ಲಿ ನಡೆದ ಬೃಹತ್ ಸಾರ್ವಜನಿಕ ರ್‍ಯಾಲಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಎರಡು ಹೊಸ ರೈಲುಗಳ ಸಂಚಾರಕ್ಕೆ ಹಸಿರು ನಿಶಾನೆ ತೋರಿದರು. ಬೇಗುಸರಾಯ್‌ನಲ್ಲಿ ಗಂಗಾ ನದಿಗೆ ಅಡ್ಡಲಾಗಿ ನಿರ್ಮಿಸಿದ 6 ಪಥದ ಸೇತುವೆ ಉದ್ಘಾಟಿಸಿದರು. ಈ ಯೋಜನೆ ರಾಜ್ಯದ ಜನರ ಬಹುಕಾಲದ ಬೇಡಿಕೆಯಾಗಿತ್ತು. 1,870 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಿದ ಸೇತುವೆ 8.15 ಕಿ.ಮೀ ಹೆದ್ದಾರಿ ವಿಭಾಗ ಮತ್ತು 1.86 ಕಿ.ಮೀ ಉದ್ದದ ಸೇತುವೆ ಒಳಗೊಂಡಿದೆ.

ಸಂಸತ್ ಭವನ ಗೋಡೆ ಹತ್ತಿದ ಯುವಕ ಸೆರೆ

ದೆಹಲಿ: ಸಂಸತ್ ಭವನ ಆವರಣದ ಗೋಡೆಯನ್ನೇರಲು ಶುಕ್ರವಾರ ಬೆಳಗ್ಗೆ 5.50ರ ವೇಳೆ ಯತ್ನಿಸಿದ 20 ವರ್ಷದ ಯುವಕನನ್ನು ಭದ್ರತೆ ಕರ್ತವ್ಯದಲ್ಲಿದ್ದ ಸಿಐಎಸ್‌ಎಫ್ ಯೋಧರು ಸೆರೆ ಹಿಡಿದು ದೆಹಲಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಯುವಕ ಆವರಣದ ಗೋಡೆ ಪಕ್ಕದ ಮರವೇರಿ ಗೋಡೆ ದಾಟಿ ಸಂಸತ್ ಭವನದ ಆವರಣ ಪ್ರವೇಶಿಸಲು ಪ್ರಯತ್ನಿಸಿದ್ದ. ಬಂಧಿತನನ್ನು ಉತ್ತರ ಪ್ರದೇಶದ ರಾಮ ಎಂದು ಗುರುತಿಸಲಾಗಿದ್ದು 'ಮಾನಸಿಕ ಅಸ್ವಸ್ಥ' ಎನಿಸುತ್ತದೆ. ವಿಚಾರಣೆ ಮತ್ತು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಡಿಸಿಪಿ ಹೇಳಿದ್ದಾರೆ. ಯುವಕನ ಉದ್ದೇಶವೇನೆಂಬುದನ್ನು ತಿಳಿಯಲು ಗುಪ್ತಚರ ಬ್ಯೂರೊ(ಐಬಿ) ಮತ್ತು ದೆಹಲಿ ಪೊಲೀಸರ ವಿಶೇಷ ಘಟಕ ಸೇರಿದಂತೆ ಹಲವು ತನಿಖಾ ಸಂಸ್ಥೆಗಳು ಯುವಕನ ವಿಚಾರಣೆ ನಡೆಸುತ್ತಿವೆ. ಯುವಕನ ಗೋಡೆ ಹಾರುವ ಯತ್ನದ ಘಟನೆ 2023ರ ಡಿ.13ರಂದು ನಡೆದಿದ್ದ ಭದ್ರತಾ ವೈಫಲ್ಯವನ್ನು ನೆನಪಿಸಿದೆ. ಅಂದು ಇಬ್ಬರು ವ್ಯಕ್ತಿ ಗಳು ಲೋಕಸಭೆಯ ಸಂದರ್ಶಕರ ಗ್ಯಾಲರಿ ಯಿಂದ ಸದನಕ್ಕೆ ಜಿಗಿದು ಹಳದಿ ಬಣ್ಣದ ಕರ್ಲ ಬಾಂಬ್ ಎಸೆದಿದ್ದರು.

ಅಮೆರಿಕ: 7.5 ತೀವ್ರತೆ ಕಂಪನ, ಸುನಾಮಿ ಭೀತಿ

ವಾಷಿಂಗ್ಟನ್: ಅಮೆರಿಕದಲ್ಲಿ ಶುಕ್ರವಾರ ನಸುಕಿನಲ್ಲಿ ಪ್ರಬಲ ಭೂಕಂಪವಾಗಿದೆ. ರಿಕ್ಟರ್ ಮಾಪಕದಲ್ಲಿ 7.5 ರಷ್ಟು ತೀವ್ರತೆ ದಾಖಲಾಗಿದೆ. ಡ್ರೇಕ್ ಪ್ಯಾಸೇಜ್ ಪ್ರದೇಶದಲ್ಲಿ ಪ್ರಬಲ ಭೂಕಂಪ ಸಂಭವಿಸಿದ್ದು, ಸುನಾಮಿ ಅಪ್ಪಳಿಸುವ ಭೀತಿ ಎದುರಾಗಿದೆ. ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರದ ಪ್ರಕಾರ, ಭಾರತೀಯ ಕಾಲಮಾನ ಶುಕ್ರವಾರ ಬೆಳಗ್ಗೆ 7.46ರಲ್ಲಿ ಭೂಕಂಪವಾಗಿದೆ. ಕಂಪನದ ಕೇಂದ್ರಬಿಂದು ಡ್ರೇಕ್ ಪ್ಯಾಸೇಜ್‌ನಲ್ಲಿದೆ. ಅಮೆರಿಕ ಸರಕಾರದ ಭೂವೈಜ್ಞಾನಿಕ ಸಮೀಕ್ಷೆ ಮೊದಲಿಗೆ ಭೂಕಂಪದ ತೀವ್ರತೆ 8ರಷ್ಟಿತ್ತು ಎಂದು ಹೇಳಿತ್ತು. ಆದರೆ, ದೊಡ್ಡ ಮಟ್ಟದ ಹಾನಿ ವರದಿಯಾಗಿಲ್ಲ. ದಕ್ಷಿಣ ಅಮೆರಿಕ ಮತ್ತು ಅಂಟಾರ್ಕ್ಟಿಕಾ ನಡುವಿನ ಭಾಗದಲ್ಲಿ 800 ಕಿಮೀ ವಿಸ್ತಾರದ ಡ್ರೇಕ್ ಪ್ಯಾಸೇಜ್ ಇದೆ. ಇದು ಪೂರ್ವದಲ್ಲಿ ಅಟ್ಲಾಂಟಿಕ್ ಸಾಗರ-ಪಶ್ಚಿಮದಲ್ಲಿ ಪೆಸಿಫಿಕ್ ಮಹಾಸಾಗರವನ್ನು ಸಂಪರ್ಕಿಸುತ್ತದೆ.

ಸರಕಾರಿ ಅಭಿವೃದ್ಧಿ ಯೋಜನೆಗಳ ವಿನಿಯೋಗ, ಗ್ರಾಮೀಣ ಪ್ರಗತಿ ಕಾರಣ

1ನೇ ತ್ರೈಮಾಸಿಕ ಜಿಡಿಪಿ ಪ್ರಗತಿ ಶೇ.6.7

ದೆಹಲಿ: ಅಮೆರಿಕದ ಟಾರಿಫ್(ಪ್ರತಿಸುಂಕ) ಒತ್ತಡ, ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆ, ಗಡಿ ಉದ್ವಿಗ್ನತೆ ಮೊದಲಾದ ಹಲವು ಸವಾಲುಗಳ ಮಧ್ಯೆಯೂ ಭಾರತದ 'ಒಟ್ಟಾರೆ ಆಂತರಿಕ ಉತ್ಪಾದನೆ'(ಜಿಡಿಪಿ) ಪ್ರಗತಿಗತಿ ಬಹಳ ಆಶಾದಾಯಕವಾಗಿದೆ. ಪ್ರಸಕ್ತ ಹಣಕಾಸು ವರ್ಷದ ಮೊದಲ(ಏಪ್ರಿಲ್-ಜೂನ್) ತ್ರೈಮಾಸಿಕದಲ್ಲಿ ಶೇ.6.7ರಷ್ಟು ಪ್ರಗತಿ ಕಾಣಬಂದಿದೆ ಎಂದು ವರದಿಯಾಗಿದೆ.

ಈಗಿನ ಜಿಡಿಪಿ ಬೆಳವಣಿಗೆಗೆ ಪ್ರಮುಖ ವಾಗಿ ಕಾರಣವಾಗಿರುವ ಅಂಶಗಳೆಂದರೆ, ದೊಡ್ಡ ದೊಡ್ಡ ಅಭಿವೃದ್ಧಿ ಯೋಜನೆಗಳ ಮೇಲಿನ ಸರಕಾರದ ಭಾರೀ ವಿನಿಯೋಜನೆ ಮತ್ತು ಗ್ರಾಮೀಣ ಭಾಗದಲ್ಲಿನ ಖರೀದಿ ವಹಿವಾಟಿನಲ್ಲಿ ಭಾರೀ ಏರಿಕೆ ಕಂಡುಬಂದಿ ರುವುದು, ಕಟ್ಟಡ ನಿರ್ಮಾಣ ವಲಯ, ಕೃಷಿ ಕ್ಷೇತ್ರದಲ್ಲಿನ ಉತ್ತಮ ಬೆಳವಣಿಗೆಗೆ ಕಂಡುಬಂದಿರುವು ದಾಗಿದೆ ಎಂದು ವಿಶ್ಲೇಷಿಸಲಾಗಿದೆ. ಇನ್ನೊಂದೆಡೆ ಡಿಜಿಟಲ್ ಪಾವತಿ ಪ್ರಮಾಣದಲ್ಲಿಯೂ ಹೆಚ್ಚಳವಾಗಿರುವುದು, ಸೇವಾ ವಲಯದಲ್ಲಿನ ಗಣನೀಯ ಕೊಡುಗೆಗಳೂ ಜಿಡಿಪಿ ಪ್ರಗತಿಗತಿಗೆ ಗಣನೀಯ ಕೊಡುಗೆ ನೀಡಿವೆ.

ನಿರೀಕ್ಷೆ ಮೀರಿದ ಪ್ರಗತಿ: ಈ ಮೊದಲು 2025-26ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಅಂದರೆ, ಏಪ್ರಿಲ್-ಜೂನ್ ಅವಧಿಯಲ್ಲಿ ಭಾರತದ ಜಿಡಿಪಿ ಪ್ರಗತಿ ಕನಿಷ್ಠ ಶೇ.6.3ರಿಂದ ಗರಿಷ್ಠ ಶೇ.7ರಷ್ಟಿರಲಿದೆ ಎಂದು ಅಂದಾಜು ಮಾಡಲಾಗಿತ್ತು. ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಕೂಡಾ ಶೇ.6.5ರಷ್ಟು ಜಿಡಿಪಿ ಬೆಳವಣಿಗೆಯನ್ನು ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾ ಸಿಕದಲ್ಲಿ ನಿರೀಕ್ಷಿಸಬಹುದಾಗಿದೆ ಎಂದು ಭವಿಷ್ಯ ನುಡಿದಿತ್ತು. ಆದರೆ ಆರ್‌ಬಿಐನ ನಿರೀಕ್ಷೆಯನ್ನೂ ಮೀರಿ ಏಪ್ರಿಲ್-ಜೂನ್ ಅವಧಿಯಲ್ಲಿನ ಜಿಡಿಪಿ ಪ್ರಗತಿ ಶೇ.6.7ರಷ್ಟು ದಾಖಲಾಗಿರುವುದು ಆಶಾದಾಯಕವಾಗಿದೆ. ದೇಶದ ಜಿಡಿಪಿ ಪ್ರಗತಿ ವಿಚಾರ ಜಾಗತಿಕ ಮಟ್ಟದಲ್ಲಿಯೇ ಗರಿಷ್ಠ ಮಟ್ಟದ್ದಾಗಿದೆ.

ಹೊಸ ಭರವಸೆ

ಈ ಮಧ್ಯೆ, ದೀಪಾವಳಿ ಹಬ್ಬದ ವೇಳೆಗೆ ಸರಕು ಮತ್ತು ಸೇವೆಗಳ ತೆರಿಗೆ(ಜಿಎಸ್‌ಟಿ) ಪದ್ಧತಿಯಲ್ಲಿ ಭಾರೀ ಸುಧಾರಣೆ ಆಗಲಿದೆ. ತೆರಿಗೆ ಪ್ರಮಾಣ ದೊಡ್ಡ ಗಾತ್ರದಲ್ಲಿ ತಗ್ಗಲಿದೆ. ಎರಡು ಸ್ಲ್ಯಾಬ್‌ಗಳನ್ನೇ ರದ್ದು ಮಾಡುಲಾಗುತ್ತಿದೆ ಎಂಬ ವರದಿಗಳು ಹೊರಬಿದ್ದಿದ್ದು, ಮುಂಬರುವ ತ್ರೈಮಾಸಿ ಕಗಳಲ್ಲಿ ಜಿಡಿಪಿ ಪ್ರಗತಿಗತಿ ಇನ್ನಷ್ಟೇ ಮೇಲ್ಮಟ್ಟದಲ್ಲಿರಲಿದೆ ಎಂಬ ಆಶಾಭಾವ ಹುಟ್ಟು ಹಾಕಿದೆ.

ಸಬ್ಸಿಡಿ ರದ್ದು ಕಾರಣ!

ಸಬ್ಸಿಡಿ(ಸಹಾಯಧನ) ವಿತರಣೆ ಪ್ರಮಾಣ ಹಿಂದಿನ ತ್ರೈಮಾಸಿಕದಲ್ಲಿನ ಶೇ.40.70 ಮಟ್ಟದಿಂದ ಶೇ.7.30ಕ್ಕೆ ಇಳಿಕೆಯಾಗಿರುವುದೂ ಕೂಡಾ ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದ ಜಿಡಿಪಿ ಪ್ರಗತಿಗೆ ಕಾರಣವಾಗಿದೆ.

ಜಿಡಿಪಿ ಕ್ಷೇತ್ರವಾರು ಪ್ರಗತಿ

ಕ್ಷೇತ್ರ	ಪ್ರಗತಿ ಶೇ.
ಪರೋಕ್ಷ ತೆರಿಗೆ	11.30
ಸೇವೆಗಳ ಉದ್ಯಮ	8.30
ಕೃಷಿ-ಮತ್ಸ್ಯೋದ್ಯಮ	4.50
ಕೈಗಾರಿಕೆ	4.00

10 ವರ್ಷಗಳಲ್ಲಿ ಜಪಾನ್ ₹5.90 ಲಕ್ಷ ಕೋಟಿ ಹೂಡಿಕೆ

ದೆಹಲಿ: ಉಭಯತ್ರರ ವಾರ್ಷಿಕ ಶೃಂಗಸಭೆಗಾಗಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಮಾಸಾಂತ್ಯದಲ್ಲಿ ಜಪಾನ್‌ಗೆ ಅಧಿಕೃತ ಭೇಟಿ ನೀಡಲಿದ್ದು, ಈ ಸಂದರ್ಭದಲ್ಲೇ ಜಪಾನ್ ಭಾರತದಲ್ಲಿನ ತನ್ನ ಹೂಡಿಕೆ ಯೋಜನೆಗಳನ್ನು ಪ್ರಕಟಿ ಸಲಿದೆ ಎಂದು ನಿರೀಕ್ಷಿಸಲಾಗಿದೆ. ಮುಂದಿನ 10 ವರ್ಷಗಳಲ್ಲಿ ಜಪಾನ್ ಭಾರತದ ಉದ್ಯಮ ವಲಯದಲ್ಲಿ 10 ಲಕ್ಷ ಕೋಟಿ 'ಯೆನ್', ಅಂದರೆ, 5.90 ಲಕ್ಷ ಕೋಟಿ ರು.(ಅಮೆರಿಕನ್ ಡಾಲರ್ ಲೆಕ್ಕದಲ್ಲಿ 6800 ಕೋಟಿ) ಹೂಡಿಕೆ ಮಾಡಲು ನಿರ್ಧರಿಸಿರುವ ಸಂಗತಿಯನ್ನು ಶೃಂಗಸಭೆ ವೇಳೆ ಪ್ರಕಟಿಸಲಿದೆ ಎಂದು ಜಪಾನ್ ಮೂಲಗಳಿಂದ ತಿಳಿದು ಬಂದಿದೆ. ಹೂಡಿಕೆ ವಿಚಾರವಲ್ಲದೇ, ದೇಶದ ಭದ್ರತೆ ಮತ್ತು ರಕ್ಷಣಾ ಕ್ಷೇತ್ರದಲ್ಲಿನ ಪರಸ್ಪರ ಸಹಕಾರ ಕುರಿತೂ ಪ್ರಧಾನಿ ಮೋದಿ ಮತ್ತು ಜಪಾನ್ ಪ್ರಧಾನಿ ಶಿಗೆರು ಇಷಿಬಾ ಅವರು ಮಾತುಕತೆ ನಡೆಸಲಿದ್ದಾರೆ. ಇಂಡೊ-ಫೆಸಿಫಿಕ್ ವಲಯದಲ್ಲಿ ಶಾಂತಿ ಕಾಯ್ದುಕೊಳ್ಳುವ ಕುರಿತೂ ಚರ್ಚಿಸಲಿದ್ದಾರೆ ಎಂದು ಜಪಾನ್‌ನ 'ಅಸಾಹಿ ಶಿಂಬೂನ್' ಪತ್ರಿಕೆ ವಿಶೇಷ ವರದಿ ಪ್ರಕಟಿಸಿದೆ. ಭಾರತದ ಪ್ರಧಾನಿ ಮೋದಿ ಅವರ ಜಪಾನ್ ಭೇಟಿಯನ್ನು ಈ ಬಾರಿ ಜಪಾನ್ ಉದ್ಯಮವಲಯ ದೊಡ್ಡ ಅವಕಾಶವಾಗಿ ನೋಡುತ್ತಿವೆ. ಬಂಡ ವಾಳ ಹೂಡಿಕೆ ವಿಚಾರದಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳಲಿವೆ ಎಂದು ಪತ್ರಿಕೆ ವರದಿ ಮಾಡಿದೆ.

ಜಪಾನ್ ಮತ್ತು ಭಾರತದ ಪ್ರಧಾನಿಗಳಾದ ಶಿಗೆರು ಇಷಿಬಾ ಮತ್ತು ನರೇಂದ್ರ ಮೋದಿ

ಪುಟಿನ್-ಝೆಲೆನ್‌ಸ್ಕಿ ನೇರ ಮಾತುಕತೆ ನಡೆಸಲಿ: ಟ್ರಂಪ್

ವಾಷಿಂಗ್ಟನ್: ರಷ್ಯಾ-ಉಕ್ರೇನ್ ಯುದ್ಧ ಕೊನೆಗೊಳಿಸಲು ಹಲವು ಪ್ರಯತ್ನ ಮಾಡುತ್ತಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದಿಢೀರ್ ಎಂಬಂತೆ ಪಕ್ಕಕ್ಕೆ ಸರಿದು ಅಚ್ಚರಿ ಮೂಡಿಸಿದ್ದಾರೆ.

ರಷ್ಯಾ-ಉಕ್ರೇನ್ ನಡುವಿನ ಯುದ್ಧ ನಿಲುಗಡೆ ವಿಚಾರದಲ್ಲಿ ಅಮೆರಿಕದ ಮಧ್ಯಸ್ಥಿಕೆ ಇಲ್ಲದೇ, ಉಭಯ ದೇಶಗಳ ಅಧ್ಯಕ್ಷರುಗಳಾದ ವ್ಲಾದಿಮೀರ್ ಪುಟಿನ್ ಮತ್ತು ವೊಲೊದಿಮೀರ್ ಝೆಲೆನ್‌ಸ್ಕಿ ಅವರೇ ಮೊದಲು ನೇರ ಮಾತುಕತೆ ನಡೆಸಲಿ ಎಂದು ಟ್ರಂಪ್ ಹೇಳಿದ್ದಾಗಿ ಶ್ವೇತಭವನದ ಅಧಿಕಾರಿಗಳು ಮಾಧ್ಯಮ ಸಂದರ್ಶನದಲ್ಲಿ ತಿಳಿಸಿದ್ದಾರೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಮುಂದಿನ ಹಂತದ ಶಾಂತಿ ಮಾತುಕತೆಗಳಲ್ಲಿ ಟ್ರಂಪ್ ನೇರ ಭಾಗಿಯಾಗದಿರಲು ನಿರ್ಧರಿಸಿದ್ದಾರೆ. ಬದಲಾಗಿ ಪುಟಿನ್-ಝೆಲೆನ್‌ಸ್ಕಿ ಅವರೇ ಮಾತನಾಡಿಕೊಳ್ಳಲಿ ಎಂದು ಹೇಳಿದ್ದಾರೆ. ಆದರೆ, ಪುಟಿನ್-ಝೆಲೆನ್‌ಸ್ಕಿ ದ್ವಿಪಕ್ಷೀಯ ಸಭೆ ಯಾವಾಗ- ಎಲ್ಲಿ ನಡೆಯಲಿದೆ? ಅಥವಾ ನಡೆಯುವುದೇ ಇಲ್ಲವೋ ಎನ್ನುವುದು ಸ್ಪಷ್ಟವಿಲ್ಲ ಎಂದು ಹೇಳುವ ಮೂಲಕ ಅಧಿಕಾರಿ ಗೊಂದಲ ಮೂಡಿಸಿದ್ದಾರೆ. ಪುಟಿನ್-ಝೆಲೆನ್‌ಸ್ಕಿ ನೇರ ಮಾತುಕತೆಗೆ ತಯಾರಿ ನಡೆಸು ತ್ತಿದ್ದಾರೆ. ದ್ವಿಪಕ್ಷೀಯ ಸಭೆಯಲ್ಲಿ ಏನಾಗಲಿದೆ ಎಂಬುದನ್ನು ಕಾದು ನೋಡುತ್ತೇನೆ ಎಂದು ಟ್ರಂಪ್ ರೇಡಿಯೊ ಸಂದರ್ಶನವೊಂದರಲ್ಲಿ ಇದಕ್ಕೂ ಮುನ್ನ ಹೇಳಿದ್ದರು.

ಟ್ರಂಪ್ ಶ್ವೇತಭವನ ಸಭೆ!

ಇತ್ತೀಚೆಗೆ ಶ್ವೇತಭವನದಲ್ಲಿ ಉಕ್ರೇನ್ ಮತ್ತು ಯುರೋಪ್ ದೇಶಗಳ ದಿಗ್ಗಜರ ಜತೆ ಸಭೆ ನಡೆಸಿದ್ದ ಟ್ರಂಪ್, ಬಳಿಕ ಎಲ್ಲಾ ನಾಯಕರನ್ನು ಓವಲ್ ಕಚೇರಿಯಲ್ಲಿನ ತಮ್ಮ ಕ್ಯಾಬಿನ್‌ಗೆ ಕರೆದೊಯ್ದು ಅವರೆದುರೇ ಪುಟಿನ್‌ಗೆ ದೂರವಾಣಿ ಕರೆ ಮಾಡಿ 40 ನಿಮಿಷಗಳ ಮಾತುಕತೆ ನಡೆಸಿದ್ದರು. ಇದು ಯೂರೋಪ್ ನಾಯಕರು ಮುಜುಗರಕ್ಕೀಡಾಗುವಂತೆ ಮಾಡಿತ್ತು. ಮುಕ್ಕಾಲು ಗಂಟೆ ಮೌನವಾಗಿ ಕೂರುವುದು ಅಸಹನೀಯವೆನಿಸಿತ್ತು. ಆನಂತರದಲ್ಲಿಯೇ ಟ್ರಂಪ್ ನಡೆಯಲ್ಲಿ ಬದಲಾವಣೆಯಾಗಿದೆ ಎನ್ನಲಾಗಿದೆ.

ರಷ್ಯಾದ ತೈಲ ಸಂಸ್ಕರಿಸಿ ಮಾರುವ ಭಾರತ: ಟೀಕೆ

ವಾಷಿಂಗ್ಟನ್: ಭಾರತ ರಷ್ಯಾದಿಂದ ಕಚ್ಚಾ ತೈಲ ರಿಯಾಯಿತಿ ದರದಲ್ಲಿ ಖರೀದಿಸಿ, ಸಂಸ್ಕರಿಸಿ, ಜಾಗತಿಕ ಮಾರುಕಟ್ಟೆಗೆ ಹೆಚ್ಚಿನ ಬೆಲೆಗೆ ರಫ್ತು ಮಾಡಿ ಲಾಭ ಮಾಡಿಕೊಳ್ಳುತ್ತಿದೆ. ಆ ಮೂಲಕ ಕ್ರೆಮ್ಲಿನ್‌ಗೆ ದೆಹಲಿ 'ಲಾಂಡ್ರೋಮೆಟ್'ನಂತೆ ವರ್ತಿಸುತ್ತಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಉದ್ಯಮ ಸಲಹೆಗಾರ ಪೀಟರ್ ನವರೊ ಟೀಕಿಸಿದ್ದಾರೆ.



ವಾಷಿಂಗ್ಟನ್‌ನಲ್ಲಿ ಗುರುವಾರ ಸುದ್ದಿಗಾರರ ಜತೆ ಮಾತನಾ ಡಿದ ಪೀಟರ್, ಭಾರತದ ಈ ನಡೆಯಿಂದಾಗಿ ರಷ್ಯಾ-ಉಕ್ರೇನ್ ಯುದ್ಧ ಮುಂದುವರಿಯುವಂತೆ ಮಾಡುತ್ತಿವೆ ಎಂದರು. ರಷ್ಯಾ ತೈಲ ಆಮದು ಮಾಡಿಕೊಳ್ಳುವುದರಿಂದ ಭಾರತಕ್ಕೆ ಇಂಧನ ಭದ್ರತೆ ಸಿಗುತ್ತಿದೆ ಎಂಬ ಭಾರತದ ವಾದವನ್ನು ಒಪ್ಪಲಾಗದು ಎಂದಿದ್ದಾರೆ. ಭಾರತದ ಆಂಗ್ಲಪತ್ರಿಕೆಯಲ್ಲಿ ಆ.18ರಂದು ಪ್ರಕಟವಾದ ತಮ್ಮ ಲೇಖನ ಉಲ್ಲೇಖಿಸಿದ ಪೀಟರ್, ಭಾರತ ಸರಕಾರದ ವಾದವನ್ನು ಅಲ್ಲಗಳೆಯಲೆಂದೇ ನಾನು ಆ ಲೇಖನ ಬರೆದಿದ್ದೆ. ಭಾರತಕ್ಕೆ ವಾಸ್ತವವಾಗಿ ಈಗ ರಷ್ಯಾದ ಕಚ್ಚಾತೈಲದ ಅಗತ್ಯವಿಲ್ಲ. ಬದಲಾಗಿ ಕಚ್ಚಾತೈಲ ಸಂಸ್ಕರಿಸಿ, ಬೇರೆ ದೇಶಗಳಿಗೆ ಮಾರಾಟ ಮಾಡಿ ಲಾಭಗಳಿಸುವ ಯೋಜನೆ ಭಾರತದ್ದಾಗಿದೆ ಎಂದು ಟೀಕಿಸಿದ್ದಾರೆ. ಜಾಗತಿಕ ಆರ್ಥಿಕತೆಯಲ್ಲಿ ಭಾರತ ಪಾತ್ರ ಗಮನಿಸಿ. ರಷ್ಯಾದಿಂದ ತೈಲ ಖರೀದಿಸುವುದರಿಂದ ಉಕ್ರೇನ್ ಭಾಗದಲ್ಲಿ ಶಾಂತಿ ಸೃಷ್ಟಿ ಆಗುವುದಿಲ್ಲ. ಬದಲಾಗಿ ಯುದ್ಧವನ್ನು ಶಾಶ್ವತಗೊಳಿಸುತ್ತದೆ ಎಂದರು. ಶೇ.50 ಪ್ರತಿಸುಂಕ ವಿಧಿಸುವ ಅಮೆರಿಕ ನಿರ್ಧಾರವನ್ನು ಟ್ರಂಪ್ ಸಲಹೆಗಾರ ಸಮರ್ಥಿಸಿಕೊಂಡರು.

ಜೈಲಿಂದ ಆಡಳಿತ ನಡೆಸಲು ಅವಕಾಶ ಕೊಡಲ್ಲ: ಪ್ರಧಾನಿ

ಪಟನಾ: ಜೈಲಿನಲ್ಲಿ ಕೂತು ಯಾವುದೇ ಪ್ರಧಾನಿ, ಮುಖ್ಯಮಂತ್ರಿ, ಸಚಿವ ಆದೇಶ ನೀಡುವುದು ಸರಿಯಲ್ಲ. ಯಾವುದೇ ಆಡಳಿತಗಾರನಾಗಲೀ ಜೈಲಿನಿಂದಲೇ ಆಡಳಿತ ನಡೆಸುವೆ ಎನ್ನುವುದೂ ಬೇಡ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಪ್ರಧಾನಿ, ಮುಖ್ಯಮಂತ್ರಿ, ಸಚಿವರು ಭ್ರಷ್ಟಾಚಾರ, ಅಪರಾಧ ಪ್ರಕರಣದಲ್ಲಿ ಸತತ 30 ದಿನಗಳವರೆಗೆ ಬಂಧನದಲ್ಲಿದ್ದರೆ ಸ್ವಯಂ ಚಾಲಿತ ಪದಚ್ಯುತಿಗೆ ಕಾರಣವಾಗುವ 'ಸಂವಿಧಾನಕ್ಕೆ 130ನೇ ತಿದ್ದುಪಡಿ' ಮಸೂದೆ ಬಗ್ಗೆ ಪ್ರಧಾನಿ ಮೋದಿ ಮಾತನಾಡಿದರು. ಬಿಹಾರದಲ್ಲಿ ಪಿಎಂಎವೈ-ಗ್ರಾಮೀಣ ಯೋಜನೆಯಡಿ 12,000 ಗ್ರಾಮೀಣ ಫಲಾನುಭವಿಗಳು ಮತ್ತು ಪಿಎಂಎವೈ-ನಗರ ಯೋಜನೆಯಡಿ 4,260 ಫಲಾನುಭವಿಗಳ ಗೃಹ ಪ್ರವೇಶ ಸಮಾರಂಭದ ಭಾಗವಾಗಿ ಪ್ರಧಾನಿ ಮೋದಿ ಕೆಲ ಫಲಾನುಭವಿಗಳಿಗೆ ಮನೆಯ ಕೀಲಿಕೈ ಹಸ್ತಾಂತರಿಸಿ ಬಳಿಕ ಮಾತನಾಡಿದರು. ಅಪರಾಧ ನಡೆಸಿದ ಜನಪ್ರತಿನಿಧಿಯನ್ನು ಹುದ್ದೆಯಿಂದ ಕೆಳಗಿಳಿಸುವುದೇ ಮಸೂದೆಯ ಉದ್ದೇಶವಾಗಿದೆ. ಪ್ರಮುಖ ಸಾಂವಿಧಾನಿಕ ಹುದ್ದೆಗಳನ್ನು ಹೊಂದಿರುವ ಜನಪ್ರತಿನಿಧಿಗಳು ಬಂಧನವಾದ ಬಳಿಕ ಜೈಲಿನಿಂದಲೇ ಅಧಿಕಾರ ಚಲಾಯಿಸಲು ಅವಕಾಶ ನೀಡಬಾರದು. ಅದಕ್ಕಾಗಿಯೇ ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಮಸೂದೆ ತರಲಾಗಿದೆ ಎಂದರು.

- ಗುಮಾಸ್ತರಿಗೊಂದು, ಪಿಎಂ, ಸಿಎಂಗೊಂದು ನ್ಯಾಯವೇ?
- ಬಂಧನವಾದ 50 ಗಂಟೆಗೆಲ್ಲಾ ಗುಮಾಸ್ತ ವಜಾ ಆಗುತ್ತದೆ

ಕೋಲ್ಕತ್ತಕ್ಕೆ: ಬಿಹಾರ ಪ್ರವಾಸದ ಬಳಿಕ ಪ್ರಧಾನಿ ನರೇಂದ್ರ ಮೋದಿ, ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಲಿದ್ದಾರೆ. ಅಲ್ಲಿ 18,000 ಕೋಟಿ ರು. ವೆಚ್ಚದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶನಿವಾರ ಚಾಲನೆ ನೀಡಲಿದ್ದಾರೆ.

ಕೊಲಂಬಿಯ ಕಾರ್ ಬಾಂಬ್, ಹೆಲಿಕಾಪ್ಟರ್ ದಾಳಿಗೆ 17 ಬಲಿ

ಬೊಗೋಟಾ: ಕೊಲಂಬಿಯದಲ್ಲಿ ಒಂದೇ ದಿನ ನಡೆದ ಎರಡು ಪ್ರತ್ಯೇಕ ದಾಳಿಗಳಲ್ಲಿ ಒಟ್ಟು 12 ಪೊಲೀಸರು ಸೇರಿದಂತೆ ಒಟ್ಟು 17 ಜೀವಗಳು ಬಲಿಯಾಗಿವೆ. ದೇಶದ ಉತ್ತರ ಭಾಗದ ಆಂಟಿಯೋಕ್ವಿಯಲ್ಲಿ ಗುರುವಾರ ರಾತ್ರಿ ಪೊಲೀಸ್ ಹೆಲಿಕಾಪ್ಟರ್ ಮೇಲೆ ಡ್ರೋನ್ ದಾಳಿಯಾಗಿ 12 ಪೊಲೀಸರು ಹುತಾತ್ಮರಾದರು. ಮತ್ತೊಂದೆಡೆ ಸ್ಫೋಟಕ ತುಂಬಿಸಿದ್ದ ಕಾರನ್ನು ಸೇನಾ ಶಾಲೆ ಬಳಿ ಸ್ಫೋಟಗೊಳಿಸಿದ್ದರಿಂದ ಐವರು ಮೃತಪಟ್ಟಿದ್ದಾರೆ. ಉತ್ತರ ಭಾಗದ ಆಂಟಿಯೋಕ್ವಿಯ ಪ್ರದೇಶಕ್ಕೆ ಸಿಬ್ಬಂದಿಯನ್ನು ಕರೆದೊಯ್ಯುತ್ತಿದ್ದ ಹೆಲಿಕಾಪ್ಟರ್ ಮೇಲೆ ದಾಳಿಯಾಗಿದೆ. ಮತ್ತೊಂದೆಡೆ ಕೊಲಂಬಿಯದ ನೈರುತ್ಯ ಭಾಗದ ನಗರ ಕ್ಯಾಲಿಯಲ್ಲಿ ಸ್ಫೋಟಕಗಳನ್ನು ತುಂಬಿಸಿದ್ದ ಕಾರು, ಸೇನಾಪಡೆಯ ವಾಯು ಯಾನ ಶಾಲೆ ಬಳಿ ಸ್ಫೋಟಿಸಿದ್ದು, ಐವರು ಸ್ಥಳದಲ್ಲೇ ಮೃತಪಟ್ಟು, 30ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಕೋಕಾ ತೋಟದ ಮೇಲೆ ಹಾರುತ್ತಿದ್ದಾಗಲೇ ಹೆಲಿಕಾಪ್ಟರ್ ಮೇಲೆ ಡ್ರೋನ್‌ನಿಂದ ದಾಳಿ ಮಾಡಿಸಲಾಗಿದೆ ಎಂದು ಆಂಟಿಯೋಕ್ವಿಯ ಗವರ್ನರ್ ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ. ಈ ಎರಡೂ ದಾಳಿಗಳಿಗೆ ಕೊಲಂಬಿಯ ಕ್ರಾಂತಿಕಾರಿ ಸಶಸ್ತ್ರ ಪಡೆ ಎಂದು ಕರೆಯಲಾಗುವ ಕ್ರಾಂತಿಕಾರಿ ಸಶಸ್ತ್ರ ಪಡೆಗಳ ಭಿನ್ನಮತೀಯರೇ ಕಾರಣ ಎಂದು ಕೊಲಂಬಿಯ ಅಧ್ಯಕ್ಷ ಗುಸ್ತಾವೊ ಪೆಟ್ರೊ ಆರೋಪಿಸಿದ್ದಾರೆ. ದೇಶದ ಅತಿದೊಡ್ಡ ಮಾದಕವಸ್ತು ಕಾರ್ಟೆಲ್ ಎನಿಸಿಕೊಂಡಿರುವ ಗಲ್ಫ್‌ಕ್ಲಾನ್, ಕೊಕೇನ್ ವಶಪಡಿಸಿಕೊಂಡಿದ್ದಕ್ಕೆ ಪ್ರತೀಕಾರವಾಗಿ ಹೆಲಿಕಾಪ್ಟರ್ ಮೇಲೆ ದಾಳಿ ನಡೆಸಿದೆ ಎಂದರು. ಭಿನ್ನಮತೀಯ ಗುಂಪಿನ ಆರೋಪಿತ ಸದಸ್ಯರನ್ನು ಸ್ಫೋಟದ ಪ್ರದೇಶದಲ್ಲಿ ಬಂಧಿಸಲಾಗಿದೆ ಎಂದು ಕೊಲಂಬಿಯ ಅಧ್ಯಕ್ಷರು ತಿಳಿಸಿದ್ದಾರೆ. ಕೊಲಂಬಿಯದಲ್ಲಿ ಕೋಕಾ ಎಲೆ ಕೃಷಿ ಹೆಚ್ಚುತ್ತಿದೆ. 2023ರಲ್ಲಿ ಕೃಷಿ ಪ್ರದೇಶ ದಾಖಲೆಯ 2.53 ಲಕ್ಷ ಹೆಕ್ಟೇರ್‌ಗೆ ತಲುಪಿದೆ ಎಂದು ವಿಶ್ವಸಂಸ್ಥೆ ಮಾಹಿತಿ ನೀಡಿದೆ.

ಜಿಲ್ಲಾ ಪಂಚಾಯತ್,ಬಳ್ಳಾರಿ

ಪಸಂ:ಜಿಪಂಬ/ಯೋನಿ/ಎನ್.ಆರ್.ಎಲ್.ಎಂ/ಹೆಚ್.ಆರ್/14/2025-26, ದಿನಾಂಕ:22.08.2025

ಇ-ಟೆಂಡರ್ ಅಧಿಸೂಚನೆ

ಸಂಜೀವಿನಿ **KSRLPS** ಸಂಸ್ಥೆಯಡಿ ಜಿಲ್ಲಾ & ತಾಲ್ಲೂಕು ಅಭಿಯಾನ ನಿರ್ವಾಹಣೆ ಘಟಕಗಳಡಿಯಲ್ಲಿ ಮಾನವ ಸಂಪನ್ಮೂಲ ಸಂಸ್ಥೆಯನ್ನು ಆಯ್ಕೆ ಮಾಡಲು ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ದ್ವಿ ಲಕೋಟೆ ಪದ್ಧತಿಯಲ್ಲಿ **Tender Reference No: RDPR/2025-26/SE2910 Date: 22.08.2025** ರಂದು **http://kppp.karnataka.gov.in** ಮೂಲಕ ಇ-ಟೆಂಡರ್ ಕರೆಯಲಾಗಿದೆ. ಆಸಕ್ತ ಬಿಡ್ ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರನ್ನು **ದಿನಾಂಕ: 06.09.2025, ಸಮಯ: 05.00PM** ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ.1,32,12,000/-**ಗಳು ಆಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಟೆಂಡರ್ ಮಾದರಿಯಲ್ಲಿ ಪಡೆಯಬಹುದಾಗಿದೆ.

ಸಹಿ/-ಯೋಜನಾ ನಿರ್ದೇಶಕರು
ಜಿಲ್ಲಾ ಪಂಚಾಯತ್ ಬಳ್ಳಾರಿ

ಡಿಐಪಿಆರ್/ಬಳ್ಳಾರಿ/398/ಕೆಎಸ್‌ಎಂಸಿಎ/2025-26

ತುಮಕೂರು ಮಹಾನಗರ ಪಾಲಿಕೆ, ತುಮಕೂರು

ದೂ-2271200, 2272200, ಫ್ಯಾಕ್ಸ್: 2275106,
ಇ-ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂ:ತುಮಪಾ:ತಾಂಶಾ:ವಿ&ನೀ:ಟೆಂಡರ್;ಸಿಆರ್:09/2025-26
ದಿನಾಂಕ: 20.08.2025

ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2025-26ನೇ ಸಾಲಿನ ಮಹಾನಗರ ಪಾಲಿಕೆ ನಿಧಿಯಡಿ 05 ಸಂಖ್ಯೆ ವಿದ್ಯುತ್ ಸಂಬಂಧಿತ ಮತ್ತು 01 ಸಂಖ್ಯೆ ಸರಬರಾಜು ಸಂಬಂಧಿತ (ಮರುಟೆಂಡರ್) ಕಾಮಗಾರಿಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಡಬಲ್ ಕವರ್ ಪದ್ಧತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು(ವಿದ್ಯುತ್/ನೀರುಸರಬರಾಜು) ರವರು ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 9449872599 ರಿಂದ ಮಾಹಿತಿ ಪಡೆಯಬಹುದು.

ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಟೆಂಡರ್ ಆಕ್ಷೇಪಣೆ ಸಲ್ಲಿಸುವ ದಿನಾಂಕ ಮತ್ತು ವೇಳೆ : 01-09-2025 ಸಮಯ : 17.15 ನಂತರ. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 04-09-2025 ಸಮಯ : 17.00. ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 06-09-2025 ಸಮಯ : 17.15 ನಂತರ.

ಸಹಿ/-ಕಾರ್ಯಪಾಲಕ ಅಭಿಯಂತರರು,
ತುಮಕೂರು ಮಹನಗರ ಪಾಲಿಕೆ, ತುಮಕೂರು.

DIPR/TUM/260/KSMCA/2025-26

ಫ್ಲೋರಿಡಾ ಟ್ರಕ್ ಅಪಘಾತ ಬಳಿಕದ ಕ್ರಮ

5.50 ಕೋಟಿ ಅಮೆರಿಕ ವೀಸಾ ಮರುಪರಿಶೀಲನೆ: ಟ್ರಂಪ್ ಆದೇಶ

ವಾಷಿಂಗ್ಟನ್: ಜನವರಿ 20ರಂದು ಅಮೆರಿಕ ಅಧ್ಯಕ್ಷರಾಗಿ 2ನೇ ಅವಧಿಗೆ ಅಧಿಕಾರ ಸ್ವೀಕರಿಸುತ್ತಲೇ ಅಕ್ರಮ ವಲಸಿಗರ ವಿರುದ್ಧ ದೊಡ್ಡ ಮಟ್ಟದಲ್ಲಿ ಪ್ರಹಾರ ನಡೆಸಿದ್ದ ಡೊನಾಲ್ಡ್ ಟ್ರಂಪ್, ಈಗ ಮತ್ತೆ ವೀಸಾ ವಿಚಾರವನ್ನು ಕೈಗೆತ್ತಿಕೊಂಡಿದ್ದಾರೆ.

ಅಮೆರಿಕ ಸರಕಾರದಿಂದ ಈವರೆಗೆ 5.50 ಕೋಟಿ ವೀಸಾಗಳನ್ನು ವಿವಿಧ ದೇಶಗಳ ವಲಸೆಗಾರರಿಗೆ ವಿತರಿಸಲಾಗಿದ್ದು, ಈಗ ಎಲ್ಲಾ ವೀಸಾಗಳನ್ನೂ ಮತ್ತೊಮ್ಮೆ ಪರಿಶೀಲನೆಗೆ ಒಳಪಡಿಸಲು ಟ್ರಂಪ್ ಆಡಳಿತ ಮುಂದಾಗಿದೆ. ಇದರಲ್ಲಿ ಭಾರತೀಯ ರದ್ದೇ 50 ಲಕ್ಷ ವೀಸಾಗಳಿವೆ ಎನ್ನಲಾಗಿದೆ.

ಪಂಜಾಬ್ ಮೂಲದ ಕಂಟೇನರ್ ಟ್ರಕ್ ಚಾಲಕ ಹರ್‌ಜಿಂದರ್ ಸಿಂಗ್ ಇತ್ತೀಚೆಗೆ ಫ್ಲೋರಿಡಾ ರಾಜ್ಯದಲ್ಲಿನ ಹೆದ್ದಾರಿಯಲ್ಲಿ ಅಪಾಯಕಾರಿಯಾಗಿ ಟ್ರಕ್ 'ಯು ಟರ್ನ್' ತೆಗೆದುಕೊಂಡಿದ್ದರಿಂದ ಮೂವರು ಅಮೆರಿಕ ಪ್ರಜೆಗಳು ಪ್ರಯಾಣಿಸುತ್ತಿದ್ದ ಕಾರು ಅಪಘಾತಕ್ಕೀಡಾಗಿ ಸ್ಥಳದಲ್ಲೇ ಮೂವರೂ ಅಸುನೀಗಿದ್ದರು. ಟ್ರಕ್ ಚಾಲಕನನ್ನು ಬಂಧಿಸಿದ ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ ಆತ ವಾಣಿಜ್ಯ ವಾಹನ ಚಾಲನಾ ಪರವಾನಗಿಯನ್ನು ಅಕ್ರಮವಾಗಿ ಪಡೆದುಕೊಂಡಿದ್ದ. ಚಾಲನಾ ಪರವಾನಗಿ ಪರೀಕ್ಷೆಗಳಲ್ಲಿ ಅನುತ್ತೀರ್ಣನಾಗಿದ್ದ. ಆತನಿಗೆ ಇಂಗ್ಲಿಷ್ ಬರುವುದೇ ಇಲ್ಲ, ಸಂಚಾರ ಸೂಚನಾ ಫಲಕಗಳನ್ನೂ ಓದಲಾಗದ ವ್ಯಕ್ತಿಗೆ ಹೇಗೆ ಚಾಲನಾ ಪರವಾನಗಿ ನೀಡಲಾಗಿದೆ? ಎಂಬ ವಿಚಾರ ದೊಡ್ಡ ಮಟ್ಟದಲ್ಲಿ ಚರ್ಚೆಗೊಳಗಾಯಿತು. ಜೋ ಬೈಡನ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸಿಂಗ್ ಚಾಲನಾ ಪರವಾನಗಿ ಪಡೆದಿದ್ದ ಎಂಬುದು ತಿಳಿದುಬಂದಿತು.

ಈ ಹಿನ್ನೆಲೆಯಲ್ಲಿಯೇ ಟ್ರಂಪ್ ಆಡಳಿತ ಎಲ್ಲಾ ವೀಸಾಗಳ ಮರು ಪರಿಶೀಲನೆ ನಡೆಸಲು ಅದರಲ್ಲೂ ಮುಖ್ಯವಾಗಿ ದೊಡ್ಡ ವಾಣಿಜ್ಯ ವಾಹನಗಳ ವಿದೇಶಿ ಮೂಲದ ಚಾಲಕರ ವೀಸಾಗಳನ್ನು ಪರೀಕ್ಷೆಗೊ ಳಪಡಿಸಲು ಆದೇಶ ಹೊರಡಿಸಿದೆ. ಅಕ್ರಮವಾಗಿ ವೀಸಾ, ವಾಹನ ಚಾಲನಾ ಪರವಾನಗಿ ಪಡೆದುಕೊಂಡಿದ್ದರೆ ಗಡಿಪಾರು ಮಾಡಲಾಗುವುದು ಎಂದೂ ಹೇಳಿದೆ.

ಭಾರತ ಪರ ಅಧಿಕಾರಿ ಮನೆಗೆ ಎಫ್‌ಬಿಐ ದಾಳಿ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತ ಸೇರಿದಂತೆ ವಿವಿಧ ದೇಶಗಳ ಮೇಲೆ ಪ್ರತಿಸುಂಕ ವಿಧಿಸಿರುವ ಕ್ರಮವನ್ನು ಕಟುವಾಗಿ ಟೀಕಿಸಿದ್ದ ಅಮೆರಿಕದ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ(ಎನ್‌ಎಸ್‌ಎ) ಜಾನ್ ಬೋಲ್ಟನ್ ಅವರ ಮನೆಗೆ 'ಫೆಡರಲ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್'(ಎಫ್‌ಬಿಐ) ಅಧಿಕಾರಿಗಳು ಶುಕ್ರವಾರ ಬೆಳಗ್ಗೆ ದಾಳಿ ನಡೆಸಿದ್ದಾರೆ.



ಜಾನ್ ಬೋಲ್ಟನ್ ಈ ಮೊದಲು ಡೊನಾಲ್ಡ್ ಟ್ರಂಪ್ ಅವರ ಮಾಜಿ ಸಹಾಯಕರಾಗಿದ್ದರು. ಈಗ ಟ್ರಂಪ್ ಪ್ರತಿಸುಂಕ ನೀತಿ ಯನ್ನು ಹಲವು ಬಾರಿ ಟೀಕಿಸಿದ್ದರು. ಈ ಹಿನ್ನೆಲೆಯಲ್ಲಿ ವಾಷಿಂಗ್ಟನ್ ಡಿಸಿಯಲ್ಲಿನ ಜಾನ್ ನಿವಾಸದ ಮೇಲೆ ದಾಳಿ ನಡೆದಿದೆ ಎನ್ನಲಾಗಿದೆ. 'ಎಫ್‌ಬಿಐ'ನ ನಿರ್ದೇಶಕ, ಭಾರತ ಮೂಲದ ಕಾಶ್ ಪಟೇಲ್ ಅವರ ಆದೇಶದ ಮೇರೆಗೆ ಶುಕ್ರವಾರ ಮುಂಜಾನೆಯೇ(7 ಗಂಟೆಗೆ) ಮೇರಿಲ್ಯಾಂಡ್‌ನ ಬೆಥೆಸ್ಡಾದಲ್ಲಿರುವ ಬೋಲ್ಟನ್ ಮನೆಗೆ ತೆರಳಿದ ಅಧಿಕಾರಿಗಳ ತಂಡ ಇಡೀ ಮನೆಯನ್ನು ಹಲವು ದಾಖಲೆಪತ್ರಗಳಿಗಾಗಿ ಶೋಧ ನಡೆಸಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಎಫ್‌ಬಿಐ ಅಧಿಕಾರಿಗಳು ಜಾನ್ ಮನೆ ಮೇಲೆ ದಾಳಿ ಆರಂಭಿಸಿದ ಬೆನ್ನಲ್ಲೇ ಕಾಶ್ ಪಟೇಲ್, 'ಯಾರೂ ಕಾನೂ ನಿಗಿಂತ ದೊಡ್ಡವರಲ್ಲ. ಎಫ್‌ಬಿಐ ಅಧಿಕಾರಿಗಳು ಸದ್ಯ ಕಾರ್ಯಾ ಚರಣೆ ನಡೆಸಿದ್ದಾರೆ' ಎಂದು 'ಎಕ್ಸ್' ಖಾತೆಯಲ್ಲಿ ಬರೆದಿದ್ದು ಅಚ್ಚರಿಗೆ ಕಾರಣವಾಗಿದೆ. ರಷ್ಯಾದಿಂದ ಕಚ್ಚಾತೈಲವನ್ನು ದೊಡ್ಡ ಪ್ರಮಾಣದಲ್ಲಿ ಖರೀದಿಸುತ್ತಿರುವುದಕ್ಕೆ ಭಾರತದ ಮೇಲೆ ಶೇ.50ರಷ್ಟು ಪ್ರತಿಸುಂಕವನ್ನು ಟ್ರಂಪ್ ವಿಧಿಸಿದ್ದಾರೆ. ಆದರೆ, ರಷ್ಯಾದಿಂದ ಭಾರತಕ್ಕೂ ಅಧಿಕ ಪ್ರಮಾಣದಲ್ಲಿ ಕಚ್ಚಾತೈಲ ಖರೀದಿಸುವ ಚೀನಾ ಮೇಲೆ ಟ್ರಂಪ್ ಸುಂಕ ವಿಧಿಸಿಲ್ಲ. ಈ ತಾರತಮ್ಯ ನೀತಿ ಸರಿಯಲ್ಲ ಎಂದು ಜಾನ್ ಈ ಹಿಂದೆ ಹೇಳಿದ್ದರು.

ಕಾರು ಹಿಮ್ಮುಖ ಚಲಿಸಿ ಚಕ್ರದಡಿ ಸಿಲುಕಿ ಸಾವು

ತಿರುಪ್ಪೂರ್: ತಮಿಳುನಾಡಿನ ತಿರುಪ್ಪೂರ್ ಜಿಲ್ಲೆಯ ಅವಿನಾಶಿ ಎಂಬಲ್ಲಿ ಮನೆ ಮುಂದೆ ನಿಲುಗಡೆಯಾಗಿದ್ದ ಹೊಚ್ಚ ಹೊಸ ಟಾಟಾ ಹ್ಯಾರಿಯರ್ ಕಾರು ಬಾಗಿಲು ತೆರೆಯುತ್ತಲೇ ವೇಗವಾಗಿ ಹಿಮ್ಮುಖ ಚಲಿಸಿದ್ದರಿಂದ ಚಕ್ರದಡಿ ಸಿಲುಕಿ ವಾಹನ ಮಾಲೀಕರ ಸಂಬಂಧಿ ಯೊಬ್ಬರು ಸಾವಿಗೀಡಾಗಿದ್ದಾರೆ. ಬಾಗಿಲು ತೆರೆಯುತ್ತಲೇ ಟಾಟಾ ಹ್ಯಾರಿ ಯರ್ ವಿದ್ಯುಚ್ಚಾಲಿತ(ಇವಿ) ಕಾರು ಸಮ್ಮನ್ ಮೋಡ್‌ಗೆ ಬದಲಾಗಿ ಅಸಮರ್ಪಕವಾಗಿ ಕಾರ್ಯನಿರ್ವಹಿಸಿ ಹಿಮ್ಮುಖವಾಗಿ ಚಲಿಸಿದೆ. ಇಳಿಜಾರು ಇದ್ದಿದ್ದರಿಂದ ಕಾರು ವೇಗವಾಗಿ ಚಲಿಸಿದೆ. ಈ ವೇಳೆ ಕಾರು ಹತ್ತಲು ಸಿದ್ಧರಾಗಿದ್ದ ವ್ಯಕ್ತಿ ಬಾಗಿಲು ತಾಗಿ ಕೆಳಗ್ಗೆ ಬಿದ್ದು, ಕಾರಿನ ಚಕ್ರದಡಿಗೆ ಸಿಲುಕಿ ದುರ್ಮರಣಕ್ಕೀಡಾಗಿದ್ದಾರೆ. ಘಟನೆ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ವಿಡಿಯೋ ವೈರಲ್ ಆಗಿದೆ.

ಹ್ಯಾರಿಯರ್ ಇವಿ ಕಾರಿನಲ್ಲಿ ಸಾಫ್ಟ್‌ವೇರ್ ಸಮಸ್ಯೆ ಇರಬಹುದೆನಿಸುತ್ತದೆ. ಪರಿಚಯದವರೊಬ್ಬರು ಇದೇ ಮಾದರಿ ಕಾರಿನಲ್ಲಿ ಬೇರೊಂದು ತಾಂತ್ರಿಕ ಸಮಸ್ಯೆ ಎದುರಿಸಿದ್ದರು. ಕಾರು ರಸ್ತೆ ಮಧ್ಯೆ ಹಠಾತ್ ಸ್ಥಗಿತಗೊಂಡಿತ್ತು. ಷೋರೂಂ ತಂತ್ರಜ್ಞರು ಬಂದು ಚಾಲನೆಗೊಳಿಸಬೇಕಾಯಿತು ಎಂದು ರೆಡ್ಡಿಟ್ ಬಳಕೆದಾರರೊಬ್ಬರು ಜಾಲತಾಣದಲ್ಲಿ ಪ್ರತಿಕ್ರಿಯಿಸಿದ್ದಾರೆ.

ಹಣ ದುರ್ಬಳಕೆ: ಲಂಕಾ ಮಾಜಿ ಅಧ್ಯಕ್ಷ ರನಿಲ್ ಸೆರೆ

ಕೊಲಂಬೊ: ಸರಕಾರದ ಹಣ ದುರ್ಬಳಕೆ ಮಾಡಿಕೊಂಡ ಆರೋ ಪದಡಿ ಶ್ರೀಲಂಕಾ ಮಾಜಿ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಅವರನ್ನು ಅಪರಾಧ ತನಿಖಾ ಇಲಾಖೆ (ಸಿಐಡಿ) ಶುಕ್ರವಾರ ಬಂಧಿಸಿದೆ.

2023ರ ಸೆಪ್ಟೆಂಬರ್‌ನಲ್ಲಿ ಬ್ರಿಟನ್‌ನ ವಿಶ್ವವಿದ್ಯಾಲಯವೊಂದರಲ್ಲಿ ಪತ್ನಿ ಪ್ರೊಫೆಸರ್ ಮೈತ್ರೀ ವಿಕ್ರಮಸಿಂಘೆ ಅವರು ಭಾಗಿಯಾಗಿದ್ದ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಲು ಆಗ ಶ್ರೀಲಂಕಾ ಅಧ್ಯಕ್ಷರಾಗಿದ್ದ ವಿಕ್ರಮಸಿಂಘೆ ಲಂಡನ್‌ಗೆ ಭೇಟಿ ನೀಡಿದ್ದರು. ಖಾಸಗಿ ವಿದೇಶ ಪ್ರವಾಸಕ್ಕಾಗಿ ಸರಕಾರದ ಹಣ ದುರ್ಬಳಕೆ ಮಾಡಿಕೊಂಡಿ ದ್ದಾರೆ ಎಂಬ ಆರೋಪದಡಿ ಈಗ ಬಂಧಿಸಲಾಗಿದೆ. ಈ ವಿಚಾರಕ್ಕೆ ಸಂಬಂಧಿಸಿ ಶುಕ್ರವಾರ ಕೂಲಂಕಷ ವಿಚಾರಣೆ ನಡೆಸಿದ ನಂತರವೇ ಮಾಜಿ ಅಧ್ಯಕ್ಷರನ್ನು ಬಂಧಿಸಲಾಗಿದೆ. ವಿಕ್ರಮಸಿಂಘೆ ಅವರನ್ನು ಕೊಲಂಬೊ ಫೋರ್ಟ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಹಾಜರುಪಡಿಸಲಾಗಿದೆ ಎಂದು ಪೊಲೀಸ್ ಪತ್ತೇದಾರಿ ವಿಭಾಗದ ಹಿರಿಯ ಅಧಿಕಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಸಿಐಡಿ ಪೊಲೀಸರು ಈ ಹಿಂದೆಯೇ ವಿಕ್ರಮಸಿಂಘೆ ಅವರ ಸಿಬ್ಬಂದಿಗಳನ್ನು 2023ರ ಸೆಪ್ಟೆಂಬರ್‌ನಲ್ಲಿ ಲಂಡನ್‌ಗೆ ತೆರಳಿದ್ದರ ಪ್ರಯಾಣ ವೆಚ್ಚ ಬಗ್ಗೆ ಪ್ರಶ್ನಿಸಿದ್ದರು. ಪತ್ನಿ ಪ್ರಯಾಣದ ವೆಚ್ಚವನ್ನು ವಿಕ್ರಮಸಿಂಘೆ ಅವರೇ ಭರಿಸಿದ್ದರು. ಸರಕಾರದ ಹಣ ಬಳಸಿಲ್ಲ ಎಂದು ಸಿಬ್ಬಂದಿ ವಾದಿಸಿದ್ದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ

ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು-570010.
ದೂರವಾಣಿ (ಕಛೇರಿ): 0821-2523626, ಇಮೇಲ್: exhibitionauthority@gmail.com

ಸಂಖ್ಯೆ:ಕವಪ್ರಾ/ಮುಕಾನಿ/2025-26 ದಿನಾಂಕ: 21.08.2025

ಪ್ರಕಟಣೆ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ 'ಇ' ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡಂತಿದೆ.

ಕ್ರಸಂ.	ಕಾಮಗಾರಿಯ ಹೆಸರು	ಟೆಂಡರ್‌ನ ಮೊತ್ತ	ಟೆಂಡರ್ ಸಲ್ಲಿಸಲು ಕೊನೆ ದಿನಾಂಕ
1.	Providing and Fixing of Street light poles inside A-Block area at KEA Premises, Mysuru.	ರೂ.25,41,151=24	29.08.2025 ಸಂಜೆ 04:00ಕ್ಕೆ

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಕಛೇರಿ ವೇಳೆಯಲ್ಲಿ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್), ರವರನ್ನು ಸಂಪರ್ಕಿಸಿ ಹಾಗೂ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಮಾಹಿತಿ ಪಡೆಯಬಹುದು ಎಂದು ಈ ಮೂಲಕ ಕೋರಿದೆ. **ಮೊಬೈಲ್ ಸಂಖ್ಯೆ:** 9900568915 / 7892920878. **ಇ-ಮೇಲ್:** exhibitionauthority@gmail.com

ಸಹಿ/- ಸಹಾಯಕ ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ, ಮೈಸೂರು.

DIPR/MYS/KAVITA/840/2025-26

ದೆಹಲಿಗೆ ಕಾಲಿಟ್ಟ ಓಪನ್ ಎಐ!

ದೆಹಲಿ: ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ(ಎಐ) ಅರ್ಥಾತ್ ಕೃತಕ ಬುದ್ಧಿಮತ್ತೆ ಆಧರಿಸಿದ ತಂತ್ರಜ್ಞಾನ ಕ್ಷೇತ್ರದ ಪ್ರಮುಖ ಉದ್ಯಮ ಸಂಸ್ಥೆಯಾದ 'ಓಪನ್ ಎಐ' ಇದೇ ಮೊದಲ ಬಾರಿಗೆ ಭಾರತದಲ್ಲಿ ಕಚೇರಿ ತೆರೆಯುತ್ತಿದೆ. ಅದಾಗಲೇ ಕಂಪನಿಯ ಭಾರತೀಯ ಘಟಕವನ್ನು ನೋಂದಾಯಿಸಿಕೊಂಡಿರುವ 'ಓಪನ್ ಎಐ', ದೆಹಲಿಯಲ್ಲಿ ಭಾರತದ ಮೊದಲ ಕಚೇರಿ ತೆರೆಯುತ್ತಿದೆ. ಕಚೇರಿ ಆರಂಭಕ್ಕೂ ಮುನ್ನವೇ ಸ್ಥಳೀಯವಾಗಿ ತಂತ್ರಜ್ಞರು, ಕಚೇರಿ ಸಿಬ್ಬಂದಿಗಳ ನೇಮಕ ಪ್ರಕ್ರಿಯೆಯನ್ನು ನಡೆಸಲಾರಂಭಿಸಿದೆ. ಭಾರತೀಯ ಪ್ರತಿಭೆಗಳಿಗೇ ನೇಮಕ ಪ್ರಕ್ರಿಯೆಯಲ್ಲಿ ಆದ್ಯತೆ ನೀಡುತ್ತಿದೆ ಎಂದು ವರದಿಯಾಗಿದೆ.

ಸಮಾಚಾರ ಸಣ್ಣದಲ್ಲ

ನ್ಯಾ. ಸುದರ್ಶನ ರೆಡ್ಡಿ ನಕ್ಸಲ್ ಬೆಂಬಲಿಗ: ಷಾ

ಕೊಚ್ಚಿ: ವಿರೋಧ ಪಕ್ಷಗಳ ಉಪರಾಷ್ಟ್ರಪತಿ ಅಭ್ಯರ್ಥಿ ನ್ಯಾ. ಬಿ. ಸುದರ್ಶನ ರೆಡ್ಡಿ ಅವರು ನಕ್ಸಲರನ್ನು ಬೆಂಬಲಿಸುತ್ತಾರೆ ಎಂದು ಕೇಂದ್ರ ಗೃಹ ಸಚಿವ

ಅಮಿತ್ ಷಾ ಅವರು ಆರೋಪಿಸಿದರು. ಸುದ ರ್ಶನ ರೆಡ್ಡಿ ಅವರು 'ಸಲ್ವಾ ಜುಡೂಮ್' ಕುರಿತು ತೀರ್ಪು ನೀಡದಿದ್ದರೆ 2020ರ ಒಳಗಾಗಿ ನಕ್ಸಲ್‌ವಾದ ಅಂತ್ಯವಾಗುತ್ತಿತ್ತು ಎಂದು ಅವರು ಹೇಳಿದರು. ಶುಕ್ರವಾರ ಇಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಉಪರಾಷ್ಟ್ರಪತಿ ಅಭ್ಯರ್ಥಿ ಆಯ್ಕೆಯು ಕೇರಳದಲ್ಲಿ ಕಾಂಗ್ರೆಸ್ ಪಕ್ಷವು ಗೆಲುವು ಸಾಧಿಸುವ ಅವಕಾಶವನ್ನು ಮತ್ತಷ್ಟು ಕ್ಷೀಣಿಸುವಂತೆ ಮಾಡಿದೆ ಎಂದರು.

ಆನ್‌ಲೈನ್ ಗೇಮ್‌ಗೆ ತಡೆ ರಾಷ್ಟ್ರಪತಿ ಅನುಮೋದನೆ

ದೆಹಲಿ: ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಮಸೂದೆ, 2025 ಅನ್ನು ಶುಕ್ರವಾರ

ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದಿಸಿದ್ದಾರೆ. ಅವರ ಒಪ್ಪಿಗೆಯನ್ನು ಪಡೆದ ನಂತರ ಆನ್‌ಲೈನ್ ಗೇಮಿಂಗ್ ಮಸೂದೆ ಅಧಿಕೃತವಾಗಿ ಕಾನೂನಾಗಿ ಮಾರ್ಪಟ್ಟಿದೆ. ಈ ವಾರದ ಆರಂಭದಲ್ಲಿ ಸಂಸತ್‌ನಲ್ಲಿ ಈ ಶಾಸನವನ್ನು ಮಂಡಿಸಲಾಗಿತ್ತು. ಲೋಕಸಭೆ ಬುಧವಾರ ಅದನ್ನು ಅಂಗೀಕರಿಸಿತು ಮತ್ತು ರಾಜ್ಯಸಭೆ ಗುರುವಾರ ಅನುಮೋದನೆ ನೀಡಿದ್ದು, ಇದು ಶಾಸನವಾಗಿ ಮಾರ್ಪಟ್ಟಿದೆ.

ಲಷ್ಕರೆ-ತಯ್ಬಾ ಸಂಪರ್ಕ: ಇಬ್ಬರು ನೌಕರರು ವಜಾ

ಶ್ರೀನಗರ: ಭಯೋತ್ಪಾದಕರೊಂದಿಗೆ ಸಂಪರ್ಕ ಹೊಂದಿರುವ ಆರೋಪದಲ್ಲಿ ಇಬ್ಬರು ಸರಕಾರಿ ನೌಕರರನ್ನು ವಜಾಗೊಳಿಸಿರುವ ಘಟನೆ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದಿದೆ. ಕುಪ್ವಾರಾ ಜಿಲ್ಲೆಯಲ್ಲಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎನ್ನಲಾಗುವ ಇಬ್ಬರು ಸರಕಾರಿ ನೌಕರರು ಶಸ್ತ್ರಾಸ್ತ್ರ ಕಳ್ಳಸಾಗಣೆ ಮತ್ತು ನಿಷೇಧಿತ ಭಯೋತ್ಪಾದಕ ಸಂಘಟನೆ ಲಷ್ಕರ್-ಎ-ತೈಬಾ ಜೊತೆ ಸಂಪರ್ಕ ಹೊಂದಿದ್ದಾರೆ ಎನ್ನಲಾಗಿದೆ. ಅವರಿಬ್ಬರನ್ನು ವಜಾಗೊಳಿಸಿ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಆದೇಶ ಹೊರಡಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಕುಪ್ವಾರಾ ಜಿಲ್ಲೆಯಲ್ಲಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಆರೋಪದ ಮೇರೆಗೆ ವಜಾಗೊಳಿಸಲಾಗಿದೆ.

ಸಂಭಲ್ ಮಸೀದಿ: ಯಥಾಸ್ಥಿತಿಗೆ ಆದೇಶ

ದೆಹಲಿ: ಉತ್ತರ ಪ್ರದೇಶದ ಸಂಭಲ್ ಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ ಆಗಸ್ಟ್ 25ರ ವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಆದೇಶಿಸಿದ್ದು, ಹಿಂದೂ ಅರ್ಜಿದಾರರಿಗೆ ನೋಟಿಸ್ ನೀಡಿದೆ. ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಎ.ಎಸ್. ಚಂದೂರ್ಕರ್ ಅವರ ಪೀಠವು ಈ ಆದೇಶ ಹೊರಡಿಸಿದೆ. ಅಲಹಾಬಾದ್ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಮಸೀದಿ ಸಮಿತಿಯು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ಶಾಹಿ ಜಾಮಾ ಮಸೀದಿ ಮತ್ತು ಹರಿಹರ ದೇವಾಲಯ ವಿವಾದಕ್ಕೆ ಸಂಬಂಧಿಸಿದಂತೆ ಮಸೀದಿ ಆವರಣದಲ್ಲಿ ಸಮೀಕ್ಷೆ ಕೈಗೊಳ್ಳುವಂತೆ ಸಿವಿಲ್ ನ್ಯಾಯಾಲಯ ನಿರ್ದೇಶಿಸಿತ್ತು, ಸಮೀಕ್ಷೆಯನ್ನು ಪ್ರಶ್ನಿಸಿ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ವಜಾಗೊಳಿಸಿತ್ತು.

ಸ್ಪಷ್ಟನೆ: ನಿನ್ನೆಯ ಸಂಚಿಕೆಯ 9ನೇ ಪುಟದಲ್ಲಿ '5 ನಿಮಿಷದಲ್ಲಿ ಆಟೋ ಆಫರ್: ರ್‍ಯಾಪಿಡೋಗೆ ಭಾರೀ ದಂಡ' ಶೀರ್ಷಿಕೆಯ ಸುದ್ದಿಯಲ್ಲಿ ರ್‍ಯಾಪಿಡೋ ಪದದ ಬದಲು ಕೆಲವೆಡೆ 'ಇಸ್ರೊ' ಎಂಬ ಪದ ಪ್ರಕಟವಾಗಿದೆ. ತಾಂತ್ರಿಕ ಕಾರಣಗಳಿಂದ ಈ ತಪ್ಪಾಗಿದ್ದು, ಇದಕ್ಕಾಗಿ ವಿಷಾದಿಸುತ್ತೇವೆ.

ಅಕ್ರಮ ಗಣಿಗಾರಿಕೆ: ಬೊಕ್ಕಸಕ್ಕೆ 80 ಸಾವಿರ ಕೋಟಿ ನಷ್ಟ

ಅಕ್ರಮ ಗಣಿಗಾರಿಕೆ ತಡೆಯಲು ಸರಕಾರ ಪ್ರತ್ಯೇಕ ನಿರ್ದೇಶನಾಲಯ ಸ್ಥಾಪನೆ ಚಿಂತನೆ: ಸಚಿವ ಎಚ್.ಕೆ. ಪಾಟೀಲ್

ವಿಶ್ವವಾಣಿ ಸುದ್ದಿಮನೆ ವಿಧಾನ ಪರಿಷತ್

ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಿರಿಸಿರುವ ರಾಜ್ಯ ಸರಕಾರ, ಇದೀಗ ಅಕ್ರಮ ತಡೆಯಬೇಕು ಎನ್ನುವ ನಿಟ್ಟಿನಲ್ಲಿ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸಲು ಮುಂದಾಗಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ವಿಧಾನಸಭೆ ಹಾಗೂ ವಿಧಾನ ಪರಿಷತ್‌ನಲ್ಲಿ ಕರ್ನಾಟಕ ಅಕ್ರಮ ಗಣಿಗಾರಿಕೆಯ ಆಸ್ತಿ ವಶಪಡಿಸಿಕೊಳ್ಳಲು ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕ ವಿಧೇಯಕವನ್ನು ಮಂಡಿಸಿ ಅನುಮೋದನೆ ಪಡೆಯಲಾಯಿತು.

ವಿಧಾನಪರಿಷತ್‌ನಲ್ಲಿ ವಿಧೇಯಕ ಮಂಡಿಸಿ ಮಾತನಾಡಿದ ಕಾನೂನು ಸಚಿವ ಎಚ್.ಕೆ. ಪಾಟೀಲ್, ಅಕ್ರಮ ಗಣಿಗಾರಿಕೆಯಿಂದಾಗಿ ರಾಜ್ಯದಲ್ಲಿ 2006 ರಿಂದ 2012 ರವರೆಗೆ ವಿದೇಶಕ್ಕೆ ಕಾನೂನು ಬಾಹಿರವಾಗಿ ಕಬ್ಬಿಣ ಅದಿರು ರಫ್ತು ಮಾಡಿದ ಕಾರಣ ಬೊಕ್ಕಸಕ್ಕೆ 80 ಸಾವಿರ ಕೋಟಿ ರು. ನಷ್ಟವಾಗಿದೆ ಎಂದು ಬಹಿರಂಗಪಡಿಸಿದರು. 2006, 2011 ಮತ್ತು 2012 ರ ವೇಳೆ ರಾಜ್ಯದ ವಿವಿಧೆಡೆ ಕಾನೂನು ಬಾಹಿರವಾಗಿ ಅಕ್ರಮ ಗಣಿಗಾರಿಕೆ ನಡೆಸಲಾಗಿದೆ. ಒಟ್ಟು 80 ಸಾವಿರ ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಚೀನಾ, ಪಾಕಿಸ್ತಾನ ಸೇರಿದಂತೆ ಹೊರರಾಷ್ಟ್ರಗಳಿಗೆ ರಫ್ತು ಮಾಡಿದ ಪರಿಣಾಮ 80 ಸಾವಿರ ಕೋಟಿ ನಷ್ಟವಾಗಿದೆ ಎಂಬುದನ್ನು ಒಪ್ಪಿಕೊಂಡರು.

ಅಕ್ರಮ ಗಣಿಗಾರಿಕೆ ಪ್ರಕರಣಗಳಲ್ಲಿ ಕಾನೂನು ಕ್ರಮ ಜರುಗಿಸಲು, ನ್ಯಾಯಾಲಯ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಹಾಗೂ ರಾಜ್ಯ ಸರಕಾರಕ್ಕೆ ಸಂಭವಿಸಿರುವ ನಷ್ಟವನ್ನು ವಸೂಲಾತಿ ಮಾಡಲು ಸರಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ. ನಮ್ಮ ಸರಕಾರ ಸಾರ್ವಜನಿಕ ಸಂಪತ್ತಿನ ಲೂಟಿಯನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ.

– ಸಿದ್ದರಾಮಯ್ಯ ಮುಖ್ಯಮಂತ್ರಿ

ಎಚ್.ಕೆ.ಪಾಟೀಲ್ ಹೇಳಿದ್ದೇನು?

- 2006, 2011, 2012ರ ಅವಧಿಯಲ್ಲಿ ರಾಜ್ಯದ ವಿವಿಧೆಡೆ ಕಾನೂನು ಬಾಹಿರವಾಗಿ ಅಕ್ರಮ ಗಣಿಗಾರಿಕೆ
- 2006, 2011, 2012ರ ಅವಧಿಯಲ್ಲಿ ಗಣಿಗಾರಿಕೆ ನಿಯಮ ಗಾಳಿಗೆ ತೂರಿ ವ್ಯವಹಾರ
- ಕಬ್ಬಿಣದ ಅದಿರು ಚೀನಾ, ಪಾಕಿಸ್ತಾನ, ಹೊರರಾಷ್ಟ್ರಗಳಿಗೆ ರಫ್ತು ಮಾಡಿರುವುದರಿಂದ 80 ಸಾವಿರ ಕೋಟಿ ನಷ್ಟ

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಸರಕಾರಕ್ಕೆ ನೀಡಿದ್ದ ವರದಿಯಲ್ಲಿ ವಿದೇಶಕ್ಕೆ ರಫ್ತು ಮಾಡಿರುವ ಕಬ್ಬಿಣದ ಅದಿರು ಮಾಹಿತಿ ಕುರಿತು ಸವಿಸ್ತಾರ ವರದಿ ನೀಡಿದ್ದಾರೆ. ಪ್ರತಿ ಮೆಟ್ರಿಕ್ ಟನ್ ಅದಿರಿಗೆ 4,300 ಕೋಟಿ ರು. ನಂತೆ ಒಟ್ಟು 80 ಸಾವಿರ ಮೆಟ್ರಿಕ್ ಟನ್ ಅದಿರು ರಫ್ತು ಮಾಡಲಾಗಿದೆ. ಇದನ್ನು ವಶಪಡಿಸಿಕೊಳ್ಳುವುದು ಒಂದು ಜವಾಬ್ದಾರಿಯುತ ಸರಕಾರದ ಆದ್ಯ ಕರ್ತವ್ಯ. ಈ ಅವಧಿಯಲ್ಲಿ ಗಣಿಗಾರಿಕೆ ನಡೆಸುವವರು ನಿಯಮಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿದ್ದಾರೆ. ಒಂದು ಕಾಲದಲ್ಲಿ ರಾಜ್ಯಪಾಲರ ಕಾರು ಮತ್ತು ಅವರ ಬೆಂಗಾವಲು ವಾಹನಗಳು ಹೋಗುತ್ತಿದ್ದ ವೇಳೆ ಅದನ್ನು ಲೆಕ್ಕಿಸದೆ ಲಾರಿಯು ಸಾಗಾಣಿಕೆ ನಡೆಸಿರುವ ನಿದರ್ಶನವಿದೆ. ಇದು ನಾವು ಕಡಿವಾಣ ಹಾಕದಿದ್ದರ ಪರಿಣಾಮ ಎಂದು ವಿಷಾದಿಸಿದರು.

ಈ ಹಿಂದೆ ಷೇರು ಮಾರುಕಟ್ಟೆಯಲ್ಲಿ ಸಾವಿರಾರು ಕೋಟಿ ವಂಚನೆ ಮಾಡಿದ ಹರ್ಷದ್ ಮೆಹ್ತಾ ಪ್ರಕರಣ ತನಿಖೆ ಮಾಡಿಸಿದಾಗ 7 ಸಾವಿರ ಕೋಟಿ ರು. ವಶಪಡಿಸಿಕೊಳ್ಳಲಾಯಿತು. ಈಗ ಅಕ್ರಮ ಗಣಿಗಾರಿಕೆ ನಡೆಸಿರುವವರ ಮೇಲೂ ಕಾನೂನು ಪ್ರಕಾರ ಕ್ರಮ ಕೈಗೊಂಡು ವಶಪಡಿಸಿಕೊಳ್ಳಬೇಕು. ಇದಕ್ಕಾಗಿ ಈ ವಿಧೇಯಕ ಜಾರಿಗೆ ತಂದಿದ್ದೇವೆ ಎಂದು ಸಚಿವ ಎಚ್.ಕೆ.ಪಾಟೀಲ್ ಸಮರ್ಥನೆ ಮಾಡಿಕೊಂಡರು.

ಈ ವಿಧೇಯಕದ ಬಗ್ಗೆ ಸಚಿವ ಸಂಪುಟ ಸಭೆ ಹಾಗೂ ಸಚಿವ ಸಂಪುಟದ ಉಪಸಮಿತಿಯಲ್ಲೂ ಸುದೀರ್ಘವಾಗಿ ಚರ್ಚೆ ಮಾಡಲಾಗಿದೆ. ಸರಕಾರದ ಬೊಕ್ಕಸಕ್ಕೆ ನಷ್ಟ ಮಾಡಿರುವುದನ್ನು ಹುಸಿ ಮಾಡಲೇಬೇಕು. ಇದರಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು. ಈ ವಿಧೇಯಕದ ಮೇಲೆ ಸದಸ್ಯರಾದ ಐವಾನ್ ಡಿಸೋಜ, ಟಿ.ಎ.ಶರವಣ, ವೈ.ಎಂ. ಸತೀಶ್ ಮತ್ತಿತರ ಸದಸ್ಯರು ಮಾತನಾಡಿ ಸರ್ಕಾರಕ್ಕೆ ಕೆಲವು ಸಲಹೆ ನೀಡಿದರು.

ವಿಧೇಯಕ ಅನುಮೋದನೆ

ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದು ಮತ್ತು ಜಪ್ತಿಗಾಗಿ ವಸೂಲಿ ಆಯುಕ್ತರನ್ನು ನೇಮಿಸುವ ಸಂಬಂಧಪಟ್ಟ ವಿಧೇಯಕಕ್ಕೆ ವಿಧಾನಪರಿಷರ್‌ನಲ್ಲಿ ಅನುಮೋದನೆ ನೀಡಲಾಯಿತು. ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶ ಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಿ ಆಯುಕ್ತರನ್ನು ನೇಮಿಸುವ ಸಂಬಂಧಪಟ್ಟ ವಿಧೇಯಕ ಇದಾಗಿದೆ.

ಅಕ್ರಮ ಗಣಿಗಾರಿಕೆಯ ಆಸ್ತಿ ವಶಪಡಿಸಿಕೊಳ್ಳಲು ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕ ಮಸೂದೆ 2005, ಅಕ್ರಮ ಗಣಿಗಾರಿಕೆ ಚಟುವಟಿಕೆಗಳಿಂದ ಪಡೆದ ಆಸ್ತಿಗಳನ್ನು ವಶಪಡಿಸಿಕೊಳ್ಳಲು, ಜಪ್ತಿ ಮಾಡಲು ಆಯುಕ್ತರ ನೇಮಕಕ್ಕೆ ಅವಕಾಶ ನೀಡುತ್ತದೆ. ವಸೂಲಾತಿ ಪ್ರಕ್ರಿಯೆಗಳನ್ನು ಮೇಲ್ವಿಚಾರಣೆ ಮಾಡಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶ್ರೇಣಿಗಿಂತ ಕಡಿಮೆಯಿಲ್ಲದ ಸೇವೆಯಲ್ಲಿರುವ ಅಥವಾ ನಿವೃತ್ತ ಅಧಿಕಾರಿಯನ್ನು ವಸೂಲಾತಿ ಕಮಿಷನರ್ ಆಗಿ ನೇಮಿಸಲಾಗುತ್ತದೆ.

ರಾಜ್ಯದಲ್ಲಿ ಲೆಕ್ಕವಿಲ್ಲದಷ್ಟು ಗುತ್ತಿಗೆದಾರರು, ಸಾಗಾಣಿಕೆದಾರರು, ರಫ್ತುದಾರರು, ದಾಸ್ತಾನು ಧಾರಕರು, ಖರೀದಿದಾರರು ಮತ್ತು ಮಧ್ಯವರ್ತಿಗಳು ಸೇರಿದಂತೆ ಬಹು ವಹಿವಾಟುಗಳಿಂದ ಅಕ್ರಮ ಗಣಿಗಾರಿಕೆ ಚಟುವಟಿಕೆಗಳು ನಡೆದಿವೆ. ಅದು ವ್ಯವಸ್ಥಿತ ಒಳಸಂಚು ಹೊಂದಿರುವ ಸಂಘಟಿತ ಅಪರಾಧ. ಇದರಿಂದ ಸರಕಾರಕ್ಕಾಗಿರುವ ನಷ್ಟದ ವಸೂಲಾತಿಗೆ ವಿಧೇಯಕ ಜಾರಿಗೊಳಿಸಲಾಗುತ್ತಿದೆ. ಇದಕ್ಕಾಗಿ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದ, ಸೇವೆಯಲ್ಲಿರುವ ಅಥವಾ ನಿವೃತ್ತ ಅಧಿಕಾರಿಯನ್ನು ವಸೂಲಾತಿ ಆಯುಕ್ತರನ್ನಾಗಿ ನೇಮಕ ಮಾಡಲು ಅವಕಾಶ ಕಲ್ಪಿಸಿಕೊಳ್ಳಲಾಗಿದೆ.

ನೇಮಕವಾಗುವ ವಸೂಲಾತಿ ಆಯುಕ್ತರು ಅಕ್ರಮ ಗಣಿಗಾರಿಕೆಯಲ್ಲಿ ಪಾಲ್ಗೊಂಡವರ ಚರ ಮತ್ತು ಸ್ಥಿರಾಸ್ತಿಗಳ ಜಪ್ತಿ ಅಥವಾ ಮುಟ್ಟುಗೋಲು ಮತ್ತು ವಸಲಾತಿ ಕಾರ್ಯಾಚರಣೆಗಳ ಮೇಲೆ ಒಟ್ಟಾರೆ ಮೇಲ್ವಿಚಾರಣಾ ಅಧಿಕಾರ ಹೊಂದಿರುತ್ತಾರೆ. ಅದರ ಜತೆಗೆ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಬರುವ ದೂರುಗಳನ್ನು, ದಾಖಲೆ, ವರದಿ ಪರಿಶೀಲಿಸಬೇಕು. ಅಲ್ಲದೆ, ಸ್ವತ್ತುಗಳ ಜಪ್ತಿಗೆ ಹೊರಡಿಸುವ ಎಲ್ಲ ಮುಟ್ಟುಗೋಲು ಆದೇಶಗಳನ್ನು ರಾಜ್ಯ ಸರಕಾರದಿಂದ ದೃಢೀಕರಿಸಿಕೊಳ್ಳಬೇಕು. ಅದರ ಜತೆಗೆ ಜಪ್ತಿ ಅಥವಾ ಮುಟ್ಟುಗೋಲಿಗೂ ಮುನ್ನ ಕಾನೂನು ಪ್ರಕಾರ ಸೂಚನೆಗಳನ್ನು ಪಾಲಿಸಬೇಕು ಎಂಬ ನಿಯಮ ವಿಧೇಯಕದಲ್ಲಿದೆ.

ನಾನು ಹುಟ್ಟು ಕಾಂಗ್ರೆಸಿಗ: ಡಿಕೆಶಿ

ಆರ್‌ಎಸ್‌ಎಸ್ ಬಗ್ಗೆ ತಿಳಿದುಕೊಂಡಿದ್ದೇನೆ; ಹಾಗೆಂದು ಹೋಗುವುದಿಲ್ಲ

ಸದಾ ವಸ್ತಲೇ ಮಾತೃಭೂಮಿ ಹೇಳಿದ್ದ ಡಿಕೆ ಶಿವಕುಮಾರ್: ಭಾರಿ ವಿವಾದ

ಬೆಂಗಳೂರು: ಸದಾ ವಸ್ತಲೇ ಮಾತೃಭೂಮಿ ಎಂದಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡೆ ತೀವ್ರ ವಿವಾದ ಹಾಗೂ ಕುತೂಹಲಕ್ಕೆ ಕಾರಣವಾಗುತ್ತಿದ್ದಂತೆ, ಯಾವುದೇ ಕಾರಣಕ್ಕೂ ಬಿಜೆಪಿಯೊಂದಿಗೆ ಕೈಜೋಡಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

ಆರ್‌ಎಸ್‌ಎಸ್ ಗೀತೆ ಹಾಡಿದ್ದಕ್ಕೆ ಡಿ.ಕೆ.ಶಿವಕುಮಾರ್ ಬಿಜೆಪಿಗೆ ಸೇರುತ್ತಾರೆ ಎನ್ನುವ ಮಾತುಗಳು ಕೇಳಿಬಂದಿದ್ದಕ್ಕೆ ಪ್ರತಿಕ್ರಿಯಿಸಿರುವ ಅವರು, ನಾನು ಅಪ್ಪಟ ಕಾಂಗ್ರೆಸ್ಸಿಗ. ಹುಟ್ಟಿನಿಂದ ಕಾಂಗ್ರೆಸ್ಸಿಗ. ಜೀವ ಇರುವ ತನಕವೂ ಕಾಂಗ್ರೆಸ್ಸಿಗನಾಗಿಯೇ ಇರುತ್ತೇನೆ. ನನ್ನ ಜೀವ, ನನ್ನ ರಕ್ತ ಎಲ್ಲವೂ ಕಾಂಗ್ರೆಸ್. ನಾನೀಗ ಪಕ್ಷವನ್ನು ಮುನ್ನಡೆಸುತ್ತಿದ್ದೇನೆ. ಅದಕ್ಕೆ ಆಧಾರಸ್ತಂಭವಾಗಿ ನಿಲ್ಲುತ್ತೇನೆ ಎಂದು ಸ್ಪಷ್ಟಪಡಿಸಿದರು.

ಪರೋಕ್ಷ ಅಥವಾ ಪ್ರತ್ಯಕ್ಷವಾಗಿ ಯಾವುದೇ ರೀತಿಯಲ್ಲಿಯೂ ಅವರೊಂದಿಗೆ ಕೈ ಜೋಡಿಸುವ ಪ್ರಮೇಯವಿಲ್ಲ. ನಾನು ಅಪ್ಪಟ ಕಾಂಗ್ರೆಸ್ಸಿಗ. ಆದರೆ ಜನತಾದಳ, ಬಿಜೆಪಿ ಬಗ್ಗೆ ಸಂಶೋಧನೆ ಮಾಡುತ್ತಿರುತ್ತೇನೆ. ಅದೇ ರೀತಿ ಆರ್‌ಎಸ್‌ಎಸ್ ಬಗ್ಗೆಯೂ ತಿಳಿದುಕೊಂಡಿದ್ದೇನೆ. ನಾನು ಪ್ರತಿಯೊಂದು ರಾಜಕೀಯ ಪಕ್ಷಗಳ ಬಗ್ಗೆಯೂ ನನ್ನದೇ ಆದ ಸಂಶೋಧನೆ ನಡೆಸಿದ್ದೇನೆ. ಆರ್‌ಎಸ್‌ಎಸ್ ರಾಜ್ಯದಲ್ಲಿ ಹೇಗೆ ತನ್ನ ಸಂಘಟನೆ ಕಟ್ಟಿತು ಎಂಬುದು ನನಗೆ ತಿಳಿದಿದೆ. ಆರ್‌ಎಸ್‌ಎಸ್ ಪ್ರತಿ ತಾಲೂಕು, ಜಿಲ್ಲೆ ಸೇರಿದಂತೆ ಎಲ್ಲಾ ಕಡೆ ಶಿಕ್ಷಣ ಸಂಸ್ಥೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದೆ. ಸಾಕಷ್ಟು ಹಣ ಹೂಡಿಕೆ ಮಾಡುತ್ತಿದೆ. ಮಕ್ಕಳನ್ನು ತಲುಪುವ ಕೆಲಸ ಮಾಡುತ್ತಿದೆ ಎಂದರು.

ಆಧಾರವಿಟ್ಟುಕೊಂಡು ಆರೋಪ ಮಾಡಲಿ

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಬಗ್ಗೆ ಆರೋಪ ಮಾಡಿದವನನ್ನು (ಮಹೇಶ್ ಶೆಟ್ಟಿ ತಿಮರೋಡಿ) ಒದ್ದು ಒಳಗೆ ಹಾಕಲಾಗಿದೆ. ಆರೋಪ ಮಾಡಲು ಆತನ ಬಳಿ ದಾಖಲೆ ಏನಿದೆ? ನಮ್ಮ ನಡುವೆ ರಾಜಕೀಯವಾಗಿ ಸಾಕಷ್ಟು ಭಿನ್ನಾಭಿಪ್ರಾಯ ಹೊಂದಿರ ಬಹುದು. ಆದರೆ ನಮ್ಮ ವಿರೋಧಿಗಳ ಬಗ್ಗೆ ಏನೇನೋ ಮಾತನಾಡುತ್ತಾನೆ ಎಂದು ನಾವು ಖುಷಿ ಪಡುವುದಲ್ಲ. ಇಂದು ಅವರ ಬಗ್ಗೆ ಮಾತನಾಡಿದವರು, ನಾಳೆ ನಮ್ಮ ಬಗ್ಗೆಯೂ ಮಾತನಾಡುತ್ತಾರೆ. ಈ ಹಿಂದೆ ಸಿಎಂ ಹಾಗೂ ನನ್ನ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ. ಈ ರಾಜ್ಯದಲ್ಲಿ ಯಾರ ಸ್ವಾಭಿಮಾನಕ್ಕೂ ಧಕ್ಕೆ ಬಾರದಂತೆ ಕೆಲಸ ಮಾಡಬೇಕು. ರಾಜಕೀಯ ಮಾಡಲಿ, ರಾಜಕೀಯವಾಗಿ ಆರೋಪಗಳನ್ನು ಮಾಡಲಿ. ಆದರೆ ಆಧಾರಗಳನ್ನಿಟ್ಟುಕೊಂಡು ಆರೋಪ ಮಾಡಲಿ ಎಂದರು.

ರಾಜಕೀಯವಾಗಿ ನಾವು ಭಿನ್ನಾಭಿಪ್ರಾಯಗಳನ್ನು ಹೊಂದಿರಬಹುದು. ರಾಜಕೀಯ ವ್ಯಕ್ತಿಯಾದ ನಾನು ರಾಜಕೀಯ ಎದುರಾಳಿಗಳಲ್ಲಿ ಯಾರು ಸ್ನೇಹಿತರಿದ್ದಾರೆ, ಯಾರು ಶತ್ರುಗಳಿದ್ದಾರೆ ಎನ್ನುವುದನ್ನು ತಿಳಿಯಬೇಕಲ್ಲವೇ? ಆದ ಕಾರಣಕ್ಕೆ ಆರ್‌ಎಸ್‌ಎಸ್ ಇತಿಹಾಸ ತಿಳಿದುಕೊಂಡಿದ್ದೇನೆ. ಕೆಲವೊಂದು ಸಂದರ್ಭದಲ್ಲಿ ಕೆಲವೊಂದು ಸಂಸ್ಥೆಗಳಲ್ಲಿ ಒಂದಷ್ಟು ಒಳ್ಳೆಯ ಗುಣಗಳಿರುತ್ತವೆ. ಅವುಗಳನ್ನೂ ನಾವು ಗಮನಿಸಬೇಕಲ್ಲವೇ? ನೇರವಾಗಿ, ದಿಟ್ಟವಾಗಿ ಮಾತನಾಡುವುದು ನಮ್ಮ ಗುಣ. ಬೇರೆಯವರಲ್ಲಿರುವ ಒಳ್ಳೆಯ ಗುಣಗಳನ್ನು ಗಮನಿಸಬೇಕು ಅದೇ ರೀತಿ ನಾವು ಮಾಡಿದ್ದೇವೆ.

– ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಜನಗಣತಿ: ಮಹಾಸಭಾ ತೀರ್ಮಾನಕ್ಕೆ ಬದ್ಧ

ಬೆಂಗಳೂರು: ಸೆ.20ರಿಂದ ಆರಂಭವಾಗಲಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ವೀರಶೈವ- ಲಿಂಗಾಯತ ಸಮುದಾಯದ ನೈಜ ಸಂಖ್ಯೆ ತಿಳಿಯುವ ನಿಟ್ಟಿನಲ್ಲಿ ಮಹಾಸಭಾ ಕೈಗೊಳ್ಳುವ ತೀರ್ಮಾನಕ್ಕೆ ಬದ್ಧ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು. ಬೆಂಗಳೂರಿನಲ್ಲಿ ನಡೆದ ಸಭೆಯ ಬಳಿಕ ವಿವರ ನೀಡಿದ ಸಚಿವ ಈಶ್ವರ ಖಂಡ್ರೆ, ವಯೋಸಹಜ ಅನಾರೋಗ್ಯದ ಕಾರಣ ಶಾಮನೂರು ಶಿವಶಂಕರಪ್ಪ ಅವರು ಸಭೆಗೆ ಗೈರಾಗಿದ್ದರು. ಆದ್ದರಿಂದ ನನ್ನ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಮಾಜದ ಬಾಂಧವರು ಧರ್ಮ, ಜಾತಿಯ ಕಾಲಂನಲ್ಲಿ ಏನೆಂದು ಬರೆಸಬೇಕು ಎನ್ನುವ ಬಗ್ಗೆ ಚರ್ಚಿಸಲಾಯಿತು ಎಂದರು.

ಸಮಾಜದ ಎಲ್ಲರೂ ವೀರಶೈವ ಅಥವಾ ಲಿಂಗಾಯತ ಎಂದು ನಮೂದಿಸಲು ಮನವಿ ಮಾಡುವ ನಿಟ್ಟಿನಲ್ಲಿ ಜನಾಭಿಪ್ರಾಯ ಮೂಡಿಸಲು ಉನ್ನತಮಟ್ಟದ ಸಮಿತಿ ರಚಿಸಿ, ಮಠಾಧಿಪತಿಗಳೊಂದಿಗೆ ಚರ್ಚಿಸಿ ಕಾರ್ಯರೂಪಕ್ಕೆ ತರಲು ಸಭೆ ತೀರ್ಮಾನಿಸಿದೆ. ಇದು ರಾಜಕೀಯ ಸಭೆಯಲ್ಲ, ಸಮಾಜದ ಜನರ ಹಿತ ಕಾಯುವ ಸಂಕಲ್ಪದೊಂದಿಗೆ ಎಲ್ಲ ಪಕ್ಷಗಳ ಲಿಂಗಾಯತ, ವೀರಶೈವ ಶಾಸಕರ ಸೇರಿ ಸಭೆ ನಡೆಸಲಾಗಿದೆ. ಮುಂಬರುವ ಶೈಕ್ಷಣಿಕ ಮತ್ತು ಸಾಮಾಜಿಕ ಸಮೀಕ್ಷೆಯಲ್ಲಿ ವೀರಶೈವ ಲಿಂಗಾಯತರ ನೈಜ ಸಂಖ್ಯೆ ಹೊರಹೊಮ್ಮುವಂತೆ ಮಾಡುವುದೇ ಸಭೆಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಎಲ್ಲ ಜನಪ್ರತಿನಿಧಿಗಳು, ಸಮಾಜದ ಮಠಾಧಿಪತಿಗಳು, ಹರ, ಚರ ಗುರು ಮೂರ್ತಿಗಳ ಸಹಯೋಗದೊಂದಿಗೆ ಸಮಾಜದ ಜನರಲ್ಲಿ ಜಾಗೃತಿ ಮೂಡಿಸುವ ಬಗ್ಗೆ ಪಕ್ಷಾತೀತವಾಗಿ ಚರ್ಚಿಸಲಾಯಿತು ಎಂದರು.

ಗಣೇಶನ ಗಲಾಟೆ: ಪ್ರತಿಪಕ್ಷ ಕಿಡಿ

ಗಣೇಶೋತ್ಸವ ನಿರ್ಬಂಧ ತೆರವಿಗೆ ಪ್ರತಿಪಕ್ಷ ಆಗ್ರಹ | ಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿಕೆ

ವಿಶ್ವವಾಣಿ ಸುದ್ದಿಮನೆ ವಿಧಾನ ಪರಿಷತ್

ಗಣೇಶೋತ್ಸವಕ್ಕೆ ಜಿಲ್ಲಾಡಳಿತ ವಿಧಿಸಿರುವ ನಿರ್ಬಂಧ ತೆರವುಗೊಳಿಸಬೇಕೆಂದು ಒತ್ತಾಯಿಸಿ ಪ್ರತಿಪಕ್ಷದ ಸದಸ್ಯರು ಸರಕಾರದ ವಿರುದ್ಧ ಮುಗಿಬಿದ್ದ ಘಟನೆ ವಿಧಾನಪರಿಷತ್‌ನಲ್ಲಿ ನಡೆಯಿತು.

ಪ್ರಶ್ನೋತ್ತರದ ಅವಧಿಯಲ್ಲಿ ಬಿಜೆಪಿಯ ಸುನಿಲ್ ವಲ್ಯಾಪುರ್ ಅವರು ವಿಷಯ ಪ್ರಸ್ತಾಪಿಸಿ ಗಣೇಶ ಉತ್ಸವಕ್ಕೆ ಕಲಬುರಗಿ ಜಿಲ್ಲಾಡಳಿತ ನಿರ್ಬಂಧ ಹಾಕಿದೆ. ಅನ್ಯಧರ್ಮಗಳ ಆಚರಣೆಗೆ ಇಲ್ಲದ ನಿರ್ಬಂಧ ನಮ್ಮ ಆಚರಣೆಗೆ ಏಕೆ ಎಂದು ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಇದಕ್ಕೆ ದನಿಗೂಡಿಸಿದ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ಎನ್.ರವಿಕುಮಾರ್, ಶಶಿಲ್ ನಮೋಶಿ, ಭಾರತಿ ಶೆಟ್ಟಿ ಮತ್ತಿತರ ಸದಸ್ಯರು, ಇದು ಕೇವಲ ಕಲಬುರಗಿಯಲ್ಲಿ ಮಾತ್ರ ಇಲ್ಲ, ಎಲ್ಲಾ ಜಿಲ್ಲೆಗಳಲ್ಲೂ ಇದೇ ಪರಿಸ್ಥಿತಿ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ, ನಮ್ಮ ಹಬ್ಬಗಳಿಗೆ ಆಚರಣೆ ಮಾಡಲು ಜಿಲ್ಲಾಧಿಕಾರಿಗಳು ಇಲ್ಲವೇ ಬೇರೊಬ್ಬರು ಏಕೆ ಅನುಮತಿ ಕೊಡಬೇಕು. ಅದರಲ್ಲೂ ಕಲಬುರಗಿಯಲ್ಲಿ ವಿಭಿನ್ನವಾದ ಆಡಳಿತವಿದೆ. ಒಂದು ರೀತಿ ರಿಪಬ್ಲಿಕ್ ಆಫ್ ಕಲಬುರಗಿ ಇದೆ ಎಂದು ಪರೋಕ್ಷವಾಗಿ ಸಚಿವ ಪ್ರಿಯಾಂಕ್ ಖರ್ಗೆ ಹೆಸರು ಹೇಳದೆ ವಾಗ್ದಾಳಿ ನಡೆಸಿದರು. ಅಲ್ಲದೆ, ಬ್ರಿಟಿಷರ ಕಾಲದಲ್ಲೂ ಇಂತಹ ಪರಿಸ್ಥಿತಿ ಇರಲಿಲ್ಲ. ಗಣೇಶ ಉತ್ಸವ ನಮ್ಮ ಹಿಂದೂಗಳು ಶ್ರದ್ಧಾಭಕ್ತಿಯಿಂದ ಆಚರಿಸುತ್ತೇವೆ. ಇದು ನಮ ಒಗ್ಗಟ್ಟಿನ ಸಂಕೇತ. ಇದಕ್ಕೆ ಏಕೆ ನಿರ್ಬಂಧ? ಮೊದಲು ತೆಗೆದುಹಾಕಿ ಎಂದು ಒತ್ತಾಯಿಸಿದರು. ಈ ವೇಳೆ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಈಗಾಗಲೇ ಸಭಾನಾಯಕರು ಇದಕ್ಕೆ ಉತ್ತರ ಕೊಟ್ಟಿದ್ದಾರೆ. ನಾನು ಚರ್ಚೆಗೆ ಅವಕಾಶ ಕೊಡುವುದಿಲ್ಲ ಎಂದು ಸಭಾಪತಿ ಹೊರಟ್ಟಿಯವರು ಹೇಳಿದರು.

ತುಷ್ಟೀಕರಣಕ್ಕಾಗಿ ನಿರ್ಬಂಧ ಸಲ್ಲ: ಗಲಾಟೆಯ ಮಧ್ಯೆಯೇ ಸಿ.ಟಿ.ರವಿ ಮಾತನಾಡಿ, ಯಾವುದೋ ಒಂದು ಧರ್ಮದ ತುಷ್ಟೀಕರಣಕ್ಕಾಗಿ ನಮ ಹಿಂದೂ ಧರ್ಮದ ಹಬ್ಬಗಳಿಗೆ ನಿರ್ಬಂಧ ಹಾಕಲಾಗುತ್ತಿದೆ. ನಿಮಗೆ ಬೇರೆ ಧರ್ಮದ ಹಬ್ಬಗಳಿಗೆ ಇದೇ ನಿರ್ಬಂಧ ಹಾಕುವ ತಾಕತ್ತು ಇಲ್ಲವೇ? ಎಂದು ಪ್ರಶ್ನಿಸಿದರು. ಆಗ ಮತ್ತೆ ಸದನದಲ್ಲಿ ಕೋಲಾಹಲ ಉಂಟಾಗಿ ಯಾರು, ಏನು ಹೇಳುತ್ತಿದ್ದಾರೆ ಎಂಬುದೇ ತಿಳಿಯಲಿಲ್ಲ. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಇದರ ಬಗ್ಗೆ ಚರ್ಚೆಗೆ ಅವಕಾಶ ನೀಡುವುದಿಲ್ಲ ಎಂದು ಸಭಾಪತಿಗಳು ಪುನರುಚ್ಚರಿಸಿದರು. ಪ್ರತಿಪಕ್ಷದ ಸದಸ್ಯರು ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದಾಗಲೇ ವಿಧಾನಪರಿಷತ್ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ಪಾಸಾದ ಸಹಕಾರಿ ವಿಧೇಯಕ

ತಿರಸ್ಕೃತಗೊಂಡಿದ್ದ ಕರ್ನಾಟಕ ಸಹಕಾರಿ ಪಾರದರ್ಶಕ ವಿಧೇಯಕ ವಿಧಾನಪರಿಷತ್‌ನಲ್ಲಿ ಎರಡನೇ ಬಾರಿಗೆ ಅಂಗೀಕಾರ ಮಾಡಲಾಯಿತು. ಈ ಹಿಂದೆ ಕೆಲವು ಕಾರಣಗಳಿಂದ ತಿರಸ್ಕೃತಗೊಂಡಿದ್ದ ವಿಧೇಯಕವನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಅವರು ಪರಿಷತ್‌ನಲ್ಲಿ ಮಂಡಿಸಿ ಅಂಗೀಕಾರ ಪಡೆದುಕೊಂಡರು. ವಿಧೇಯಕದ ಮೇಲೆ ಯಾವುದೇ ಚರ್ಚೆ ಅಥವಾ ವಿವರಣೆ ನಡೆಯಲಿಲ್ಲ. ಮಂಡನೆಯ ನಂತರ ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿಯವರು ವಿಧೇಯಕ ಅಂಗೀಕಾರವಾಗಿದೆ ಎಂದು ಪ್ರಕಟಿಸಿದರು. ನಂತರ ಸದಸ್ಯ ಪ್ರತಾಪ್ ಸಿಂಹ ನಾಯಕ್ ಅವರು ಗಂಗಾ ಕಲ್ಯಾಣ ಯೋಜನೆಯಲ್ಲಿ ನಡೆದಿರುವ ಅಕ್ರಮಗಳ ಕುರಿತ ವಿಶೇಷ ಸದನ ಸಮಿತಿಯ ವರದಿ ಮಂಡನೆ ಮಾಡಿದರು. ಬಳಿಕ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ವರದಿಯನ್ನು ಕಾಂಗ್ರೆಸ್ ಸದಸ್ಯ ಕೆ.ಅಬ್ದುಲ್ ಜಬ್ಬಾರ್ ಮಂಡನೆ ಮಾಡಿದರು.

ಅದ್ದೂರಿ ಗಣೇಶೋತ್ಸವಕ್ಕೆ ಛಲವಾದಿ ಆಗ್ರಹ

ಹಿಂದೂಗಳನ್ನು ತುಳಿಯುವ ಕೆಲಸ | ಪರಿಷತ್ ಪ್ರತಿಪಕ್ಷ ನಾಯಕ ಆರೋಪ

ಬೆಂಗಳೂರು: ರಾಜ್ಯಕ್ಕೆ ಒಂದೇ ಕಾನೂನು ಇರಬೇಕು. ಗಣೇಶೋತ್ಸವವನ್ನು ವಿಜೃಂಭಣೆಯಿಂದ ಹಿಂದೂಗಳು ಕೊಂಡಾಡುವಂತೆ ಆಚರಿಸಲು ಸರಕಾರ ಅವಕಾಶ ಮಾಡಿಕೊಡಬೇಕು ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬೇರೆಯವರಿಗೆ ಬೇರೆ ಬೇರೆ ರೀತಿ ಮಣೆ ಹಾಕುವುದು, ಹಿಂದೂಗಳನ್ನು ದಮನಿಸುವ ನೀತಿ ಮಾಡಿದ್ದೇ ಆದರೆ, ಇದರ ಪ್ರತಿಫಲ ನೀವೇ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಎಲ್ಲ ಕಡೆ ಹಿಂದೂಗಳು ವಿಜೃಂಭಣೆಯಿಂದ ಗಣೇಶೋತ್ಸವ ಆಚರಿಸಲು ಅನುವು ಮಾಡಿಕೊಡಬೇಕು. ಬೇರೆಯವರಿಗೆ ಮಣೆ ಹಾಕಿ ಎತ್ತಿ ಕಟ್ಟಬೇಕು, ನೀವು ಓಲೈಕೆ ಮಾಡಬೇಕು. ಹಿಂದೂಗಳನ್ನು ತುಳಿಯುವ ಕೆಲಸ ಕಾಂಗ್ರೆಸ್ ಮಾಡುತ್ತಿದೆ. ದಕ್ಷಿಣ ಕನ್ನಡದಲ್ಲೂ ಡಿಜೆ ಹಾಕಬಾರದು ಎಂದು ನಿಷೇಧಿಸಿದ್ದಾರೆ ಎಂದು ಆರೋಪಿಸಿದರು.

ದಕ್ಷಿಣ ಕನ್ನಡದಲ್ಲಿ 1300 ಸೌಂಡ್ ಸಿಸ್ಟಮ್ ನಡೆಸುವವರಿದ್ದಾರೆ. 6 ಸಾವಿರ ಜನ ಕೆಲಸ ಮಾಡುತ್ತಾರೆ. ಆದರೆ, ಪೊಲೀಸರು ಅವರನ್ನು ಕರೆದು ತಾಕೀತು ಮಾಡುವುದು, 8 ಗಂಟೆಗೆ ಮೈಕ್ ಸೆಟ್ ಕಿತ್ತೊಯ್ಯುವ ಕೆಲಸ, ಕೇಸ್ ಹಾಕಿ ಬಂಧಿಸುವ, ಜೈಲಿಗೆ ಕಳಿಸುವ ಕೆಲಸ ಮಾಡುತ್ತಾರೆ. ಇದರಿಂದ ಅವರ ಕುಟುಂಬಗಳು ಬೀದಿಪಾಲಾಗುತ್ತವೆ. ಜತೆಗೆ ಇದು ಕಾನೂನು ಮೀರಿದ ಕ್ರಮ ಎಂದು ದೂರಿದರು.

ಪಲಾಯನವಾದಿ ಸರಕಾರ

ಗಣೇಶೋತ್ಸವಕ್ಕೆ ತೊಂದರೆ ಕೊಡಬಾರದು ಎಂದು ಸದನದಲ್ಲಿ ಸದಸ್ಯರು ತಿಳಿಸಿದರೆ ಸದನವನ್ನೇ ಮುಂದೂಡಿದ್ದಾರೆ. ಇದು ಪಲಾಯನವಾದಿ ಸರಕಾರ. ಒಳ ಮೀಸಲಾತಿಯ ತೊಂದರೆ, ದ್ವಂದ್ವ, ಯಾರಿಗೆ ಅನ್ಯಾಯ ಆಗಿದೆ? ಅಲೆಮಾರಿ ಸಮುದಾಯ ಅಹೋರಾತ್ರಿ ಧರಣಿ ಮಾಡುತ್ತಿದೆ. ನಾಗಮೋಹನದಾಸ್ ಸಮಿತಿ, ಸದಾಶಿವ ಆಯೋಗ, ಮಾಧುಸ್ವಾಮಿ ವರದಿ ಅನುಸರಿಸಿಲ್ಲ. ಸುಪ್ರೀಂ ಕೋರ್ಟಿನ ಪ್ರಸ್ತಾಪವೂ ಇಲ್ಲ. ಇವರು 3 ಗುಂಪು ಮಾಡಿ ಅಲೆಮಾರಿಗಳನ್ನು ಬೀದಿಗೆ ಬಿಟ್ಟಿದ್ದಾರೆ. ಇಂಥ ಯಾವುದನ್ನೂ ಚರ್ಚಿಸಲು ಈ ಸರಕಾರ ಸಿದ್ಧವಿಲ್ಲ. ಮುಖ್ಯಮಂತ್ರಿ ಕೂಡ ಪಲಾಯನವಾದ ಮಾಡುತ್ತಾರೆ ಎಂದರು.

ಬಡ್ಡಿ ಮನ್ನಾದಿಂದ 1,200 ಕೋಟಿ ಆದಾಯ

ಶೇ.5.5 ಶುಲ್ಕದೊಂದಿಗೆ 'ಬಿ' ಖಾತೆ 'ಎ' ಖಾತೆಗಳಾಗಿ ಪರಿವರ್ತನೆ | 7.5 ಲಕ್ಷ ಬಿ ಖಾತೆಗಳಿಗೆ ಎ ಖಾತೆ ಭಾಗ್ಯ: ಡಿಕೆಶಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಆಸ್ತಿ ತೆರಿಗೆ ಪಾವತಿಸದೇ ಇದ್ದ ಕಟ್ಟಡಗಳಿಗೆ 'ಬಡ್ಡಿ ಮನ್ನಾ' ಮೂಲಕ ಒನ್ ಟೈಮ್ ಸೆಟಲ್‌ಮೆಂಟ್‌ನಿಂದ ರಾಜ್ಯ ಸರಕಾರಕ್ಕೆ ಭರ್ಜರಿ ಆದಾಯ ಬಂದಿರುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಕಟಿಸಿದ್ದಾರೆ.

ರಾಜ್ಯದ ಅಭಿವೃದ್ಧಿ ಮತ್ತು ಅನುದಾನ ಹಂಚಿಕೆ ಸಂಬಂಧ ಆಡಳಿತ-ಪ್ರತಿಪಕ್ಷ ನಡುವಿನ 'ಜಟಾಪಟಿ'ಯ ನಡುವೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆಸ್ತಿ ತೆರಿಗೆ ಪಾವತಿಸದವರಿಗೆ ಭಾರೀ ಪ್ರಮಾಣದ ದಂಡ ವಿಧಿಸಲಾಗಿತ್ತು. ಏಕ ತೀರುವಳಿ ವ್ಯವಸ್ಥೆಯನ್ನು ಜಾರಿಗೊಳಿಸಿ ಬಡ್ಡಿ ಮನ್ನಾ ಮಾಡಿದ್ದರಿಂದ 2.60 ಲಕ್ಷ ಮನೆ ಮಾಲೀಕರು ತೆರಿಗೆ ಪಾವತಿಸಿದ್ದಾರೆ. ಇದರಿಂದ ಸರಕಾರಕ್ಕೆ 1200 ಕೋಟಿ ರು.ಗಳ ಹೆಚ್ಚುವರಿ ತೆರಿಗೆ ವಸೂಲಿಯಾಗಿದೆ. ಟಿಡಿಆರ್ ದುರ್ಬಳಕೆ ಮಾಡಿಕೊಳ್ಳುವ ಪ್ರಸಂಗಗಳು ಹೆಚ್ಚಾಗಿದ್ದವು. ರಾಮನಗರದಲ್ಲಿನ ಕಟ್ಟಡಕ್ಕೆ ಬೆಂಗಳೂರಿನಲ್ಲಿ ಟಿಡಿಆರ್ ಪಡೆಯುವ ಪ್ರಯತ್ನಗಳಾಗಿದ್ದವು. ಒಂದೇ ರಸ್ತೆಯಲ್ಲಿರುವ ನಿವೇಶನ, ಮನೆ ಹಾಗೂ ಅಭಿವೃದ್ಧಿ ಪಡಿಸದೆ ಇರುವ ಜಾಗಗಳಿಗೆ ಬೇರೆ ಬೇರೆ ರೀತಿಯ ಟಿಡಿಆರ್ ಇತ್ತು ಅದನ್ನು ಸರಳೀಕರಣ ಗೊಳಿಸಲಾಗಿದೆ ಎಂದು ತಿಳಿಸಿದರು.

7.5 ಲಕ್ಷ ಬಿ ಖಾತೆಗಳ ಬದಲಾವಣೆ: ರಾಜಧಾನಿ ಬೆಂಗಳೂರಿನಲ್ಲಿರುವ 7.5 ಲಕ್ಷ ಬಿ ಖಾತೆಗಳನ್ನು ಶೇ.5.5 ರಷ್ಟು ಹಣ ಕಟ್ಟಿಸಿಕೊಂಡು ಎ ಖಾತೆಗಳನ್ನಾಗಿ ಪರಿವರ್ತಿಸಲಾಗುವುದು. ಡೆವಲಪರ್‌ಗಳು ನಿವೇಶನಗಳನ್ನು ಮಾತ್ರ ಭೂ ಪರಿವರ್ತನೆ ಮಾಡುತ್ತಿರುತ್ತಾರೆ. ರಸ್ತೆಗಳು ಹಾಗೂ ಇತರ ಜಾಗಗಳು ಜಮೀನಿನ ಮೂಲ ಮಾಲೀಕರ ಹೆಸರಿನಲ್ಲೇ ಇರುತ್ತವೆ. ಇದರಿಂದ ಆಸ್ತಿ ತಗಾದೆಗಳು ಹೆಚ್ಚಾಗಿ ನಿವೇಶನ ಖರೀದಿಸಿದವರಿಗೆ ತೊಂದರೆಯಾಗುತ್ತಿತ್ತು. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಬೆಂಗಳೂರಿನಲ್ಲಿ ಎಲ್ಲ ರಸ್ತೆಗಳನ್ನು ಸರಕಾರಿ ರಸ್ತೆಗಳೆಂದು ಘೋಷಣೆ ಮಾಡಿದ್ದೇವೆ. 7.5 ಲಕ್ಷ ಬಿ ಖಾತೆಗಳನ್ನು ಅಭಿವೃದ್ಧಿ ಶುಲ್ಕ ಪಡೆದುಕೊಂಡು ಎ ಖಾತೆಗಳನ್ನಾಗಿ ಪರಿವರ್ತಿಸಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳಷ್ಟೆ ಅಲ್ಲ ಪಂಚಾಯಿತಿಗಳ ಮಟ್ಟದಲ್ಲಿಯೂ ಬಿ ಖಾತಾ ವ್ಯವಸ್ಥೆ ಮಾಡುವುದಾಗಿ ಹೇಳಿದರು.

ಬೆಂಗಳೂರಿನ ಅಭಿವೃದ್ಧಿಯ ವಿಷಯದಲ್ಲಿ ಮಹತ್ವದ ಸುಧಾರಣೆಗಳನ್ನು ತರಲಾಗುತ್ತಿದೆ. ಎಲ್ಲಾ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗುತ್ತಿದೆ. ನಗರದಲ್ಲಿ 25 ಲಕ್ಷ ಆಸ್ತಿಗಳಿದ್ದು ಎಲ್ಲದಕ್ಕೂ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ನೋಂದಣಿಗೂ ಆಧಾರ್ ಜೋಡಣೆ ಕಡ್ಡಾಯವಾಗಿದೆ.

–ಡಿ.ಕೆ.ಶಿವಕುಮಾರ್ ಡಿಸಿಎಂ

ಪುರಸಭೆ, ನಗರಸಭೆಗಳಲ್ಲೂ ಬಿ ಖಾತೆ ವಿತರಣೆಗೆ ಸಚಿವ ಈಶ್ವರ್ ಖಂಡ್ರೆ ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ. ನೋಂದಣಿ ಆಗಿರುವ ಆಸ್ತಿಗಳಿಗೆ ಬಿ ಖಾತೆ ನೀಡಲು ಮತ್ತು ಕಟ್ಟಡ ನಿರ್ಮಾಣ ನಕ್ಷೆ ಮಂಜೂರು ಮಾಡಲು ಕಾನೂನು ಇಲಾಖೆಯ ಅಭಿಪ್ರಾಯ ಕೇಳಲಾಗಿದೆ. ಅಲ್ಲಿಂದ ಸಲಹೆ ಬಂದ ಬಳಿಕ ಬಿ ಖಾತಾ ವ್ಯವಸ್ಥೆ ಮಾಡಲಾಗುವುದು.

– ಬೈರತಿ ಸುರೇಶ್ ನಗರಾಭಿವೃದ್ಧಿ ಸಚಿವ

ರುದ್ರಾಸ್ತ್ರದ ವಿಶೇಷತೆ ಏನು?

ರೈಲ್ವೆ ಅಧಿಕಾರಿಗಳ ಪ್ರಕಾರ ಆರು ರೇಕ್‌ಗಳನ್ನು ಪ್ರತ್ಯೇಕವಾಗಿ ಓಡಿಸುವುದರಿಂದ ಸಿಬ್ಬಂದಿ ವ್ಯವಸ್ಥೆ, ವೇಳಾಪಟ್ಟಿ ಮತ್ತು ಮಾರ್ಗನಿರ್ದೇಶನವನ್ನು ಆರು ಬಾರಿ ಪುನರಾವರ್ತಿಸಬೇಕಾಗಿತ್ತು. 'ರುದ್ರಾಸ್ತ್ರ' ಅವುಗಳನ್ನು ಒಟ್ಟಿಗೆ ನಿರ್ವಹಿಸುವ ರೈಲ್ವೆ ಸಮಯ, ಮಾನವಶಕ್ತಿ ಮತ್ತು ಕಾರ್ಯಾಚರಣೆಯ ವೆಚ್ಚವನ್ನು ಉಳಿಸಲು ಸಹಾಯ ಮಾಡಿದೆ. ವಿಧಾನವು ಸರಕು ಸಾಗಣೆಯನ್ನು ತ್ವರಿತಗೊಳಿಸುವ ಜತೆಗೆ ಹೆಚ್ಚು ಮಿತವ್ಯಯವನ್ನಾಗಿ ಮಾಡುತ್ತದೆ. ಇದು ಭಾರತದ ಲಾಜಿಸ್ಟಿಕ್ಸ್ ವಲಯಕ್ಕೆ ಉತ್ತೇಜನ ನೀಡಲಿದೆ. ಈ ಯೋಜನೆಗೆ ವಿಶೇಷ ತಾಂತ್ರಿಕ ಸಮನ್ವಯ ಮತ್ತು ನಿಯಂತ್ರಣದ ಅಗತ್ಯವಿದೆ. ಇದನ್ನು ಪೂರ್ವ ಮಧ್ಯ ರೈಲ್ವೆಯ ಡಿಡಿಯು ವಿಭಾಗವು ಯಶಸ್ವಿಯಾಗಿ ನಿರ್ವಹಿಸುತ್ತದೆ. ಸರಕು ಸಾಗಣೆ ವ್ಯಾಗನ್‌ಗಳನ್ನು ಕಾರ್ಯಾಚರಣೆಗಾಗಿ ಮರು ಜೋಡಿಸುವ ಮೊದಲು ದುರಸ್ತಿ ಮಾಡಲು ಮತ್ತು ತಾಂತ್ರಿಕವಾಗಿ ಪರಿಶೀಲಿಸಲು ಈ ವಿಭಾಗವು ಹೆಸರುವಾಸಿಯಾಗಿದೆ.

ನಾಗನ ನಂಟು

ಭಾರತದ ಅತಿ ಉದ್ದದ ರೈಲುಗಳಿಗೆ 'ನಾಗ'ನ ನಂಟಿದೆ. ಹಾವಿನಂತೆ ಬಳುಕಿ ಸಾಗುವ ರೈಲು ಬೋಗಿಗಳನ್ನು ಉದ್ದೇಶಿಸಿ ಭಾರತೀಯ ರೈಲ್ವೆ ನಾಗನ ಹೆಸರಿಟ್ಟಿದೆ. 2.8 ಕಿ.ಮೀ ಉದ್ದದ ಸರಕು ರೈಲಿಗೆ 'ಶೇಷನಾಗ್' ಎಂದು ಹೆಸರಿಡಲಾಗಿದೆ. ಇದೇ ರೀತಿ 3.5 ಕಿ.ಮೀ. ಉದ್ದದ ರೈಲಿಗೆ 'ಸೂಪರ್ ವಾಸುಕಿ' ಎಂದು ಹೆಸರಿಡಲಾಗಿದೆ. ಇದೀಗ 4.5 ಕಿ.ಮಿ. ಉದ್ದದ ರೈಲಿಗೆ ನಾಗನನ್ನು ಕೊರಳಿಗೆ ಧರಿಸಿದ ರುದ್ರನ ಹೆಸರು ಜೋಡಿಸಿ ರುದ್ರಾಸ್ತ್ರ ಎಂದು ಹೆಸರಿಡಲಾಗಿದೆ. ಭಾರತೀಯ ಸೇನೆಯ ಬತ್ತಳಿಕೆಯಲ್ಲಿರುವ ಬಾಂಬ್ ಹೊತ್ತು ಸಾಗಬಲ್ಲ ಡ್ರೋನ್‌ಗಳಿಗೂ ರುದ್ರಾಸ್ತ್ರ ಎಂದು ಹೆಸರಿಟ್ಟಿರುವುದು ಗಮನಾರ್ಹ.

ಏನಿದರ ವಿಶೇಷತೆ?

- ಏಷ್ಯಾದ ಅತಿ ಉದ್ದದ ಸರಕು ರೈಲು
- 345 ಬೋಗಿಗಳು, ಏಳು ಎಂಜಿನ್‌ಗಳು
- ಸರಾಸರಿ 40 ಕಿ. ಮೀ. ವೇಗದಲ್ಲಿ ಸಂಚಾರ
- ಪ್ರತಿ 59 ಬೋಗಿಗಳ ನಂತರ ಎರಡು ಎಂಜಿನ್
- ಪ್ರತಿ ವ್ಯಾಗನ್‌ಗೆ 72 ಟನ್ ಸರಕು ಭರ್ತಿ ಸಾಮರ್ಥ್ಯ
- ಸಾಮಾನ್ಯ ರೈಲುಗಳಿಗಿಂತ 10 ಪಟ್ಟು ದೊಡ್ಡದು

ಸರಕು ಸಾಗಾಟದಲ್ಲಿ ಸಂಚಲನ ಸೃಷ್ಟಿಸಿದ ರುದ್ರಾಸ್ತ್ರ ರೈಲು

4.5 ಕಿಮೀ ಉದ್ದದ ರೈಲಿಗೆ ಭಾರಿ ಬೇಡಿಕೆ

ಈ ರೈಲಿನ ಉದ್ದವೇ ಬರೋಬ್ಬರಿ 4.5 ಕಿಲೋಮೀಟರ್. ನಿಮ್ಮ ಆಯ್ಕೆ ರೈಲು ಬೋಗಿಯನ್ನು ಪತ್ತೆ ಮಾಡಬೇಕಿದ್ದರೂ ಅರ್ಧ ಗಂಟೆ ಬೇಕು. ಈ ರೈಲಿನ ಮೂಲಕ ಭಾರತೀಯ ರೈಲ್ವೆ ಹೊಸ ಇತಿಹಾಸ ಬರೆಯಲು ಹೊರಟಿದೆ. ಹಾಗೆಂದು ಇದು ಪ್ರಯಾಣಿಕ ರೈಲು ಅಲ್ಲ. ಭಾರತೀಯ ರೈಲ್ವೆ ಸರಕು ಸಾಗಣೆ ವಿಭಾಗದಲ್ಲಿ ಏಷ್ಯಾದಲ್ಲೇ ಅತಿ ಉದ್ದದ ರೈಲು ಆರಂಭಿಸಲು ಮುಂದಾಗಿದೆ. ಈ ರೈಲು ಸಾಮಾನ್ಯ ರೈಲುಗಳಿಗಿಂತ 10 ಪಟ್ಟು ದೊಡ್ಡದು. ಸಾಮಾನ್ಯವಾಗಿ ರೈಲುಗಳಿಗೆ ಡಬಲ್ ಎಂಜಿನ್‌ಗಳಿದ್ದರೆ ಇದಕ್ಕೆ ಏಳು ಎಂಜಿನ್‌ಗಳಿವೆ. ಈ ರೈಲಿನ ಹೆಸರು 'ರುದ್ರಾಸ್ತ್ರ'. ಉತ್ತರಪ್ರದೇಶ-ಜಾರ್ಖಂಡ್ ನಡುವೆ ಈ ರೈಲು ಆರಂಭಿಸುವ ಮೂಲಕ ಭಾರತೀಯ ರೈಲ್ವೆ ಹೊಸ ಇತಿಹಾಸ ರಚಿಸಿದೆ. ಎರಡು ವಾರಗಳ ಹಿಂದೆ ಆರಂಭವಾದ ಈ ರೈಲಿಗೆ ಬೇರೆ ಬೇರೆ ರಾಜ್ಯಗಳಿಂದ ಬೇಡಿಕೆ ಬಂದಿದೆ.

354 ಸರಕು ಸಾಗಣಾ ಬೋಗಿಗಳನ್ನು ಹೊಂದಿರುವ, ಏಳು ಪ್ರಬಲ ಎಂಜಿನ್‌ಗಳ ನೂಕುಬಲವಿರುವ ರೈಲು ಉತ್ತರ ಪ್ರದೇಶದ ಗಂಜ್ ಖ್ವಾಜ ನಿಲ್ದಾಣದಿಂದ ಜಾರ್ಖಂಡ್‌ನ ಗರ್ಹ್ವಾ ರಸ್ತೆ ನಿಲ್ದಾಣ ನಡುವಣ 200 ಕಿ.ಮೀ. ದೂರವನ್ನು ಗಂಟೆಗೆ ಸರಾಸರಿ 40 ಕಿ. ಮೀ. ವೇಗದಲ್ಲಿ ಐದು ಗಂಟೆಗಳಲ್ಲಿ ಕ್ರಮಿಸುವ ಮೂಲಕ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದೆ.

ಇದು ಹೊಸ ಪ್ರಯೋಗವಾಗಿದ್ದು, ಸರಕು ಸಾಗಣೆ ಮತ್ತು ಲೋಡಿಂಗ್ ಅನ್ನು ತ್ವರಿತಗೊಳಿಸುವ ಜತೆಗೆ ಇಂಧನ, ಮಾನವ ಸಂಪನ್ಮೂಲಗಳನ್ನು ಉಳಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಸಮಯದ ಉಳಿತಾಯವಾಗಲಿದೆ ಎಂದು ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕ (ಡಿಆರ್‌ಎಂ) ಉದಯ್ ಸಿಂಗ್ ಮೀನಾ ಹೇಳಿದ್ದಾರೆ. ಆದರೆ ತೀರಾ ಅಂಕುಡೊಂಕಾದ, ಏರು ತಗ್ಗುಗಳಿಂದ ಕೂಡಿದ ರೈಲು ಮಾರ್ಗಗಳಲ್ಲಿ ಈ ಸೇವೆ ಆರಂಭಿಸಲು ಸಾಧ್ಯವಿಲ್ಲ. ನೇರ ಮಾರ್ಗಗಳಲ್ಲಿ ಮಾತ್ರ ಈ ಸೇವೆ ಆರಂಭಿಸಲು ಸಾಧ್ಯ.

'ರುದ್ರಾಸ್ತ್ರ'ದ ರೈಲಿನ ಕಾರ್ಯಾಚರಣೆ ಹೇಗಿದೆ ?

ಪೂರ್ವ ಮಧ್ಯ ರೈಲ್ವೆಯ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ವಿಭಾಗವು ಆರು ಬಾಕ್ಸ್ ರೇಕ್‌ಗಳನ್ನು ಜೋಡಿಸಿ ಏಳು ಎಂಜಿನ್‌ಗಳೊಂದಿಗೆ 4.5 ಕಿಮೀ ಉದ್ದದ 'ರುದ್ರಾಸ್ತ್ರ'ವನ್ನು ರೂಪಿಸಿದೆ. 354 ವ್ಯಾಗನ್‌ಗಳ 'ರುದ್ರಾಸ್ತ್ರ' ಭಾರತೀಯ ರೈಲ್ವೆ ನಿರ್ವಹಿಸುವ ಅತಿ ಉದ್ದದ ಸರಕು ರೈಲು ಮಾತ್ರವಲ್ಲದೆ ಏಷ್ಯಾದಲ್ಲಿಯೇ ಅತಿ ದೊಡ್ಡದಾಗಿದೆ. ಪ್ರಯಾಣದ ಸಮಯದಲ್ಲಿ ಪ್ರತಿ ವ್ಯಾಗನ್‌ಗೆ 72 ಟನ್ ಸರಕುಗಳನ್ನು ತುಂಬಿಸಲಾಗಿತ್ತು. ಪ್ರತಿ 59 ಬೋಗಿಗಳ ನಂತರ ಎರಡು ಎಂಜಿನ್‌ಗಳನ್ನು ಮುಂಭಾಗದಲ್ಲಿ ಜೋಡಿಸುವ ಮತ್ತು ಪ್ರತಿ ರ್‍ಯಾಕ್‌ನೊಂದಿಗೆ ಒಂದು ಎಂಜಿನ್ ಇರುವ ರೀತಿಯಲ್ಲಿ ರೈಲನ್ನು ಸಿದ್ಧಪಡಿಸಲಾಗಿದೆ. 345 ವ್ಯಾಗನ್‌ಗಳನ್ನು ಚಲಾಯಿಸಲು ಒಟ್ಟು ಏಳು ಎಂಜಿನ್‌ಗಳನ್ನು ಬಳಸಲಾಯಿತು.

ವಿಶ್ವದ ಅತಿ ಉದ್ದದ ಸರಕು ರೈಲು ಯಾವುದು?

ಆಸ್ಟ್ರೇಲಿಯಾದಲ್ಲಿ ನಿರ್ಮಾಣವಾದ ಸರಕು ರೈಲು ವಿಶ್ವದ ಅತಿ ಉದ್ದದ ಸರಕು ರೈಲು ಎಂದು ಪ್ರಸಿದ್ಧಿ ಪಡೆದಿದೆ. 24,123 ಅಡಿ ಉದ್ದವಿರುವ 8 ಶಕ್ತಿಶಾಲಿ ಡೀಸಲ್-ವಿದ್ಯುತ್ ಎಂಜಿನ್ ಬಲದ 682 ಬೋಗಿಗಳ ಈ ರೈಲು ಗಿನ್ನೆಸ್ ದಾಖಲೆ ಸೇರಿದೆ.

ಆಸ್ಟ್ರೇಲಿಯಾದಲ್ಲಿ ಬಿಎಚ್‌ಪಿ ಕಬ್ಬಿಣದ ಅದಿರು ಸಾಗಣೆಗೆ ಇದನ್ನು ಬಳಕೆ ಮಾಡಲಾಗಿದೆ. 2001ರ ಜೂನ್ 21ರಂದು ಈ ರೈಲು ಕಂಪನಿಯ ನ್ಯೂಮನ್ ಮತ್ತು ಯಾಂಡಿ ಗಣಿಗಳಿಂದ ಪಶ್ಚಿಮ ಆಸ್ಟ್ರೇಲಿಯಾದ ಪೋರ್ಟ್ ಹೆಡ್ಲ್ಯಾಂಡ್‌ಗೆ 275 ಕಿ. ಮೀ. ಪ್ರಯಾಣಿಸಿತು. 99,732.1 ಮೆಟ್ರಿಕ್ ಟನ್ ತೂಕದ ಈ ರೈಲು ಇದುವರೆಗಿನ ಅತ್ಯಂತ ಭಾರದ ರೈಲೂ ಹೌದು. ಇದು 5,648 ಚಕ್ರಗಳನ್ನು ಹೊಂದಿತ್ತು ಎಂದು ಗಿನ್ನೆಸ್ ಪುಸ್ತಕದಲ್ಲಿ ದಾಖಲಾಗಿದೆ.

ರೈಲು ಮಾರ್ಗದಲ್ಲಿ ಕಾರು ಓಡಿಸಿ!

ಕೊಂಕಣ ರೈಲ್ವೆಯಿಂದ ಇಂದಿನಿಂದ ರೋ-ರೋ ಕಾರು ಸೇವೆ

1999ರಿಂದ ಭಾರತದಲ್ಲಿ ಟ್ರಕ್‌ಗಳ ರೋಲ್ ಆನ್- ರೋಲ್ ಆಫ್ (ರೋ-ರೋ) ಸೇವೆ ನೀಡುತ್ತಿರುವ ಕೊಂಕಣ ರೈಲ್ವೆ ನಿಗಮ, ಇದೀಗ ಈ ಸೇವೆಯನ್ನು ಖಾಸಗಿ ಕಾರು ಮಾಲಕರಿಗೂ ವಿಸ್ತರಿಸಲು ಸಿದ್ಧವಾಗಿದೆ. ಸದ್ಯಕ್ಕೆ ಮಹಾರಾಷ್ಟ್ರದ ಕೋಲಾಡ್ ಹಾಗೂ ಗೋವಾದ ವೆರ್ಣ ನಡುವೆ ಈ ಸೇವೆಯನ್ನು ಆಗಸ್ಟ್ 23ರಿಂದ ಪ್ರಾರಂಭಿಸಲು ನಿರ್ಧರಿಸಿದೆ. ಮುಂದೆ ಈ ಸೇವೆ ವಿಸ್ತರಣೆಗೊಂಡರೆ ಕಾರನ್ನು ರೈಲಿಗೇರಿಸಿ ಮಂಗಳೂರಿನಿಂದ ಮುಂಬಯಿ ತನಕವೂ ಪಯಣಿಸಬಹುದು. ಇದೇ ರೀತಿ ಬೆಂಗಳೂರಿನಿಂದ ಮಂಗಳೂರಿಗೂ ಪಯಣಿಸಬಹುದು.

ಪಶ್ಚಿಮ ಘಟ್ಟ ದುರ್ಗಮ ಪ್ರದೇಶದಲ್ಲಿ ಸರಕುಗಳಿಂದ ತುಂಬಿದ ಟ್ರಕ್‌ಗಳನ್ನು ಮುಂಬಯಿಯಿಂದ ಮಂಗಳೂರುವರೆಗೆ ಸುಲಭದಲ್ಲಿ ತಲುಪಿಸುತ್ತಿದ್ದ ರೋ-ರೋ ವ್ಯವಸ್ಥೆ ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ವಿವಿಧ ರಸ್ತೆಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವಲ್ಲಿ ಸಫಲವಾಗಿತ್ತು. ಇದರೊಂದಿಗೆ ಇಂಧನ ಬಳಕೆ ಉಳಿತಾಯ ಹಾಗೂ ವಾಯುಮಾಲಿನ್ಯದಿಂದಲೂ ವಾತಾವರಣವನ್ನು ರಕ್ಷಿಸಿತ್ತು.

ರೋ-ರೋ ಟ್ರಕ್ ಸೇವೆಯ ಯಶಸ್ಸಿನಿಂದ ಉತ್ತೇಜಿತವಾದ ಕೊಂಕಣ ರೈಲ್ವೆ ಇದೀಗ ಕಾರು ಸೇವೆಯನ್ನು ಪ್ರಾರಂಭಿಸಲಿದೆ. ಆ.23ರಿಂದ ಕೋಲಾಡ್ ಹಾಗೂ ಆ.24ರಿಂದ ವೆರ್ಣದಿಂದ ಈ ಸೇವೆ ಆರಂಭಗೊಳ್ಳಲಿದ್ದು, ದಿನ ಬಿಟ್ಟು ದಿನ ಈ ಸೇವೆ ಸೆ.11ರವರೆಗೆ ಲಭ್ಯವಿರುತ್ತದೆ. ಪ್ರತಿದಿನ ಸಂಜೆ 5ಗಂಟೆಗೆ ಆಯಾ ನಿಲ್ದಾಣದಿಂದ ಹೊರಡುವ ರೈಲು ಮರುದಿನ ಮರುದಿನ ಮುಂಜಾನೆ 5 ಗಂಟೆಗೆ ತನ್ನ ಗುರಿ ತಲುಪಲಿದೆ. ಈ ಸೇವೆಯನ್ನು ಪಡೆಯಲು ಇಚ್ಛಿಸುವ ಗ್ರಾಹಕರು ಮೂರು ಗಂಟೆ ಮೊದಲೇ ನಿಲ್ದಾಣಗಳಲ್ಲಿ ಹಾಜರಿರಬೇಕು ಎಂದು ತಿಳಿಸಿದೆ.

ವಿಶೇಷವಾಗಿ ವಿನ್ಯಾಸಗೊಳಿಸಿದ ರೇಕ್‌ಗಳಲ್ಲಿ 40 ಕಾರುಗಳಿಗೆ ಇರಲು ಅವಕಾಶಗಳಿವೆ. ಇದಕ್ಕಾಗಿ ಪ್ರತಿ ಕಾರಿಗೆ ಜಿಎಸ್‌ಟಿ ಸೇರಿ 7,875 ರೂ. ಚಾರ್ಜ್ ಮಾಡಲಾಗುತ್ತದೆ. ಇದರೊಂದಿಗೆ ಪ್ರತಿ ಕಾರಿಗೆ ಮೂವರು ರೈಲಿನಲ್ಲಿರುವ 3ಎಸಿ ಕೋಚ್‌ನಲ್ಲಿ ಅಥವಾ ಸೀಟಿಂಗ್ ಕೋಚ್‌ನಲ್ಲಿ ನಿರ್ದಿಷ್ಟ ಮೊತ್ತ ನೀಡಿ ಪ್ರಯಾಣಿಸಬಹುದು. ಪ್ರತಿ ಟ್ರಿಪ್‌ಗೆ ಕನಿಷ್ಠ 16 ಕಾರುಗಳು ಬುಕ್ ಆಗಿರಬೇಕು. ಇಲ್ಲದಿದ್ದರೆ ಆ ಟ್ರಿಪ್‌ನ್ನು ರದ್ದುಪಡಿಸಲಾಗುತ್ತದೆ ಹಾಗೂ ಮುಂಗಡ ಹಣವನ್ನು ಗ್ರಾಹಕರಿಗೆ ಹಿಂದಿರುಗಿಸಲಾಗುತ್ತದೆ ಎಂದು ಕೊಂಕಣ ರೈಲ್ವೆ ತಿಳಿಸಿದೆ.

ದಾಖಲೆ ಸೇರಲು ಕರಾವಳಿ ಬಾಲೆ ಸಜ್ಜು

ಸತತ 216 ಗಂಟೆಗಳ ಭರತನಾಟ್ಯ | 'ಗೋಲ್ಡನ್ ಬುಕ್' ಸೇರಲು ವಿದುಷಿ ದೀಕ್ಷಾ ತವಕ

ಉಡುಪಿ: ಯಕ್ಷಗಾನ, ಭೂತ ಕೋಲ, ಹುಲಿ ವೇಷ, ನಲಿಕೆ, ನಾಗ ತಂಬಿಲ ಮುಂತಾದ ಆರಾಧನಾ ಪದ್ಧತಿಗಳಿರುವ ತುಳುನಾಡಿನಲ್ಲಿ ನೃತ್ಯ, ನರ್ತನ ಜನರ ಬದುಕಿನ ಅವಿಭಾಜ್ಯ ಅಂಗ. ಇದೀಗ ಕರಾವಳಿಯ ಇಬ್ಬರು ಬಾಲೆಯರು ಅತಿ ಹೆಚ್ಚು ಗಂಟೆಗಳ ಭರತ ನಾಟ್ಯ ಪ್ರದರ್ಶನದ ಮೂಲಕ ವಿಶ್ವ ದಾಖಲೆ ಸೇರಲು ಸಜ್ಜಾಗಿದ್ದಾರೆ.

ಕಳೆದ ತಿಂಗಳು ಮಂಗಳೂರಿನ ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ ಅಂತಿಮ ವರ್ಷದ ಬಿಎ ವಿದ್ಯಾರ್ಥಿನಿ ರೆಮೋನಾ ಎವೆಟ್ಟೆ ಪಿರೇರಾ, ನಿರಂತರ 170 ಗಂಟೆಗಳ ಕಾಲ (7ದಿನ) ಭರತನಾಟ್ಯ ಪ್ರದರ್ಶಿಸಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ತಮ್ಮ ಹೆಸರು ದಾಖಲಿಸಿದ್ದರು. ಈ ಏಳು ದಿನಗಳಲ್ಲಿ, ರೆಮೋನಾ ಪ್ರತಿ ಮೂರು ಗಂಟೆಗೊಮ್ಮೆ 15 ನಿಮಿಷಗಳ ವಿರಾಮದೊಂದಿಗೆ ನಿರಂತರವಾಗಿ ಭರತನಾಟ್ಯ ಪ್ರದರ್ಶಿಸಿದ್ದರು.

ಈ ಹಿಂದೆ ಮಹಾರಾಷ್ಟ್ರದ ಸೃಷ್ಟಿ ಸುಧೀರ್ ಜಗತಾಪ್ ಎಂಬ 16 ವರ್ಷದ ಬಾಲಕಿ ನಿರಂತರ 127 ಗಂಟೆ ಕಥಕ್ ನೃತ್ಯ ಪ್ರದರ್ಶನ ಮಾಡಿ ಗಿನ್ನೆಸ್ ದಾಖಲೆ ಸೇರಿದ್ದರು. ಮಂಗಳೂರಿನ ರೆಮೋನಾ ಸತತ ಎರಡು ವರ್ಷಗಳ ತಯಾರಿ ಮೂಲಕ ಈ ದಾಖಲೆಯನ್ನು ಮುರಿದಿದ್ದರು. ಇದೀಗ ನೆರೆ ಜಿಲ್ಲೆ ಉಡುಪಿಯ ವಿದ್ಯಾರ್ಥಿನಿ ವಿದುಷಿ ದೀಕ್ಷಾ ವಿ. ಅವರು ದೀಕ್ಷಾ ಇನ್ನೂ ಒಂದು ಹೆಜ್ಜೆ ಮುಂದೆ ಸಾಗಿ 9 ದಿನಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ಈ ಹಿಂದೆ 24 ಗಂಟೆಗಳ ಕಾಲ ನಿರಂತರವಾಗಿ ಹಾಡುವ ಮೂಲಕ ಉಡುಪಿಯವರೇ ಆದ ಯಶವಂತ್ ಎಂ. ಜಿ. ದೀಕ್ಷಾಳ ಈ ಸಾಧನೆಗೆ ಪ್ರೇರಣೆ.

ರೆಮೋನಾ ಅವರ ದಾಖಲೆ ಮುರಿಯುವುದು ತಮ್ಮ ಉದ್ದೇಶವಲ್ಲ. ಆದರೆ ನೃತ್ಯದಲ್ಲಿ ಸಾಧನೆ ಮಾಡಬೇಕೆಂಬ ಉದ್ದೇಶದಿಂದ ಈ ಸಾಹಸಕ್ಕೆ ಕೈ ಹಾಕಿರುವುದಾಗಿ ದೀಕ್ಷಾ ತಿಳಿಸಿದ್ದಾರೆ. ನಿರಂತರ 216 ಗಂಟೆಗಳ ಕಾಲ ಭರತನಾಟ್ಯ ಪ್ರದರ್ಶನದ ನೀಡುವ ದೀಕ್ಷಾ ಅವರ ಸಂಕಲ್ಪ ಈಡೇರಿದರೆ ನೃತ್ಯದಲ್ಲಿ ಹೊಸ ದಾಖಲೆ ಸೃಷ್ಟಿಯಾಗಲಿದೆ.

ಈಕೆಯ ನೃತ್ಯ ಮ್ಯಾರಥಾನ್ ಆಗಸ್ಟ್ 21ರಂದು ಸಂಜೆ 3.30 ಕ್ಕೆ ಅಜ್ಜರಕಾಡಿನ ಡಾ. ಜಿ. ಶಂಕರ್ ಮಹಿಳಾ ಮಹಾವಿದ್ಯಾಲಯದ ಸ್ನಾತಕೋತ್ತರ ಸಭಾಭವನದಲ್ಲಿ ಆರಂಭಗೊಂಡಿದ್ದು, ಆಗಸ್ಟ್ 30ರಂದು ಸಂಪನ್ನಗೊಳ್ಳಲಿದೆ. ಕಾರ್ಯಕ್ರಮವನ್ನು ಮಾಜಿ ಶಾಸಕ ರಘುಪತಿ ಭಟ್ ಹಾಗೂ ಗಣ್ಯ ಅತಿಥಿಗಳು ಉದ್ಘಾಟಿಸಿದರು.

ಬಡ ಕುಟುಂಬದ ದೀಕ್ಷಾ ಎಳವೆಯಿಂದಲೇ ಭರತನಾಟ್ಯ ಅಭ್ಯಾಸ ಆರಂಭಿಸಿದ್ದು, ವಿದ್ವತ್ ಪರೀಕ್ಷೆಯನ್ನು ಈಗಾಗಲೇ ತೇರ್ಗಡೆಯಾಗಿ ಭರತನಾಟ್ಯ ತರಗತಿಯನ್ನೂ ನಡೆಸುತ್ತಿದ್ದಾರೆ. ಇದರ ಜೊತೆಗೆ ತಮ್ಮ ಪದವಿ ಶಿಕ್ಷಣವನ್ನೂ ಸಂಭಾಳಿಸುತ್ತಿದ್ದಾರೆ. ಈಕೆಯ ಸಾಧನೆಗೆ ಹೆತ್ತವರು, ಗುರು ಹಿರಿಯರು, ಸ್ಥಳೀಯ ದಾನಿಗಳು ಬೆಂಗಾವಲಾಗಿದ್ದಾರೆ.

ದೀಕ್ಷಾಳ ಗುರು ಶ್ರೀಧರ ಬನ್ನಾಜೆ ಮಾತನಾಡಿ, ನನ್ನ ವಿದ್ಯಾರ್ಥಿನಿ ದೀಕ್ಷಾ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ನಿರ್ಮಿಸಲು ಯತ್ನಿಸುತ್ತಿದ್ದು, ಅವರು ಎಲ್ಲರ ಆಶೀರ್ವಾದಕ್ಕೆ ಅರ್ಹರು. ಅವರು ಮೊದಲು ನನ್ನ ಬಳಿಗೆ ಬಂದಾಗ, ನಾನು ಮೊದಲು ವಿದ್ವತ್ ಪರೀಕ್ಷೆ ಪೂರೈಸಿ ಸಿದ್ಧತೆ ಮಾಡಲು ಸಲಹೆ ನೀಡಿದೆ. ಇಂತಹ ಸಮರ್ಪಿತ ವಿದ್ಯಾರ್ಥಿನಿಯನ್ನು ಹೊಂದಿರುವುದು ನಮ್ಮ ಬೋಧನೆಗಳ ನಿಜವಾದ ಫಲ ಎಂದು ಹೇಳಿದ್ದಾರೆ.

> ದೀಕ್ಷಾ ರೆಕಾರ್ಡ್ ಸೃಷ್ಟಿಸುವ ಉದ್ದೇಶದಿಂದ ಈ ಸವಾಲನ್ನು ಕೈಗೆತ್ತಿಕೊಂಡು ಒಂಬತ್ತು ದಿನ ನೃತ್ಯ ಮಾಡುವ ಪ್ರತಿಜ್ಞೆ ಮಾಡಿದ್ದಾರೆ. ಅವರು ಇದಕ್ಕಾಗಿ ಉತ್ತಮವಾಗಿ ತಯಾರಾಗಿದ್ದಾರೆ. ಮೊದಲು ಅವರು ಈ ಆಲೋಚನೆಯೊಂದಿಗೆ ಬಂದಾಗ ನನಗೆ ಆಶ್ಚರ್ಯವಾಯಿತು. ಆದರೆ ಧೈರ್ಯ, ದೃಢನಿಶ್ಚಯ ಮತ್ತು ಆತ್ಮವಿಶ್ವಾಸದಿಂದ ಎಲ್ಲವೂ ಸಾಧ್ಯ. ಅವರ ಪ್ರಯತ್ನ ಯಶಸ್ವಿಯಾಗಿ ಉಡುಪಿ ಜಿಲ್ಲೆಯ ಹೆಮ್ಮೆ ಹೆಚ್ಚಿಸಲಿ ಎಂದು ಹಾರೈಸುತ್ತೇನೆ
>
> -ರಘುಪತಿ ಭಟ್ ಮಾಜಿ ಶಾಸಕ

ಅಪ್ಪಾಗೆ ಮರಣೋತ್ತರ ಪದ್ಮಶ್ರೀ ಸಲ್ಲಬೇಕು

ರಾಷ್ಟ್ರ, ರಾಜ್ಯ ನಾಯಕರಿಗೆ ಒಕ್ಕೊರಲ ಮನವಿ | ಕಲಬುರಗಿ ವಿಮಾನ ನಿಲ್ದಾಣಕ್ಕೆ ಅಪ್ಪಾಜಿ ಹೆಸರಿಡಿ
ರಾಜ್ಯ ಸರಕಾರ ಕರ್ನಾಟಕ ರತ್ನವನ್ನೂ ನೀಡಲಿ | ಸಂಘಟನೆಗಳು, ಮುಖಂಡರಿಂದ ಪ್ರಬಲ ಒತ್ತಡ

ಜಿಲ್ಲಾ ನೋಟ

ದೇವೇಂದ್ರ ಜಾಡಿ, ಕಲಬುರಗಿ

ಇತ್ತೀಚಿಗೆ ಲಿಂಗೈಕ್ಯರಾದ ಶ್ರೀಶರಣಬಸವೇಶ್ವರ ಸಂಸ್ಥಾನದ 8ನೇ ಪೀಠಾಧಿಪತಿ ಡಾ. ಶರಣ ಬಸವಪ್ಪ ಅಪ್ಪ ಅವರ ಸಾಮಾಜಿಕ ಕಳಕಳಿ, ಶೈಕ್ಷಣಿಕ ಕ್ರಾಂತಿ ಗುರುತಿಸಿ ಆಳುವ ಸರಕಾರ ಗಳು ಮರಣೋತ್ತರ 'ಪದ್ಮಶ್ರೀ ಅಥವಾ ಪದ್ಮವಿಭೂಷಣ ಪ್ರಶಸ್ತಿ 'ನೀಡಬೇಕು ಎನ್ನುವ ಕೂಗು ಭಕ್ತ ವೃಂದದಲ್ಲಿ ಜೋರಾಗಿ ಕೇಳಿ ಬರುತ್ತಿದೆ.

ಶೈಕ್ಷಣಿಕ ಕ್ಷೇತ್ರದ ಕ್ರಾಂತಿ

ಸುಮಾರು 50 ವರ್ಷಗಳ ಕಾಲ ಕಲ್ಯಾಣ ಕರ್ನಾಟಕದಲ್ಲಿ ಅಪ್ಪಾಜಿ ಶೈಕ್ಷಣಿಕ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿದ್ದಾರೆ. ಅವರ ಸೇವಾ ಹಾದಿ ಮತ್ತು ತ್ಯಾಗದ ಬದುಕಿಗೆ ಈವರೆಗೆ ಯಾವ ಸರಕಾರಗಳಿಂದ ಯಾವುದೇ ಸೂಕ್ತ ಗೌರವ ದೊರಕಿಲ್ಲ. ಹೀಗಾಗಿ 'ಮರಣೋತ್ತರ ಪದ್ಮಶ್ರೀ' ಅಥವಾ ಪದ್ಮವಿಭೂಷಣ ಪ್ರಶಸ್ತಿ ನೀಡಬೇಕು' ಎಂಬ ಕೂಗು ಭಕ್ತರಿಂದ, ರಾಜಕೀಯ ಮುಖಂಡರಿಂದ ಮತ್ತು ಸಾಮಾಜಿಕ ಕಾರ್ಯಕರ್ತರಿಂದ ಪ್ರಬಲವಾಗಿ ಎದ್ದಿದೆ.

ಕೇಂದ್ರದ ಮೇಲೆ ಒತ್ತಡ

ಡಾ. ಶರಣಬಸವಪ್ಪ ಅಪ್ಪ ತಮ್ಮ ಪೀಠಾಧಿಪತ್ಯವನ್ನು ಕೇವಲ ಧಾರ್ಮಿಕ ಮಾರ್ಗದರ್ಶನಕ್ಕೆ ಸೀಮಿತಗೊಳಿಸದೇ, ಸಮಾಜ ಪರಿವರ್ತನೆಗೆ ಬಳಸಿಕೊಂಡರು. ಶಿಕ್ಷಣ, ಅನ್ನ-ದಾಸೋಹ, ಅಸಹಾಯಕರಿಗೆ ಆಶ್ರಯ ಇವುಗಳನ್ನು ತಮ್ಮ ಬದುಕಿನ ಭಾಗವನ್ನಾಗಿ ಮಾಡಿಕೊಂಡರು. ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಶಾಲೆ, ಕಾಲೇಜು, ವಸತಿನಿಲಯ ಕಟ್ಟಿ ಬೆಳೆಸಿದ್ದಾರೆ. ಅವರ ಹೆಸರಿಗೆ ತಕ್ಕಂತೆ ರಾಷ್ಟ್ರದ ಗೌರವ ಸಲ್ಲಬೇಕು ಎಂಬ ಒತ್ತಡ ಕೇಂದ್ರ ಸರಕಾರದ ಮೇಲೆ ಅನೇಕ ಮುಖಂಡರು ಹೇರುತ್ತಿದ್ದಾರೆ.

'ಕರ್ನಾಟಕ ರತ್ನ' ಪ್ರಶಸ್ತಿ

ಕರ್ನಾಟಕದಲ್ಲಿ ಈಗಾಗಲೆ ಹಲವು ಧಾರ್ಮಿಕ, ಸಾಂಸ್ಕೃತಿಕ ವೀರರನ್ನು 'ಕಾಯಕ ದಾಸೋಹ ರತ್ನ' 'ಕರ್ನಾಟಕ ರತ್ನ'ಗಳಂಥ ಪುರಸ್ಕಾರ ನೀಡಿ ಗೌರವಿಸಲಾಗಿದೆ. ಇದೇ ರೀತಿ ಡಾ. ಶರಣಬಸವಪ್ಪ ಅಪ್ಪರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಬೇಕೆಂಬ ಬೇಡಿಕೆ ಬಲವಾಗಿ ಕೇಳಿ ಬರುತ್ತದೆ. ಜತೆಗೆ ಕಲ್ಯಾಣ ಕರ್ನಾಟಕದ ಜನಪ್ರತಿನಿಧಿಗಳು ಸದನದಲ್ಲಿ ಈ ಬಗ್ಗೆ ಧ್ವನಿ ಎತ್ತಿ ಸರಕಾರದ ಗಮನ ಸೆಳೆದಿದ್ದಾರೆ.



ವಿಮಾನ ನಿಲ್ದಾಣಕ್ಕೆ ಶರಣಬಸವಪ್ಪ ಹೆಸರಿಡಿ

ಕಲಬುರಗಿ ವಿಮಾನ ನಿಲ್ದಾಣಕ್ಕೆ ಡಾ. ಶರಣಬಸವಪ್ಪ ಅಪ್ಪ ಅವರ ಹೆಸರು ನೀಡುವಂತೆ ಭಕ್ತರು, ರಾಜಕೀಯ ನಾಯಕರು ಹಾಗೂ ವಿವಿಧ ಸಂಘಟನೆಗಳು ಆಗ್ರಹಿಸಿವೆ. ಅಪ್ಪಾಜಿ ಸಮಾಜ ಸೇವಕ, ಕಾಯಕ- ದಾಸೋಹ ತತ್ತ್ವದ ಹರಿಕಾರರಾಗಿದ್ದು, ಅವರ ಸ್ಮರಣಾರ್ಥ ವಿಮಾನ ನಿಲ್ದಾಣಕ್ಕೆ ಹೆಸರಿಡುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತವಾಗಿದೆ. ಈ ಕುರಿತು ರಾಜ್ಯ ಮತ್ತು ಕೇಂದ್ರ ಸರಕಾರಗಳು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯ ವ್ಯಕ್ತವಾಗಿದೆ.

ಸಾಮೂಹಿಕ ಆಗ್ರಹ

ಅಪ್ಪ ಲಿಂಗೈಕ್ಯ ನಂತರದ ದಿನಗಳಲ್ಲಿ ವಿವಿಧ ಕ್ಷೇತ್ರಗಳ ಮುಖಂಡರು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪುರಸ್ಕಾರ ನೀಡಬೇಕೆಂದು ಒತ್ತಾಯಿಸಿದ್ದಾರೆ. ಹಲವು ಸಂಘಟನೆಗಳು ಕೇಂದ್ರ, ರಾಜ್ಯ ಸರಕಾರಗಳಿಗೆ ಮನವಿ ಸಲ್ಲಿಸುವ ಚಟುವಟಿಕೆ ಆರಂಭಿಸಿವೆ. ಜಿಲ್ಲೆಯ ಶಾಸಕರು, ಪರಿಷತ್ ಸದಸ್ಯರು ಹಾಗೂ ವಿವಿಧ ಪಕ್ಷಗಳ ರಾಜಕೀಯ ನಾಯಕರು ಸರಕಾರಗಳಿಗೆ ಬಗ್ಗೆ ಮನವಿ ಮಾಡಿದ್ದಾರೆ.

> ಅಪ್ಪರ ಬದುಕು ತ್ಯಾಗ, ಶಿಕ್ಷಣ ಮತ್ತು ದಾಸೋಹದ ಹಾದಿಯ ಸಂಕೇತ. ಅವರಿಗೆ ಗೌರವ ಸಲ್ಲಿಸುವುದು ಕೇವಲ ಅಭಿಮಾನವಲ್ಲ. ಅದು ಸಮಾಜದ ಕರ್ತವ್ಯ. ಕೇಂದ್ರ , ರಾಜ್ಯ ಸರಕಾರಗಳು ತಕ್ಷಣವೇ ಪದ್ಮಶ್ರೀ ಹಾಗೂ ರಾಜ್ಯ ಮಟ್ಟದ ಕರ್ನಾಟಕ ರತ್ನ ಪ್ರಶಸ್ತಿಗಳನ್ನು ಘೋಷಿಸಬೇಕು.
>
> -ಮುತ್ತಣ್ಣ ನಡಗೇರಿ ಹೋರಾಟಗಾರ

> ಡಾ. ಶರಣ ಬಸವಪ್ಪ ಅಪ್ಪಾಜಿಯವರ ಸಮಾಜಸೇವೆ, ಕಾಯಕ-ದಾಸೋಹ ತತ್ತ್ವ ಮತ್ತು ಮಾನವೀಯ ಮೌಲ್ಯಗಳನ್ನು ಸ್ಮರಿಸಿ ಕಲಬುರಗಿ ವಿಮಾನ ನಿಲ್ದಾಣಕ್ಕೆ ಅವರ ಹೆಸರಿಡುವುದು ಜಿಲ್ಲೆಯ ಜನಾಭಿಲಾಷೆ. ಕಲ್ಯಾಣ ಕರ್ನಾಟಕದ ವಿಭಾಗೀಯ ಕೇಂದ್ರ ಸ್ಥಾನವಾದ ಕಲಬುರಗಿಯ ವಿಮಾನ ನಿಲ್ದಾಣಕ್ಕೆ ಲಿಂ. ಡಾ.ಶರಣ ಬಸವಪ್ಪ ಅಪ್ಪಾಜಿ ಅವರ ಹೆಸರಿಡಬೇಕು.
>
> - ಶ್ರೀಧರ್ ನಾಗನಹಳ್ಳಿ ಯುವ ಮುಖಂಡ

ಆರಾಮ

ಕರುಳಬಳ್ಳಿ ಕಟ್ ಮಾಡಬೇಕಿಲ್ಲ, USB ಕೇಬಲ್ Unplug ಮಾಡಿದರೆ ಸಾಕು! ಇದು ರೋಬೋಟ್ ಬೇಬಿ...



ಚಿತ್ತವಿಹಾರ

ಕಠಿಣ ಮಾರ್ಗದಿಂದ ಸಾಮರ್ಥ್ಯ ವೃದ್ಧಿ

ಯಶಸ್ಸಿನ ದಾರಿಯಲ್ಲಿ ಬರುವ ಕಷ್ಟಗಳೇ ಗುರಿ ತಲುಪಲು ಬೇಕಾದ ಸಾಮರ್ಥ್ಯವನ್ನು ನಮಗೊದಗಿಸುತ್ತವೆ. ಸಾಧನೆಯ ಹಾದಿಯನ್ನು ಸುಗಮಗೊಳಿಸಿದರೆ, ಸಾಮರ್ಥ್ಯ ಕುಗ್ಗಿ ಬಿಡುತ್ತದೆ. ಕಠಿಣ ಮಾರ್ಗವು ಕ್ಷಮತೆಯನ್ನು ವಿಸ್ತರಿಸಿಕೊಳ್ಳಲು ಸಹಕಾರಿ ಆಗುತ್ತದೆ. ಜೀವಶಾಸ್ತ್ರದ ಪ್ರಾಧ್ಯಾಪಕರು, ಪತಂಗದ ಹುಳು ಪಾತರಗಿತ್ತಿಯಾಗಿ ಪರಿವರ್ತನೆಯಾಗುವ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳಿಗೆ ವಿವರಿಸುತ್ತಿದ್ದರು. ಆ ಹುಳುವನ್ನು ತೋರಿಸಿ, ಗೂಡಿನಿಂದ ಹೊರಬರಲು ಶ್ರಮಿಸುತ್ತಿರುವುದನ್ನು ಪ್ರಾಧ್ಯಾಪಕರು ವಿವರಿಸುತ್ತಾ, 'ಇನ್ನು ಕೆಲವೇ ದಿನಗಳಲ್ಲಿ ಅದು ಹೊರಬರಲಿದೆ. ಅದನ್ನು ಸೂಕ್ಷ್ಮವಾಗಿ ಗಮನಿಸಿ, ಆದರೆ ಯಾರೂ ಸಹ ಅದಕ್ಕೆ ಹೊರಬರಲು ಸಹಾಯ ಮಾಡಬಾರದು' ಎಂದು ಎಚ್ಚರಿಸಿ, ತರಗತಿಯಿಂದ ಹೊರ ನಡೆದರು. ವಿದ್ಯಾರ್ಥಿಗಳು ಕುತೂಹಲದಿಂದ ಕಾಯುತ್ತಿದ್ದ ಸಮಯ ಹತ್ತಿರ ಬಂದೇ ಬಿಟ್ಟಿತು. ಗೂಡಿನಿಂದ ಹೊರಬರಲು ಪಾತರಗಿತ್ತಿ ಹರಸಾಹಸ ಪಡುತ್ತಿರುವುದು ಕಾಣಲಾರಂಭಿಸಿತು. ಮೊದಲು ತನ್ನ ದೇಹದ ಒಂದು ಭಾಗವನ್ನು ಹೊರತಳ್ಳಲು ಪ್ರಯತ್ನಿಸಿತು. ಅದು ಅಸಾಧ್ಯ ಎನಿಸಿದಾಗ, ಬೇರೊಂದು ರೀತಿಯಲ್ಲಿ ಪ್ರಯತ್ನ ಮುಂದುವರೆಸಿತು. ತನ್ನ ದೇಹವನ್ನು ಹಿಗ್ಗಿಸಿಕೊಂಡು, ಗೂಡಿನ ಕವಚವನ್ನು ಪುಡಿಯಾಗಿಸುವ ಯತ್ನದಲ್ಲಿ ತೊಡಗಿತು. ವಿದ್ಯಾರ್ಥಿಗಳು ತದೇಕ ಚಿತ್ತರಾಗಿ ಅದನ್ನೇ ಗಮನಿಸುತ್ತಿದ್ದರು.

ಅವರಲ್ಲಿ ಒಬ್ಬ ವಿದ್ಯಾರ್ಥಿಗೆ ಆ ಪಾತರಗಿತ್ತಿ ಪಡುತ್ತಿರುವ ಕಷ್ಟ ನೋಡಿ ಕನಿಕರ ಮೂಡಿತು. ಪ್ರಾಧ್ಯಾಪಕರು ನೀಡಿದ ಸೂಚನೆಯನ್ನು ಧಿಕ್ಕರಿಸಿ, ಆ ಪಾತರಗಿತ್ತಿಗೆ ಸಹಾಯ ಮಾಡಲು ಆ ಹುಳುವಿನ ಗೂಡನ್ನು ತಾನೇ ಒಡೆದುಬಿಟ್ಟ. ಅದರಿಂದಾಗಿ ಪಾತರಗಿತ್ತಿಗೆ ಪರಿಶ್ರಮ ಪಡಬೇಕಾದ ಅವಶ್ಯಕತೆಯೇ ಎದುರಾಗಲಿಲ್ಲ. ಶರೀರ, ಮನ- ಬುದ್ಧಿಗಳಿಗೆ ಕಸರತ್ತು ನೀಡಿ, ತನ್ನ ಸಾಮರ್ಥ್ಯ, ಶಕ್ತಿಯನ್ನು ಹೆಚ್ಚಿಸಿ ಕೊಂಡು, ಈ ಪ್ರಪಂಚವನ್ನು ಪ್ರವೇಶಿಸಬೇಕಿದ್ದ ಪಾತರಗಿತ್ತಿಗೆ ಅಂತಹ ಅವಕಾಶವೇ ದೊರೆಯಲಿಲ್ಲ. ಶಕ್ತಿಗುಂದಿ ಹೊಸ ಪರಿಸರವನ್ನು ಪ್ರವೇಶಿಸಿದ ಕೆಲ ಕ್ಷಣಗಳಲ್ಲಿ ಅದು ಸಾವನ್ನಪ್ಪಿತು. ಮರಳಿ ತರಗತಿಗೆ ಬಂದ ಪ್ರಾಧ್ಯಾಪಕರು ವಿಷಯ ತಿಳಿದು ಹೀಗೆಂದರು: 'ನೀವು ಆ ಹುಳುವಿಗೆ ಮಾಡಿದ್ದು ಸಹಾಯವಲ್ಲ. ಗೂಡಿನಿಂದ ಹೊರಬರಲು ಅದು ಪಡುವ ಶ್ರಮದಿಂದ ಅದರ ರೆಕ್ಕೆಗಳು ಬಲಿಷ್ಠಗೊಳ್ಳುತ್ತವೆ. ಅದು ಸೃಷ್ಟಿಯ ನಿಯಮ. ಪ್ರಕೃತಿದತ್ತವಾದ ಅದರ ಶಕ್ತಿಯನ್ನು ಕಂಡುಕೊಳ್ಳಲು ಬಿಡದೆ, ಅದರ ಸಾವಿಗೆ ಕಾರಣರಾದಿರಿ' ಎಂದರು.

ಕೆಲವು ಪೋಷಕರು ತಮ್ಮ ಮಕ್ಕಳು ಕಷ್ಟಪಡಬಾರದೆಂದು, ಹೆಜ್ಜೆ ಹೆಜ್ಜೆಗೂ ಅವರಿಗೆ ಸಹಾಯ ಮಾಡುತ್ತಾ, ಮಕ್ಕಳ ಸಾಮರ್ಥ್ಯ, ಕ್ಷಮತೆಗಳನ್ನು ಕ್ಷೀಣಿಸುವಂತೆ ಮಾಡಿಬಿಡುತ್ತಾರೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಆ ಮಕ್ಕಳು ಯಾವುದನ್ನೂ ಎದುರಿಸಲಾಗದೆ, ನಿಸ್ಸಾಯಕರಾಗಿ ಬಿಡುತ್ತಾರೆ. ಮುಂದೆ ಅದಕ್ಕಾಗಿ ದೊಡ್ಡ ಬೆಲೆ ತೆರಬೇಕಾಗುತ್ತದೆ. ಪ್ರೋತ್ಸಾಹ, ಸಹಾಯಗಳ ಅವಶ್ಯಕತೆಯನ್ನರಿತು, ಸಂದರ್ಭಾನುಸಾರ ನೀಡುತ್ತಾ ಸಾಗಿದರೆ ಯಶಸ್ಸು ಕಾಣಲು ಸಾಧ್ಯ.

• ಮಾಯಾ ಬಾಲಚಂದ್ರ

ಕೃತಕ ಬುದ್ಧಿಮತ್ತೆ ಯುಗದ ರೋಬೋಟ್ ಮಮ್ಮಿಗಳು

• ಸುರೇಂದ್ರ ಪೈ, ಭಟ್ಕಳ

ಇದು ದ್ವಾಪರ ಯುಗದ ಕಥೆ. ಕೃಷ್ಣನ ಮಗನಾದ ಸಾಂಬನು ಋಷಿಗಳನ್ನು ಪರೀಕ್ಷಿಸಲೆಂದು ತಾನು ಹೆಣ್ಣಿನ ವೇಷ ಧರಿಸಿ, ''ನನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಮಗು ಗಂಡೋ ಹೆಣ್ಣೋ?'' ಎಂದು ಕೇಳುತ್ತಾನೆ. ಸಾಂಬನ ಕುಚೇಷ್ಟೆಯಿಂದ ಕೋಪಗೊಂಡ ಋಷಿಗಳು, ''ನಿನ್ನ ಹೊಟ್ಟೆಯಲ್ಲಿ ಒನಕೆ ಹುಟ್ಟುತ್ತದೆ'' ಎನ್ನುತ್ತಾರೆ. ಅವರ ಶಾಪದಂತೆ ಪುರುಷನೊಬ್ಬ ಒನಕೆಗೆ ಜನ್ಮ ನೀಡುತ್ತಾನೆ. ಆ ಒನಕೆಯು ಯಾದವ ಕುಲವನ್ನೇ ನಾಶಮಾಡಿಬಿಡುತ್ತದೆ. ಅಂದು ಮನುಷ್ಯನ ಹೊಟ್ಟೆಯಲ್ಲಿ ನಿರ್ಜೀವ ಒನಕೆ ಜನ್ಮ ತಾಳಿದರೆ, ಇಂದು ನಿರ್ಜೀವ ರೋಬೋಟ್ ಹೊಟ್ಟೆಯಲ್ಲಿ ಮಗು ಹುಟ್ಟುವ ಸಮಯ ಸನ್ನಿಹಿತವಾಗಿದೆ.

ನೆಲವನ್ನು ಸ್ವಚ್ಛಗೊಳಿಸಲು, ಕಾರುಗಳನ್ನು ಓಡಿಸಲು, ಶಸ್ತ್ರಚಿಕಿತ್ಸೆಗಳಲ್ಲಿ ಸಹಾಯಮಾಡಲು ಮಾತ್ರವಲ್ಲದೆ ಹೋಟೆಲ್, ವಿಮಾನ ನಿಲ್ದಾಣ ಹೀಗೆ ಎಲ್ಲೆಡೆ ರೋಬೋಟ್‌ಗಳು ತಮ್ಮ ನೆಲೆಯನ್ನು ಭದ್ರಗೊಳಿಸಿಕೊಂಡಿವೆ. ರೋಬೋಟಿಕ್ ತಂತ್ರಜ್ಞಾನವು ಇದೀಗ ನಮ್ಮೆಲ್ಲರ ನಿರೀಕ್ಷೆಗಳನ್ನು ಮೀರಿದ ಅನುಭವವನ್ನು ನೀಡಲು ಸಜ್ಜಾಗಿವೆ. ತಂತ್ರಜ್ಞಾನ ಲೋಕದ ಇಂಥ ಆವಿಷ್ಕಾರವನ್ನು ಜಗತ್ತು ಕುತೂಹಲ ಮತ್ತು ಚಿಂತೆಯ ಕಣ್ಣಿಂದ ನಿರೀಕ್ಷಿಸುವಂತಾಗಿದೆ. ಇದನ್ನೊಮ್ಮೆ ಊಹಿಸಿಕೊಂಡರೆ ಹಾಲಿವುಡ್ ಸಿನಿಮಾಗಳಲ್ಲಿ ಕಂಡುಬರುವ ಅತಿರಂಜಿತ/ಭ್ರಮಾತ್ಮಕ ಪಾತ್ರದಂತೆ ಕಾಣಬಹುದು; ಆದರೆ ಇದು ಕೃತಕ ಬುದ್ಧಿಮತ್ತೆಯ (ಎಐ) ಯುಗದ ಕಥೆ. ಇಲ್ಲಿ ರೋಬೋಟ್ ಎಂಬುದು ಮಗುವಿಗೆ ಮಮ್ಮಿ-ಡ್ಯಾಡಿ ಎಲ್ಲಾ...!

ಚೀನಾದಲ್ಲಿ ಬಂಜೆತನ

ಲ್ಯಾನ್ಸೆಟ್ ವರದಿಯ ಪ್ರಕಾರ, ಚೀನಾದಲ್ಲಿ ಬಂಜೆತನದ ಪ್ರಮಾಣವು 2007ರಲ್ಲಿ ಶೇ. 11.9ರಷ್ಟು ಇದ್ದುದು 2020ರಲ್ಲಿ ಶೇ.18ಕ್ಕೆ ಏರಿದೆ. ಐವಿಎಫ್‌ನಂಥ ಕೃತಕ ಗರ್ಭಧಾರಣೆಯ ಚಿಕಿತ್ಸೆಗಳು ದುಬಾರಿ ವೆಚ್ಚದವು. ಭಾವನಾತ್ಮಕ ಬಳಲಿಕೆಯ ನಂತರವೂ ಇಲ್ಲಿ ಯಶಸ್ಸಿನ ಪ್ರಮಾಣ ಕಡಿಮೆ. ಹೀಗಾಗಿ, ಬೀಜಿಂಗ್ ಮತ್ತು ಶಾಂಘೈನಂಥ ನಗರಗಳು ಈಗ ವೈದ್ಯಕೀಯ ವಿಮಾ ರಕ್ಷಣೆಯಲ್ಲಿ ಕೃತಕ ಗರ್ಭಧಾರಣೆ ಮತ್ತು ಐವಿಎಫ್ ಅನ್ನೂ ಸೇರಿಸಿಕೊಂಡಿವೆ. ಇದು ಗರ್ಭಧಾರಣೆಯ ಸವಾಲುಗಳನ್ನು ಎದುರಿಸುವ ಕುಟುಂಬಗಳಿಗೆ ಬೆಂಬಲ ನೀಡುತ್ತದೆ.

ಕುಟುಂಬಗಳಿಗೆ ಹೊಸ ಅವಕಾಶ

ಸಂತಾನೋತ್ಪತ್ತಿಯ ಸಮಸ್ಯೆಯನ್ನು ನಿವಾರಿಸುವಲ್ಲಿ ಗರ್ಭಧಾರಣೆಯ ರೋಬೋಟ್‌ಗಳು ಸಹಕಾರಿಯಾಗಲಿವೆ ಎಂಬುದು ವಿಜ್ಞಾನಿಗಳ ವಾದ. ಈ



ಆವಿಷ್ಕಾರವು ವಿಶ್ವಾದ್ಯಂತ ಬಂಜೆತನದಿಂದ ಬಳಲುತ್ತಿರುವ ಶೇ.15ರಷ್ಟು ದಂಪತಿಗಳ ಜೀವನವನ್ನು ಪರಿವರ್ತಿಸುತ್ತದೆ ಎಂಬುದು ಇವರ ಸಮರ್ಥನೆ. ಇದು ಗರ್ಭಧಾರಣೆಗೆ ಒಳಗಾಗಲು ಸಾಧ್ಯವಾಗದ ಅಥವಾ ಇಷ್ಟವಿಲ್ಲದ ಮಹಿಳೆಯರಿಗೆ ವೈದ್ಯಕೀಯ ಅಪಾಯಗಳನ್ನು ಕಡಿಮೆ ಮಾಡಬಲ್ಲದು.

ವಿಶೇಷತೆ ಏನು?

ಕೈಗೆಟುಕುವಂತಿರುವ ವೆಚ್ಚದ ಹೊರತಾಗಿ ಈ ವ್ಯವಸ್ಥೆಯು, ಗರ್ಭಾವಸ್ಥೆಯು ತಾಯಂದಿರ ಮೇಲೆ ಹೇರಬಹುದಾದ ದೈಹಿಕ ಮತ್ತು ಭಾವನಾತ್ಮಕ ಹೊರೆಗಳನ್ನು ಕಡಿಮೆ ಮಾಡುವ ಭರವಸೆಯನ್ನು ನೀಡುತ್ತದೆ. ಇದು ಸುರಕ್ಷಿತವಾಗಿದ್ದು ಕಡಿಮೆ ಒತ್ತಡದ ಅನುಭವವನ್ನು ನೀಡುತ್ತದೆ. ಈ ಪ್ರಗತಿಯು ಸಂತಾನೋತ್ಪತ್ತಿಯ ಕುರಿತಾದ ಭವಿಷ್ಯವನ್ನು ಬದಲಾಯಿಸಬಲ್ಲದು.

ಅನುದಿನವೂ ವಿರಾಮಕ್ಕೆ ಒಂದು ನೆಪ

ಮುಂದಿರುವ ಪ್ರಶ್ನೆಗಳು

ಈ ತಂತ್ರಜ್ಞಾನವು ಕ್ರಾಂತಿಕಾರಿಯಾಗಿದ್ದರೂ, ಗಂಭೀರವಾದ ಒಂದಷ್ಟು ನೈತಿಕ ಮತ್ತು ಕಾನೂನಾತ್ಮಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ:

- ರೋಬೋಟ್ ಗರ್ಭಧಾರಣೆ ಪ್ರಕ್ರಿಯೆಯಲ್ಲಿ ಫಲೀಕರಣ ಮತ್ತು ಇಂಪ್ಲಾಂಟೇಶನ್ ಹೇಗೆ ನಡೆಯುತ್ತದೆ?
- ರೋಬೋಟ್‌ನಿಂದ ಜನಿಸಿದ ಮಗು ಪೋಷಕರೊಂದಿಗೆ ಆರಂಭಿಕ ಭಾವನಾತ್ಮಕ ಬಂಧಗಳನ್ನು ಹೇಗೆ ರೂಪಿಸಿಕೊಳ್ಳುತ್ತದೆ?
- ಅಂಡಾಣು ಮತ್ತು ವೀರ್ಯಾಣುವನ್ನು ಎಲ್ಲಿಂದ ಪಡೆಯಲಾಗುತ್ತದೆ?
- ಇದು ಅಕ್ರಮ ಜನನಕ್ಕೆ ಉತ್ತೇಜನ ನೀಡಬಹುದೇ?
- ಈ ವಿಧಾನದಿಂದ ಪಡೆದ ಮಗುವಿನ ದೈಹಿಕ ಹಾಗೂ ಮಾನಸಿಕ ಗುಣಲಕ್ಷಣಗಳು ಇತರ ಮಗುವಿಗಿಂತ ಭಿನ್ನವಾಗಿರುತ್ತವೆಯೇ?
- ನೈತಿಕ ಮತ್ತು ಕಾನೂನು ಕಾಳಜಿಗಳ ಕುರಿತಾದ ರೂಪುರೇಷೆ ರೂಪಿಸುವ ಹೊಣೆ ಯಾರದ್ದು?
- ಮಾನವಸಹಜ ಸಂಬಂಧಗಳು ಇದರಿಂದ ನಾಶವಾಗಬಹುದೇ?
- ರೋಬೋಟ್‌ಗಳಿಂದ ಜನಿಸಿದ ಶಿಶುಗಳನ್ನು ಸಮಾಜ ಸ್ವೀಕರಿಸುತ್ತದೆಯೇ?

'ಬಯೋಬ್ಯಾಗ್'ನಲ್ಲಿ ಯಶಸ್ವಿಯಾಗಿ ಪೋಷಿಸಿದರು. ಇದು ಬೆಚ್ಚಗಿನ ಲವಣಯುಕ್ತ ಕೃತಕ ಆಮ್ನಿಯೋಟಿಕ್ ದ್ರವದಿಂದ ತುಂಬಿದ ಪಾರದರ್ಶಕ ವಿನೈಲ್ ಚೀಲವಾಗಿತ್ತು. ಹೊಕ್ಕುಳಬಳ್ಳಿಗೆ ಜೋಡಿಸಲಾದ ಕೊಳವೆಯ ಮೂಲಕ ಪೋಷಕಾಂಶಗಳನ್ನು ತಲುಪಿಸಲಾಯಿತು. 4 ವಾರಗಳಲ್ಲಿ ಈ ಕುರಿಮರಿಯಲ್ಲಿ ಉಣ್ಣೆಯು ಅಭಿವೃದ್ಧಿಗೊಂಡಿತ್ತು.

ಗರ್ಭಧಾರಣೆಯ ರೋಬೋಟ್ ಎಂದರೇನು?

ಚೀನಾ ಈ ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದ್ದು, ಸಿಂಗಾಪುರದ ನಾನ್ಯಾಂಗ್ ತಾಂತ್ರಿಕ ವಿಶ್ವವಿದ್ಯಾಲಯದ ಡಾ. ಚಾಂಗ್ ಕಿಫೆಂಗ್ ಇದರಲ್ಲಿ ಕೈಜೋಡಿಸಿದ್ದಾರೆ. ಇದರ ಮೂಲತತ್ವ ಕೃತಕ ಗರ್ಭಾಶಯ ತಂತ್ರಜ್ಞಾನ. ರೋಬೋಟ್‌ನ ಹೊಟ್ಟೆಯು ಕೃತಕ ಆಮ್ನಿಯೋಟಿಕ್ ದ್ರವದಿಂದ ತುಂಬಿದ ಸಂಶ್ಲೇಷಿತ ಗರ್ಭಾಶಯವನ್ನು ಹೊಂದಿರುತ್ತದೆ. ಹೊಕ್ಕುಳಬಳ್ಳಿಯಂತೆ ಕಾರ್ಯ ನಿರ್ವಹಿಸುವ ಮೆದುಗೊಳವೆಯ ಮೂಲಕ ಪೋಷಕಾಂಶಗಳು ಚಲಿಸುತ್ತವೆ. ಮಾನವರೊಂದಿಗೆ ಸಂವಹನ ನಡೆಸಲು, ನೈಜಸಮಯದಲ್ಲಿ ಗರ್ಭಧರಿಸಲು ಪೂರಕವಾದ ಸ್ವಾಭಾವಿಕ ಪರಿಸರವನ್ನು ಅನುಕರಿಸುವಂತೆ ಈ ರೋಬೋಟ್ ಅನ್ನು ವಿನ್ಯಾಸಗೊಳಿಸಲಾಗಿದೆ. ಈ ಆವಿಷ್ಕಾರವು ಯಶಸ್ವಿಯಾದರೆ, ವೈದ್ಯಕೀಯ ವಿಜ್ಞಾನ, ಸಂತಾನೋತ್ಪತ್ತಿ ಆರೋಗ್ಯ ಮತ್ತು ಫಲವತ್ತತೆಯ ಚಿಕಿತ್ಸೆಗಳನ್ನು ಪರಿವರ್ತಿಸಬಹುದು.

ಹ್ಯಾಷ್‌ಟ್ಯಾಗ್ ಪ್ರೇರಣೆ

Weibo ಎಂಬ ಚೀನಿ ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ World's First Pregnancy Robot to Launch Within a Year ಎಂಬ ಹ್ಯಾಷ್‌ಟ್ಯಾಗ್ ಅಡಿಯಲ್ಲಿ ಟ್ರೆಂಡ್ ಆಗಿರುವ ಸುದ್ದಿಯಲ್ಲಿ, ''ನಾನು ಮೂರು ಬಾರಿ ಕೃತಕ ಗರ್ಭಧಾರಣೆಗೆ ಪ್ರಯತ್ನಿಸಿ ವಿಫಲಳಾಗಿರುವೆ. ಆದರೆ ಈಗ ನನಗೆ ಮಗುವನ್ನು ಹೊಂದುವ ಅವಕಾಶ ಸಿಕ್ಕಿದೆ'' ಎಂದು ಮಹಿಳೆಯೊಬ್ಬರು ಆಶಾದಾಯಕ ಪ್ರತಿಕ್ರಿಯೆ ನೀಡಿದ್ದರು. ಅಲ್ಲದೆ, ರೋಬೋಟ್ ಗರ್ಭಧಾರಣೆಯಿಂದ ಭವಿಷ್ಯದಲ್ಲಿ ಮಹಿಳೆಯರಿಗೆ ಅನುಕೂಲವಾಗಲಿದೆ ಎಂದು ಆಕೆ ಹರ್ಷವನ್ನು ವ್ಯಕ್ತಪಡಿಸಿದ್ದು ಪ್ರೇರಣೆಯಾಯಿತು.

ತಂತ್ರಜ್ಞಾನದ ಹಿಂದಿರುವ ವಿಜ್ಞಾನ

ಕೃತಕ ಗರ್ಭಧಾರಣೆಯ ತಂತ್ರಜ್ಞಾನವು ಸಂಪೂರ್ಣ ಹೊಸದೇನಲ್ಲ. ಪ್ರಾಣಿಗಳ ಅಧ್ಯಯನಗಳಲ್ಲಿ ಕೃತಕ ಗರ್ಭಧಾರಣೆಗಳು ಭರವಸೆಯ ಫಲಿತಾಂಶಗಳನ್ನು ತೋರಿಸಿವೆ. 2017ರಲ್ಲಿ, ಫಿಲಡೆಲ್ಫಿಯಾದ ಮಕ್ಕಳ ಆಸ್ಪತ್ರೆಯ ಸಂಶೋಧಕರು 23 ವಾರಗಳ ಮಾನವ ಗರ್ಭಧಾರಣೆಗೆ ಸಮನಾದ ಅಕಾಲಿಕ ಕುರಿಮರಿಯನ್ನು

ಪರಿಕಲ್ಪನೆ ಹುಟ್ಟಿದ್ದು ಹೇಗೆ?

ಈ ವರ್ಷ ಬೀಜಿಂಗ್‌ನಲ್ಲಿ ನಡೆದ ವಿಶ್ವ ರೋಬೋಟ್ ಸಮ್ಮೇಳನದಲ್ಲಿ ಈ 'ರೋಬೋಟ್ ಸರೋಗೇಟ್' ಅನ್ನು ಪ್ರಸ್ತುತಪಡಿಸಲಾಗಿತ್ತು. ಇದು ಗರ್ಭಧಾರಣೆಯಿಂದ ಹೆರಿಗೆಯವರೆಗಿನ ಸಂಪೂರ್ಣ ಪ್ರಕ್ರಿಯೆಯನ್ನು ನಿರ್ವಹಿಸಬಲ್ಲ ಪೂರ್ಣಪ್ರಮಾಣದ 'ಹ್ಯುಮನಾಯ್ಡ್' ಎಂಬುದನ್ನು ಆಗಲೇ ಬಹಿರಂಗಪಡಿಸಲಾಗಿತ್ತು. ಅಸಂಭವವೆಂದು ತೋರುವ ಈ ಪರಿಕಲ್ಪನೆಯನ್ನು 'ಕೈವಾ ಟೆಕ್ನಾಲಜಿ'ಯ ಸಂಶೋಧಕರಾದ ಜಾಂಗ್ ಕಿಫೆಂಗ್ ಅವರು ಅದಾಗಲೇ ಇಲಿಗಳ ಭ್ರೂಣವನ್ನು ಬೆಳೆಸುವ ಪ್ರಕ್ರಿಯೆಯಲ್ಲಿ ಬಳಸುವ ಮೂಲಕ ಭರವಸೆ ಹುಟ್ಟಿಸಿದ್ದರು.

ಗರ್ಭ ಧರಿಸಲು ಕಷ್ಟಪಡುವವರು ತಮ್ಮ ಮಗುವನ್ನು ಹೆರಲು 'ಹ್ಯುಮನಾಯ್ಡ್' ಅನ್ನು ನೇಮಿಸಿಕೊಳ್ಳಲು ಸುಮಾರು 14 ಲಕ್ಷ ರು. ವೆಚ್ಚವಾಗುತ್ತದೆ. 2026ರಲ್ಲಿ ಮೊದಲ 'ರೋಬೋಟ್ ಸರೋಗೇಟ್ ಮಗು' ಈ ಭೂಮಿಗೆ ಕಾಲಿಡುವ ನಿರೀಕ್ಷೆಯಿದೆ. ಸಾಮಾನ್ಯವಾಗಿ, ಸ್ವಾಭಾವಿಕ ವಿಧಾನದಿಂದ ಮಗು ಜನಿಸಲು 9 ತಿಂಗಳು ಬೇಕಾದರೆ, ಈ ವಿಧಾನದ ಮೂಲಕ ಮಗುವು ಜನಿಸುವುದಕ್ಕೆ 10 ತಿಂಗಳು ಹಿಡಿಯುತ್ತದೆ ಎನ್ನಲಾಗಿದೆ.

ಆಸೆಗೊಂದು ಮಿತಿ ಇರಲಿ

• ವಿಜಯಲಕ್ಷ್ಮೀ. ಎಸ್, ಬೆಂಗಳೂರು



ಆಸೆ ಅನ್ನುವ ಎರಡಕ್ಷರದ ಹಂಬಲವು ಹಲವರಲ್ಲಿ ಅಳೆಯಲಾರದ ಗಗನದಷ್ಟು ಇರುತ್ತದೆ ಎನ್ನಬಹುದು. ನಮ್ಮ ಮನಸ್ಸಿನಲ್ಲಿ ಉದ್ಭವಿಸುವ ಅನೇಕ ಭಾವಾವೇಶಗಳಲ್ಲಿ ಆಸೆಯೂ ಒಂದು. ಪೃಥ್ವಿಯಲ್ಲಿ ಮಾನವನೆಂಬ ಜೀವಿಗೆ ಮಾತ್ರ ಚಿಂತನಾಶಕ್ತಿ ಎಂಬ ವರದಾನವಿದ್ದು, ತನ್ನ ಊಹಾಪೋಹದ ಚಿಂತನಾಶಕ್ತಿಯಿಂದ ಆಸೆಯೆಂಬ ಬಿಸಿಲುಗುದುರೆಯ ಬೆನ್ನ ಹಿಂದೆ ಸದಾ ಹೊಯ್ಯುವುದನ್ನು ಮಾತ್ರ ಬಿಟ್ಟಿಲ್ಲ. ಬದುಕಿನ ಬೇಕು-ಬೇಡಗಳನ್ನು ಹೆಚ್ಚಿಸುವುದಾಗಲಿ, ಕಡಿಮೆಗೊಳಿಸುವುದಾಗಲಿ ಕಾಲಮಾನಕ್ಕೆ ತಕ್ಕಂತೆ ನಡೆಸಿಕೊಳ್ಳುವ ಶಕ್ತಿ ಆಸೆಗೆ ಇರುತ್ತದೆ.

ಎಲ್ಲಿಯೂ ಸಲ್ಲದ ತ್ರಿಶಂಕು ಸ್ವರ್ಗ

ಇಕ್ಷ್ವಾಕು ವಂಶದಲ್ಲಿ ತ್ರಿಶಂಕು ಎಂಬ ರಾಜ ನಿದ್ದ. ಅವನಿಗೆ ಶರೀರದ ಮೇಲಿನ ವ್ಯಾಮೋಹದಿಂದ ಸಶರೀರವಾಗಿ ಸ್ವರ್ಗ ಪ್ರವೇಶ ಮಾಡಬೇಕೆಂಬ ಬಯಕೆಯಾಯಿತು. ತಕ್ಷಣವೇ ತನ್ನ ಕುಲಗುರುಗಳಾದ ವಸಿಷ್ಠರಿಗೆ ತನ್ನ ಆಸೆಯನ್ನು ತಿಳಿಸಿದ. ಆಗ ವಸಿಷ್ಠರು, 'ನೀನು ಎಷ್ಟೇ ಶ್ರೇಷ್ಠ ರಾಜನಾದರೂ, ಎಷ್ಟೇ ಶ್ರೇಷ್ಠ ಯಾಗಗಳನ್ನು ಮಾಡಿದ್ದರೂ, ಸಶರೀರ ವಾಗಿ ಸ್ವರ್ಗಕ್ಕೆ ಹೋಗುವುದು ಧರ್ಮಶಾಸ್ತ್ರದಲ್ಲಿ ಹೇಳಿಲ್ಲ. ಯಾರಾದರೂ ಸರಿ, ಶರೀರವನ್ನು ತ್ಯಜಿಸುವುದು ಅನಿವಾರ್ಯ, ಅದರ ನಂತರವೇ ಸ್ವರ್ಗ ಲೋಕದ ಪ್ರವೇಶ ಸಿಗುತ್ತದೆ. ಹಾಗಾಗಿ ಸಶರೀರವಾಗಿ ಸ್ವರ್ಗಕ್ಕೆ ಹೋಗುವುದು ಅಸಾಧ್ಯ' ಎಂದು ಅವನ ಕೋರಿಕೆಯನ್ನು ನಿರಾಕರಿಸಿದರು.

ಆಗ ತ್ರಿಶಂಕು, ವಸಿಷ್ಠರ ಮಕ್ಕಳ ಬಳಿ ಹೋಗಿ ತನ್ನ ಮನದ ಇಂಗಿತವನ್ನು ವ್ಯಕ್ತಪಡಿಸಿದ. ಅವರು, 'ನಮ್ಮ ತಂದೆಯವರು ಸಾಧ್ಯವಿಲ್ಲ ಎಂದ ಮೇಲೆ ಅದು ಸಾಧ್ಯವಿಲ್ಲ' ಎಂದು ಹೇಳಿಬಿಟ್ಟರು. ಅಸಮಾಧಾನಗೊಂಡ ತ್ರಿಶಂಕು ತಾನು ಬೇರೆ ಗುರುಗಳನ್ನು ಹುಡುಕಿ, ತನ್ನ ಕೋರಿಕೆಯನ್ನು ಈಡೇರಿಸಿಕೊಳ್ಳುತ್ತೇನೆ ಎಂದು ಹೇಳಿ ಹೊರಟುಹೋದ. ಆಗ ಅವರು, 'ನೀನು ನಮ್ಮ ತಂದೆ, ನಿನ್ನ ಗುರುಗಳೂ ಆದ ವಸಿಷ್ಠರ ಮಾತನ್ನು ಧಿಕ್ಕರಿಸಿ ಮತ್ತೊಬ್ಬ ಗುರುವನ್ನು ಹುಡುಕಲು ಹೊರಟಿರುವೆ. ನಿನ್ನಿಂದ ಗುರು ವಾಕ್ಯ ಉಲ್ಲಂಘನೆ ಮತ್ತು ಅವಮಾನ ನಡೆದಿದೆ, ಅದಕ್ಕೆ ತಕ್ಕ ಶಿಕ್ಷೆಯಾಗಲಿ' ಎಂದು ಶಪಿಸಿದರು.

ಮರುದಿನ ತ್ರಿಶಂಕು ನಿದ್ದೆಯಿಂದ ಏಳುವ ವೇಳೆಗೆ, ಅವನ ಮುಖದಲ್ಲಿನ ಕಾಂತಿಯು ಕುಂದಿ, ಮುಖವೆಲ್ಲಾ ಕಪ್ಪಾಗಿತ್ತು. ಅವನ ಬಂಗಾರದ ಆಭರಣಗಳು ಹಿತ್ತಾಳೆಯಾಗಿದ್ದವು. ಕೂದಲು, ಕಣ್ಣುಗಳು ಕೆಂಪಾಗಿ, ನೋಡಲು ಭಯಂಕರವಾಗಿದ್ದವು. ಅವನ ಭೀಕರ ರೂಪವನ್ನು ನೋಡಿ ಅರಮನೆಯಲ್ಲಿದ್ದವರೂ, ರಾಜಪರಿವಾರದವರೂ ಭಯದಿಂದ ಓಡಿಹೋದರು.

ತ್ರಿಶಂಕು ಅದೇ ರೂಪದಲ್ಲಿ ತಿರುಗುತ್ತಾ ಕೊನೆಗೆ ರಾಜರ್ಷಿಯಾಗಿದ್ದ ವಿಶ್ವಾಮಿತ್ರರ ಬಳಿ ಬಂದ. ವಸಿಷ್ಠರ ಮೇಲೆ ವಿಶ್ವಾಮಿತ್ರರಿಗೆ ಮೊದಲೇ ಕೋಪವಿತ್ತು. ಹೇಗಾದರೂ ಪ್ರತೀಕಾರ ತೀರಿಸಿಕೊಳ್ಳಬೇಕೆಂದು ಕಾದಿದ್ದರು. ಈಗ ತ್ರಿಶಂಕುವಿಗೆ ಸಹಾಯ ಮಾಡುವ ಮೂಲಕ ವಸಿಷ್ಠರನ್ನು ಅವಮಾನಿಸಬಹುದೆಂದು ಭಾವಿಸಿದ ವಿಶ್ವಾಮಿತ್ರ, ಅವನನ್ನು ಸ್ವರ್ಗಕ್ಕೆ ಕಳುಹಿಸಲು ಒಪ್ಪಿದರು.

ಅದರಂತೆ ಸ್ವರ್ಗಾರೋಹಣ ಯಾಗ ಪ್ರಾರಂಭವಾಯಿತು. ಆದರೆ ಯಾಗಾಗ್ನಿಯಲ್ಲಿ ಹವಿಸ್ಸನ್ನು ಸ್ವೀಕರಿಸಲು ಯಾವ ದೇವತೆಯೂ ಬರಲಿಲ್ಲ. ಯಾರೂ ಬರದಿರುವುದನ್ನು ಕಂಡು, ವಿಶ್ವಾಮಿತ್ರರು ಕೋಪಗೊಂಡು ತನ್ನ ತಪಃಶಕ್ತಿಯಿಂದ ತ್ರಿಶಂಕುವನ್ನು ಮೇಲಕ್ಕೆ ಕಳಿಸತೊಡಗಿದರು. ತ್ರಿಶಂಕು ಆಕಾಶಮಾರ್ಗವಾಗಿ ಪ್ರಯಾಣಿಸುತ್ತಾ ಸ್ವರ್ಗದ ಕಡೆಗೆ ವೇಗವಾಗಿ ಸಾಗತೊಡಗಿದ.

ಈ ವಿಷಯ ತಿಳಿದ ದೇವೇಂದ್ರ ಕೋಪದಿಂದ, 'ತ್ರಿಶಂಕೋ ಗಚ್ಛ ಭೂಯಾಃ ತ್ವಂ ಅಸಿ ಸ್ವರ್ಗ ಕೃತ ಆಲಯಂ', 'ತ್ರಿಶಂಕು, ಗುರುಶಾಪಕ್ಕೆ ಗುರಿಯಾದ ನಿನಗೆ ಸ್ವರ್ಗದಲ್ಲಿ ಪ್ರವೇಶವಿಲ್ಲ, ನೀನು ತಲೆ ಕೆಳಗಾಗಿ ಭೂಮಿಯ ಮೇಲೆ ಬೀಳು' ಎಂದು ತ್ರಿಶಂಕುವನ್ನು ತಿರಸ್ಕರಿಸಿಬಿಟ್ಟ.

ಕೂಡಲೇ ತ್ರಿಶಂಕು ತಲೆಕೆಳಗಾಗಿ ಭೂಮಿಯ ಮೇಲೆ ಬೀಳತೊಡಗಿದ. ಭಯದಿಂದ ವಿಶ್ವಾಮಿತ್ರರನ್ನು ಪ್ರಾರ್ಥಿಸತೊಡಗಿದ. ವಿಶ್ವಾಮಿತ್ರರು 'ತಮ್ಮ ಶಿಷ್ಯನಿಗೆ ಸ್ವರ್ಗದಲ್ಲಿ ಜಾಗ ಕೊಡದಿದ್ದರೆ ತಾನೆ ಏನು? ಪ್ರತ್ಯೇಕ ಸ್ವರ್ಗವನ್ನೇ ಸೃಷ್ಟಿಸುವೆ' ಎಂದು ಹೂಂಕರಿಸಿದರು. ತಮ್ಮ ತಪಃಶಕ್ತಿಯಿಂದ ದಕ್ಷಿಣ ದಿಕ್ಕಿನಲ್ಲಿ ಮತ್ತೊಂದು ನಕ್ಷತ್ರ ಮಂಡಲವನ್ನೂ, ಸಪ್ತರ್ಷಿ ಮಂಡಲವನ್ನೂ ಸೃಷ್ಟಿಸಿದರು, ಅನಂತರ ದೇವತೆಗಳನ್ನು ಕೂಡ ಸೃಷ್ಟಿಸಲು ಮುಂದಾದರು. ಆಗ ದೇವತೆಗಳು ವಿಶ್ವಾಮಿತ್ರರ ಬಳಿ ಬಂದು, 'ಶಾಂತನಾಗು ವಿಶ್ವಾಮಿತ್ರ, ನಿನಗೆ ತಪಃ ಶಕ್ತಿ ಇದ್ದ ಮಾತ್ರಕ್ಕೆ ಪ್ರತಿಸ್ವರ್ಗದ ಸೃಷ್ಟಿ ಸರಿಯಲ್ಲ, ಶಾಸ್ತ್ರದಂತೆ ಸಶರೀರವಾಗಿ ಸ್ವರ್ಗ ಸೇರಲು ಸಾಧ್ಯವಿಲ್ಲ, ಇದೂ ನಿಮಗೆ ತಿಳಿದಿದೆ, ನಿಮ್ಮಂಥವರು ಹೀಗೆ ನಡೆದುಕೊಳ್ಳುವುದು ಸರಿಯಲ್ಲ. ನೀವು ಸೃಷ್ಟಿಸಿದ ನಕ್ಷತ್ರ ಮಂಡಲವು ಜ್ಯೋತಿಷ್ಯಚಕ್ರದಿಂದ ಹೊರಗಿದ್ದು, ತ್ರಿಶಂಕು ಅಲ್ಲಿಯೇ ನೆಲೆಸಲಿ' ಎಂದು ಕೇಳಿಕೊಂಡರು.

ದೇವತೆಗಳ ಆಗ್ರಹಕ್ಕೆ ಮಣಿದ ವಿಶ್ವಾಮಿತ್ರರು ತ್ರಿಶಂಕುವನ್ನು ಅಲ್ಲಿಯೇ ಇರಿಸಿ, ಭೂಮಿಗೂ ಸ್ವರ್ಗಕ್ಕೂ ನಡುವೆ ಇದ್ದ ಆತನ ನೆಲೆಯನ್ನು ತ್ರಿಶಂಕು ಸ್ವರ್ಗವೆಂದು ಕರೆದರು. ಎಲ್ಲಿಯೂ ಸಲ್ಲದವರ ಸ್ಥಿತಿ ತ್ರಿಶಂಕುವಿನ ಸ್ಥಿತಿ ಎಂದೇ ಹೆಸರಾಯಿತು. ಪ್ರಕೃತಿಗೆ ವಿರುದ್ಧವಾಗಿ ನಮ್ಮ ಆಸೆಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸಿದಾಗ ನಮ್ಮ ಸ್ಥಿತಿಯೂ ಹೀಗೇ ಆಗುತ್ತದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ದಾನ-ಧರ್ಮದ ಬದುಕು ಇರಲಿ

ಹೊತ್ತು ಕಣಕಣದಿ ಮಣ್ಣನು ಗೆದ್ದಲಿರುವೆಗಳು।
ಮೆತ್ತುತೆಡೆಬಿಡದೆ ದುಡಿದಾಗಿಸಿದ ಗೂಡು।
ಹುತ್ತವಾಗುವುದು ವಿಷ ಸರ್ಪಕ್ಕೆ
ಮಾನವನ ಯತ್ನಗಳ ಕಥೆಯಿಷ್ಟೆ-ಮಂಕುತಿಮ್ಮ

ಒಂದೊಂದೇ ಮಣ್ಣಿನ ಕಣಗಳನ್ನು ಹೊತ್ತು ತಂದು, ಅದನ್ನು ಮೆತ್ತುತ್ತಾ ಗೆದ್ದಲಿರುವೆಗಳು ಹುತ್ತವನ್ನು ನಿರ್ಮಿಸುತ್ತವೆ. ಅವು ನಿರ್ಮಿಸಿದಂತಹ ಹುತ್ತವು ಕೊನೆಗೆ ಅದೊಂದು ವಿಷಸರ್ಪಕ್ಕೆ ಹುತ್ತವಾಗುತ್ತದೆ. ಕಣಕಣವನ್ನು ಹೊತ್ತು ತಂದು ನಿರ್ಮಿಸಿದ ಗೆದ್ದಲು ಹುಳುಗಳು ಆ ಹುತ್ತದಲ್ಲಿ ಇರಲು ಅವಕಾಶವೇ ಸಿಗುವುದಿಲ್ಲ. ಹಾಗೆಯೇ ಮನುಷ್ಯನು ತನ್ನ ಜೀವನದಲ್ಲಿ ದುಡಿದ ಹಣ, ಹೊನ್ನು, ಆಸ್ತಿಗಳಲ್ಲಿ ದಾನ, ಧರ್ಮ ಮಾಡದೆ ಕೂಡಿಟ್ಟರೆ, ಕೊನೆಗೆ ಅದು ಬೇರೆಯವರ ಪಾಲಾಗುತ್ತದೆ ಎಂಬ ಜೀವನ ಧರ್ಮವನ್ನು ಈ ಕಗ್ಗದಲ್ಲಿ ಹೇಳಿದ್ದಾರೆ.

ಮನುಷ್ಯನು ಜೀವಿಸಿರುವವರೆಗೂ ತಾನು ದುಡಿಯಬೇಕು, ಹಣ, ಹೊನ್ನು, ಆಸ್ತಿ ಮಾಡಿ ಬಲು ಶ್ರೀಮಂತ ಎನಿಸಿಕೊಳ್ಳಬೇಕೆಂಬ ಹುಚ್ಚು ಭ್ರಾಂತಿಯಲಿ ಅಹರ್ನಿಶಿ ಜೀವಮಾನವಿಡೀ ಈತನು ಹುಚ್ಚು ಕುದುರೆಯಂತೆ ದುಡಿಯುತ್ತಲೇ ಇರುತ್ತಾನೆ. ಜೀವನದಲ್ಲಿ ಗಳಿಸಿದ ಸಂಪತ್ತಿನಲ್ಲಿ ಆತನು ತನಗೊದಗಿರುವ ಸಂದರ್ಭಗಳಲ್ಲಿ ದಾನ, ಧರ್ಮದಂತಹ ಪುಣ್ಯಕಾರ್ಯಗಳನ್ನು ಮಾಡುವುದು ಆತನ ಪುಣ್ಯದ ಪುಣ್ಯದ ಗಂಟೆಗೆ ಜಮೆ ಆಗುವುದು. ಆದರೆ ಕೆಲವು ಜನರು ಜೀವಮಾನವಿಡೀ ದುಡಿಯುತ್ತಲೇ ಇದ್ದು, ದಾನ, ಧರ್ಮದಂತಹ ಪುಣ್ಯಕಾರ್ಯಗಳನ್ನು ಮರೆತು ಪೈಸೆಗೆ ಪೈಸೆ ಕೂಡಿಡುತ್ತಲೇ ಇರುತ್ತಾರೆ. ಕೊನೆಗೆ ಈತನ ಜೀವನದ ಆಯವ್ಯಯಗಳನ್ನು ನೋಡಿದರೆ ಕೇವಲ ಕೂಡಿಟ್ಟಿದ್ದನ್ನು ಬಿಟ್ಟರೆ ದಾನ-ಧರ್ಮಗಳಿಗೆ ವ್ಯಯಿಸಿದ್ದು ಕಂಡುಬರುವುದೇ ಇಲ್ಲ. ಇಷ್ಟೆಲ್ಲಾ ದುಡಿದು ಕೂಡಿಟ್ಟಾದರೂ ಅದ್ಯಾವ ಕಾರಣಕ್ಕಾಗಿ ಎಂಬ ಪ್ರಶ್ನೆ ಮೂಡುತ್ತದೆ. ತಾನು ಜೀವನಪೂರ್ತಿ ಶ್ರಮವಹಿಸಿ, ಕಷ್ಟಬಿದ್ದು ದುಡಿದು ಕೂಡಿಟ್ಟು, ಅದನ್ನು ತಾನು ಅನುಭವಿಸದೆ ಮಕ್ಕಳಿಗೋ, ಸಂಸಾರಕ್ಕೋ ಕೂಡಿಡುವುದಾದರೂ ಅದ್ಯಾವ ಸಾರ್ಥಕತೆಯನ್ನಾದರೂ ಪಡೆದದ್ದು ಹೌದಲ್ಲವೇ?

ಒಮ್ಮೊಮ್ಮೆ ಯಾರೋ ಒಬ್ಬರು ಜೀವನವಿಡೀ ದುಡಿಯುತ್ತಾರೆ ಆದರೆ ದುಡಿದು ಬಂದ ಹಣದಿಂದ ಸುಖವನ್ನು ಅನುಭವಿಸದೆ ಇದ್ದು, ಆ ಸಂಪತ್ತನ್ನು ಮತ್ತೆ ಯಾರೋ ಅನುಭವಿಸುವುದನ್ನೂ ನಾವು ಕಾಣುತ್ತೇವೆ. ಕನ್ನಡದ ಒಂದು ಗಾದೆಯಲ್ಲಿ 'ಜಿಪುಣ ಕೂಡಿಟ್ಟಿದ್ದನ್ನು ಜಾಣ ತಿಂದ' ಎಂಬ ಗಾದೆಯ ಮಾತೂ ಸಹ ಇದನ್ನೇ ಪುಷ್ಠೀಕರಿಸುತ್ತದೆ. ಈ ಒಂದು ಕಗ್ಗದಲ್ಲಿ ಈ ಬಗ್ಗೆ ಪೂಜ್ಯ ಡಿವಿಜಿಯವರು ಒಂದು ಉಪಮೆಯನ್ನು ಕೊಡುತ್ತಾರೆ. ಗೆದ್ದಲ ಇರುವೆಗಳು ಒಂದೊಂದೇ ಮಣ್ಣಿನ ಕಣಗಳನ್ನು ಹೊತ್ತುತಂದು ಎಡಬಿಡದೆ ಆ ಮಣ್ಣನ್ನು ಮೆತ್ತುತ್ತಾ ಹುತ್ತವನ್ನು ಕಟ್ಟುತ್ತವೆ. ಆದರೆ ಕೊನೆಗೆ ಆ ಗೆದ್ದಲು ಇರುವೆಗಳು ಆ ಹುತ್ತದಲ್ಲಿ ವಾಸ ಮಾಡುತ್ತವೆಯೇ? ಎಂದಿಗೂ ಸಾಧ್ಯವಿಲ್ಲ. ಗೆದ್ದಲ ಇರುವೆಗಳು ಕಟ್ಟಿದ ಹುತ್ತವು ಕೊನೆಗೆ ಒಂದು ವಿಷಸರ್ಪಕ್ಕೆ ಆವಾಸ ಸ್ಥಳವಾಗುತ್ತದೆ. ಅದೇ ರೀತಿಯಲ್ಲಿಯೇ ಅಧಿಕಾರ, ಅಂತಸ್ತು, ಹಣ, ಹೊನ್ನು, ಮಣ್ಣುಗಳನ್ನು ಅತಿಯಾಗಿ ಗಳಿಸಿಕೊಂಡರೂ, ದಾನ-ಧರ್ಮ ಮಾಡದೆ ಜಿಪುಣನಾಗಿ ಕೂಡಿಟ್ಟ ಸಂಪತ್ತೂ ಸಹ ಅದು ಬೇರೆಯವರ ಪಾಲಾಗುತ್ತದೆಯೇ ವಿನಃ, ಅದು ಸದ್ವಿನಿಯೋಗವಂತೂ ಆಗುವುದಿಲ್ಲ. ಆದುದರಿಂದ ಅವಕಾಶ ಸಿಕ್ಕಾಗಲೆಲ್ಲಾ ಧಾನ-ಧರ್ಮಗಳನ್ನು ಮಾಡಿ ಜೀವನವನ್ನು ಶ್ರೇಯಸ್ಸಿಗಾಗಿ ಮಾಡಿಕೊಳ್ಳುವುದು ಉತ್ತಮ. ಹಾಗೆಯೇ ನಿನ್ನ ಕೆಲಸದಲ್ಲಿಯೋ, ಬುದ್ಧಿವಂತಿಕೆಯಲ್ಲಿಯೋ, ಜ್ಞಾನದಲ್ಲಿಯೋ ನೀನು ಹೆಚ್ಚು ಶ್ರಮ ಹಾಕಿ ದುಡಿದಿದ್ದರೂ, ನಿನಗೆ ಕೀರ್ತಿ, ಹೆಸರು ಬರುವಾಗ ಮತ್ಯಾರೋ ಅನಾಮಿಕ ಬಂದು ಅದನ್ನು ಕಿತ್ತುಕೊಂಡು ಹೋಗಿರುತ್ತಾನೆ. ಇವೆಲ್ಲವೂ ಈ ಸಮಾಜದಲ್ಲಿ ಸಾಮಾನ್ಯವೇ ಆಗಿರುತ್ತವೆ. ಹಾಗಾಗಿ ನೀನು ಧೃತಿಗೆಡದೆ, ಗುರಿ ಬಿಡದೆ ನಿನ್ನ ಕೆಲಸವನ್ನು ನೀನು ಮಾಡು, ಹಾಗೆಯೇ ಈ ಬದುಕಿನ ಪಯಣದಲ್ಲಿ ಜಾಗೃತನಾಗಿರು ಎಂದು ಈ ಕಗ್ಗದಲ್ಲಿ ಪೂಜ್ಯರು ಹೇಳಿದ್ದಾರೆ.

ನಾವು ಬುದ್ಧ ಹಾಗೂ ಅಂಗುಲಿಮಾಲನ ಕಥೆಯನ್ನು ಕೇಳಿಯೇ ಇದ್ದೇವೆ. ಅಂಗುಲಿಮಾಲನು ಬುದ್ಧನನ್ನು ಕಂಡು ದರೋಡೆ ಮಾಡಿ, ಅವನನ್ನು ಕೊಲ್ಲಲು ಮುಂದಾದಾಗ, ಅಂಗುಲಿಮಾಲನನ್ನು ಕಂಡ ಬುದ್ಧನು ಕರುಣೆಯ ದೃಷ್ಟಿಯನ್ನಾಯಿಸಿ, 'ನೋಡು, ನೀನು ಯಾಕಾಗಿ ಇಷ್ಟು ಪಾಪದ ಕರ್ಮ ಮಾಡುತ್ತಿರುವೆ?' ಎಂದು ಪ್ರಶ್ನಿಸಿದಾಗ, ಅಂಗುಲಿಮಾಲನು, 'ನನ್ನ ಹೆಂಡತಿ, ಮಕ್ಕಳಿಗಾಗಿ' ಎಂದು ಉತ್ತರ ಕೊಡುತ್ತಾನೆ. ಆಗ ಬುದ್ಧನು, 'ನೀನು ಗಳಿಸುವ ಸಂಪತ್ತು ಅವರಿಗಾದರೆ, ನೀನು ಮಾಡುವ ಪಾಪದ ಕೃತ್ಯಗಳಲ್ಲೂ ಅವರು ಪಾಲು ಪಡೆಯುತ್ತಾರೆಯೇ?' ಎಂದು ಕೇಳಿದಾಗ ಅಂಗುಲಿಮಾಲನು ಅವನ ಮನೆಗೆ ಹೋಗಿ ಅವನ ಹೆಂಡತಿ, ಮಕ್ಕಳಲ್ಲಿ ಇದೇ ಪ್ರಶ್ನೆ ಕೇಳಿದಾಗ ಅವರು, 'ನಾವು-ನೀನು ಗಳಿಸುವ ಸಂಪತ್ತಿಗೆ ಮಾತ್ರವೇ ಭಾಗಿಗಳೇ ಹೊರತು, ನೀನು ಮಾಡಿರುವ ಪಾಪ ಕರ್ಮಗಳಿಗಲ್ಲ' ಎಂದು ಹೇಳಿದಾಗ ಅಂಗುಲಿಮಾಲನಿಗೆ ತನ್ನ ತಪ್ಪಿನ ಅರಿವಾಗುತ್ತದೆ, ಅಂದರೆ ಇದರಿಂದ ನಮಗೆ ತಿಳಿಯುವುದೇನೆಂದರೆ ಈ ಜಗದಲ್ಲಿ ನಾವೇನೇ ಕೃತ್ಯಗಳನ್ನು ಎಸಗಿ ಗಳಿಸಿದ ಸಂಪತ್ತಿಗೆ ನಮ್ಮವರು ಭಾಗೀದಾರರೇ ಹೊರತು, ನಾವು ಮಾಡಿದ ಪಾಪದ ಕೆಲಸಗಳಿಗಲ್ಲ. ಆದುದರಿಂದ ನೀನು ಗೆದ್ದಲು ಹುಳುವಿನ ಹಾಗೆ ಹುತ್ತವನ್ನು ಕಟ್ಟಿ, ವಿಷಸರ್ಪ ಅದರೊಳು ಬಂದು ವಾಸ ಮಾಡದಂತೆ, ನೀ ನಿನ್ನ ಬಾಳನ್ನು ರೂಢಿಸಿಕೋ ಎಂದು ಕಗ್ಗದಲ್ಲಿ ಹೇಳಿದ್ದಾರೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಸಂಪಿಗೆ ಹೂವಿಗೆ ಮತ್ತೊಂದು ಹೆಸರು (3)
3. ಬಲ್ಲಿರೇನಯ್ಯ, ಇವನು ಶ್ರೀಮಂತ (3)
6. ರಕ್ತ ಅಥವಾ ಕೆಂಪು ಬಣ್ಣ (3)
7. ಒಂದಲ್ಲ, ಅನೇಕ (3)
9. ಮತ್ತೊಂದು ಲಾಂಗೂಲದೊಂದಿಗೆ ಬಂದಿರುವ ಹುಡುಗ (3)
12. ಐವತ್ತೇಳು ಅಡಿ ಏಕಶಿಲಾ ವಿಗ್ರಹ ಈತನದ್ದು (4)
13. ನಕಲು ಅಥವಾ ಪ್ರತಿ ಮಾಡುವವನು (4)
14. ಸಲಾಕೆ ಅಥವಾ ಮೊನೆಯುಳ್ಳ ಒಂದು ಆಯುಧ (3)
20. ರೀತಿ, ನಿಯಮ (3)
21. ಹೆಂಡತಿಗೆ ಮತ್ತೊಂದು ಹೆಸರೇ ಇದು? (3)
22. ಹಲವರು ಸೇರಿ ಮಾಡಿದ ಜಗಳ (3)
23. ಚಿಗುರು, ಪಲ್ಲವ (3)

ಮೇಲಿಂದ ಕೆಳಕ್ಕೆ

1. ಸ್ಥಿರವಲ್ಲದ, ಅಲುಗುವ (3)
2. ಅಂತಃಕರಣವನ್ನು ನೆನಪಿಸುವ ಒಂದು ಅಂಗ (3)
3. ಕ್ಷಾಮಕ್ಕೆ ಮತ್ತೊಂದು ಹೆಸರು (4)
4. ಸುಡುವಿಕೆಯು ಮತ್ತೊಂದು ಹಸುವಿನ ನಡುವೆ ಬಂದಿದೆ (3)
5. ಮರದ ಮೆಟ್ಟು (3)
8. ಆಯುರಾಜನ ಮಗನ ಹೆಸರು (3)
9. ಮಕ್ಕಳಾಟಿಕೆಯ, ಹುಡುಗತನದ (3)
10. ಕಲಿಯುವಿಕೆ, ಮೊಗ್ಗು ಕೂಡಾ ಆಗಬಹುದು (3)
11. ಅರಳುವಿಕೆ (3)
15. ಅರಗಿನ ಮನೆ (4)
16. ನಾವೆಯನ್ನು ನಡೆಸುವವನು (3)
17. ಯಾವ ಕಡೆಯಿಂದ ನೋಡಿದರೂ ಚಿನ್ನವೇ (3)
18. ಕಬ್ಬಿಣದ ಕಡಲೆಯಾಗುವ ಪಠ್ಯವಿಷಯ (3)
19. ಬಾಯಿಯಿಂದ ಹೊರಚೆಲ್ಲು (3)

ಸರಿಯುತ್ತರಗಳು

ಸಮಾಚಾರ ಸಣ್ಣದಲ್ಲ

ಎಲವೆನಿಲ್ ವಲರಿವನ್‌ಗೆ ಶೂಟಿಂಗ್‌ನಲ್ಲಿ ಚಿನ್ನ

ಶಿಮ್ಕೆಂಟ್ (ಕಝಕಸ್ತಾನ್): ಶುಕ್ರವಾರ ನಡೆದಿದ್ದ 16ನೇ ಏಷ್ಯನ್ ಚಾಂಪಿಯನ್‌ಶಿಪ್‌ನ ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಭಾರತದ ಶೂಟರ್ ಎಲವೆನಿಲ್ ವಲರಿವನ್ ತಮ್ಮ ಅದ್ಭುತ ಪ್ರದರ್ಶನವನ್ನು ಮುಂದುವರಿಸಿ ಚಿನ್ನದ ಪದಕವನ್ನು ಗೆದ್ದುಕೊಂಡಿದ್ದಾರೆ.

ತಮಿಳುನಾಡಿನ 26ರ ವಯಸ್ಸಿನ ಆಟಗಾರ್ತಿ 253.6 ಅಂಕಗಳನ್ನು ಗಳಿಸುವ ಮೂಲಕ ಫೈನಲ್‌ನಲ್ಲಿ ಅಗ್ರಸ್ಥಾನ ಪಡೆದರು. ವಿಶ್ವಕಪ್ ಟೂರ್ನಿಯಲ್ಲಿ ಹಲವು ಚಿನ್ನದ ಪದಕಗಳನ್ನು ಗೆದ್ದಿದ್ದರಲ್ಲದೆ, ವಿಶ್ವ ಚಾಂಪಿಯನ್‌ಶಿಪ್‌ನಲ್ಲಿಯೂ ಅಗ್ರಸ್ಥಾನ ಪಡೆದಿದ್ದಾರೆ. ಚೀನಾದ ಶಿನ್ಲು ಪೆಂಗ್ 253 ಅಂಕಗಳೊಂದಿಗೆ ಬೆಳ್ಳಿ ಪದಕ ಗೆದ್ದರೆ, ಕೊರಿಯಾದ ಯುಂಜಿ ಕ್ವಾನ್ (231.2) ಕಂಚಿನ ಪದಕ ಗೆದ್ದರು. ಈ ಸ್ಪರ್ಧೆಯಲ್ಲಿ ವಲರಿವನ್ ಅವರ ಮೊದಲ ವೈಯಕ್ತಿಕ ಪದಕ ಇದಾಗಿದೆ. ಇದಕ್ಕೂ ಮೊದಲು ಅವರು ತಂಡದ ಸ್ಪರ್ಧೆಗಳಲ್ಲಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದಿದ್ದರು. ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮತ್ತೊಬ್ಬ ಭಾರತೀಯ ಆಟಗಾರ್ತಿ ಮೆಹುಲಿ ಘೋಷ್, ಎಂಟು ಶೂಟರ್‌ಗಳ ಫೈನಲ್‌ನಲ್ಲಿ 208.9 ಅಂಕಗಳನ್ನು ಗಳಿಸುವ ಮೂಲಕ ನಾಲ್ಕನೇ ಸ್ಥಾನ ಪಡೆದರು. ವಲರಿವನ್ 630.7 ಅಂಕಗಳೊಂದಿಗೆ ಎಂಟನೇ ಸ್ಥಾನ ಪಡೆಯುವ ಮೂಲಕ ಫೈನಲ್‌ಗೆ ಅರ್ಹತೆ ಪಡೆದಿದ್ದರು.

ಯುಪಿ ಟಿ20 ಲೀಗ್‌ನಲ್ಲಿ ರಿಂಕು ಸ್ಫೋಟಕ ಶತಕ

ಲಕ್ನೋ: ಏಷ್ಯಾಕಪ್ ಟಿ20 ಟೂರ್ನಿ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಇರುವಂತೆ ಭಾರತ ತಂಡದ ಸ್ಫೋಟಕ ಬ್ಯಾಟರ್ ರಿಂಕು ಸಿಂಗ್ ಯುಪಿ ಟಿ20 ಲೀಗ್‌ನಲ್ಲಿ ಅದ್ಭುತ ಬ್ಯಾಟಿಂಗ್ ಮೂಲಕ ಶತಕ ಬಾರಿಸಿ ಸಂಭ್ರಮಿಸಿದ್ದಾರೆ.

ಏಷ್ಯಾಕಪ್‌ನಲ್ಲಿ ರಿಂಕು ಕೂಡ ಸ್ಥಾನ ಪಡೆದಿರುವ ಕಾರಣ ಅವರ ಈ ಪ್ರದರ್ಶನ ಮಹತ್ವ ಪಡೆಯಿತು. ಲಕ್ನೋದ ಏಕಾನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 168 ರನ್‌ಗಳ ಸಾಧಾರಣ ಗುರಿಯನ್ನು ಬೆನ್ನಟ್ಟುವ ಸಮಯದಲ್ಲಿ ಮೀರತ್ ತೀವ್ರ ಸಂಕಷ್ಟದಲ್ಲಿ ಸಿಲುಕಿತು. 8ನೇ ಓವರ್‌ನಲ್ಲಿ ಕೇವಲ 38 ರನ್‌ಗಳಿಗೆ 4 ವಿಕೆಟ್‌ಗಳು ಬಿದ್ದಿದ್ದರಿಂದ, ಮೀರತ್ ತಂಡ ಸೋಲಿನ ಭೀತಿಗೆ ಸಿಲುಕಿತು. ಈ ವೇಳೆ ಅಬ್ಬರದ ಬ್ಯಾಟಿಂಗ್ ನಡೆಸಿದ ನಾಯಕ ರಿಂಕು ಸಿಂಗ್ ಇನ್ನೊಂದು ಓವರ್ ಬಾಕಿ ಇರುವಂತೆಯೇ ತಂಡವನ್ನು ಗೆಲುವಿನ ದಡ ಸೇರಿಸಿದರು. ಅವರು 48 ಎಸೆತಗಳಲ್ಲಿ 108 ರನ್ ಗಳಿಸಿ ಅಜೇಯರಾಗಿ ಉಳಿದರು.

ಬೆಂಗಳೂರಿನ ನಿಗದಿತ ಪಂದ್ಯಗಳು ಮುಂಬೈ ಡಿ.ವಿ ಪಾಟೀಲ್ ಕ್ರೀಡಾಂಗಣಕ್ಕೆ ಸ್ಥಳಾಂತರ

ಮಹಿಳಾ ವಿಶ್ವಕಪ್: ಮುಂಬೈಗೆ ಶಿಫ್ಟ್

ದೆಹಲಿ: ಮುಂದಿನ ತಿಂಗಳ ಕೊನೆಯಲ್ಲಿ ಆರಂಭವಾಗುವ ಮಹಿಳಾ ಏಕದಿನ ವಿಶ್ವಕಪ್‌ನ ಕ್ರೀಡಾಂಗಣ ಬದಲಾವಣೆಯನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಶುಕ್ರವಾರ ದೃಢಪಡಿಸಿದೆ. ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಟೂರ್ನಿಯ ಉದ್ಘಾಟನಾ ಪಂದ್ಯ, ಸಂಭಾವ್ಯ ಫೈನಲ್ ಪಂದ್ಯ ಸೇರಿದಂತೆ ಈ ಹಿಂದೆ ನಿರ್ಧರಿಸಿದ್ದ ಪಂದ್ಯಗಳನ್ನು ನವಿ ಮುಂಬೈನ ಡಿ.ವೈ ಪಾಟೀಲ್ ಕ್ರೀಡಾಂಗಣಕ್ಕೆ ಸ್ಥಳಾಂತರಿಸಲಾಗಿದೆ.

ಜೂನ್‌ನಲ್ಲಿ ನಡೆದ ಐಪಿಎಲ್ ಫೈನಲ್ ಪಂದ್ಯದ ನಂತರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಉಂಟಾದ ಕಾಲ್ತುಳಿತ ಘಟನೆಯಲ್ಲಿ 11 ಮಂದಿ ಸಾವನ್ನಪ್ಪಿದ್ದರು. ಈ ಘಟನೆಯ ಬಳಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸಲು ಕರ್ನಾಟಕ ಕ್ರಿಕೆಟ್ ಸಂಸ್ಥೆಯು ರಾಜ್ಯ ಪೊಲೀಸರಿಂದ ಅಗತ್ಯ ಅನುಮೋದನೆಗಳನ್ನು ಪಡೆಯುವಲ್ಲಿ ವಿಫಲವಾದ ಕಾರಣ ಮಹಿಳಾ ವಿಶ್ವಕಪ್‌ನ ಕ್ರೀಡಾಂಗಣ ಬದಲಾವಣೆ ಮಾಡಲಾಗಿದೆ.

ಸೆಪ್ಟೆಂಬರ್ 30ರಂದು ಪ್ರಾರಂಭವಾಗುವ ಎಂಟು ತಂಡಗಳ ಈ ಟೂರ್ನಮೆಂಟ್‌ನ ಐದು ಸ್ಥಳಗಳ ಪೈಕಿ ಬೆಂಗಳೂರಿನ ಬದಲಿಗೆ ನವಿ ಮುಂಬೈ ಸ್ಥಾನ ಪಡೆದಿದೆ ಎಂದು ಐಸಿಸಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಪಂದ್ಯಗಳ ತಾಣ ಬದಲಾವಣೆ ಮಾಡಲಾಗಿದ್ದರೂ, ಮೂಲ ವೇಳಾಪಟ್ಟಿಯಂತೆ ಪಂದ್ಯಗಳು ನಡೆಯಲಿದ್ದು, ದಿನಾಂಕದಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ.

ಹೈಬ್ರಿಡ್ ಮಾದರಿಯಲ್ಲಿ ಟೂರ್ನಿ ನಡೆಯುತ್ತಿರುವ ಕಾರಣ ಪಾಕಿಸ್ತಾನ ಫೈನಲ್ ತಲುಪದಿದ್ದರೆ, ನವಿ ಮುಂಬೈನಲ್ಲಿ ಫೈನಲ್ ನಡೆಯಲಿದೆ. ಪಾಕಿಸ್ತಾನ ಅರ್ಹತೆ ಪಡೆದರೆ ಕೊಲಂಬೊದ ಆರ್. ಪ್ರೇಮದಾಸ ಕ್ರೀಡಾಂಗಣ ಫೈನಲ್ ಅನ್ನು ಆಯೋಜಿಸಲಿದೆ.

ಗುವಾಹಟಿಯ ಬರ್ಸಪರ ಕ್ರಿಕೆಟ್ ಸ್ಟೇಡಿಯಂ, ಇಂದೋರ್‌ನ ಹೋಲ್ಕರ್ ಮೈದಾನ, ವಿಶಾಖಪಟ್ಟಣದ ವೈ. ಎಸ್. ರಾಜಶೇಖರ ರೆಡ್ಡಿ ಕ್ರೀಡಾಂಗಣ ಮತ್ತು ನವಿ ಮುಂಬೈನಲ್ಲಿರುವ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಈ ಟೂರ್ನಿಯ ಪಂದ್ಯಗಳು ನಡೆಯಲಿವೆ. ಉಳಿದಂತೆ, ಪಾಕಿಸ್ತಾನ ಆಡಲಿರುವ ಎಲ್ಲ ಪಂದ್ಯಗಳಿಗೆ ಶ್ರೀಲಂಕಾದ ಆರ್. ಪ್ರೇಮದಾಸ ಕ್ರೀಡಾಂಗಣ ವೇದಿಕೆಯಾಗಲಿದೆ.

ರೌಂಡ್ ರಾಬಿನ್ ಮಾದರಿಯಲ್ಲಿ ನಡೆಯುವ ಈ ಟೂರ್ನಿಯಲ್ಲಿ ಭಾರತ, ಶ್ರೀಲಂಕಾ, ಬಾಂಗ್ಲಾದೇಶ, ಪಾಕಿಸ್ತಾನ, ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ ತಂಡಗಳು ಪಾಲ್ಗೊಳ್ಳಲಿವೆ. ಫೈನಲ್, ಸೆಮಿಫೈನಲ್ ಸೇರಿದಂತೆ ಟೂರ್ನಿಯಲ್ಲಿ 31 ಪಂದ್ಯಗಳು ನಡೆಯಲಿವೆ. ಪಾಕ್ ಪಡೆ ಗುಂಪು ಹಂತದಲ್ಲಿ ಒಟ್ಟು 7 ಪಂದ್ಯಗಳನ್ನು ಆಡಲಿದ್ದು, ಎಲ್ಲಾ ಪಂದ್ಯಗಳೂ ಕೊಲಂಬೊದಲ್ಲೇ ನಡೆಯಲಿವೆ.

ಭಾರತ ಹಾಗೂ ಪಾಕ್ ನಡುವಣ ಪಂದ್ಯವು ಈ ಮೊದಲು ನಿಗದಿಯಾಗಿದ್ದಂತೆ ಅಕ್ಟೋಬರ್ 5ರಂದೇ ನಡೆಯಲಿದೆ. ಟೀಮ್ ಇಂಡಿಯಾ ಉಳಿದಂತೆ ಅಕ್ಟೋಬರ್ 9ರಂದು ದಕ್ಷಿಣ ಆಫ್ರಿಕಾ, ಅಕ್ಟೋಬರ್ 12ರಂದು ಆಸ್ಟ್ರೇಲಿಯಾ, ಅಕ್ಟೋಬರ್ 19ರಂದು ಇಂಗ್ಲೆಂಡ್, ಅಕ್ಟೋಬರ್ 22ರಂದು ನ್ಯೂಜಿಲೆಂಡ್ ಮತ್ತು ಅಕ್ಟೋಬರ್ 22ರಂದು ಬಾಂಗ್ಲಾದೇಶ ವಿರುದ್ಧ ಸೆಣಸಾಟ ನಡೆಯಲಿದೆ.

ಭಾರತ-ಪಾಕ್ ಹೈಬ್ರಿಡ್ ಪಂದ್ಯ

ಈ ವರ್ಷದ ಆರಂಭದಲ್ಲಿ ನಡೆದ ಐಸಿಸಿ ಚಾಂಪಿಯನ್ಸ್ ಟ್ರೋಫಿಯ ವೇಳೆ ಭಾರತ ಪುರುಷರ ತಂಡ, ಅತಿಥೇಯ ಪಾಕಿಸ್ತಾನಕ್ಕೆ ಹೋಗಲು ನಿರಾಕರಿಸಿತ್ತು. ಹಾಗಾಗಿ ಪುರುಷರ ಮತ್ತು ಮಹಿಳಾ ವಿಭಾಗದ ಪ್ರಮುಖ ಟೂರ್ನಿಗಳಿಗೆ ಹೈಬ್ರಿಡ್ ಮಾದರಿ ಅನುಸರಿಸಲು ಉಭಯ ತಂಡಗಳು ಒಪ್ಪಿದ್ದವು. ಅದರಂತೆ ಭಾರತ ಅತಿಥ್ಯ ವಹಿಸಿರುವ ಈ ಮಹಿಳಾ ವಿಶ್ವಕಪ್ ಟೂರ್ನಿಗೆ ಕೊಲಂಬೊವನ್ನು ತಟಸ್ಥ ತಾಣವಾಗಿ ಆಯ್ಕೆ ಮಾಡಲಾಗಿದೆ.

ಲುಂಗಿ ಎನ್ಗಿಡಿ ಮಾರಕ ದಾಳಿಗೆ ಆಸೀಸ್ ತತ್ತರ

ಏಕದಿನ ಸರಣಿ ಗೆದ್ದ ದ. ಆಫ್ರಿಕಾ

ಮೆಕೆ (ದಕ್ಷಿಣ ಆಫ್ರಿಕಾ): ಮ್ಯಾಥ್ಯೂ ಬ್ರೀಟ್ಜ್ಕೆ (88 ರನ್) ಅರ್ಧಶತಕ ಹಾಗೂ ಲುಂಗಿ ಎನ್ಗಿಡಿ (42 ರನ್‌ಗೆ 5 ವಿಕೆಟ್) ಅವರ ಮಾರಕ ಬೌಲಿಂಗ್ ದಾಳಿಯ ಸಹಾಯದಿಂದ ದಕ್ಷಿಣ ಆಫ್ರಿಕಾ ತಂಡವು, ಎರಡನೇ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ 84 ರನ್‌ಗಳ ಅಂತರದಲ್ಲಿ ಭರ್ಜರಿ ಗೆಲುವು ಪಡೆಯಿತು. ಒಂದು ಪಂದ್ಯ ಬಾಕಿ ಇರುವಾಗಲೇ ಏಡೆನ್ ಮಾರ್ಕ್ರಮ್ ಅವರ ನಾಯಕತ್ವದ ಹರಿಣ ಪಡೆ ಮೂರು ಪಂದ್ಯಗಳ ಏಕದಿನ ಸರಣಿಯನ್ನು 2-0 ಅಂತರದಲ್ಲಿ ವಶಪಡಿಸಿಕೊಂಡಿತು. ಮಾರಕ ಬೌಲಿಂಗ್ ದಾಳಿ ನಡೆಸಿ ಆಸೀಸ್ ತಂಡದ 5 ವಿಕೆಟ್ ಕಿತ್ತ ಲುಂಗಿ ಎನ್ಗಿಡಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಲ್ಲಿನ ಗ್ರೇಟ್ ಬ್ಯಾರಿಯರ್ ರೀಫ್ ಅರೆನಾದಲ್ಲಿ ಶುಕ್ರವಾರ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ್ದ ದಕ್ಷಿಣ ಆಫ್ರಿಕಾ ತಂಡ, ಮ್ಯಾಥ್ಯೂ ಬ್ರೀಟ್ಜ್ಕೆ ಹಾಗೂ ಟ್ರಿಸ್ಟನ್ ಸ್ಟಬ್ಸ್ ಅವರ ಅರ್ಧಶತಕಗಳ ಬಲದಿಂದ 49.1 ಓವರ್‌ಗಳಿಗೆ 277 ರನ್‌ಗಳಿಗೆ ಆಲ್‌ಔಟ್ ಆಯಿತು. ಆ ಮೂಲಕ ಎದುರಾಳಿ ಆಸ್ಟ್ರೇಲಿಯಾ ತಂಡಕ್ಕೆ 278 ರನ್‌ಗಳ ಗುರಿಯನ್ನು ನೀಡಿತು. ಆದರೆ ಆಸ್ಟ್ರೇಲಿಯಾ ತಂಡ, ಲುಂಗಿ ಎನ್ಗಿಡಿ ಅವರ ಮಾರಕ ಬೌಲಿಂಗ್ ದಾಳಿಗೆ ನಲುಗಿ 37.4 ಓವರ್‌ಗಳಿಗೆ 193 ರನ್‌ಗಳಿಗೆ ಆಲೌಟ್ ಆಯಿತು.

ಆಸೀಸ್‌ಗೆ ಆರಂಭಿಕ ಆಘಾತ: ಗುರಿ ಹಿಂಬಾಲಿಸಿದ ಆಸ್ಟ್ರೇಲಿಯಾ ತಂಡದ ಅಗ್ರ ಬ್ಯಾಟ್ಸ್‌ಮನ್‌ಗಳು ಆರಂಭದಲ್ಲೇ ವೈಫಲ್ಯ ಕಂಡರು. ಟ್ರಾವಿಸ್ ಹೆಡ್ (6), ಮಾರ್ನಸ್ ಲಾಬುಶೇನ್ (1) ಹಾಗೂ ಮಿಚೆಲ್ ಮಾರ್ಷ್ (18) ಅವರು ಹೊಸ ಚೆಂಡನ್ನು ಎದುರಿಸುವಲ್ಲಿ ವಿಫಲರಾಗಿ ಬೇಗ ವಿಕೆಟ್ ಒಪ್ಪಿಸಿದರು. ನಾಲ್ಕನೇ ವಿಕೆಟ್‌ಗೆ ಜೊತೆಯಾದ ಕ್ಯಾಮೆರಾನ್ ಮತ್ತು ಜಾಶ್ ಇಂಗ್ಲಿಸ್ 67 ರನ್‌ಗಳ ಜತೆಯಾಟ ಪ್ರದರ್ಶಿಸಿ, ಆ ಮೂಲಕ ಮೂರು ವಿಕೆಟ್ ಕಳೆದುಕೊಂಡಿದ್ದ ಆಸೀಸ್‌ಗೆ ಆಸರೆಯಾಯಿತು.

ಏಕೈಕ ಮಹಿಳಾ ಟೆಸ್ಟ್ ಪಂದ್ಯ | ಭಾರತ ವನಿತೆಯರಿಗೆ ಮೇಲುಗೈ

ಆಸೀಸ್-ಎ ತಂಡಕ್ಕೆ ಕಡಿವಾಣ

ಬ್ರಿಸ್ಬೇನ್: ಮಧ್ಯಮ ಕ್ರಮಾಂಕದ ಬ್ಯಾಟರ್ ರಾಘವಿ ಬಿಷ್ಟ್ ಅವರ 93 ರನ್, ಕೆಳಕ್ರಮಾಂಕದ ವಿ.ಜೆ. ಜೋಶಿತಾ (51) ಅವರ ಅರ್ಧ ಶತಕದ ನೆರವಿನಿಂದ ಭಾರತ-ಎ ತಂಡವು ಇಲ್ಲಿ ನಡೆಯುತ್ತಿರುವ ಏಕೈಕ ಟೆಸ್ಟ್ ಪಂದ್ಯದ ಎರಡನೇ ದಿನವಾದ ಶುಕ್ರವಾರ ಆಸ್ಟ್ರೇಲಿಯಾ-ಎ ವಿರುದ್ಧ ಆರಂಭಿಕ ಹಿನ್ನಡೆಯಿಂದ ಚೇತರಿಸಿ, 299 ರನ್‌ಗಳ ಸವಾಲಿನ ಮೊತ್ತ ಗಳಿಸಿತು.

ಮೊದಲ ಇನ್ನಿಂಗ್ಸ್ ಆರಂಭಿಸಿದ ಆಸ್ಟ್ರೇಲಿಯಾಕ್ಕೆ ಭಾರತದ ಬೌಲರ್‌ಗಳು ಕಡಿವಾಣ ಹಾಕಿದರು. ಎರಡನೇ ದಿನದಾಟ ಮುಗಿದಾಗ ಆತಿಥೇಯರು 5 ವಿಕೆಟ್‌ಗೆ 158 ರನ್ ಗಳಿಸಿದರು.

ಮೊದಲ ದಿನ ಮಳೆಯಿಂದಾಗಿ ಹೆಚ್ಚಿನ ಅವಧಿಯ ಆಟ ಸಾಧ್ಯವಾಗಿರಲಿಲ್ಲ. 23.2 ಓವರುಗಳ ಆಟ ನಡೆದಿದ್ದು, ಭಾರತ-ಎ ತಂಡವು ಆರಂಭಿಕ ಕುಸಿತ ಕಂಡು 5 ವಿಕೆಟ್‌ಗೆ 93 ರನ್ ಗಳಿಸಿತ್ತು, ಆದರೆ ರಾಘವಿ ಮತ್ತು ಜೋಶಿತಾ ಜೋಡಿಯಿಂದಾಗಿ ತಂಡ ಸುಸ್ಥಿತಿಗೆ ತಲುಪಿತು. ರಾಘವಿ 153 ಎಸೆತಗಳನ್ನು ಆಡಿ 16 ಬೌಂಡರಿಗಳನ್ನು ಬಾರಿಸಿದರು. ರಾಧಾ ಯಾದವ್ 33 ರನ್ ಗಳಿಸಿದರು. ನಂತರ ಮಿನ್ನುಮಣಿ ಕೂಡಾ ಉತ್ತಮವಾಗಿ ಬ್ಯಾಟಿಂಗ್ ಮಾಡಿದ್ದರಿಂದ ಭಾರತ ಮಹಿಳಾ ತಂಡ ಗೌರವಯುತ ಮೊತ್ತ ದಾಖಲಿಸಿತು.

ಜೋಶಿತಾ 72 ಎಸೆತಗಳಲ್ಲಿ 7 ಬೌಂಡರಿಗಳಿದ್ದ 51 ರನ್ ಗಳಿಸಿದರು. ಅವರು ತಿತಾಸ್ ಸಾಧು (23) ಜೊತೆ ಒಂಬತ್ತನೇ ವಿಕೆಟ್‌ಗೆ ಅಮೂಲ್ಯ 75 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು

ಭಾರತ-ಎ ತಂಡ: ಪ್ರಥಮ ಇನ್ನಿಂಗ್ಸ್: 299 (ರಾಘವಿ 93, ರಾಧಾ ಯಾದವ್ 33, ಮಿನ್ನುಮಣಿ 28, ವಿ.ಜೆ.ಜೋಶಿತಾ 51, ತಿತಾಸ್ ಸಾಧು 23, ಮೈತ್ಲಾನ್ ಬ್ರೌನ್ 65ಕ್ಕೆ 3, 37ಕ್ಕೆ3).

ಆಸ್ಟ್ರೇಲಿಯಾ-ಎ ತಂಡ: 43 ಓವರುಗಳಲ್ಲಿ 5ಕ್ಕೆ 158 (ತಹಿಲಾ ವಿಲ್ಸನ್ 49, ನಿಕೋಲ್ ಫಾಲ್ಟಮ್ ಬ್ಯಾಟಿಂಗ್ 30, ಸಿಯನ್ನಾ ಜಿಂಜರ್ ಬ್ಯಾಟಿಂಗ್ 24, ಸೈಮಾ ಠಾಕೂರ್ 21ಕ್ಕೆ 2, ರಾಧಾ ಯಾದವ್ 40ಕ್ಕೆ 2).

ಭಾರತ ಪರ 50 ಏಕದಿನ, 37 ಟಿ20 ಪಂದ್ಯ
ಹದಿನೇಳು ವರ್ಷಗಳ ಕ್ರಿಕೆಟ್ ವೃತ್ತಿಜೀವನ

ಕ್ರಿಕೆಟ್‌ಗೆ ಗೌಹರ್ ನಿವೃತ್ತಿ ಘೋಷಣೆ

ದೆಹಲಿ: ಭಾರತ ಮಹಿಳಾ ಕ್ರಿಕೆಟ್ ತಂಡದ ಎಡಗೈ ಸ್ಪಿನ್ನರ್ ಗೌಹರ್ ಸುಲ್ತಾನ ಎಲ್ಲಾ ರೀತಿಯ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದಾರೆ.

ವೈಟ್‌ಬಾಲ್ ಮಾದರಿಗಳಲ್ಲಿ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದ ಸುಲ್ತಾನ ತಮ್ಮ 17 ವರ್ಷಗಳ ಕ್ರಿಕೆಟ್ ವೃತ್ತಿಜೀವನಕ್ಕೆ ತೆರೆ ಎಳೆದಿದ್ದಾರೆ. ಮಿಥಾಲಿ ರಾಜ್ ನಾಯಕತ್ವದ ತಂಡದಲ್ಲಿ ಗೌಹರ್ ಸುಲ್ತಾನ ತಂಡದ ಪ್ರಮುಖ ಸ್ಪಿನ್ನರ್ ಆಗಿ ಗುರುತಿಸಿಕೊಂಡಿದ್ದರು.

2008ರಲ್ಲಿ ಏಕದಿನ ಮತ್ತು ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಗೌಹರ್ ಸುಲ್ತಾನ ಭಾರತ ಪರ ಒಟ್ಟು 50 ಏಕದಿನ ಮತ್ತು 37 ಟಿ20 ಪಂದ್ಯಗಳನ್ನು ಆಡಿದ್ದಾರೆ. ಏಕದಿನದಲ್ಲಿ 66, ಟಿ20ಯಲ್ಲಿ 29 ವಿಕೆಟ್ ಕಿತ್ತ ಸಾಧನೆ ಮಾಡಿದ್ದಾರೆ. ಏಕದಿನದಲ್ಲಿ 4 ರನ್‌ಗೆ 4 ವಿಕೆಟ್ ಕಿತ್ತದ್ದು ಅವರ ವೈಯಕ್ತಿಕ ಅತ್ಯುತ್ತಮ ಬೌಲಿಂಗ್ ಸಾಧನೆಯಾಗಿದೆ. ಗೌಹರ್ ಕೊನೆಯ ಬಾರಿಗೆ ಭಾರತ ಪರ 2014ರಲ್ಲಿ ಪಾಕಿಸ್ತಾನ ವಿರುದ್ಧ ಟಿ 20 ಆಡಿದ್ದರು. 50 ಓವರ್‌ಗಳ ಸ್ವರೂಪದಲ್ಲಿ, ಅವರು ಕೊನೆಯ ಬಾರಿಗೆ 2014ರಲ್ಲಿ ಶ್ರೀಲಂಕಾ ವಿರುದ್ಧ ಆಡಿದ್ದರು, ಅದಾದ ಬಳಿಕ ಅವರಿಗೆ ಅವಕಾಶ ಸಿಕ್ಕಿರಲಿಲ್ಲ.

37 ವರ್ಷದ ಗೌಹರ್ ಸುಲ್ತಾನ ಇನ್‌ಸ್ಟಾಗ್ರಾಮ್‌ನಲ್ಲಿ ತಮ್ಮ ನಿವೃತ್ತಿಯ ಸುದ್ದಿಯನ್ನು ಪ್ರಕಟಿಸಿದ್ದಾರೆ. 'ವರ್ಷಗಳ ಕಾಲ ಹೆಮ್ಮೆ, ಉತ್ಸಾಹ ಮತ್ತು ಉದ್ದೇಶದೊಂದಿಗೆ ಭಾರತೀಯ ಜೆರ್ಸಿಯನ್ನು ಧರಿಸಿದ ನಂತರ, ನನ್ನ ಕ್ರಿಕೆಟ್ ಪ್ರಯಾಣದ ಅತ್ಯಂತ ಭಾವನಾತ್ಮಕ ಟಿಪ್ಪಣಿಯನ್ನು ಬರೆಯುವ ಸಮಯ ಬಂದಿದೆ. ನೆನಪುಗಳಿಂದ ತುಂಬಿದ ಹೃದಯ ಮತ್ತು ಕೃತಜ್ಞತೆಯಿಂದ ತುಂಬಿದ ಕಣ್ಣುಗಳೊಂದಿಗೆ, ನಾನು ಎಲ್ಲಾ ರೀತಿಯ ಆಟಗಳಿಂದ ನಿವೃತ್ತಿ ಘೋಷಿಸುತ್ತೇನೆ' ಎಂದು ಅವರು ಬರೆದಿದ್ದಾರೆ.

ದೇಶೀಯ ಕ್ರಿಕೆಟ್‌ನಲ್ಲಿ ಅವರು ಹೈದರಾಬಾದ್, ಪುದುಚೇರಿ, ರೈಲ್ವೇಸ್ ಮತ್ತು ಬಂಗಾಳ ಪರ ಆಡಿದ್ದರು. ಮಹಿಳಾ ಪ್ರೀಮಿಯರ್ ಲೀಗ್‌ನ ಎರಡು ಋತುಗಳಲ್ಲಿ ಅವರು ಯು.ಪಿ ವಾರಿಯರ್ಸ್ ಪರ ಕೆಲವು ಪಂದ್ಯಗಳನ್ನು ಆಡಿದ್ದರು.

2036ರ ಒಲಿಂಪಿಕ್ಸ್ ಆಯೋಜನೆಗಾಗಿ ಅಗತ್ಯ ನೆರವು ನೀಡುವುದಾಗಿ ಆಸೀಸ್ ಪ್ರಕಟಣೆ

ಭಾರತಕ್ಕೆ ಆಸ್ಟ್ರೇಲಿಯಾ ಬೆಂಬಲ

ಸಿಡ್ನಿ: ಭಾರತೀಯ ಒಲಿಂಪಿಕ್ ಅಸೋಸಿಯೇಷನ್ 2036ರ ಒಲಿಂಪಿಕ್ ಕ್ರೀಡಾಕೂಟವನ್ನು ಆಯೋಜಿಸುವ ಮಹತ್ವಾಕಾಂಕ್ಷೆಯ ಪ್ರಯತ್ನದಲ್ಲಿರುವಾಗಲೇ, ಇಂತಹ ಮಹತ್ವದ ಕಾರ್ಯಕ್ಕೆ ಅಗತ್ಯವಾದ ಸಾಮರ್ಥ್ಯಗಳನ್ನು ನಿರ್ಮಿಸಲು ಭಾರತಕ್ಕೆ ಸಹಾಯ ಮಾಡುವಲ್ಲಿ ತನ್ನ ಬೆಂಬಲ ನೀಡುವುದಾಗಿ ಆಸ್ಟ್ರೇಲಿಯಾ ತಿಳಿಸಿದೆ.

ಮುಂಬರುವ ಒಲಿಂಪಿಕ್ಸ್ ಕ್ರೀಡಾಕೂಟಗಳ ಆಯೋಜನೆಗಾಗಿ ಕೆಲವೇ ದಿನಗಳಲ್ಲಿ ಬಿಡ್ಡಿಂಗ್ ಪ್ರಕ್ರಿಯೆ ಪ್ರಾರಂಭವಾಗಲಿದೆ. ಈ ನಿಟ್ಟಿನಲ್ಲಿ ಭಾರತಕ್ಕೆ ಏನೇ ಅಗತ್ಯವಿದ್ದರೂ ನಾವು ಸಹಾಯ ಮಾಡಲು ಸಿದ್ಧರಿದ್ದೇವೆ ಎಂದು ಆಸ್ಟ್ರೇಲಿಯಾ ತಿಳಿಸಿದೆ.

ಮಾಧ್ಯಮಗಳ ಜತೆ ಮಾತನಾಡಿದ ಆಸ್ಟ್ರೇಲಿಯಾದ ಹೈಕಮಿಷನರ್ ಫಿಲಿಪ್ ಗ್ರೀನ್, ತಮ್ಮ ದೇಶವು 2032ರಲ್ಲಿ ಒಲಿಂಪಿಕ್ಸ್ ಆಯೋಜಿಸಲಿದೆ. ಮತ್ತೊಂದೆಡೆ ಭಾರತವು ಅವುಗಳ ಜೊತೆಗೆ ಒಲಿಂಪಿಕ್ಸ್, ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು ಏಷ್ಯನ್ ಕ್ರೀಡಾಕೂಟಗಳನ್ನು ಆಯೋಜಿಸಲು ಸಿದ್ಧತೆ ನಡೆಸುತ್ತಿದೆ. ಈ ಕುರಿತು ಎರಡೂ ದೇಶಗಳ ನಡುವಿನ ಚರ್ಚೆಗಳನ್ನು ವಿಸ್ತರಿಸಲು ನಾವು ಬಯಸುತ್ತೇವೆ. ಭಾರತದೊಂದಿಗೆ ಈ ನಿಟ್ಟಿನಲ್ಲಿ ಸಹಕರಿಸಲು ಆಸ್ಟ್ರೇಲಿಯಾ ಬಯಸುತ್ತದೆ ಎಂದರು.

ಆಸ್ಟ್ರೇಲಿಯಾ ಇದುವರೆಗೆ ಎರಡು ಬಾರಿ ಒಲಿಂಪಿಕ್ಸ್ ಅನ್ನು ಆಯೋಜಿಸಿದೆ. 1956ರಲ್ಲಿ ಮೆಲ್ಬೋರ್ನ್‌ನಲ್ಲಿ ಮತ್ತು 2000ರಲ್ಲಿ ಸಿಡ್ನಿಯಲ್ಲಿ ಒಲಿಂಪಿಕ್ಸ್ ಆಯೋಜಿಸಿತ್ತು. ಇದೀಗ ಮೂರನೇ ಬಾರಿಗೂ ಆತಿಥ್ಯ ವಹಿಸಿಕೊಳ್ಳಲು ತಯಾರಿ ನಡೆಸುತ್ತಿದೆ, ಇದಲ್ಲದೇ 1982, 2006 ಮತ್ತು 2018ರಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟವನ್ನೂ ಸಹ ಆಸ್ಟ್ರೇಲಿಯಾ ಆಯೋಜಿಸಿತ್ತು.

ಡಿಸೆಂಬರ್ 25ಕ್ಕೆ 45 ತೆರೆಗೆ

ಅರ್ಜುನ್ ಜನ್ಯ ನಿರ್ದೇಶನದ ಮಲ್ಟಿಸ್ಟಾರ್ ಸಿನಿಮಾ 45 ಸೆಟ್ಟೇರಿದಾಗಿನಿಂದಲೂ ಕುತೂಹಲ ಮೂಡಿಸುತ್ತಿದೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಈ ಚಿತ್ರ ಸ್ವಾತಂತ್ರ್ಯ ದಿನದಂದೇ ತೆರೆಗೆ ಬರಬೇಕಿತ್ತು. ಆದರೆ ಚಿತ್ರದ ತಾಂತ್ರಿಕ ಕೆಲಸಗಳು ತಡವಾಗಿದ್ದರಿಂದ ಸಿನಿಮಾದ ಬಿಡುಗಡೆ ಮುಂದಕ್ಕೆ ಹೋಗಿದೆ. 45 ಡಿಸೆಂಬರ್ 25ರಂದು ಅದ್ದೂರಿಯಾಗಿ ತೆರೆಗೆ ಬರಲಿದ್ದು, ಕ್ರಿಸ್‌ಮಸ್ ಹಬ್ಬದ ಸಂಭ್ರಮ ಹೆಚ್ಚಿಸಲಿದೆ.

ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್, ಉಪೇಂದ್ರ, ಹಾಗೂ ರಾಜ್.ಬಿ.ಶೆಟ್ಟಿ ಪ್ರಮುಖಪಾತ್ರದಲ್ಲಿ ನಟಿಸಿರುವ 45 ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು ಸೂರಜ್ ಪ್ರೊಡಕ್ಷನ್ ಲಾಂಛನದಲ್ಲಿ ರಮೇಶ್ ರೆಡ್ಡಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ನಾವು ಈ ಹಿಂದೆ ನಮ್ಮ ಚಿತ್ರವನ್ನು ಆಗಸ್ಟ್ 15ರಂದು ಬಿಡುಗಡೆ ಮಾಡುವುದಾಗಿ ತಿಳಿಸಿದ್ದೆವು. ಕೆನಡಾದಲ್ಲಿ ನಮ್ಮ ಚಿತ್ರದ ವಿ.ಎಫ್. ಎಕ್ಸ್ ನಡೆಯುತ್ತಿದೆ. ನಮ್ಮ ಚಿತ್ರದಲ್ಲಿ ಸಿಜಿ ವರ್ಕ್ ಮಹತ್ವದ ಪಾತ್ರ ವಹಿಸಲಿದೆ. ಚಿತ್ರದಲ್ಲಿ ನಲವತ್ತು ಭಾಗದಷ್ಟು ಗ್ರಾಫಿಕ್ ಇರುತ್ತದೆ. ಕೆನಡಾದಲ್ಲಿ ಸಾಕಷ್ಟು ನುರಿತ ಹಾಲಿವುಡ್ ತಂತ್ರಜ್ಞರು ವಿಎಫ್‌ಎಕ್ಸ್ ಕೆಲಸ ಮಾಡುತ್ತಿದ್ದಾರೆ. ಹಾಗಾಗಿಯೇ ಬಿಡುಗಡೆ ತಡವಾಗಿದೆ. ಸ್ವಲ್ಪ ತಡವಾದರೂ ಎಲ್ಲರೂ ಮೆಚ್ಚುವಂತಹ ಚಿತ್ರವನ್ನು ಪ್ರೇಕ್ಷಕರಿಗೆ ನೀಡುವ ಉದ್ದೇಶ ನಮ್ಮದು. ಇನ್ನು ಕೆಲವೇ ದಿನಗಳಲ್ಲಿ ಸಿಜಿ ಕೆಲಸ ಪೂರ್ಣವಾಗಲಿದೆ. ಡಿಸೆಂಬರ್ 25 ರಂದು ನಮ್ಮ ಚಿತ್ರ ಬಿಡುಗಡೆಯಾಗಲಿದೆ. ಸಾಲು ಸಾಲು ರಜೆ ಇದ್ದರೆ, ಪ್ರೇಕ್ಷಕರು ಕುಟುಂಬ ಸಮೇತ ಚಿತ್ರ ನೋಡಲು ಬರುವುದಕ್ಕೆ ಸಮಯ ಸಿಗುತ್ತದೆ. ಹಾಗಾಗಿಯೇ ಡಿಸೆಂಬರ್‌ನಲ್ಲಿ ಸಿನಿಮಾ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಅರ್ಜುನ್ ಜನ್ಯ ತಿಳಿಸಿದರು.

ನಮ್ಮ 45 ಚಿತ್ರ ಡಿಸೆಂಬರ್ 25 ರಂದು ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ನನಗೆ ತಿಳಿದಿರುವ ಹಾಗೆ ಕನ್ನಡದ ಯಾವುದೇ ಚಿತ್ರಗಳಲ್ಲಿ ಇಷ್ಟು ಗ್ರಾಫಿಕ್ ವರ್ಕ್ ಇಲ್ಲ. ನಾವು ಬೇಕು ಅಂತ ಅಷ್ಟು ಸಿಜಿ ವರ್ಕ್ ಮಾಡಿಸುತ್ತಿಲ್ಲ. ಸಿನಿಮಾ ಕಥೆ ಅದನ್ನು ಕೇಳುತ್ತದೆ. ಯಾವುದೇ ಕೊರತೆ ಬಾರದ ಹಾಗೆ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದೇನೆ. ನಮ್ಮ ಚಿತ್ರ ಪ್ರೇಕ್ಷಕರಿಗೆ ನಿರಾಸೆ ಮಾಡುವುದಿಲ್ಲ, ಅಂತಹ ಉತ್ತಮ ಚಿತ್ರವಾಗಿ 45 ಮೂಡಿಬರುತ್ತಿದೆ. ತೆಲುಗಿನಲ್ಲಿ ವಿತರಣೆಯ ಹಕ್ಕನ್ನು ಮೈತ್ರಿ ಮೂವಿ ಮೇಕರ್ಸ್ ಅವರು ಕೇಳಿದ್ದಾರೆ ಎಂದು ನಿರ್ಮಾಪಕ ರಮೇಶ್ ರೆಡ್ಡಿ ಹೇಳಿದರು.

ಎಮೋಷನ್ಸ್ ಬೆರೆತ ಉಸಿರು

ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರದ ಉಸಿರು ಚಿತ್ರ ತೆರೆಗೆ ಸಿದ್ಧವಾಗಿದ್ದು, ಮುಂದಿನ ವಾರ ರಾಜ್ಯಾದ್ಯಂತ ತೆರೆಗೆ ಬರಲಿದೆ. ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು ಸಿನಿಮಾದ ಬಗ್ಗೆ ನಿರೀಕ್ಷೆ ದುಪ್ಪಟ್ಟುಗೊಳಿಸಿದೆ. ಅನಾಮಧೇಯ ವ್ಯಕ್ತಿಯಿಂದ ಹೆಂಡತಿಯ ಪ್ರಾಣಕ್ಕೆ ಆಪತ್ತು ಬಂದಾಗ, ಪೊಲೀಸ್ ಅಧಿಕಾರಿಯೊಬ್ಬ ತನ್ನ ಪತ್ನಿಯನ್ನು ಹೇಗೆ ಕಾಪಾಡಿಕೊಳ್ಳುತ್ತಾನೆ ಎಂಬುದನ್ನು ಇಲ್ಲಿ ಸಸ್ಪೆನ್ಸ್ ಜತೆಗೆ ಎಮೋಷನ್ ಬೆರೆಸಿ ತೆರೆಗೆ ತರಲಾಗುತ್ತಿದೆ. ಪನೇಮ್ ಪ್ರಭಾಕರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರದಲ್ಲಿ ನಟ ತಿಲಕ್ ಶೇಖರ್ ನಾಯಕನಾಗಿ ನಟಿಸಿದ್ದು, ಪ್ರಿಯಾ ಹೆಗ್ಡೆ ನಾಯಕಿಯಾಗಿ ಅಭಿನಯಿಸಿದ್ದಾರೆ. ಸಂತೋಷ್ ನಂದಿವಾಡ, ಅಪೂರ್ವಾ ನಾಗರಾಜು, ಅರುಣ್ ಮುಂತಾದವರು ತಾರಾಗಣದಲ್ಲಿದ್ದಾರೆ. ಆರ್. ಎಸ್.ಪಿ.ಪ್ರೊಡಕ್ಷನ್ಸ್‌ನಲ್ಲಿ ಲಕ್ಷ್ಮಿ ಹರೀಶ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಚಿತ್ರದ ಹಾಡುಗಳಿಗೆ ಆರ್.ಎಸ್.ಗಣೇಶ್ ನಾರಾಯಣ್ ಸಂಗೀತ ಸಂಯೋಜಿಸಿದ್ದು, ಭೈರವರಾಮ ಸಂಭಾಷಣೆಯ ಜತೆಗೆ ಸಾಹಿತ್ಯ ರಚಿಸಿದ್ದಾರೆ. ಬೆಂಗಳೂರು, ಚಿಕ್ಕಮಗಳೂರು, ಮೂಡಿಗೆರೆ ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ.

ಚಿತ್ರದ ಟೈಟಲ್ ಕೇಳಿದಾಗ ಇದೊಂದು ಲವ್ ಸ್ಟೋರಿ ಇರಬೇಕು ಅನ್ನಿಸುತ್ತದೆ, ಆದರೆ ಚಿತ್ರದಲ್ಲಿ ಕುತೂಹಲಭರಿತ ಕಥೆಯಿದೆ. ನನ್ನ ಪಾತ್ರ ಹಲವು ಶೇಡ್‌ಗಳಲ್ಲಿ ಸಾಗುತ್ತದೆ. ಚಿತ್ರದ ಕಥೆಗೆ ತಿರುವು ನೀಡುವ ಪಾತ್ರ ನನ್ನದಾಗಿದೆ ಎಂದು ಪ್ರಿಯಾ ಹೆಗ್ಡೆ ಹೇಳಿದರು.

ನನ್ನ ನಿರ್ದೇಶನದ ಪ್ರಥಮ ಚಿತ್ರವಿದು, ಒಂದೊಳ್ಳೆಯ ಚಿತ್ರತಂಡದ ಸಹಕಾರದಿಂದ ಒಳ್ಳೆಯ ಸಿನಿಮಾ ಮೂಡಿಬಂದಿದೆ. ನಮ್ಮ ಚಿತ್ರದಲ್ಲಿ ಕಥೆಯೇ ನಾಯಕ. ಗಂಡನ ಪ್ರೀತಿ, ಸ್ನೇಹ ಸಂಬಂಧ ಹೀಗೆ ಎಲ್ಲಾ ರೀತಿಯ ಎಮೋಷನ್ಸ್ ಚಿತ್ರದಲ್ಲಿದ್ದು, ಪ್ರತಿ ಪಾತ್ರಕ್ಕೂ ಅದರದೇ ಆದ ಪ್ರಾಮುಖ್ಯತೆಯಿದೆ. ಚಿತ್ರದಲ್ಲಿ 07.08.09 ನಂಬರ್ ಮಹತ್ವದ್ದಾಗಿದೆ, ಅದು ಯಾಕೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

-ಪನೇಮ್ ಪ್ರಭಾಕರ್ ನಿರ್ದೇಶಕ

ಈ ಚಿತ್ರದಲ್ಲಿ ನಾನು ಇನ್‌ವೆಸ್ಟಿಗೇಶನ್ ಆಫೀಸರ್ ಆಗಿ ನಟಿಸಿದ್ದೇನೆ, ಈ ರೀತಿಯ ಕಾನ್ಸೆಪ್ಟ್ ಹೊಸತು. ಡೈರೆಕ್ಟರ್ ಬಂದು ನನಗೆ ಕಥೆ ಹೇಳಿದಾಗ ಟೈಟಲ್ ಸೂಟ್ ಆಗೋದಿಲ್ಲ ಅನ್ನಿಸಿತ್ತು. ಆದರೆ ಶೂಟಿಂಗ್ ಮಾಡುತ್ತಾ ಹೋದಂತೆ ಶೀರ್ಷಿಕೆ ಕಥೆಗೆ ಹೊಂದುತ್ತದೆ ಎನ್ನಿಸಿತು. ಇದು ಬರೀ ಮರ್ಡರ್ ಮಿಸ್ಟ್ರಿಯಲ್ಲ, ಹಲವು ಆಯಾಮಗಳಲ್ಲಿ ಕಥೆ ಸಾಗುತ್ತದೆ. ಚಿತ್ರ ಎಲ್ಲರಿಗೂ ಕನೆಕ್ಟ್ ಆಗಲಿದೆ.

-ತಿಲಕ್ ಶೇಖರ್ ನಟ

ನಿದ್ರಾದೇವಿಯ ಟೈಟಲ್ ಸಾಂಗ್

ಜಯರಾಮ ದೇವಸಮುದ್ರ ನಿರ್ಮಿಸಿರುವ ನಿದ್ರಾದೇವಿ ನೆಕ್ಸ್ಟ್ ಡೋರ್ ಚಿತ್ರದ ಟೈಟಲ್ ಸಾಂಗ್ ರಿಲೀಸ್ ಆಗಿದೆ. ಪವನ್ ಭಟ್ ಸಾಹಿತ್ಯ ರಚಿಸಿರುವ ನಿದ್ರಾದೇವಿ ಬಾ... ಎಂಬ ಶೀರ್ಷಿಕೆ ಗೀತೆ ಇದಾಗಿದ್ದು, ಶ್ರೀಲಕ್ಷ್ಮೀ ಬೆಳ್ಮಣು ಹಾಡಿಗೆ ದನಿಯಾಗಿದ್ದಾರೆ. ನಕುಲ ಅಭಯಂಕರ್ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಈ ಗೀತೆ ಕೇಳಲು ಮಧುರವಾಗಿದೆ. ತಾಯಿ, ಮಗನ ಬಾಂಧವ್ಯ ಸಾರುವ ಈ ಹಾಡಿನಲ್ಲಿ ಹಿರಿಯ ನಟಿ ಸುಧಾರಾಣಿ ಹಾಗೂ ಮಾಸ್ಟರ್ ಸುಜಯ್ ಅಭಿನಯಿಸಿದ್ದಾರೆ. ಸುರಾಗ್ ನಿರ್ದೇಶನದ ಈ ಚಿತ್ರದಲ್ಲಿ ಪ್ರವೀರ್ ಶೆಟ್ಟಿ ನಾಯಕನಾಗಿ ನಟಿಸಿದ್ದು, ರಿಷಿಕಾ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ.

ನಾನು ಈ ಹಿಂದೆಯೂ ಸುಧಾರಾಣಿ ಅವರೊಂದಿಗೆ ಅಭಿನಯಿಸಿದ್ದೆ. ಇದು ನಾನು ಅವರ ಜತೆಗೆ ಅಭಿನಯಿಸುತ್ತಿರುವ ಎರಡನೇ ಚಿತ್ರ. ಅವರೊಂದಿಗೆ ಜತೆಗೆ ನಟಿಸಿದ್ದು ಖುಷಿಕೊಟ್ಟಿದೆ. ಇಂದು ಬಿಡುಗಡೆಯಾಗಿರುವ ಹಾಡು ಚೆನ್ನಾಗಿದೆ ಎಂದು ರಿಷಿಕಾ ಹೇಳಿದರು.

ಸಾಮಾನ್ಯವಾಗಿ ತಂದೆಗೆ ಮಗಳ ಮೇಲೆ, ತಾಯಿಗೆ ಮಗನ ಮೇಲೆ ಪ್ರೀತಿ ಜಾಸ್ತಿ ಎಂಬುವುದು ವಾಡಿಕೆ. ಇಂದು ನಮ್ಮ ಚಿತ್ರದ ತಾಯಿ, ಮಗನ ಬಾಂಧವ್ಯ ಸಾರುವ ನಿದ್ರಾದೇವಿ ಬಾ... ಎಂಬ ಟೈಟಲ್ ಸಾಂಗ್ ಬಿಡುಗಡೆಯಾಗಿದೆ. ಶ್ರೀದೇವಿ ಬೆಳ್ಮಣು ಸುಶ್ರಾವ್ಯವಾಗಿ ಹಾಡಿದ್ದಾರೆ. ಸಾಹಸ ಸಿಂಹ ವಿಷ್ಣುವರ್ಧನ್ ಅಭಿನಯದ ಜನಪ್ರಿಯ ಜೋ ಜೋ ಲಾಲಿ.. ಎಂಬ ಹಾಡಿನಲ್ಲಿ ನಿದ್ರಾದೇವಿ ಬಾ.. ಎಂಬ ಪದವಿದೆ.

ಆ ಪದವೇ ಈ ಹಾಡಿಗೆ ಸ್ಫೂರ್ತಿ ಎಂದು ನಿರ್ದೇಶಕ ಸುರಾಗ್ ತಿಳಿಸಿದರು.

ಇದು ನಮ್ಮ ಸಂಸ್ಥೆಯ ನಿರ್ಮಾಣದ ಮೂರನೇ ಸಿನಿಮಾ. ನಿರ್ದೇಶಕರು ಈ ಚಿತ್ರದ ಕಥೆ ಹೇಳಿದಾಗ ಖುಷಿಯಾಯಿತು. ಅದರಲ್ಲಿಯೂ ತಾಯಿ ಪಾತ್ರದಲ್ಲಿ ಸುಧಾರಾಣಿ ಅವರು ಅಭಿನಯಿಸಿರುವುದು ಖುಷಿ ಕೊಟ್ಟಿದೆ. ತಾಯಿ ಮಗನ ಬಾಂಧವ್ಯದ ಕಥನಾ ಪ್ರೇಕ್ಷಕರ ಮನಸೂರೆಗೊಳ್ಳಲಿದೆ.

-ಜಯರಾಮ್ ದೇವಸಮುದ್ರ, ನಿರ್ಮಾಪಕ

ಸ್ಪಾರ್ಕ್ ಟೀಸರ್ ರಿಲೀಸ್

ಮಹಾಂತೇಶ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಸ್ಪಾರ್ಕ್ ಚಿತ್ರದ ಟೀಸರ್ ರಿಲೀಸ್ ಆಗಿದೆ. ಒಂದು ಹಗರಣದ ಸುತ್ತ ಸಾಗುವ ಕಥೆ ಇದಾಗಿದ್ದು, ಸಸ್ಪೆನ್ಸ್, ಜತೆಗೆ ಥ್ರಿಲ್ಲಿಂಗ್ ಅಂಶಗಳು ಬೆರೆತಿವೆ. ನಿರಂಜನ್ ಸುಧೀಂದ್ರ ನಾಯಕನಾಗಿ ನಟಿಸಿದ್ದು, ಪತ್ರಕರ್ತನಾಗಿ ಕಾಣಿಸಿಕೊಂಡಿದ್ದಾರೆ. ನೆನಪಿರಲಿ ಪ್ರೇಮ್ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ಸ್ಪಾರ್ಕ್ ಎಲ್ಲರ ಮನಸ್ಸಿನಲ್ಲಿರುವ ಕಿಡಿ, ಯಾವುದೇ ಹಗರಣ ನಡೆದರು ಮೊದಲು ದನಿ ಎತ್ತುವುದು ಪತ್ರಕರ್ತರು. ನಾನು ಚಿತ್ರದಲ್ಲಿ ಪತ್ರಕರ್ತನ ಪಾತ್ರ ನಿರ್ವಹಿಸುತ್ತಿದ್ದೇನೆ. ಇದು ದೊಡ್ಡ ಜವಾಬ್ದಾರಿ, ಇದರಲ್ಲಿ ಬರವಣಿಗೆ ತುಂಬಾ ಸ್ಟ್ರಾಂಗ್ ಆಗಿದೆ. ಹಗರಣದ ಕಥಾಹಂದರ ಹೊಂದಿರುವ ಚಿತ್ರ ರೋಚಕವಾಗಿ ಮೂಡಿಬಂದಿದೆ ಎಂದು ನಿರಂಜನ್ ಹೇಳಿದರು. ಒಬ್ಬ ಹೊಸ ನಿರ್ದೇಶಕನಿಗೆ ಕಲಾವಿದರು ಹಾಗೂ ತಂತ್ರಜ್ಞರ ಸಹಕಾರ ಮುಖ್ಯ, ನನಗೆ ಈ ಚಿತ್ರದಲ್ಲಿ ಎಲ್ಲರೂ ಸಹಕರಿಸಿದ್ದಾರೆ. ಹಾಹಾಗಿಯೇ ಸಿನಿಮಾ ಅಂದುಕೊಂಡಂತೆ ಮೂಡಿಬಂದಿದೆ. ಸ್ಪಾರ್ಕ್ ಸಿನಿಮಾ ಒಂದು ಹಗರಣದ ಸುತ್ತ ಸುತ್ತುವ ಸಿನಿಮಾ, ಸಾಕಷ್ಟು ಟ್ವಿಸ್ಟ್ ಮೂಲಕ ಸಿನಿಮಾದ ಕಥೆ ಸಾಗುತ್ತದೆ ಎಂದು ನಿರ್ದೇಶಕ ಮಹಾಂತೇಶ್ ತಿಳಿಸಿದರು. ರಚನಾ ಇಂದರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ, ಉಳಿದಂತೆ ರಮೇಶ್ ಇಂದಿರಾ, ಧರ್ಮಣ್ಣ ಕಡೂರು, ಸಾಧು ಕೋಕಿಲಾ, ನರೇಂದ್ರ ಬಾಬು ಮುಂತಾದವರು ತಾರಾಬಳಗದಲ್ಲಿದ್ದಾರೆ. ಡಾ.ಗರಿಮಾ ಅವಿನಾಶ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಸಚಿನ್ ಬಸ್ರೂರ್ ಸಂಗೀತ ಸಂಯೋಜಿಸುತ್ತಿದ್ದಾರೆ. ಸ್ವಾಮಿ.ಜೆ.ಗೌಡ ಛಾಯಾ ಗ್ರಹಣ, ಸಚಿನ್ ಬಸ್ರೂರ್ ಸಂಗೀತ ನಿರ್ದೇಶನ, ಮಧು ಸಂಕಲನ ಈ ಚಿತ್ರಕ್ಕಿದೆ.